ಹುಬ್ಬಳ್ಳಿ
ಮಂಗಳವಾರ, 24 ಫೆಬ್ರವರಿ 2026
ಸಂಪುಟ 15, ಸಂಚಿಕೆ 337, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ವೈಷ್ಣೋದೇವಿ ಯಾತ್ರಿಕರಿಗೂ ಸಹಾಯಧನ | ೦೩
ಭೂಸ್ವಾಧೀನ ಕೇಸ್ ವಾಪಸ್ ತರಲ್ಲ | ೦೭
26ಕ್ಕೆ ಕೆನಡಾ ಪ್ರಧಾನಿ ಭಾರತಕ್ಕೆ | ೦೭

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲಪಕ್ಷ, ತಿಥಿ: ಸಪ್ತಮಿ ಉಪರಿ ಅಷ್ಟಮಿ, ನಕ್ಷತ್ರ: ಕೃತ್ತಿಕೆ

ದಿನದ ಮಾತು

ದುಡಿಮೆ ದೇಹವನ್ನು ಹುರಿಗೊಳಿಸುತ್ತದೆ. ಕಷ್ಟಗಳು ಮನಸ್ಸನ್ನು ಬಲಗೊಳಿಸುತ್ತವೆ.
▲ ಲೋಕೋಕ್ತಿ

ಯಾಕ್ ಎಂಬ ಪ್ರಾಣಿಗಿದೆ ಸಾವಿರಾರು ವರ್ಷಗಳ ಇತಿಹಾಸ

ಧರಣಿ ಮಂಡಲ
◆ ಕೆ.ಎನ್.ಶೈಲೇಶ್ ಹೊಳ್ಳ
◆ ಪುಟ ೬

ಕಿರುಸುದ್ದಿ

ಮಾ.11ರಿಂದ ಒಪಿಡಿ ಸ್ಥಗಿತಗೊಳಿಸಿ ಮುಷ್ಕರ

◆ **ಬೆಂಗಳೂರು:** ಆರೋಗ್ಯ ಇಲಾಖೆಯ ನಾನ್-ಕೇಡರ್ ಹುದ್ದೆಗಳಿಗೆ ನೇಮಕಾತಿ, ಮುಂಬಡ್ತಿ, ವರ್ಗಾವಣೆ ಬದಲಾವಣೆ, ಕಾಲ-ಕಾಲಕ್ಕೆ ಸಮರ್ಪಕ ಔಷಧ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ವೈದ್ಯರು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರು ಮಾ.11ರಿಂದ ಹೊರರೋಗಿಗಳ ಸೇವೆಯನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸಲು ಮುಂದಾಗಿದ್ದಾರೆ.
◆ ಪುಟ ೪

ಸಂಪಾದನೆಯಿಲ್ಲದ ಗೃಹಿಣಿ ನಿರುದ್ಯೋಗಿ ಅಲ್ಲ: ದಿಲ್ಲಿ ಹೈ

◆ **ಹೊಸದಿಲ್ಲಿ:** ಪತಿಯ ಕೆಲಸ ಕಾರ್ಯಗಳೆಲ್ಲವೂ ಪರಿಣಾಮಕಾರಿಯಾಗಿ ನಡೆಯಲು ನೆರವಾಗುವ ಗೃಹಿಣಿಯ ಕರ್ತವ್ಯವನ್ನು ನಿರ್ಲಕ್ಷಿಸುವುದು ನ್ಯಾಯವಲ್ಲವೆಂದು ದಿಲ್ಲಿ ಹೈಕೋರ್ಟ್ ಸೋಮವಾರ ಹೇಳಿದೆ. ನೌಕರಿಗೆ ಹೋಗದ ಮಹಿಳೆ ನಿರುದ್ಯೋಗಿಯೆಂದು ನಿರ್ಲಕ್ಷಿಸುವುದು ಸರಿಯಲ್ಲ, ಗೃಹಿಣಿಯ ಕರ್ತವ್ಯವನ್ನು ಗೌರವದಿಂದ ಕಾಣುವುದೂ ಅಷ್ಟೇ ಮುಖ್ಯ ಎಂದು ದಿಲ್ಲಿ ಹೈಕೋರ್ಟ್ ಹೇಳಿದೆ.
◆ ಪುಟ ೭

ಶಿವಾಜಿಗೆ ಅಪಮಾನ: ಎಲ್ಲೆಡೆ ಭಾರೀ ಆಕ್ರೋಶ

◆ ಪುಟ ೭

ಜೆಎನ್‌ಯು: ಎಬಿವಿಪಿ ವಿದ್ಯಾರ್ಥಿಗಳ ಮೇಲೆ ಹಲ್ಲೆ

◆ ಪುಟ ೭

ನೇಪಾಳದಲ್ಲಿ ನದಿಗೆ ಉರುಳಿದ ಬಸ್: 19 ಸಾವು

◆ ಪುಟ ೭



ಭಯೋತ್ಪಾದನೆ ವಿರುದ್ಧ ಪ್ರಹಾರ

◆ ಪುಟ ೭
ಸುದ್ದಿ ಸಮಗ್ರ

ಸಂಪುಟ ಪುನಾರಚನೆಗಾಗಿ ಹೈಕಮಾಂಡ್‌ಗೆ 31 ಹೊಸ ಶಾಸಕರ ಪತ್ರ

ಸಚಿವ ಸ್ಥಾನಕ್ಕೆ ಬೇಡಿಕೆ

◆ **ಬೆಂಗಳೂರು:** ಆಡಳಿತ ಪಕ್ಷ ಕಾಂಗ್ರೆಸ್‌ನಲ್ಲಿ ದಿನಕ್ಕೊಂದು ವಿದ್ಯಮಾನಗಳು ನಡೆಯುತ್ತಿದ್ದು, ನಾಯಕತ್ವ ಬದಲಾವಣೆ ಚರ್ಚೆಗಳು ಜೋರಾಗಿರುವ ಸಂದರ್ಭದಲ್ಲೇ ಮೊದಲ ಬಾರಿಗೆ ಆಯ್ಕೆಯಾಗಿರುವ ಶಾಸಕರು ಸಚಿವ ಸ್ಥಾನದ ಬೇಡಿಕೆ ಇಟ್ಟಿದ್ದಾರೆ. ಇದು ಹೊಸ ಚರ್ಚೆ ಹುಟ್ಟುಹಾಕಿದೆ.

ಸಂಪುಟ ಪುನರ್ ರಚನೆಯಲ್ಲಿ ಮೊದಲ ಬಾರಿಗೆ ಆಯ್ಕೆ ಆಗಿರುವ ಶಾಸಕರಿಗೆ ಅವಕಾಶ ನೀಡಬೇಕೆಂದು ಕಾಂಗ್ರೆಸ್‌ನ 31 ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದಿರುವುದು ಹೊಸ ತಲೆನೋವು ತಂದಿದೆ. ಈಗಾಗಲೇ ಪಕ್ಷದಲ್ಲಿ ಉಂಟಾಗಿರುವ ಗೊಂದಲಗಳಿಗೆ ಕಡಿವಾಣ ಹಾಕಬೇಕೆಂದು ಹಿರಿಯ ನಾಯಕರ ಹೇಳಿಕೆಗಳ ನಡುವೆಯೇ ಸಂಪುಟದಲ್ಲಿ ಸ್ಥಾನ ಪಡೆಯಲು ಶಾಸಕರು ಮುಂದಾಗಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲ ಸೇರಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ 31 ಶಾಸಕರು ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಹಲವು ರಾಜ್ಯಗಳಲ್ಲಿ ಮೊದಲ ಬಾರಿಗೆ ಶಾಸಕರಾದವರಿಗೆ ಮುಖ್ಯಮಂತ್ರಿ ಸ್ಥಾನ ಮತ್ತು ಸಚಿವ ಸ್ಥಾನ ನೀಡಿದ ಹಲವು ನಿದರ್ಶನಗಳಿವೆ, ನಾವೆಲ್ಲರೂ ಕಾಂಗ್ರೆಸ್ ಸಿದ್ಧಾಂತವನ್ನು ಬಲವಾಗಿ ನಂಬಿದ್ದೇವೆ ಮತ್ತು ರಾಜ್ಯ ಸರ್ಕಾರದಲ್ಲಿ ಸ್ವಚ್ಛ, ಪಾರದರ್ಶಕ ಮತ್ತು ವಿಶ್ವಾಸಾರ್ಹ ಆಡಳಿತವನ್ನು ಒದಗಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಶ್ರಮಿಸುತ್ತೇವೆ, ಇದರಿಂದಾಗಿ 2028ರಲ್ಲಿ ನಾವು ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಾಗುತ್ತದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ. ➡ ಪುಟ ೪



ಪತ್ರ ಬರೆದ ಶಾಸಕರು

ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್, ರಾಮನಗರ ಶಾಸಕ ಇಕ್ಬಾಲ್ ಹುಸೇನ್, ಮಡಿಕೇರಿ ಶಾಸಕ ಮಂಥರ ಗೌಡ, ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ, ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ, ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್, ಕಿತ್ತೂರು ಶಾಸಕ ಬಾಬಾಸಾಹೇಬ್ ಪಾಟೀಲ್, ಸವದತ್ತಿ ಯಲ್ಲಮ್ಮ ಶಾಸಕ ವಿಶ್ವಾಸ್ ವೈದ್ಯ, ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣನವರ್, ಮದ್ದೂರು ಶಾಸಕ ಉದಯ್ ಗೌಡ, ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ್ ಮತ್ತು ಸುರಪುರ ಶಾಸಕ ವೇಣುಗೋಪಾಲ್ ನಾಯ್ಕ್ ಸೇರಿದಂತೆ ಒಟ್ಟು 31 ಶಾಸಕರು ಪತ್ರ ಬರೆದಿದ್ದಾರೆ.



ಸಚಿವರು ಸರಿಯಾಗಿ ಕೆಲಸ ಮಾಡದ ಬಗ್ಗೆ ಚರ್ಚಿಸಿಯೇ ನಾವು ಪತ್ರ ಬರೆದಿದ್ದೇವೆ. ನಾವ್ಯಾರು ಸಚಿವ ಸ್ಥಾನದ ಆಕಾಂಕ್ಷಿಗಳಲ್ಲ. ಚುನಾವಣೆಗಳು ಸಮೀಪಿಸುತ್ತಿರುವುದರಿಂದ ಒಳ್ಳೆ ಆಡಳಿತ ಬೇಕು. ಆದಕ್ಕಾಗಿ, ಕೆಲವರನ್ನು ಬದಲಾಯಿಸಲು ಎರಡ್ಮೂರು ಸಭೆಗಳಲ್ಲಿ ಒತ್ತಾಯಿಸಿದ್ದೇವೆ. 6 ತಿಂಗಳಿಂದ ಈ ಪ್ರಕ್ರಿಯೆ ನಡೆಯುತ್ತಲೇ ಇದೆ.
■ **ಇಕ್ಬಾಲ್ ಹುಸೇನ್,** ರಾಮನಗರ ಶಾಸಕ

ಕನಿಷ್ಠ ಐದು ಸ್ಥಾನಕ್ಕೆ ಮನವಿ

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ 38 ಹೊಸ ಮುಖಗಳಿಗೆ ವಿಧಾನಸಭೆ ಪ್ರವೇಶಿಸಲು ರಾಜ್ಯದ ಜನ ಅವಕಾಶ ನೀಡಿದ್ದಾರೆ, ಹೀಗಿರುವಾಗ ಸಂಪುಟ ರಚನೆಯಲ್ಲಿ ಮೊದಲ ಬಾರಿಗೆ ಆಯ್ಕೆಯಾದ ಶಾಸಕರಿಗೆ ಅವಕಾಶ ನೀಡಿಲ್ಲ, ಮುಂಬರುವ ದಿನಗಳಲ್ಲಿ ಸಂಪುಟ ಪುನರ್ ರಚನೆ ಮಾಡಿದಾಗ ಮೊದಲ ಬಾರಿಗೆ ಆಯ್ಕೆಯಾದ ಕನಿಷ್ಠ 5 ಶಾಸಕರಿಗೆ ಸಚಿವ ಸ್ಥಾನ ನೀಡಬೇಕೆಂದು ಮನವಿ ಮಾಡಲಾಗಿದೆ.

ಆಕಾಂಕ್ಷಿಗಳಿಗೆ ಆತಂಕ

ಮುಂಬರುವ ಸಂಪುಟ ಪುನರ್‌ರಚನೆಯಲ್ಲಿ ಸಚಿವ ಸ್ಥಾನದ ನಿರೀಕ್ಷೆಯಲ್ಲಿ ಹಲವು ಹಿರಿಯ ಮತ್ತು ಕಿರಿಯ ಶಾಸಕರಿಗೆ ಒಂದು ರೀತಿಯ ಆತಂಕ ಎದುರಾಗಿದ್ದು, ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದ ಕೆಲವು ಶಾಸಕರಿಗೆ ಸಚಿವ ಸ್ಥಾನ ತಪ್ಪಲಿದೆಯೇ? ಎಂಬ ಹೊಸ ಚರ್ಚೆ ಪಕ್ಷದಲ್ಲಿ ನಡೆಯುತ್ತಿದೆ. ಮೊದಲ ಬಾರಿಗೆ ಆಯ್ಕೆಯಾಗಿರುವ ಶಾಸಕರು 5 ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದು, ಇದರಲ್ಲಿ ಪಕ್ಷದ ಹೈಕಮಾಂಡ್ ಕನಿಷ್ಠ 3 ರಿಂದ 2 ಸ್ಥಾನಗಳನ್ನು ನೀಡಿದ್ದಲ್ಲಿ ಸಚಿವ ಸ್ಥಾನದ ಭಾರೀ ನಿರೀಕ್ಷೆಯಲ್ಲಿದ್ದವರಿಗೆ ಕೊನೆ ಕ್ಷಣದಲ್ಲಿ ಸ್ಥಾನ ಕೈತಪ್ಪಿದರೂ ಆಶ್ಚರ್ಯ ಪಡಬೇಕಿಲ್ಲ ಎಂಬ ಚರ್ಚೆಗಳು ನಡೆದಿವೆ.

ಕೊಡಗು ಜಿಲ್ಲೆಯಿಂದ ಇಬ್ಬರು ಮೊದಲ ಬಾರಿಗೆ ಗೆದ್ದಿದ್ದೇವೆ. ಯಾರಿಗಾದರೂ ಒಬ್ಬರಿಗೆ ಸಚಿವ ಸ್ಥಾನ ನೀಡಲಿ. ಈಗ ಇರುವ ಹಿರಿಯ ಸಚಿವರು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲಿ.
■ **ಮಂಥರ ಗೌಡ,** ಮಡಿಕೇರಿ ಶಾಸಕ

ಯಾವುದೇ ಕ್ಷಣ ಅಮೆರಿಕ ದಾಳಿ ಸಾಧ್ಯತೆ

ಇರಾನ್ ತೊರೆಯಲು ಭಾರತೀಯರಿಗೆ ಸಲಹೆ

◆ **ಹೊಸದಿಲ್ಲಿ:** ಇರಾನ್ ಮೇಲೆ ಅಮೆರಿಕ ಯಾವುದೇ ಕ್ಷಣದಲ್ಲಿ ದಾಳಿ ನಡೆಸುವ ಸಾಧ್ಯತೆ ಹೆಚ್ಚಾಗಿದ್ದು, ತಕ್ಷಣ ಇರಾನ್ ಬಿಟ್ಟು ತೆರಳುವಂತೆ ಭಾರತೀಯರಿಗೆ ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸೋಮವಾರ ಸಲಹೆ ನೀಡಿದೆ.

ಇರಾನ್ ಮೇಲೆ ಅಮೆರಿಕ ದಾಳಿ ನಡೆಸುವುದು ಬಹುತೇಕ ಖಚಿತವಾದ ಹಿನ್ನೆಲೆ ಸುರಕ್ಷತೆ ಸಮಸ್ಯೆ ಎದುರಾಗಲಿದ್ದು, ಎಲ್ಲಾ ಭಾರತೀಯರಿಗೂ ತಾಯ್ನಾಡಿಗೆ ಮರಳುವಂತೆ ಸಲಹೆ ನೀಡಿದೆ. ಸದ್ಯ ಲಭ್ಯವಿರುವ ಎಲ್ಲಾ ರೀತಿಯ ಸಾರಿಗೆ ಹಾಗೂ ವಾಣಿಜ್ಯ ವಿಮಾನಗಳನ್ನು ಬಳಸಿಕೊಂಡು ವಾಪಾಸಾಗುವಂತೆ ಸರ್ಕಾರ ತಿಳಿಸಿದೆ.



ಟೆಹ್ರಾನ್‌ನಲ್ಲಿ ಹೊಸ ಪ್ರತಿಭಟನೆಗಳು ಆರಂಭವಾಗಿದ್ದು, ಗಲ್ಫ್ ರಾಷ್ಟ್ರದ ಮೇಲೆ ಅಮೆರಿಕ ಸೇನೆ ಯಾವುದೇ ಕ್ಷಣದಲ್ಲಿ ದಾಳಿ ಮಾಡಬಹುದೆಂಬ ಆತಂಕ ಹೆಚ್ಚಾಗಿದೆ. ಇದನ್ನು ಗಮನಿಸಿದ ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ, ಭಾರತೀಯರಿಗೆ ಸಲಹೆ ನೀಡಿದೆ.

ಇರಾನ್‌ನ ಹಲವು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಖಮೇನಿ ಆಡಳಿತದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಕಳೆದ ತಿಂಗಳು ಇರಾನ್ ರಾಜಧಾನಿಯಲ್ಲಿ ಪ್ರತಿಭಟನಾಕಾರರನ್ನು ಖಮೇನಿ ಸರ್ಕಾರ ಕ್ರೂರವಾಗಿ ದಮನಿಸಿದ ಬಳಿಕ ಇದೀಗ ಹೊಸ ಪ್ರತಿಭಟನೆಗಳನ್ನು ವಿದ್ಯಾರ್ಥಿಗಳು ಆರಂಭಿಸಿದ್ದಾರೆ. ಭಾರತೀಯ ಅಧಿಕಾರಿಗಳ ಪ್ರಕಾರ, ಜನವರಿವರೆಗೆ ಇರಾನ್‌ನಲ್ಲಿ 10 ಸಾವಿರಕ್ಕೂ ಅಧಿಕ ಭಾರತೀಯರು ವಾಸವಾಗಿದ್ದರು.

ಇರಾನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಗಳು, ತೀರ್ಥಯಾತ್ರಿಗಳು, ಉದ್ಯಮಿಗಳು ಮತ್ತು ಪ್ರವಾಸಿಗಳು ತಕ್ಷಣ ಲಭ್ಯವಿರುವ ಸಾರಿಗೆ, ವಾಣಿಜ್ಯ ವಿಮಾನಗಳ ಮೂಲಕ ಇರಾನ್ ಬಿಡಬೇಕು. ಪಾಸ್‌ಪೋರ್ಟ್ ಮತ್ತು ಗುರುತಿನ ಚೀಟಿ ಸಹಿತ ಎಲ್ಲಾ ಪ್ರಯಾಣ ಮತ್ತು ವಲಸೆ ದಾಖಲೆಗಳನ್ನು ಜತೆಗಿಟ್ಟುಕೊಳ್ಳಿ.
■ **ಇರಾನ್‌ನಲ್ಲಿನ ಭಾರತ ರಾಯಭಾರ ಕಚೇರಿ**



ಸೀಮಿತ ದಾಳಿಗೆ ಟ್ರಂಪ್ ಯೋಜನೆ?

ಇರಾನ್ ಮೇಲೆ ಸೀಮಿತ ದಾಳಿ ನಡೆಸಿ, ಆ ಬಳಿಕ ಆಡಳಿತ ಬದಲಾಯಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯೋಜನೆ ರೂಪಿಸಿದ್ದಾರೆಂದು ವರದಿಯಾಗಿದೆ. ಮೊದಲು ಸೀಮಿತ ದಾಳಿ ನಡೆಸಿ, ಬಳಿಕ ತನ್ನ ಪರಮಾಣು ಬೇಡಿಕೆಗಳಿಗೆ ಹೊಂದಿಕೊಳ್ಳುವ ಆಡಳಿತ ಬದಲಾವಣೆ ತರಲು ಟ್ರಂಪ್ ನಿಶ್ಚಯಿಸಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ವೆನಿಜುವೆಲಾ ಮಾದರಿಯಲ್ಲೇ ತೈಲರಾಷ್ಟ್ರ ಇರಾನ್ ಮೇಲೆ ದಾಳಿಗೆ ಟ್ರಂಪ್ ಯೋಜಿಸಿದ್ದರೂ, ಇರಾನ್ ಕಬ್ಜಾ ಮಾಡುವುದು ಸುಲಭದ ಮಾತಲ್ಲ.

ದಾಳಿ ನಡೆಸಿದರೆ ಉಗ್ರ ಪ್ರತ್ಯುತ್ತರ: ಇರಾನ್

ಒಂದು ವೇಳೆ ಅಮೆರಿಕ ಸೀಮಿತ ದಾಳಿ ನಡೆಸಿದರೂ ಅದನ್ನು ಯುದ್ಧ ಸಂಘರ್ಷವೆಂದೇ ಪರಿಗಣಿಸಿ ಉಗ್ರವಾದ ಪ್ರತ್ಯುತ್ತರ ನೀಡುತ್ತೇವೆಂದು ಇರಾನ್ ಖಡಕ್ ಎಚ್ಚರಿಕೆ ನೀಡಿದೆ.

ಭಾರತದ ಮೇಲೆ ಪರಿಣಾಮಗಳು ◆ ಪುಟ ೪

ಕೈ ಅರೆಬೆತ್ತಲೆ ಪ್ರತಿಭಟನೆ ವಿವಾದ: ಮಿತ್ರಪಕ್ಷಗಳ ಅಸಮಾಧಾನ

ಇಂಡಿ ಒಕ್ಕೂಟದಲ್ಲಿ ಮತ್ತೆ ಬಿರುಕು

◆ **ಹೊಸದಿಲ್ಲಿ/ಕೋಲ್ಕತ್ತಾ/ಚೆನ್ನೈ:** ಕೇಂದ್ರದ ಆಡಳಿತಾರೂಢ ಎನ್‌ಡಿಎಗೆ ಪರ್ಯಾಯವಾಗಿ ರೂಪುಗೊಂಡ ಇಂಡಿ(ಐಎನ್‌ಡಿಐಎ) ಮೈತ್ರಿಕೂಟದಲ್ಲಿ ನಾಯಕತ್ವದ ಗೊಂದಲ ಮತ್ತೆ ತಲೆದೋರಿದೆ. ಮೈತ್ರಿಕೂಟದ ಪ್ರಮುಖ ಪಕ್ಷವಾಗಿರುವ ಕಾಂಗ್ರೆಸ್ ಮತ್ತು ಅದರ ನಾಯಕ ರಾಹುಲ್ ಗಾಂಧಿ ನಾಯಕತ್ವದ ವಿರುದ್ಧ ಮಿತ್ರಪಕ್ಷಗಳಿಂದ ಮಾತ್ರವಲ್ಲದೇ ಸ್ವಪಕ್ಷದಲ್ಲೂ ಅಪಸ್ವರಗಳು ಕೇಳಿಬಂದಿವೆ. ಇತ್ತೀಚಿನ ಎಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಅರೆನಗ್ನವಾಗಿ ನಡೆಸಿದ ಪ್ರತಿಭಟನೆ ಮೈತ್ರಿಕೂಟದ ಅಸಮಾಧಾನವನ್ನು ಬಹಿರಂಗಗೊಳಿಸಿದೆ. ಭಾರತ ಎಐ ಶೃಂಗಸಭೆ ವೇದಿಕೆಯಲ್ಲಿ ನಡೆದ ಪ್ರತಿಭಟನೆಗೆ ಮೊದಲು ಇಂಡಿ ಕೂಟದ ಹಲವು ಪಕ್ಷಗಳು ದೂರ ಉಳಿದಿದ್ದವು. ಆದರೆ, ಪ್ರಧಾನಿ ಮೋದಿಯವರು ಬಹಿರಂಗವಾಗಿ ಟೀಕೆ ನಡೆಸಿದ ಬಳಿಕ, ಮೈತ್ರಿ ಪಕ್ಷಗಳು ಸ್ಪಷ್ಟವಾಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿವೆ. ➡ ಪುಟ ೪



ರಾಹುಲ್ ಬದಲು ಸ್ಟಾಲಿನ್ ಅಥವಾ ಮಮತಾ ಸೂಕ್ತ

ಕಾಂಗ್ರೆಸ್ ಹಿರಿಯ ನಾಯಕ ಮಣಿಶಂಕರ್ ಅಯ್ಯರ್, ಪಕ್ಷದ ಒಳಗೇ ನಾಯಕತ್ವದ ಪ್ರಶ್ನೆ ಎತ್ತಿದ್ದಾರೆ. ಇಂಡಿ ಮೈತ್ರಿಕೂಟದ ನಾಯಕತ್ವವನ್ನು ರಾಹುಲ್ ಗಾಂಧಿ ತ್ಯಜಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಅಂತೆಯೇ, ಪ್ರಾದೇಶಿಕ ಪಕ್ಷಗಳ ನಾಯಕರಿಗೆ ಅವಕಾಶ ನೀಡಬೇಕೆಂದು ಹೇಳಿರುವ ಅವರು, ಈ ಸ್ಥಾನಕ್ಕೆ ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್ ಅಥವಾ ಪ.ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಸೂಕ್ತ ಎಂದಿದ್ದಾರೆ.



ಬಡವರ ಉದ್ಯೋಗದ ಹಕ್ಕು ಕಸಿದ ಕೇಂದ್ರ: ಸಿದ್ದರಾಮಯ್ಯ

ಮನರೇಗಾ ಸ್ಥಾಪನೆಗೆ ಹೋರಾಟ

◆ **ಚಿಕ್ಕಬಳ್ಳಾಪುರ:** ಗ್ರಾಮೀಣ ಬಡ ಜನರ ಉದ್ಯೋಗದ ಹಕ್ಕನ್ನು ಕೇಂದ್ರ ಸರ್ಕಾರ ಕಸಿಯುತ್ತಿದ್ದು, ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ರದ್ದುಪಡಿಸಿ, ಮನರೇಗಾ ಮರುಸ್ಥಾಪಿಸುವಂತೆ ದೇಶಾದ್ಯಂತ ಹೋರಾಟ ನಡೆಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಚಿಕ್ಕಬಳ್ಳಾಪುರದಲ್ಲಿ ನಡೆದ ನರೇಗಾ ಬಚಾವ್ ಆಂದೋಲನದಲ್ಲಿ ಅವರು ಮಾತನಾಡಿದರು.


ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಬಿಜೆಪಿ ಸರ್ಕಾರ ಮನರೇಗಾವನ್ನು ರದ್ದುಪಡಿಸಿ, ವಿಬಿ ಜಿ ರಾಮ್ ಜಿ ಕಾಯ್ದೆ ಜಾರಿ ಮಾಡಿದೆ. ಮನರೇಗಾದ ರದ್ದು ಅಗತ್ಯವಿರಲಿಲ್ಲ, ಕೂಲಿಕಾರರು, ಆದಿವಾಸಿಗಳು, ಸಣ್ಣ ರೈತರಿಗೆ, ಮಹಿಳೆಯರಿಗೆ ಉದ್ಯೋಗದ ಅನುಕೂಲ ಕಲ್ಪಿಸುವ ದಿಸೆಯಲ್ಲಿ 2005ರಲ್ಲಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ, ನಾಯಕಿ ಸೋನಿಯಾ ಗಾಂಧಿ ನೇತೃತ್ವದಲ್ಲಿ ಈ ಕಾಯ್ದೆ ಜಾರಿಯಾಯಿತು. ➡ ಪುಟ ೪



ಯೂನುಸ್ ಕುತಂತ್ರ ಬಯಲು

◆ **ಢಾಕಾ:** ಬಾಂಗ್ಲಾದೇಶದಲ್ಲಿ ತಾರಿಕ್ ರೆಹಮಾನ್ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನಗಳ ಬಳಿಕ ಸರ್ಕಾರ ಉರುಳಿಸಲು ಮಾಜಿ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಷಡ್ಯಂತ್ರ ನಡೆಸಿದ್ದಾಗಿ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಆರೋಪಿಸಿದ್ದಾರೆ. ಪ್ರಧಾನಿ ತಾರಿಕ್ ರೆಹಮಾನ್ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಅಸಾಂವಿಧಾನಿಕ ಪ್ರಯತ್ನಗಳನ್ನು ಯೂನುಸ್ ನಡೆಸಿದ್ದಾರೆಂದು ಶಹಾಬುದ್ದೀನ್ ಗಂಭೀರ ಆರೋಪ ಮಾಡಿದ್ದಾರೆ.

ಬಾಂಗ್ಲಾ ನೂತನ ಸರ್ಕಾರ ಉರುಳಿಸಲು ನಡೆದಿತ್ತು ಷಡ್ಯಂತ್ರ



ಅಧ್ಯಕ್ಷರ ವಿದೇಶ ಪ್ರವಾಸಕ್ಕೆ ತಡೆ: ಕಳೆದ ಒಂದೂವರೆ ವರ್ಷದಿಂದ ನನ್ನನ್ನು ಅರಮನೆಯ ಕೈದಿಯಂತೆ ನಡೆಸಿಕೊಂಡಿದ್ದು, ಕೊಸೊವೊ, ಕತಾರ್‌ಗೆ ತೆರಳಬೇಕಿದ್ದ ವಿದೇಶ ಪ್ರವಾಸಗಳನ್ನು ಯೂನುಸ್ ಆಡಳಿತ ತಡೆಹಿಡಿದಿತ್ತು. ➡ ಪುಟ ೪



ಆರೆಸ್ಸೆಸ್ ಹಿಂದುತ್ವ ರಾಜಕೀಯ ಮಾಡುತ್ತಿಲ್ಲ: ಡಾ.ಭಾಗ್ವತ್

ರಾಷ್ಟ್ರ ನಿರ್ಮಾಣಕ್ಕೆ ಸಂಘ ಆದ್ಯತೆ

◆ **ಡೆಹ್ರಾಡೂನ್:** ರಾಷ್ಟ್ರೀಯ ಸ್ವಯಂಸೇವಕ ಸಂಘವು ಹಿಂದುತ್ವ ರಾಜಕೀಯದಲ್ಲಿ ತೊಡಗಿಲ್ಲ, ಇದರ ಬದಲಾಗಿ ವ್ಯಕ್ತಿ ನಿರ್ಮಾಣದ ಮೂಲಕ ಬಲಿಷ್ಠ ಸಮಾಜ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ನಂಬಿಕೆ ಇಟ್ಟಿದೆ ಎಂಬುದಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಒತ್ತಿ ಹೇಳಿದ್ದಾರೆ.

ಸಂಘದ ಉದ್ದೇಶ ವ್ಯಕ್ತಿ ನಿರ್ಮಾಣ. ಯಾಕೆಂದರೆ ಯೋಗ್ಯ ವ್ಯಕ್ತಿಗಳಿಂದ ಮಾತ್ರವೇ ಒಗ್ಗಟ್ಟಿನ, ಉತ್ತಮ ಮತ್ತು ಬಲಿಷ್ಠ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂಬುದಾಗಿ ಅವರು ಸಂಘ ಶತಾಬ್ದಿ ಅಂಗವಾಗಿ ನಡೆದ ಕಾರ್ಯಕ್ರಮವೊಂದರಲ್ಲಿ ನುಡಿದರು. ಆದರೆ ಸಂಘವನ್ನು ಹೊರಗಿನಿಂದ ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

'ಸಂಘಯಾತ್ರಾ-ಹೊಸ ದಿಗಂತಗಳು, ಹೊಸ ಆಯಾಮಗಳು' ಎಂಬ ಧ್ಯೇಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಲವರು ಸಂಘ ಎಂದರೆ ಅರೆಸೈನಿಕ ಸಂಘಟನೆ ಎಂದು ತಪ್ಪಾಗಿ ತಿಳಿಯುತ್ತಾರೆ, ಇನ್ನು ಕೆಲವರು ಇದೊಂದು ಸೇವಾ ಕ್ಷೇತ್ರದ ಸಂಸ್ಥೆ ಎಂದು ಭಾವಿಸುತ್ತಾರೆ. ಆದರೆ ಆರೆಸ್ಸೆಸ್ ಒಂದು ಈ ಎಲ್ಲ ಗಡಿಗಳನ್ನು ದಾಟಿ ಕೆಲಸ ಮಾಡುವ ಒಂದು ಸಾಮಾಜಿಕ ಶಕ್ತಿ ಎಂದರು. ಸಂಘದ ಚಟುವಟಿಕೆಗಳಲ್ಲಿ ಜೋಡಿಸಿಕೊಳ್ಳುವ ಮೂಲಕ ಸಮಾಜ, ದೇಶ ಬಲಪಡಿಸಬೇಕಾಗಿದ್ದು, ಇಂದು ಜಗತ್ತು ಮತ್ತೊಮ್ಮೆ ಭಾರತವನ್ನು ನಾಯಕತ್ವದ ಪಾತ್ರದಲ್ಲಿ ನೋಡಲು ಬಯಸುತ್ತಿದೆ. ➡ ಪುಟ ೪



ಮಹಿಳೆಯರಿಗೆ ಶೇ.33 ಅಲ್ಲ, ಶೇ.50 ಪಾಲುದಾರಿಕೆ ಬೇಕು

ಮಹಿಳೆಯರ ಪಾತ್ರದ ಕುರಿತಂತೆ ಮಾತನಾಡಿದ ಅವರು, ಮಹಿಳೆಯರು ಸಂಪೂರ್ಣವಾಗಿ ಸ್ವತಂತ್ರರು. ಆಡಳಿತ ವ್ಯವಸ್ಥೆಯಲ್ಲಿ ಅವರ ಭಾಗವಹಿಸುವಿಕೆ ಶೇ.33ಕ್ಕೆ ಸೀಮಿತವಾಗಿರಬಾರದು, ಬದಲಿಗೆ ಶೇ.50 ರಷ್ಟಿರಬೇಕು ಎಂದು ಭಾಗ್ವತ್ ಪ್ರತಿಪಾದಿಸಿದರು. ➡ ಪುಟ ೪

ತ.ನಾಡು: 74 ಲಕ್ಷ ಮತದಾರರು ಪಟ್ಟಿಯಿಂದ ಹೊರಕ್ಕೆ

◆ **ಚೆನ್ನೈ:** ತಮಿಳುನಾಡಿನಲ್ಲಿ 74.07 ಲಕ್ಷ ಮತದಾರರ ಹೆಸರುಗಳನ್ನು ತೆಗೆದುಹಾಕಿರುವ ಅಂತಿಮ ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗ ಸೋಮವಾರ ಬಿಡುಗಡೆ ಮಾಡಿದೆ. ಇದರಿಂದ ರಾಜ್ಯದ ಒಟ್ಟು ಮತದಾರರ ಸಂಖ್ಯೆ 5.67 ಕೋಟಿಗೆ ಇಳಿಕೆಯಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾಧಿಕಾರಿ ಅರ್ಚನಾ ಪಟ್ನಾಯಕ್ ಅವರು, ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಗೆ ಮೊದಲು ರಾಜ್ಯದಲ್ಲಿ ಒಟ್ಟು 6.41 ಕೋಟಿ ಮತದಾರರು ಇದ್ದರು ಎಂದು ತಿಳಿಸಿದರು. ➡ ಪುಟ ೪

ಕಿರುಸುದ್ದಿ



ಧಾರವಾಡ: ಜಿಲ್ಲಾ ಪಂಚಾಯತ್ ಆವರಣದ ನವೀಕೃತ ಶಿಶು ಪಾಲಿನ ಕೇಂದ್ರ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್, ಶಾಸಕರಾದ ಎಂ.ಆರ್.ಪಾಟೀಲ ಹಾಗೂ ಎಫ್.ಎಚ್.ಜಕ್ಕಪ್ಪನವರ ಉದ್ಘಾಟಿಸಿದರು.

ಉಚಿತ ಪ್ರಯಾಣಕ್ಕೆ ಅವಕಾಶ

ಹುಬ್ಬಳ್ಳಿ: ಫೆ.28 ರಿಂದ ನಡೆಯಲಿರುವ ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅವರ ವಿದ್ಯಾಸಂಸ್ಥೆಯ ಹೊರತಾಗಿ ಇತರೆ ವಿದ್ಯಾ ಸಂಸ್ಥೆಗಳಿಗೆ ಪರೀಕ್ಷಾ ಕೇಂದ್ರಗಳ ನಿಯೋಜನೆಯಾಗಿರುವುದರಿಂದ ವಿದ್ಯಾರ್ಥಿಗಳ ವಾಸಸ್ಥಳದಿಂದ ಪರೀಕ್ಷಾ ಕೇಂದ್ರಗಳವರೆಗೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ದ್ವಿತೀಯ ಪಿ.ಯು.ಸಿ ಪರೀಕ್ಷೆಗಳು ಫೆ.28 ರಿಂದ ಮಾರ್ಚ 17 ರವರೆಗೆ ನಡೆಯಲಿವೆ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ದ್ವಿತೀಯ ಪಿ.ಯು.ಸಿ ಪರೀಕ್ಷೆಯ ಪ್ರವೇಶ ಪತ್ರ ತೋರಿಸಿ ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಹಾಗೂ ಪರೀಕ್ಷೆ ಮುಗಿಸಿ ವಾಸಸ್ಥಳಕ್ಕೆ ಹಿಂದಿರುಗಲು ಸಂಸ್ಥೆಯ ನಗರ, ಉಪನಗರ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತ ಪ್ರಯಾಣ ಮಾಡಬಹುದಾಗಿದೆ ಎಂದು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ನೀರು ಸರಬರಾಜಿನಲ್ಲಿ ವ್ಯತ್ಯಯ

ಹುಬ್ಬಳ್ಳಿ: ಧಾರವಾಡ ನಗರದ ಸೂಪರ್ ಗ್ಯಾಸ್ ಬಂಕ್ ಬಳಿಯ ಹೊಸಯಲ್ಲಾಪುರ ಬಿಆರ್‌ಟಿಎಸ್ ಎದುರು ಪಿಬಿ ರಸ್ತೆಯ ಫುಟ್‌ಪಾತ್ ನಲ್ಲಿ 750 ಎಂ.ಎಂ ವ್ಯಾಸದ ಶುದ್ಧ ನೀರಿನ ಕೊಳವೆ ಮಾರ್ಗದಲ್ಲಿ ಸೋರಿಕೆ ಕಂಡು ಬಂದಿದೆ. ಫೆಬ್ರವರಿ 26 ರಂದು ತುರ್ತಾಗಿ ದುರಸ್ತಿ ಕಾರ್ಯವನ್ನು ಕೈಗೊಳ್ಳುವುದರಿಂದ ಫೆಬ್ರವರಿ 26 ರಂದು ಧಾರವಾಡ ನಗರದ ಎಲ್ಲ ವಾರ್ಡ್‌ಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ನೀರು ಸರಬರಾಜು ವ್ಯತ್ಯಯದಿಂದಾಗಿ ಮುಂದಿನ ನೀರು ಸರಬರಾಜು ಪೂರೈಕೆಯ 2 ವೇಳಾಪಟ್ಟಿಗಳಲ್ಲಿ ಬದಲಾವಣೆಯಾಗುವ ಸಾಧ್ಯತೆಯಿದೆ. ಸಾರ್ವಜನಿಕರು ಸಹಕರಿಸುವಂತೆ ಕೆಯುಐಡಿಎಫ್‌ಸಿ ಯೋಜನಾ ಅನುಷ್ಠಾನ ಘಟಕದ ಕುಸ್ಮೆಂಪ್ ಯೋಜನೆಯ ಅಽೕಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಂಡಕ್ಕೆ ನೀರು ಹರಿಸಿ

ಅಳ್ನಾವರ: ಬೆಣಚಿ ಗ್ರಾಮದಲ್ಲಿ ಬೇಸಿಗೆಯಲ್ಲಿ ಆಗಬಹುದಾದ ನೀರಿನ ಸಮಸ್ಯೆಯನ್ನು ಹೋಗಲಾಡಿಸಲು ಕೆರೆಯ ನೀರನ್ನು ಬೆಣಚಿ ಗ್ರಾಮದ ಶ್ರೀ ರಾಮ್ ಕುಂಡ (ಹೊಂಡ) ಕ್ಕೆ ಹರಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚಿಸುವಂತೆ ಧಾರವಾಡ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರಿಗೆ ಗ್ರಾಮದ ಸಂದೀಪ ಪಾಟೀಲ ಹಾಗೂ ಇತರರಿದ್ದರು.




ಎರಡು ಗುಂಪುಗಳ ಮಧ್ಯೆ ಮಾರಾಮಾರಿ

ಧಾರವಾಡ: ಕ್ಷುಲ್ಲಕ ಕಾರಣಕ್ಕೆ ಎರಡು ಗುಂಪುಗಳ ಮಧ್ಯೆ ಮಾರಾಮಾರಿ ನಡೆದ ಘಟನೆ ಇಲ್ಲಿಯ ಸತ್ತೂರಿನಲ್ಲಿ ಭಾನುವಾರ ತಡರಾತ್ರಿ ನಡೆದಿದೆ. ತಡಸಿನಕೊಪ್ಪ ಗ್ರಾಮದ ನಿವಾಸಿ ಕಾಳಿಂಗ, ಅಭಿಷೇಕ ಮತ್ತು ಮಂಜುನಾಥ ಎಂಬುವವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆದಿದ್ದು, ಚಿಕಿತ್ಸೆಗಾಗಿ ಜಿಲಸ್ಪತ್ರೆಗೆ ದಾಖಲಿಸಲಾಗಿದೆ. ಕಳೆದ ಕೆಲ ದಿನಗಳ ಹಿಂದೆ ವಾಲ್ಮೀಕಿ ಮೂರ್ತಿ ಪ್ರತಿಷ್ಠಾಪನೆ ವಿಚಾರವಾಗಿ ಎರಡು ಗುಂಪುಗಳ ಮಧ್ಯೆ ಗಲಾಟೆ ನಡೆದಿತ್ತು. ಭಾನುವಾರವೂ ಅದೇ ವಿಚಾರವಾಗಿ ಗಲಾಟೆ ಪ್ರಾರಂಭವಾಗಿ ಸತ್ತೂರು ಮತ್ತು ತಡಕೋಡ ಗ್ರಾಮದ ಯುವಕರ ಮಧ್ಯೆ ಗಲಾಟೆ ಪ್ರಾರಂಭವಾಗಿದೆ. ಈ ಮಧ್ಯೆ ಕಾಳಿಂಗ, ಅಭಿಷೇಕ ಮತ್ತು ಮಂಜುನಾಥ ಎಂಬುವವರಿಗೆ ಚಾಕು ಸೇರಿದಂತೆ ಇರತೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಹಲ್ಲೆಗೊಳಗಾದ ಇವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಈ ಕುರಿತು ವಿದ್ಯಾಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ಗಿರಿಯಪ್ಪ ಭಜಂತ್ರಿ

ಹುಬ್ಬಳ್ಳಿ: ಅಳ್ನಾವರ ತಾಲೂಕಿನ ಪೂರ ಗ್ರಾಮದ ಕೃಷಿಕರಾಗಿದ್ದ ಗಿರಿಯಪ್ಪ ರಾಮಚಂದ್ರ ಭಜಂತ್ರಿ (90) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಹುಬ್ಬಳ್ಳಿ: ಇಲ್ಲಿಯ ಕೆಎಲ್‌ಇ ಸಂಸ್ಥೆಯ ಪಿಸಿ ಜಾಬೀನ್ ಕಾಲೇಜ್ ಹಾಗೂ ರಾಷ್ಟ್ರೋತ್ಥಾನ ರಕ್ತ ಕೇಂದ್ರದ ವತಿಯಿಂದ ಬೃಹತ್ ರಕ್ತದಾನ ಶಿಬಿರ ನಡೆಯಿತು. ಶಿಬಿರದ ಆಯೋಜಕ ವಿನಾಯಕ, ಕಾಲೇಜ್ ಪ್ರಾಂಶುಪಾಲರಾದ ಎಸ್.ಆರ್. ಕುಲಕರ್ಣಿ, ರಕ್ತ ಕೇಂದ್ರದ ವೈದಾಧಿಕಾರಿ ಡಾ.ಎಸ್.ಎಸ್. ಸಂಗೋಳಿ ಇದ್ದರು.

ಫೆ.26ಕ್ಕೆ ಧಾರವಾಡ ತಾಲೂಕು ಸಮ್ಮೇಳನ

ಧಾರವಾಡ: ಕನ್ನಡ ಸಾಹಿತ್ಯ ಪರಿಷತ್ ಧಾರವಾಡ ತಾಲೂಕು 12ನೇ ಕನ್ನಡ ಸಾಹಿತ್ಯ ಸಮ್ಮೇಳನ ಡಾ.ಚಂದ್ರಶೇಖರ ರೊಟ್ಟಿಗವಾಡ ಸರ್ವಾಧ್ಯಕ್ಷತೆಯಲ್ಲಿ ಫೆ.26ರಂದು ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ, ಅಂದು ಬೆಳಗ್ಗೆ 8.30ಕ್ಕೆ ವಿವಿಧ ಧ್ವಜಾರೋಹಣದ ನಂತರ ಸರ್ವಾಧ್ಯಕ್ಷರ ಭವ್ಯ ಮೆರವಣಿಗೆ ಹಾಗೂ ಕನ್ನಡಕ್ಕಾಗಿ ನಡಿಗೆ ಇರಲಿದೆ. ಬೆಳಗ್ಗೆ 10ಕ್ಕೆ ಹಿರಿಯ ಸಾಹಿತಿ ಪ್ರೊ.ಶಾಂತಿನಾಥ ದಿಬ್ಬದ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದು, ಕವಿವಿ ಕುಲಪತಿ ಪ್ರೊ.ಎ.ಎಂ. ಖಾನ್ ಅಧ್ಯಕ್ಷತೆ ವಹಿಸುವರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ.ನಿತಿನ್ ಚಂದ್ರ ಹತ್ತಿಕಾಳ ಧ್ವಜ ಹಸ್ತಾಂತರಿಸಲಿದ್ದಾರೆ ಎಂದರು. ಮೇಯರ್ ಜ್ಯೋತಿ ಪಾಟೀಲ ಬಿಡುಗಡೆ ಮಾಡಲಿದ್ದು, ಮಧ್ಯಾಹ್ನ 12ಕ್ಕೆ ಕವಿವಿ ಪ್ರಾಧ್ಯಾಪಕ ಡಾ.ವಿ.ಎಲ್.ಪಾಟೀಲ ಅಧ್ಯಕ್ಷತೆಯಲ್ಲಿ ಸಾಹಿತ್ಯ-ಆರೋಗ್ಯ ಗೋಷ್ಠಿ, ಡಾ. ವೈ.ಎಂ.ಭಜಂತ್ರಿ ಅಧ್ಯಕ್ಷತೆಯಲ್ಲಿ 14 ಕವಿಗೋಷ್ಠಿ ನಡೆಯಲಿದೆ. ಸಂಜೆ 4.15ಕ್ಕೆ ಸರ್ವಾಧ್ಯಕ್ಷರೊಂದಿಗೆ ಸಂವಾದದ ಬಳಿಕ ಸಮಾರೋಪ ನಡೆಯಲಿದೆ. ಮಾ.13ರಂದು ಹುಬ್ಬಳ್ಳಿ ತಾಲೂಕು ಸಮ್ಮೇಳನ ಹಾಗೂ ಮಾ.30 ಮತ್ತು 31ಕ್ಕೆ ಧಾರವಾಡ ಜಿಲ್ಲಾ ಸಮ್ಮೇಳನ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಮಹಾಂತೇಶ ನರೇಗಲ್, ಪ್ರೊ. ಕೆ.ಎಸ್ ಕೌಜಲಗಿ, ಡಾ. ಎನ್.ಬಿ. ನಾಲತವಾಡ, ಡಾ. ಸರಸ್ವತಿ ಭಗವತಿ, ಮನೋಹರ ನ್ಯಾಮತಿ ಹಾಗೂ ಮಾರ್ತಾಂಡಪ್ಪ ಕತ್ತಿ, ವಿಜಯಲಕ್ಷ್ಮೀ ಕಲ್ಯಾಣಶೆಟ್ಟರ ಇದ್ದರು.



ಹುಬ್ಬಳ್ಳಿ: ಇಲ್ಲಿಯ ಭೈರಿದೇವರ ಕೊಪ್ಪದ ಶೈಲಶ್ರೀ ಮಂಜುನಾಥ ಆರ್ಟ್ಸ್ ಹಾಗೂ ಎಜ್ಯುಕೇಶನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾ ಸಮ್ಮೇಳನ ನಡೆಯಿತು. ರಘುವೀರ, ಡಾ. ಶಶಿಧರ ನರೇಂದ್ರ, ಮಾರ್ತಂಡಪ್ಪ ಕತ್ತಿ, ಚನ್ನಯ್ಯ ವಸ್ತ್ರದ, ಇನಾಮದಾರ, ವೀರೇಶ ನಾಯ್ಕರ ಸಾಧನೆ ಮಾಡಿದ ಕಲಾವಿದರಿಗೆ ಸನ್ಮಾನಿಸಲಾಯಿತು. ಅಮಿತ್ ಶಿಂಧೆ ವಂದಿಸಿದರು. ಶೈಲಶ್ರೀ ಮಂಜುನಾಥ ಅಧ್ಯಕ್ಷತೆ ವಹಿಸಿದ್ದರು.

ಉಪ್ಪಿನಬೆಟಗೇರಿಯಲ್ಲಿ ಹಿಂದೂ ಸಮ್ಮೇಳನ | ಕುಲಕರ್ಣಿ ಅಭಿಮತ

ಹಿಂದೂಗಳೆಲ್ಲರೂ ಒಗ್ಗಟ್ಟಾಗಲಿ



ಉಪ್ಪಿನಬೆಟಗೇರಿ: ಈ ಸಮಾಜದಲ್ಲಿ ಧರ್ಮ ಎಂದರೆ ಹಿಂದೂ. ಜಾತಿ ಪಂಥಗಳ ನಡುವೆ ಗೋಡೆಗಳನ್ನು ಕೆಡವಿ ಈ ಸಮಾಜದಲ್ಲಿ ಒಗ್ಗಟ್ಟು ಮೂಡಬೇಕು. ಹಿಂದೂ ಎಂಬ ಭಾವನೆಯಿಂದ ನಮ್ಮೆಲ್ಲರ ಶಕ್ತಿ ದೊಡ್ಡ ಪ್ರಮಾಣದ ರಕ್ಷಣೆ ನೀಡುತ್ತದೆ ಎಂದು ಕರ್ನಾಟಕ ಉತ್ತರ ಪ್ರಾಂತದ ಸಂಸ್ಕೃತ ಭಾರತಿ ಪ್ರಾಂತ ಮಂತ್ರಿ ಶ್ರೀಕಾಂತ ಕುಲಕರ್ಣಿ ಹೇಳಿದರು.

ಗ್ರಾಮದ ಶ್ರೀಗುರು ವಿರೂಪಾಕ್ಷೇಶ್ವರ ಪದವಿಪೂರ್ವ ಮಹಾ ವಿದ್ಯಾಲಯ ಮೈದಾನದಲ್ಲಿ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ಮೂರುಸಾವಿರ ವಿರಕ್ತಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ ಮಾತನಾಡಿ, ಭಾರತ ವಿಶ್ವ ಗುರುವಾಗಬೇಕಾದರೆ ನಮ್ಮ ಮೂಲ ಸಂಸ್ಕೃತಿ ಯಾದ ಸನಾತನ ಧರ್ಮದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಭಾರತ ಪುಣ್ಯ ಭೂಮಿಯಲ್ಲಿ ಜನಸಿದ ನಾವು ಹಿಂದೂ ಎಲ್ಲರೂ ಒಂದು ಎಂಬ ಭಾವನೆಯಿಂದ ಸಮಾಜದಲ್ಲಿ ಒಂದಾಗಿ ಬಾಳಬೇಕು ಎಂದರು.

ರಮೇಶ ಕುರುಬಗಟ್ಟಿ ದೇಶ ಭಕ್ತಿ ಹಾಡಿದರು. ಹಿಂದೂ ಸಮ್ಮೇಳನ ಸಮಾವೇಶ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯ ಜನಸ್ತೋಮ ಸೇರಿದ್ದರು.

ಅದ್ದೂರಿ ಮೆರವಣಿಗೆ

ಹಿಂದೂ ಸಮ್ಮೇಳನ ಅಂಗವಾಗಿ ಬಾನುವಾರ ಗ್ರಾಮದ ಹೊಸಪೇಟೆ ಮಠ ಓಣಿಯ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದಲ್ಲಿ ಬೃಹತ್ ಶೋಭಾಯಾತ್ರೆಗೆ ಗ್ರಾಮದ ಗಣ್ಯರು ಭಾರತ ಮಾತೆ ಭಾವಚಿತ್ರಕ್ಕೆ ಹಾಗೂ ಗೋವುಗಳಿಗೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಉಪ್ಪಿನಬೆಟಗೇರಿ ಮಾರ್ಕೆಟ್ ರಸ್ತೆ, ಆಂಜನೇಯ ದೇವಸ್ಥಾನ, ಹನುಮನಕೊಪ್ಪ, ಚೈನ್ ಗಲ್ಲಿ, ಹದಿಮೂರಕೇರಿ ಓಣಿ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಶೋಭಾಯಾತ್ರೆಯಲ್ಲಿ ಅಮ್ಮಿನಭಾವಿ ಜಗ್ಗಲಿಗೆ, ಭಜನೆ ಹಾಗೂ ಚಂಡಿ ಹಾಗೂ ಸಂತರ ದಿಂಡಿ ಹಾಗೂ ವಿವಿಧ ಮೇಳದೊಂದಿಗೆ ಸಾಗಿತು. ಹಿಂದೂ ಸಮಾಜದವರು ಹೆಗಲ ಮೇಲೆ ಕೇಸರಿ ವಸ್ತ್ರ ಮತ್ತು ತಿಲಕ ಧರಿಸಿ ಹಬ್ಬದ ವಾತಾವರಣ ನಿರ್ಮಿಸಿದ್ದರು. ಮಹಿಳೆಯರು ತಮ್ಮ ಮನೆ ಅಂಗಳಗಳಲ್ಲಿ ರಂಗೋಲಿ ಚಿತ್ತಾರ ಕಂಗೊಳಿಸಿದ್ದರು. ಮಹಿಳೆಯರೂ ಸಹ ಕೊರಳಿಗೆ ಕೇಸರಿ ವಸ್ತ್ರ ಧರಿಸಿ ಮೆರವಣಿಗೆಗೆ ಮೆರಗು ತಂದರು. ಈ ಸಂದರ್ಭದಲ್ಲಿ ಹನುಮನಕೊಪ್ಪ ಗ್ರಾಮದ ಮೃತ್ಯುಂಜಯ ಯರಗಂಬಳಿಮಠ, ವೀರಣ್ಣಾ ಪರಾಂಡೆ, ಅಶೋಕ ಮಸೂತಿ, ಮಲ್ಲಣ್ಣಾ ಅಷ್ಟಗಿ, ರಾಮಲಿಂಗಪ್ಪ ನವಲಗುಂದ, ಕಲ್ಲಪ್ಪ ಪುಡಕಲಕಟ್ಟಿ, ರವಿ ಯಲಿಗಾರ, ಶಿವಪ್ಪ ವಿಜಾಪುರ, ಧರೇಪ ಬೊಬ್ಬಿ, ಮಹಾಂತೇಶ ದೊಡವಾಡ, ಜ್ಯೋತೆಪ್ಪ ಜಾಧವ, ಅಜೀತ ಛಬ್ಬಿ ಸೇರಿದಂತೆ ಸಂಘಟಕರು ಹಾಗೂ ಗ್ರಾಮಸ್ಥರು ಇದ್ದರು.

- ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬ ಹಿಂದೂಗಳು ಭಾರತ ಮಾತೆಯನ್ನು ತಾಯಿಯಾಗಿ ಗೌರವಿಸಲಿ
- ಈ ದೇಶ ಹಿಂದೂ ರಾಷ್ಟ್ರವಾಗಿದೆ ಎಲ್ಲರೂ ಒಗ್ಗೂಡಿಸಿ ಹಿಂದೂ ಸಮಾಜದ ಜೊತೆಗೆ ಪ್ರೀತಿಯಿಂದ ಸುಸಂಸ್ಕೃತ ಸಂಘಟನೆಯಲ್ಲಿ ಸೇರಿ ದೇಶದ ವಿಚಾರದ ಬಗ್ಗೆ ಚಿಂತನೆ ಮಾಡಿ ಎಂದ ಕರ್ನಾಟಕ ಉತ್ತರ ಪ್ರಾಂತದ ಸಂಸ್ಕೃತ ಭಾರತಿ ಪ್ರಾಂತ ಮಂತ್ರಿ ಶ್ರೀಕಾಂತ ಕುಲಕರ್ಣಿ

ಹಿಂದೂ ಸಮಾಜ ಸಂಘಟಿಸಿ: ವಿವೇಕವಂಶಿ

ನವಲಗುಂದ: ನಮ್ಮ ನಮ್ಮ ಸಮಾಜಗಳ ನಡುವೆ ಜಗಳವುಂಟುಮಾಡುವ ಕುತಂತ್ರಿಗಳು ಬ್ರಿಟಿಷರಾಗಿದ್ದರು. ಈಗ ಮತ್ತೆ ತಲೆ ಎತ್ತುತ್ತಿದ್ದಾರೆ. ಜಾತಿ ಪದ್ಧತಿಯಲ್ಲಿ ಹಿಂದೂಗಳನ್ನು ಒಡೆದು ಆಳುತ್ತಿದ್ದಾರೆ. ಹಿಂದೂ ಸಮಾಜವನ್ನು ಸಂಘಟಿಸಲು ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಸ್ಥಾಪಿಸಲಾಯಿತು ಎಂದು ಪ್ರಜ್ಞಾಪ್ರವಾಹ ಸಂಘಟನೆಯ ಕಾರ್ಯಕರ್ತ ಕಿರಣಕುಮಾರ ವಿವೇಕವಂಶಿ ಹೇಳಿದರು.

ಪಟ್ಟಣದ ಮಾಡೆಲ್ ಹೈಸ್ಕೂಲ್ ಮೈದಾನದಲ್ಲಿ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಹಿಂದೂ ಸಮ್ಮೇಳನದಲ್ಲಿ ಮಾತನಾಡಿ, ನಮ್ಮ ಭೌತಿಕ ಸುಖವನ್ನೆಲ್ಲ ತ್ಯಜಿಸಿ ಜಗತ್ತಿಗೆ ಒಳಿತನ್ನು ಬಯಸಿದರು ನಮ್ಮ ಪೂರ್ವಜರು. ನಮ್ಮ ಪೂರ್ವಜರ ಕನಸನ್ನು ನನಸಾಗಿಸುವ ಹೊಣೆಗಾರಿಕೆ ನೆಮ್ಮೆಲ್ಲರ ಮೇಲಿದೆ. ಸಂಘಟಿತ ಹಿಂದೂ ಸಮಾಜದ ಶಕ್ತಿಯಿಂದ ಮಾತ್ರ ಇದು ಸಾಧ್ಯ. ಹಿಂದೂ ಸಮಾಜವನ್ನು ಸಂಘಟಿಸಿ ರಾಷ್ಟ್ರೋನ್ನತಿಯನ್ನು ಸಾಧಿಸುವ ಈ ಮಹಾನ್ ಕಾರ್ಯದಲ್ಲಿ ನಾವೆಲ್ಲರೂ ಒಂದಾಗಿ ಮುನ್ನಡೆಯೋಣ ಎಂದರು.

ಸಾನ್ನಿಧ್ಯ ವಹಿಸಿದ ಹಿರೇಮಠದ ನಿಯೋಜಿತ ಉತ್ತರಾಧಿಕಾರಿ ವೀರಬಸವ ದೇವರು ಮಾತನಾಡಿ, ಜಾತಿ, ಪಕ್ಷ, ವ್ಯಕ್ತಿ ಕಾರ್ಯಕ್ರಮವಲ್ಲ ನೀತಿ, ಬದ್ಧತೆಯ, ವ್ಯಕ್ತಿತ್ವದ ಕಾರ್ಯಕ್ರಮ, ಈ ಕಾರ್ಯಕ್ರಮವು ದೇಶದ ಪ್ರೇಮವನ್ನು ಸಂಸ್ಕಾರ ಬೆಳೆಸುವ ಕಾರ್ಯಕ್ರಮವಾಗಿದೆ. ಇಂತಹ ಕಾರ್ಯಕ್ರಮಗಳಿಗೆ ಎಲ್ಲರೂ ಸಮಯ ನೀಡಬೇಕು. ಯುವಜನತೆ ಹಾಗೂ ಎಲ್ಲರೂ ದೇಶ ಪ್ರೇಮವನ್ನು ಬೆಳೆಸಿಕೊಂಡು ಸಂಸ್ಕಾರಿತವಾದ ಸಮಾಜವನ್ನು ಕಟ್ಟುವುದು, ನಮ್ಮ ಮಕ್ಕಳಿಗೆ ಸಂಸ್ಕಾರವನ್ನು ತಿಳಿಸುವುದು ಹಾಗೂ ಬೆಳೆಸುವುದು ಅಘೋಂಡಾವಾಗಿದೆ. ಈಗಿನ ಯುವಜನತೆಯಲ್ಲಿ ದೇಶಪ್ರೇಮ ನಶಿಸಿ ಹೋಗುತ್ತಿದೆ. ಮುಂದಿನ ಪೀಳಿಗೆಗೆ ಹಿಂದೂತ್ವ, ಸಂಸ್ಕಾರ, ಆಧ್ಯಾತ್ಮಿಕತೆ ಎಚ್ಚೆತ್ತುಕೊಳ್ಳಲಿ ಎಂಬ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳು ಜರುಗುತ್ತಿವೆ. ಎಲ್ಲರೂ ದೇಶಪ್ರೇಮವನ್ನು ಬೆಳೆಸಿಕೊಳ್ಳಬೇಕು ಎಂದರು. ಅಣ್ಣಪ್ಪ ಬಾಗಿ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷ ಲೋಕನಾಥ ಹೆಬಸೂರ, ಎನ್.ಪಿ. ಕುಲರ್ಕಣಿ, ಶರಣಪ್ಪ ಗುಜಮಾಗಡಿ, ದೇವರಾಜ ಬೆಳಮಕರ, ಮೈಲಾರೆಪ್ಪ ವೈದ್ಯ, ನಾಗಪ್ಪ ಭೋವಿ, ಬಸವರಾಜ ಕೆರಿಮಠ, ಅಣ್ಣೇಶ ತೆರದಾಳ, ಅಶೋಕ ಮಜ್ಜಿಗುಡ್ಡ, ನಿಂಗಪ್ಪ ಬಾರಕೆರ, ಸಿದ್ದಯ್ಯಸ್ವಾಮಿ ನಾಗಲಿಂಗಮಠ, ಮಾರುತಿ ಗೊಲ್ಲರ, ನೇತಾಜಿಕಲಾಲ, ಸುರೇಶ ಭಾಂಡಗೆ, ಸಂತೋಷ ನಾವಳ್ಳಿ, ಶ್ರೀಕಾಂತ ಪಾಟೀಲ, ಮಾಂತೇಶ ಕಲಾಲ, ಕಿರಣ ರಾಯಬಾಗಿ, ಜ್ಯೋತಿ ಗೊಲ್ಲರ, ಕಸ್ತೂರಿ ಹಳ್ಳದ, ಪ್ರೇಮಾ ಹೆಬಸೂರ, ಪೂರ್ಣಿಮಾ ಜೋಶಿ, ನೀಲಮ್ಮ ಪಟ್ಟಣಶೆಟ್ಟಿ, ಪ್ರಕಾಶ ಪಾಚಂಗಿ ಇತರರಿದ್ದರು.



ಸಮರ್ಪಕ ಶುದ್ಧ ನೀರು ಪೂರೈಸಿ: ಸಚಿವ ಲಾಡ್

ಧಾರವಾಡ: ಹುಬ್ಬಳ್ಳಿ-ಧಾರವಾಡ ಅವಳಿನಗರ ಸೇರಿದಂತೆ ಜಿಲ್ಲೆಯ ಯಾವುದೇ ಹಳ್ಳಿಯಲ್ಲೂ ಕುಡಿಯುವ ನೀರು ಅಭಾವ ಉಂಟಾಗದಂತೆ ಸಮರ್ಪಕ ನೀರು ಪೂರೈಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಸೋಮವಾರ ತ್ರೈಮಾಸಿಕ ಕೆಡಿಪಿ ಸಭೆ ನಡೆಸಿದ ಅವರು, ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುವ 90 ಹಳ್ಳಿಗಳಿಗೆ ನೀರು ಪೂರೈಸಲು ಖಾಸಗಿ ಕೊಳಬಾವಿ ವ್ಯವಸ್ಥೆ ಮಾಡುವಂತೆ ಆದೇಶಿಸಿದರು. ನೀರಿನ ಶುದ್ಧತೆ ಬಗ್ಗೆ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ವಿಭಾಗ ಮತ್ತು ಆರೋಗ್ಯ ಇಲಾಖೆ ಪರೀಕ್ಷಿಸಲು ಸೂಚಿಸಿದ ಸಚಿವ ಸಂತೋಷ, ಒಂದು ವೇಳೆ ಕಲುಷಿತ ನೀರು ಸೇವಿಸಿ ಅನಾಹುತ ಉಂಟಾದರೆ ಅಧಿಕಾರಿಗಳೇ ಹೊಣೆ ಎಂದು ಎಚ್ಚರಿಸಿದರು.

ಕೃಷಿ ಇಲಾಖೆ ಅಥವಾ ಕೃಷಿ ವಿವಿಗಳು ಕೃಷಿಯಲ್ಲಿ ಹೊಸತನ ಅಳವಡಿಸುತ್ತಿಲ್ಲ. ಕೃಷಿ ವಿಜ್ಞಾನಿಗಳು ನೀಡುವ ಮಾರ್ಗದರ್ಶನ ರೈತರಿಗೆ ತಲುಪುತ್ತಿಲ್ಲ. ರೈತರು ಮತ್ತು ಕೃಷಿ ಬಗ್ಗೆ ಏನು ಅಧ್ಯಯನ ನಡೆದಿದೆ ಎಂದು ಪ್ರಶ್ನಿಸಿದರು. ನಿತ್ಯವೂ ಕೃಷಿ ಭೂಮಿ ಕೃಷಿಯೇತರ ಚಟುವಟಿಕೆಗೆ (ಎನ್‌ಎ) ಬಳಸಲ್ಪಡುತ್ತಿದೆ. ಆದರೆ ಕೃಷಿ ಇಲಾಖೆ ಅಧಿಕಾರಿಗಳು ಮಾತ್ರ ಕಳೆದ ಹತ್ತು ವರ್ಷದಿಂದ 3.43 ಲಕ್ಷ ಹೆಕ್ಟೇರ್ ಬಿತ್ತನೆ ಪ್ರದೇಶ ತೋರುವುದೇಕೆ? ಸೂಕ್ತ ಮಾಹಿತಿ ನೀಡುವಂತೆ ಸೂಚಿಸಿದರು. ಸಭೆಯಲ್ಲಿ ಶಾಸಕ ಎಂ.ಆರ್.ಪಾಟೀಲ ತಮ್ಮ ಕ್ಷೇತ್ರದ ಕುಡಿಯುವ ನೀರು, ಕೃಷಿ, ಹೊಲದ ರಸ್ತೆಗಳ ಸಮಸ್ಯೆ ಚರ್ಚಿಸಿದರು. ಜಿಲ್ಲಾಧಿಕಾರಿ ಸ್ನೇಹಲ್, ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ ಇತರರಿದ್ದರು.

ಕ್ರಿಮಿನಲ್ ಕೇಸ್!

ಜಿಲ್ಲೆಯಲ್ಲಿ ನಿರಂತರ ನೀರು ಯೋಜನೆ ಕಾಮಗಾರಿ ಮುಗಿಸಿದ ಎಲ್ ಆಂಡ್ ಟಿ ವಿರುದ್ಧ ಬೇಸರ ವ್ಯಕ್ತಪಡಿಸಿದ ಸಂತೋಷ ಲಾಡ್, ಕೋಟಿಗಟ್ಟಲೇ ರೂಪಾಯಿ ದಂಡ ಹಾಕಿದರೂ ಅಧಿಕಾರಿಗಳು ತಮ್ಮ ವರ್ತನೆ ಬದಲಿಸಿಕೊಂಡಿಲ್ಲ. ಹೀಗಾಗಿ ಈ ಕಂಪನಿ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಲು ಜಿಲ್ಲಾಧಿಕಾರಿ ಸ್ನೇಹಲ್ ಅವರಿಗೆ ಸೂಚಿಸಿದರು.

> ಜಿಲ್ಲೆಯಲ್ಲಿ ಮಾವಿನ ಮರಗಳ ಹೂ ಉದುರಿ, ಮಾವು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹವಾಮಾನ ವೈಪರೀತ್ಯಕ್ಕೆ ಬರುವ ರೋಗಗಳ ಹತೋಟಿಗೆ ವಿಜ್ಞಾನಿಗಳು ಮುಂಜಾಗ್ರತ ಕ್ರಮ ಕೈಗೊಳ್ಳಬೇಕು.
> ■ ಎನ್.ಎಚ್.ಕೋನರಡ್ಡಿ, ಶಾಸಕ



ಎಪ್ಸ್ಟೀನ್ ವಿವಾದ: ಪ್ರತಿಭಟನೆ



ಹುಬ್ಬಳ್ಳಿ: ವಿಶ್ವದಾದ್ಯಂತ ಚರ್ಚೆಯಾಗುತ್ತಿರುವ ಎಪ್ಸ್ಟೀನ್ ಸಂಬಂಧಿತ ದಾಖಲೆಗಳ ಬಗ್ಗೆ ಕೇಂದ್ರ ಸರ್ಕಾರದಿಂದ ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ಒತ್ತಾಯಿಸಿ ಹುಬ್ಬಳ್ಳಿ-ಧಾರವಾಡ ಮಹಾನಗರ ಜಿಲ್ಲಾ ಯುವ ಕಾಂಗ್ರೆಸ್ ಘಟಕದಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸೋಮವಾರ ಇಲ್ಲಿನ ವಿದ್ಯಾನಗರದ ವೃತ್ತದಲ್ಲಿ ಸಮಾವೇಶ ಗೊಂಡ ಪ್ರತಿಭಟನಾಕಾರರು, ಎಪ್ಸ್ಟೀನ್‌ಗೆ ಕೇಂದ್ರ ಸಚಿವ ಹರ್ದೀಪ್‌ಸಿಂಗ್ ಪುರಿ ಅವರು ನಾಲ್ಕು ಬಾರಿ ಭೇಟಿಯಾಗಿದ್ದಾರೆ. ಅವರ ಜೊತೆ ನಮ್ಮ ಡಿಜಿಟಲ್ ಇಂಡಿಯಾ ಬಗ್ಗೆ ಚರ್ಚೆ ಮಾಡಿದ್ದಾರೆ. ಹೀಗಾಗಿ ಅವರು ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು. ಹುಬ್ಬಳ್ಳಿ-ಧಾರವಾಡ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅರ್ಜುನ ಪಾಟೀಲ, ರಾಜ್ಯ ಕಾರ್ಯದರ್ಶಿ ಹನೀಫ್ ಖುರೇಶಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಶೀತಲ್ ಮಠಪತಿ, ಶಾನುಖಾನ್, ಶುಜಾಹುದ್ದೀನ್ ವಾಚಮೇಕರ್, ರಾಹುಲ್ ಉಪ್ಪಲಡಬ್ಬಿ ಸೇರಿದಂತೆ ಇತರರಿದ್ದರು.

ಕರ್ತವ್ಯ ನಿರ್ಲಕ್ಷ್ಯ: ಇಬ್ಬರು ಅಮಾನತು

ಧಾರವಾಡ: ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ನಿರ್ಲಕ್ಷ್ಯ ವಹಿಸಿದ ಇಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸಿ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸೋಮವಾರ ಆದೇಶ ಹೊರಡಿಸಿದ್ದಾರೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಬಿಲ್ ಕಲೆಕ್ಟರ್ ಬಸವರಾಜ ನಿಗದಿ, ಜಿಲ್ಲಾ ಕೇಂದ್ರ ಗ್ರಂಥಾಲಯದ ಎಸ್‌ಡಿಎ ಅನ್ನಪೂರ್ಣ ಎಸ್. ಸವದತಿ ಅವರೇ ಅಮಾನತುಗೊಂಡ ಅಧಿಕಾರಿಗಳು ಮತಪಟ್ಟಿ ಪರಿಷ್ಕರಿಸಲು ಸೂಚನೆ ನೀಡಿದರೂ, ಅಧಿಕಾರಿ ಬಸವರಾಜ ನಿಗದಿ (ಭಾಗಸಂಖ್ಯೆ 137), ಅನ್ನಪೂರ್ಣ ಸವದಿ (ಭಾಗ ಸಂಖ್ಯೆ 160) ಪ್ರೊಜನಿ ಮ್ಯಾಪಿಂಗ್ ಕಾರ್ಯ ಪ್ರಾರಂಬಿಸಿರಲಿಲ್ಲ. ಈ ಇಬ್ಬರು ಅಧಿಕಾರಿಗಳು ತಮಗೆ ವಹಿಸಿದ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸಿರುವುದು ಮೇಲ್ನೋಟಕ್ಕೆ ಕಂಡುಬಂದ ಕಾರಣ ಅಮಾನತುಗೊಳಿಸಿದ್ದಾಗಿ ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

ಸೌರ ವಿದ್ಯುತ್ ಉತ್ಪಾದನಾ ಘಟಕ ಉದ್ಘಾಟನೆ

ನವಲಗುಂದ: ವಕೀಲರ ಬೇಡಿಕೆಗಳು ಈಡೇರಬೇಕೆಂದರೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ಸಹಕಾರ ಅವಶ್ಯ. ಮೂರು ಅಂಗಗಳ ಸಹಕಾರ ನನಗೆ ದೊರೆತಿದ್ದರಿಂದ ಇಂದು ನಾನು ವಕೀಲರ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಯಿತು ಎಂದು ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು.

ಅವರು ಸೋಮವಾರ ನಗರದ ವಕೀಲರ ಸಂಘದಲ್ಲಿ ನೂತನವಾಗಿ ನಿರ್ಮಿಸಿದ ಸೌರ ವಿದ್ಯುತ್ ಉತ್ಪಾದನಾ ಘಟಕ ಉದ್ಘಾಟಿಸಿ ಮಾತನಾಡಿದರು.

ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಅಶೋಕ ಜಿ. ನಿಜಗಣ್ಣವರ, ವಿಶ್ರಾಂತ ಜಿಲ್ಲಾ ನ್ಯಾಯಾಧೀಶ ಬಿ.ಆರ್. ಧರ್ಮಗೌಡರ, ನವಲಗುಂದ ನ್ಯಾಯಾಲಯಗಳ ಹಿರಿಯ ಸಿವಿಲ್ ನ್ಯಾಯಾಧೀಶ ಮಂಜುನಾಥ ಪಾನಘಂಟಿ, ಸಿವಿಲ್ ನ್ಯಾಯಾಧೀಶ ನವೀನ ಎಫ್. ಡಿಸೋಜ ಉಪಸ್ಥಿತರಿದ್ದರು

ಕಾರ್ಯಕ್ರಮಕ್ಕೆ ಆಗಮಿಸಿದ ಮುಖ್ಯ ಅತಿಥಿಗಳನ್ನು, ಸೌರ ಶಕ್ತಿ ಉತ್ಪಾದನಾ ಘಟಕಕ್ಕೆ ಸಹಾಯ ಮಾಡಿದ ವಿವಿಧ ಇಲಾಖೆಯ ಅಧಿಕಾರಿಗಳನ್ನು ಹಾಗೂ ಇತ್ತೀಚಿಗೆ, ಚಿಕ್ಕ ವಯಸ್ಸಿನಲ್ಲೆ ನ್ಯಾಯಾಧೀಶರಾದ ಬ್ಯಾಲ್ಯಾಳ ಗ್ರಾಮದ ಸುಧಾ ಪಟ್ಟಣಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಪಿ.ಎಚ್.ಕೋನರಡ್ಡಿ ಮಾತನಾಡಿ, ನವಲಗುಂದದಲ್ಲಿ ವಕೀಲರ ಸಂಘದ ಕಟ್ಟಡ, ಹಿರಿಯ ಸಿವಿಲ್ ನ್ಯಾಯಾಲಯ ಹಾಗೂ ಧಾರವಾಡದ ಉಚ್ಚ ನ್ಯಾಯಾಲಯದ ಬೆಂಚ್ ಪ್ರಾರಂಭಕ್ಕೆ ಶಾಸಕರ ಕೊಡುಗೆ ಅಮೋಘವಾದದ್ದು. ಇಂದು ನವಲಗುಂದ ವಿದಾನಸಭಾ ಕ್ಷೇತ್ರದಲ್ಲಿ ಒಂದು ಒಳ್ಳೆಯ ಅಭಿವೃದ್ಧಿ ಕಾರ್ಯವಾಗಿದೆಯೆಂದರೆ ಆ ಕಾರ್ಯದ ಹಿಂದೆ ಶಾಸಕ ಎನ್.ಎಚ್. ಕೋನರಡ್ಡಿ ಅವರ ಪರಿಶ್ರಮವಿದೆ ಎಂದರು.

ಇದೇ ವೇಳೆ ಅತಿಥಿ ಗಣ್ಯಮಾನ್ಯರನ್ನ ಹಾಗೂ ಶಾಸಕರನ್ನು ಸನ್ಮಾನಿಸಿ ಗೌರವಿಸಲಾಯಿತು. ವಕೀಲರಾದ ಎಸ್.ವಿ.ಮರಡ್ಡಿ ಸ್ವಾಗತಿಸಿದರು, ವಿ.ಪಿ.ಪಾಟೀಲ ಪ್ರಾಸ್ತಾವಿಸಿದರು. ಈ ವೇಳೆ ಸಂಘದ ಉಪಾಧ್ಯಕ್ಷೆ ಶಾಂತಲಾ ಸೋಮನಕಟ್ಟಿ, ನ್ಯಾಯವಾದಿಗಳಾದ ಎಸ್.ಎನ್. ಡಂಬಳ, ಎಸ್. ಎಂ.ಹಿರೇಮಠ ಸೇರಿದಂತೆ ವಕೀಲರ ಸರ್ವ ಸದ್ಯಸರು ಹಾಗೂ ಸಿಬ್ಬಂದಿ ವರ್ಗ ಇದ್ದರು.



ವಿವಿ ಘಟಕಗಳಾಗಿಸುವ ನಿರ್ಧಾರ ಕೈಬಿಡಿ



ಧಾರವಾಡ: ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಹತ್ತಿಕ್ಕುವ ಹಾಗೂ ಸಂಶೋಧನಾ ವಲಯಕ್ಕೆ ಮಾರಕವಾಗಿ ವಿಶ್ವವಿದ್ಯಾಲಯಗಳನ್ನು ಘಟಕವಾಗಿ ಮಾರ್ಪಡಿಸುವ ಸರ್ಕಾರದ ನಿರ್ಧಾವರನ್ನು ಅಖಿಲ ಕರ್ನಾಟಕ ಸಂಶೋಧಕರ ಸಂಘದ ಅಧ್ಯಕ್ಷ ಡಾ.ಶಿವಸೋಮಣ್ಣ ನಿಟ್ಟೂರ ಖಂಡಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿಶ್ವವಿದ್ಯಾಲಯ ಘಟಕಗಳಾದರೆ, ಆಡಳಿತಾತ್ಮಕ ಹಸ್ತಕ್ಷೇಪ ಹೆಚ್ಚಾಗಿ, ಸಂಶೋಧನೆ ಹಾಗೂ ಶಿಕ್ಷಣದ ಗುಣಮಟ್ಟವೂ ಕುಸಿಯಲಿದೆ. ಅಲ್ಲದೇ, ಸಂಪನ್ಮೂಲಗಳು ಅಧಿಕಾರಶಾಹಿ ನಿಮಯಗಳ ಸುಳಿಗೆ ಸಿಲುಕುತ್ತವೆ. ವಿಶೇಷ ಅನುದಾನ, ಯುಜಿಸಿ ನಿಯಮಾವಳಿ ಮೇಲೂ ನಕಾರಾತ್ಮಕ ಪರಿಣಾಮ ಬೀರಲಿದೆ. ಸಂಶೋಧನಾ ವಿದ್ಯಾರ್ಥಿಗಳ ವೇತನ, ಸೌಲಭ್ಯಗಳು, ನೇಮಕಾತಿ ಪ್ರಕ್ರಿಯೆಯಲ್ಲೂ ವಿಳಂಬವಾಗಲಿದೆ. ಸರ್ಕಾರ ಈ ನಿರ್ಧಾರ ಕೈಬಿಡಬೇಕು ಎಂದರು.

ಸದಸ್ಯ ತರುಣ ದೊಡ್ಡಮನಿ ಮಾತನಾಡಿ, ನೇಮಕಾತಿಯಲ್ಲಿ ವಿಷಯವಾರು ಮೀಸಲಾತಿ ಕೈಬಿಟ್ಟು, ವಿಶ್ವವಿದ್ಯಾಲಯಗಳನ್ನು ಘಟಕಗಳಾಗಿ ಮಾಡಿದರೆ ಪರಿಶಿಷ್ಟ ಜಾತಿ ಮತ್ತು ಪಂಡದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ. ಇದು ಸಂವಿಧಾನ ಮತ್ತು ಎಸ್ಸಿ-ಎಸ್ಟಿ ವಿರೋಧ ನಡೆ ಎಂದರು. ಒಂದು ವೇಳೆ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ, ಮುಂಬರುವ ದಿನಗಳಲ್ಲಿ ರಾಜ್ಯಾದ್ಯಂತ ಸಂಶೋಧಕರು, ವಿದ್ಯಾರ್ಥಿಗಳು ಬೀದಿಗಿಳಿದು ತೀವ್ರ ಹೋರಾಟ ಮಾಡುವುದಾಗಿಯೂ ಎಚ್ಚರಿಸಿದರು. ಮಧುಸೂಧನ್ ಟಿ., ಅಜಿತ್ ಮ್ಯಾಗೇರಿ ಸೇರಿದಂತೆ ಅನೇಕರು ಇದ್ದರು.


ಮರಾಠಾ ಸಮಾಜ ಶೌರ್ಯದ ಪ್ರತೀಕ

ಹುಬ್ಬಳ್ಳಿ: ಮರಾಠಾ ಸಮಾಜವೆಂದರೆ ಧೈರ್ಯ, ಶೌರ್ಯದ ಪ್ರತೀಕ. ಶಿವಾಜಿ ಮಹಾರಾಜರು ಸ್ವರಾಜ್ಯದ ಕಲ್ಪನೆಯನ್ನು ಸಮಾಜಕ್ಕೆ ತೋರಿಸಿಕೊಟ್ಟವರು. ಶಿವಾಜಿ ಮಹಾರಾಜರು ಎಲ್ಲಾ ಜಾತಿ, ಧರ್ಮ ಪ್ರೀತಿಸುವ ರಾಷ್ಟ್ರಪ್ರೇಮಿಯಾಗಿದ್ದರು ಎಂದು ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ರವಿವಾರ ಇಲ್ಲಿನ ಗೋಕುಲ ರಸ್ತೆಯ ಶಿವಮಹೋತ್ಸವ ಸಮಿತಿ ಮರಾಠಾ ಅಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತ್ಯುತ್ಸವ ಹಾಗೂ ಮೆರವಣಿಗೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ಕಾರ್ಯಾಧ್ಯಕ್ಷ ರಾಜಶೇಖರ ಮೆಣಸಿನಕಾಯಿ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರು ಒಂದು ಜಾತಿಗೆ ಸೀಮಿತವಾಗಿಲ್ಲ. ಮಹಾನ್ ನಾಯಕರನ್ನು ಜಾತಿಗೆ ಸೀಮಿತ ಮಾಡದೇ ಅವರಲ್ಲಿನ ತ್ಯಾಗ, ದೇಶಪ್ರೇಮಗಳನ್ನು ನಾವು ಸ್ಮರಿಸಬೇಕು. ಅವರ ಕೊಡುಗೆ, ಹಾಕಿಕೊಟ್ಟಿರುವ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕು ಎಂದರು.

ಮರಾಠಾ ಸಮುದಾಯಗಳ ಅಭಿವೃದ್ಧಿ ನಿಗಮ ಮಂಡಳಿ ಅಧ್ಯಕ್ಷ ಜಿ.ಎಚ್. ಮರಿಯೋಜಿರಾವ್ ಮಾತನಾಡಿದರು. ಮಣಕವಾಡದ ಮಹಾಮಠ ದೇವಮಂದಿರದ ಅಭಿನವ ಮೃತ್ಯುಂಜಯ ಮಹಾಸ್ವಾಮೀಜಿ, ಪೊಲೀಸ್ ಆಯುಕ್ತ ಎನ್. ಶಶಿಕುಮಾರ್, ಕೆಪಿಸಿಸಿ ಕಾರ್ಯದರ್ಶಿ ನಾಗರಾಜ ಗೌರಿ, ಹಿಂದೂ ಸೇನೆ ರಾಜ್ಯ ಘಟಕದ ಅಧ್ಯಕ್ಷ ವಿನಾಯಕ ಮಾಳದಕರ್, ಅಧ್ಯಕ್ಷ ಕೃಷ್ಣಾ ಶಿಂಧೆ, ಸೀಮಾ ಲದವಾ ಇದ್ದರು.



ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಿ



ಧಾರವಾಡ: ಬಾಗಲಕೋಟೆಯ ಕಿಲ್ಲಾ ಓಣಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಗೆ ಅಡ್ಡಿಪಡಿಸಿದವರ ವಿರುದ್ಧ ಕ್ರಮಕೈಗೊಳ್ಳಲು ಒತ್ತಾಯಿಸಿ ಮರಾಠ ವಿದ್ಯಾಪ್ರಸಾರಕ ಮಂಡಳದಿಂದ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತಿ ಭವ್ಯ ಮೆರವಣಿಗೆ ಕಿಲ್ಲಾ ಓಣಿಯಲ್ಲಿ ನಡೆಸಲು ಅಡ್ಡಿಪಡಿಸಿದ ಕೆಲವು ಕಿಡಗೇಡಿ ಮತಾಂಧರು, ಶಿವಾಜಿ ಮೆರವಣಿಗೆ ಮೇಲೆ ಕಲ್ಲು ತೂರಾಟ ಮತ್ತು ಚಪ್ಪಲಿ ಎಸಿರುವುದು ತೀವ್ರವಾಗಿ ಖಂಡಿಸಿದರು. ಮೆರವಣಿಗೆಗೆ ಅಡ್ಡಿಪಡಿಸುವ ಮೂಲಕ ಸಮಾಜದ ಶಾಂತಿ-ಸುವ್ಯವಸ್ಥೆ ಕದಡಿದವರನ್ನು ತಕ್ಷಣವೇ ಬಂಧಿಸಿ, ಕಾನೂನು ಶಿಕ್ಷೆಗೆ ಗುರಿಪಡಿಸುವ ಜೊತೆಗೆ ಮತ್ತೊಮ್ಮೆ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಗೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿದರು. ಮಂಡಳದ ಅಧ್ಯಕ್ಷ ಎಂ.ಎನ್.ಮೋರೆ, ಗಣೇಶ ಕದಂ, ಉಪಾಧ್ಯಕ್ಷ ಯಲ್ಲಪ್ಪ ಚವ್ಹಾಣ, ಗೌರವ ಕಾರ್ಯಾಧ್ಯಕ್ಷ ಸುನೀಲ ಮೋರೆ, ಕಾರ್ಯದರ್ಶಿ ರಾಜು ಬಿರಜೆನವರ, ಸಹ ಕಾರ್ಯದರ್ಶಿ ರಾಜು ಕಾಳೆ, ನಿರ್ದೇಶಕರಾದ ಸುಭಾಷ ಶಿಂಧೆ, ಶಿವಾಜಿ ಸೂರ್ಯವಂಶಿ, ಪುರುಷೋತ್ತಮ ಜಾಧವ, ಈಶ್ವರ ಪಾಟೀಲ, ಸುಭಾಷ ಪವಾರ್, ಮಲ್ಲೇಶಪ್ಪ ಶಿಂಧೆ, ಮಹೇಶ ಶಿಂಧೆ, ಪ್ರಸಾದ ಹಂಗಳಕಿ, ಪಾಲಿಕೆ ಸದಸ್ಯರಾದ ಮಯೂರ ಮೋರೆ, ಶಂಕರ ಶೇಳಕೆ, ಭೀಮಪ್ಪ ಕಾಸಾಯಿ, ನವೀನ ಕದಂ, ಮಂಜುನಾಥ ಕದಂ ಇತರರಿದ್ದರು.


ಮಂಜುನಾಥ ಮುನವಳ್ಳಿಗೆ ಸನ್ಮಾನ

ಹುಬ್ಬಳ್ಳಿ: ಕೆ.ಎಲ್.ಇ. ಸಂಸ್ಥೆಯ ನೂತನ ಕಾರ್ಯಾಧ್ಯಕ್ಷ ಅಮಿತ ಕೋರೆ ಮತ್ತು ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾದ ಮಂಜುನಾಥ ಮುನವಳ್ಳಿ ಅವರಿಗೆ ನಗರದ ವಿವಿಧ ಸಂಘ ಸಂಸ್ಥೆಗಳ ಪರವಾಗಿ ಸನ್ಮಾನಿಸಲಾಯಿತು.

ಶಿಕ್ಷಣ, ಆರೋಗ್ಯ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಕೆ.ಎಲ್.ಇ. ಸಂಸ್ಥೆ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರ ನೇತೃತ್ವದಲ್ಲಿ ಸಾಧಿಸಿದ ಪ್ರಗತಿಯನ್ನು ಸ್ಮರಿಸಲಾಯಿತು.

ಕಾರ್ಯಾಧ್ಯಕ್ಷ ಅಮಿತ ಕೋರೆ ಮಾತನಾಡಿ, ಸಹಕಾರ ಸಂಘದ ಹಿನ್ನೆಲೆಯಲ್ಲಿ ಬೆಳೆದ ತಾವು, ಕೆ.ಎಲ್.ಇ. ಸಂಸ್ಥೆಯ ಹೆಸರು ಉಳಿಸಿ ಬೆಳೆಸಲು ಕಾರ್ಯ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎಂದರು. ಸದಸ್ಯ ಮಂಜುನಾಥ ಮುನವಳ್ಳಿ ಮಾತನಾಡಿ, ಕೆ.ಎಲ್.ಇ. ಸಪ್ತರ್ಷಿಗಳನ್ನು ಸ್ಮರಿಸಿ, ಹುಬ್ಬಳ್ಳಿಯ ಭಾಗದ ಶೈಕ್ಷಣಿಕ ಬೆಳವಣಿಗೆಗೆ ಕಾರ್ಯ ಮಾಡುವುದಾಗಿ ಹೇಳಿದರು.

ಮಾಜಿ ನಿರ್ದೇಶಕ ಶಂಕ್ರಣ್ಣ ಮುನವಳ್ಳಿ, ಮಾಜಿ ಶಾಸಕರಾದ ಪರಣ್ಣ ಮುನವಳ್ಳಿ, ಈಶಣ್ಣ ಮುನವಳ್ಳಿ ಮಾತನಾಡಿದರು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ, ಶಾಸಕ ಅರವಿಂದ ಬೆಲ್ಲದ, ಎಂ. ಆರ್. ಪಾಟೀಲ, ಎಚ್.ಎಫ್.ಜಕ್ಕಪ್ಪನವರ, ಉದ್ಯಮಿ ಆನಂದ ಸಂಕೇಶ್ವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕೇಶವಕುಮಾರ ಮಾಲವಿಯಾ, ಆಂಜನೇಯ ಭಜಂತ್ರಿ, ಮಧು ಕುಲಕರ್ಣಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. ಪ್ರಾಚಾರ್ಯ ವಿರೇಶ ಅಂಗಡಿ ಮತ್ತು ಉಪನ್ಯಾಸಕಿ ಡಾ. ನೇತ್ರಾವತಿ ಗಬ್ಬೂರ ಕಾರ್ಯಕ್ರಮ ನಿರೂಪಿಸಿದರು.



ಸರ್ಕಾರದ ಅಮಾನವೀಯ ನಡೆ: ವಿಪಕ್ಷ ನಾಯಕ ಅಶೋಕ

ಬೆಂಗಳೂರು: ಸಮಾಜದ ಅತ್ಯಂತ ಕಟ್ಟಕಡೆಯ ವ್ಯಕ್ತಿಗಳಾದ ಭಿಕ್ಷುಕರ ಪುನರ್ವಸತಿಗಾಗಿ ಜನರಿಂದ ಸಂಗ್ರಹಿಸಿದ ಭಿಕ್ಷುಕರ ಉಪಕರವನ್ನೂ ನುಂಗಿ ನೀರು ಕುಡಿಯುತ್ತಿರುವ ಈ ಕಾಂಗ್ರೆಸ್ ಸರ್ಕಾರದ ನಡೆ ಅತ್ಯಂತ ಅಮಾನವೀಯ ಮತ್ತು ನಾಚಿಕೆಗೇಡು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಬಡವರ ಹೆಸರಲ್ಲಿ ಅಧಿಕಾರಕ್ಕೆ ಬಂದು, ಈಗ ದೀನ-ದಲಿತರ ಹಸಿವು ನೀಗಿಸಬೇಕಾದ ಹಣವನ್ನೂ



ಬಿಡದೆ ಲೂಟಿ ಮಾಡುತ್ತಿರುವುದು ಈ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರಕ್ಕೆ ಹಿಡಿದ ಕೈಗನ್ನಡಿ ಎಂದು ಟೀಕಿಸಿದ್ದಾರೆ.

ಸಾವಿರಾರು ಕೋಟಿ ಬಾಕಿ: ಬಿಬಿಎಂಪಿ (ಜಿಬಿಎ)ಯಿಂದ ಸಂಗ್ರಹವಾದ ಆರೋಗ್ಯ ಸೆಸ್ (256 ಕೋಟಿ ರೂ.), ಗ್ರಂಥಾಲಯ ಸೆಸ್ (218 ಕೋಟಿ ರೂ.) ಸೇರಿದಂತೆ ಸಾವಿರಾರು ಕೋಟಿ ರೂ.ಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಪಾವತಿಸದೆ ರಾಜ್ಯ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ. 2024-25ನೇ ಸಾಲಿನಲ್ಲಿ ಪಂಚಾಯತ್‌ಗಳು ಸಂಗ್ರಹಿಸಿದ 72.82 ಕೋಟಿ ರೂ.ಗಳಲ್ಲಿ ಕೇವಲ 21.55 ಕೋಟಿ ರೂ. ಮಾತ್ರ ಜಮೆಯಾಗಿದೆ. ಉಳಿದ 51 ಕೋಟಿ ರೂ.ಗಳು ಎಲ್ಲಿ ಹೋಯಿತು? ಎಂದು ಪ್ರಶ್ನಿಸಿದ್ದಾರೆ. ಸಿದ್ದರಾಮಯ್ಯ ಅವರೇ, ಅಹಿಂದ ಮತ್ತು ಬಡವರ ಪರ ಎಂದು ಬೊಬ್ಬೆ ಹೊಡೆಯುವ ನೀವು, ಭಿಕ್ಷುಕರ ಹೊಟ್ಟೆ ಮೇಲೆ ಹೊಡೆಯುವ ಈ ಪಾಪದ ಹಣದಲ್ಲಿ ಸರ್ಕಾರ ನಡೆಸುತ್ತಿದ್ದೀರಾ? ಜನರಿಂದ ಸಂಗ್ರಹಿಸಿದ ಪ್ರತಿಯೊಂದು ಪೈಸೆಗೂ ನೀವು ಲೆಕ್ಕ ನೀಡಲೇಬೇಕು. ಈ ಕೂಡಲೇ ಬಾಕಿ ಇರುವ ಎಲ್ಲಾ ಸೆಸ್ ಹಣವನ್ನು ಕೇಂದ್ರ ಪರಿಹಾರ ಸಮಿತಿಗೆ ಬಿಡುಗಡೆ ಮಾಡಬೇಕು ಮತ್ತು ಮಕ್ಕಳ ಪುನರ್ವಸತಿಗೆ ಕ್ರಮ ಕೈಗೊಳ್ಳಬೇಕು ಎಂದು ಅಶೋಕ ಎಚ್ಚರಿಸಿದ್ದಾರೆ.



ಮನರೇಗಾ ಬಚಾವೋ ಆಂದೋಲನದ ಅಂಗವಾಗಿ ಚಿಕ್ಕಬಳ್ಳಾಪುರದಲ್ಲಿ ಸೋಮವಾರ ಏರ್ಪಡಿಸಿದ್ದ ಬೈಕ್ ರ್ಯಾಲಿಯಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬೈಕ್ ಏರಿ ಕಾರ್ಯಕರ್ತರಿಗೆ ಸಾಥ್ ನೀಡಿದ ಪರಿ...

ಸ್ವಯಂಪ್ರೇರಿತ ಪಿಐಎಲ್ ವಿಲೇವಾರಿ ಮಾಡಿದ ಹೈ

ಬೆಂಗಳೂರು: ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮ ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿಯಂತ್ರಣ) ಮಸೂದೆಯು ಕಾಯ್ದೆ ರೂಪ ಪಡೆಯುವವರೆಗೆ ಜನಸಂದಣಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಪ್ರಮಾಣೀಕೃತ ಕಾರ್ಯವಿಧಾನ ಜಾರಿಗೊಳಿಸಲು ರಾಜ್ಯ ಸರ್ಕಾರಕ್ಕೆ ಸೋಮವಾರ ಹೈಕೋರ್ಟ್ ನಿರ್ದೇಶಿಸಿದ್ದು, ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಲೇವಾರಿ ಮಾಡಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಮುಂಭಾಗ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರ ವಿಭಾಗೀಯ ಪೀಠ ನಡೆಸಿತು.

ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಸಾಕಷ್ಟು ಸಮಯ ತೆಗೆದುಕೊಂಡು ಎಸ್‌ಒಪಿ ಸಿದ್ಧಪಡಿಸಿದ್ದೇವೆ ಎಂದು ಜನವರಿ 13ರಂದು ರೂಪಿಸಿರುವ ಎಸ್‌ಒಪಿಯನ್ನು ಪೀಠಕ್ಕೆ ಸಲ್ಲಿಸಿದರು. ಅಮಿಕಸ್ ಕ್ಯೂರಿ ಎಸ್. ಸುಶೀಲಾ ಅವರು ಏನು ನಡೆಯಿತು ಎಂಬ ವಿಚಾರಕ್ಕೆ ನಾವು ಹೋಗುತ್ತಿಲ್ಲ, ನ್ಯಾಯಾಲಯ ಕೆಲವು ನಿರ್ದೇಶನಗಳನ್ನು ನೀಡಬೇಕು. ಈ ಅರ್ಜಿ ದಾಖಲಿಸಿಕೊಳ್ಳುವಾಗ ಒಂಭತ್ತು ಪ್ರಶ್ನೆಗಳನ್ನು ಎತ್ತಲಾಗಿತ್ತು. ಈ ಅರ್ಜಿಯ ಕುರಿತಾದ ಮಿತಿಯ ಅರಿವು ನನಗಿದೆ. ಕರ್ನಾಟಕ ಜನಸಂದಣಿ ನಿಯಂತ್ರಣ ಮಸೂದೆಯು ಕಾಯ್ದೆಯಾಗಿ ಜಾರಿಯಾಗುವವರೆಗೆ ಎಸ್‌ಒಪಿ ಜಾರಿಗೊಳಿಸಬೇಕು ಎಂದರು. ಪೀಠವು ಈಗ ಎಸ್‌ಒಪಿ ಯಾಗಿದೆ. ಕಾನೂನು ಸದನ ಸಮಿತಿಯ ಮುಂದಿದೆ. ಇನ್ನೇನು ಬಾಕಿ ಇದೆ. ಕಾನೂನು ಜಾರಿಯಾದ ಮೇಲೆ ಅದು ಅಸ್ತಿತ್ವಕ್ಕೆ ಬರಲಿದೆ. ಅಲ್ಲಿಯವರೆಗೆ ಎಸ್‌ಒಪಿ ಪಾಲಿಸಬೇಕು. ಕಾಯ್ದೆ ಜಾರಿಯಾದ ಮೇಲೆ ಆಹವಾಲುಗಳಿದ್ದರೆ ಈ ಅರ್ಜಿಯನ್ನು ಪುನರ್ ತೆರೆಯಬಹುದು ಎಂದಿತು.

ಕಿರುಸುದ್ದಿ

ಮಹದೇವಪ್ಪ ಸಿಎಂ ಆದರೆ ಸಂತೋಷ: ವೆಂಕಟೇಶ್

ಮೈಸೂರು: ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ.ಮಹದೇವಪ್ಪ ಅವರು ಮುಖ್ಯಮಂತ್ರಿಯಾದರೆ ನನಗೆ ಸಂತೋಷವಾಗುತ್ತದೆ ಎಂದು ರೇಷ್ಮೆ ಮತ್ತು ಪಶುಸಂಗೋಪನಾ ಇಲಾಖೆ ಸಚಿವ ಕೆ.ವೆಂಕಟೇಶ್ ಹೇಳಿದರು. ಕಾಂಗ್ರೆಸ್ ಪಕ್ಷದಲ್ಲಿ ದಲಿತ ಸಿಎಂ ಕೂಗು ಎದ್ದಿರುವ ವಿಚಾರಕ್ಕೆ ಸಂಬಂಧಿಸಿದಂತೆ ಸೋಮವಾರ ಮೈಸೂರಿನಲ್ಲಿ ಪ್ರತಿಕ್ರಿಯಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ಎಚ್.ಸಿ.ಮಹದೇವಪ್ಪ ನನ್ನ ಆತ್ಮೀಯ ಸ್ನೇಹಿತ. ಹೀಗಾಗಿ ಮಹದೇವಪ್ಪ ಸಿಎಂ ಆಗಲಿ ಎಂದು ಹಾರೈಸುತ್ತೇನೆ, ಸಿಎಂ ಆದರೆ ನನಗೆ ಖುಷಿಯಾಗುತ್ತದೆ ಎಂದು ಹೇಳಿದರು. ದಲಿತ ಸಿಎಂ ಕೂಗು ಪಕ್ಷದಲ್ಲಿ ಇದಿಯೋ ಇಲ್ಲವೋ ನನಗೆ ಗೊತ್ತಿಲ್ಲ, ಆದರೆ, ಸದ್ಯ ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ, ಖಾಲಿ ಆದ ಮೇಲೆ ದಲಿತ, ಲಿಂಗಾಯತ, ಒಕ್ಕಲಿಗ, ಕುರುಬ್ ಹೀಗೆ ಯಾವುದಾದರೂ ಸಮುದಾಯದ ಒಬ್ಬರು ಮುಖ್ಯಮಂತ್ರಿ ಆಗುತ್ತಾರೆ ಎಂದರು.

ಎಂ. ಫಾರ್ಮಾ ಸೀಟು ಹಂಚಿಕೆ ವೇಳಾಪಟ್ಟಿ ಪ್ರಕಟ

ಬೆಂಗಳೂರು: ಎಂ. ಫಾರ್ಮಾ ಕೋರ್ಸ್ ಪ್ರವೇಶಕ್ಕೆ ಎರಡನೇ ಹಾಗೂ ಅಂತಿಮ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಇಚ್ಛೆ/ಆಯ್ಕೆಗಳನ್ನು ದಾಖಲಿಸಲು ಫೆ.25 ರಂದು ಮಧ್ಯಾಹ್ನ 2 ಗಂಟೆವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ)ದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ. ಫೆ.25 ರಂದು ಸಂಜೆ 8 ಗಂಟೆಯ ನಂತರ ತಾತ್ಕಾಲಿಕ ಹಾಗೂ ಫೆ.26 ರಂದು ಮಧ್ಯಾಹ್ನ 2 ಗಂಟೆ ಬಳಿಕ ಅಂತಿಮ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಹೇಳಿದ್ದಾರೆ. ಸೀಟು ಹಂಚಿಕೆಯಾದವರು ಫೆ.27 ರಿಂದ ಮಾ.4 ರವರೆಗೆ ಶುಲ್ಕ ಪಾವತಿಸಿ, ಪ್ರವೇಶ ಪತ್ರಗಳನ್ನು ಪಡೆಯಬೇಕು. ಮಾ.5ರ ಒಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ವಿವರಿಸಿದ್ದಾರೆ.ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಶುಲ್ಕ ಪಾವತಿಸದೇ ಇರುವ ಅಭ್ಯರ್ಥಿಗಳಿಗೆ ಈ ಸುತ್ತಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ. ಈವರೆಗೂ ಯಾವುದೇ ಸೀಟು ಹಂಚಿಕೆಯಾಗದಿರುವ ಹಾಗೂ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಲಭ್ಯವಾಗುವ ಸೀಟುಗಳಿಗೆ ಆಪ್ಷನ್ ದಾಖಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕೆಇಎ ವೆಬ್‌ಸೈಟ್ ವೀಕ್ಷಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

ಸಭೆ ಮುಂದೂಡಿಕೆ

ಬೆಂಗಳೂರು: ರಾಜ್ಯದ ಎಲ್ಲ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಫೆ. 28 ರಂದು ನಿಗದಿಯಾಗಿದ್ದ ಪೋಷಕ-ಶಿಕ್ಷಕರ ಸಭೆಯನ್ನು ಮಾ. 7ರಂದು ಮುಂದೂಡಲಾಗಿದೆ. ಫೆ. 28 ರಂದು ನಗರದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ಎಲ್ಲ ಶಿಕ್ಷಕರು ಭಾಗವಹಿಸುತ್ತಿರುವ ಹಿನ್ನೆಲೆಯಲ್ಲಿ ಪೋಷಕ-ಶಿಕ್ಷಕರ ಸಭೆಯ ದಿನಾಂಕವನ್ನು ಮರು ನಿಗದಿ ಮಾಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಪರಿಷ್ಕೃತ ಜ್ಞಾಪನಾ ಹೊರಡಿಸಿದ್ದಾರೆ.

ಯೋಜನೆ ಉಳಿಸಿ: ಹಳ್ಳಿಗಳು, ಕಾರ್ಮಿಕರನ್ನು ರಕ್ಷಿಸಿ: ಡಿಸಿಎಂ

ಮನ್ರೇಗಾ ಕಸಿಯುವ ಯತ್ನ

ಚಿಕ್ಕಬಳ್ಳಾಪುರ: ಮಹಾತ್ಮ ಗಾಂಧಿ ಅವರ ಹೆಸರಿನಲ್ಲಿ 20 ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರವು ಬಡವರಿಗಾಗಿ ಉದ್ಯೋಗ ಖಾತರಿ ಕಾರ್ಯಕ್ರಮ ನೀಡಿತ್ತು. ಇದು ದೇಶದ ಪಾಲಿಗೆ ಕ್ರಾಂತಿಕಾರಿ ಕಾರ್ಯಕ್ರಮ'' ಇಂತಹ ಯೋಜನೆಯನ್ನು ಕೇಂದ್ರ ಸರ್ಕಾರ ಕಸಿಯುತ್ತಿದೆ. ಮನರೇಗಾ ಉಳಿಸಿ, ಹಳ್ಳಿಗಳು, ಕಾರ್ಮಿಕರು, ಪಂಚಾಯಿತಿಗಳು ಹಾಗೂ ಮಹಾತ್ಮಾ ಗಾಂಧಿ ಹೆಸರು ರಕ್ಷಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಚಿಕ್ಕಬಳ್ಳಾಪುರದಲ್ಲಿ ನಡೆದ ನರೇಗಾ ಬಚಾವ್ ಆಂದೋಲನದಲ್ಲಿ ಅವರು ಮಾತನಾಡುತ್ತಾ, ಈ ಕಾರ್ಯಕ್ರಮದಲ್ಲಿ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿ ಯಾವ ಕಾಮಗಾರಿ ಮಾಡಬೇಕು ಎಂಬ ತೀರ್ಮಾನ ಮಾಡುವ ಅಧಿಕಾರ ಹೊಂದಿದ್ದವು. ಹಸಿದ ಹೊಟ್ಟೆ, ಖಾಲಿ ಜೇಬಿನ ನೋವು ಏನು ಎಂಬುದು ನಮಗೆ ಅರಿವಿದೆ. 60% ಗ್ರಾಮೀಣ ಭಾಗದ ಮಹಿಳೆಯರು ಕೂಲಿ ಮಾಡುತ್ತಿದ್ದಾರೆ. ರಾಜ್ಯದಲ್ಲಿರುವ 5,900 ಪಂಚಾಯ್ತಿಗಳಲ್ಲಿ, ಕನಿಷ್ಠ 1-2 ಕೋಟಿಯಷ್ಟು ಹಣವನ್ನು ಪಂಚಾಯಿತಿಗಳಲ್ಲಿ ನೀಡಿ ಅಲ್ಲಿ ಶಾಶ್ವತ ಆಸ್ತಿ ಸೃಷ್ಟಿಸಿ ಜನರಿಗೆ ಉದ್ಯೋಗ ಕಲ್ಪಿಸಲಾಗುತ್ತಿತ್ತು. ಮನರೇಗಾ ಉಳಿಸುವ ಮೂಲಕ, ಹಳ್ಳಿಗಳು, ಈ ದೇಶ, ಕಾರ್ಮಿಕರು, ಪಂಚಾಯಿತಿಗಳು ಹಾಗೂ ಮಹಾತ್ಮ ಗಾಂಧಿ ಅವರ ಹೆಸರು ಉಳಿಸಬೇಕಾಗಿದೆ ಎಂದು ಕರೆ ನೀಡಿದರು. ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಮಾತನಾಡಿ, ನರೇಗಾ ಬಿಜೆಪಿ, ಜೆಡಿಎಸ್ ಎರಡೂ ಪಕ್ಷಗಳು ಸೇರಿ ದೊಡ್ಡ ಹುನ್ನಾರ ಮಾಡುವ ಮೂಲಕ ದೇಶದ ಜನರ ಜೀವನವನ್ನು ಬೀದಿಗೆ ತರುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.



ಗ್ರಾ.ಪಂ ಕಚೇರಿಗೆ ಗಾಂಧಿ ಹೆಸರು

ನೋಟಿನ ಮೇಲಿರುವ ಗಾಂಧಿ ಫೋಟೋವನ್ನು ತೆಗೆದು ನಿಮ್ಮ ಫೋಟೋ ಹಾಕಿಕೊಳ್ಳುವಂತೆ ನಾನು ಸವಾಲು ಹಾಕಿದೆ. ನಮ್ಮ ಪಕ್ಷ ಹಾಗೂ ಸರ್ಕಾರ ಚರ್ಚೆ ಮಾಡಿ ಪ್ರತಿ ಗ್ರಾಮ ಪಂಚಾಯಿತಿ ಕಚೇರಿಗಳಿಗೆ ಮಹಾತ್ಮಾ ಗಾಂಧಿ ಹೆಸರಿಡಲು ತೀರ್ಮಾನಿಸಿದ್ದೇವೆ. ಉದ್ಯೋಗ ಖಾತರಿ ಯೋಜನೆ ಕಾಂಗ್ರೆಸ್ ಕಾರ್ಯಕ್ರಮ ಮಾತ್ರವಲ್ಲ. ದೇಶದ ಬಡವರು, ಕೂಲಿ ಕಾರ್ಮಿಕರ ಕಾರ್ಯಕ್ರಮ. ಗ್ರಾಮೀಣ ಭಾಗದ ಕಾರ್ಮಿಕರಿಗೆ ಆತ್ಮಸ್ಥೈರ್ಯ ತುಂಬುವ ಕಾರ್ಯಕ್ರಮ. ಮತ್ತೊಮ್ಮೆ ಮನರೇಗಾ ಯೋಜನೆ ಮರುಸ್ಥಾಪಿಸಿ, ಉದ್ಯೋಗದ ಹಕ್ಕು ಹಾಗೂ ಗ್ರಾಮಗಳ ಸ್ವಯಂ ಆಡಳಿತ ಹಕ್ಕನ್ನು ಪುನರ್ ಸ್ಥಾಪಿಸಬೇಕಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂದೇಶ ನೀಡಿದರು.

> ಬಿಜೆಪಿಯ ಪ್ರತೀ ನಾಯಕರಿಗೆ ನರೇಗಾ ಜೋಜನೆಯ ಹೆಸರು ಬದಲಾವಣೆ ಬಗ್ಗೆ ಪ್ರಶ್ನಿಸಬೇಕಿದೆ. ದೆಹಲಿಯಲ್ಲಿ ಕೂತು ಹಳ್ಳಿಯ ಜನರ ಬದುಕನ್ನು ಕದಡುವ ಕೆಲಸ ಮಾಡಿದ್ದಾರೆ. ಅಮೆರಿಕದ ಅಧ್ಯಕ್ಷರ ಜೊತೆಗೆ ಒಡಂಬಡಿಕೆ ಮಾಡಿಕೊಂಡು ನಮ್ಮ ದೇಶದ ರೈತರ ಅಸ್ತಿತ್ವಕ್ಕೆ ಕುಂದು ತರುವ ಕೆಲಸ ಮಾಡುತ್ತಿದ್ದಾರೆ.
> ■ ರಣದೀಪ್‌ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಮೊಬೈಲ್‌ನಿಂದ ಮಕ್ಕಳ ವಿದ್ಯಾಭ್ಯಾಸ ಕುಂಠಿತ

ಶಾಲಾ-ಕಾಲೇಜಲ್ಲಿ ಮೊಬೈಲ್ ನಿಷೇಧ?

ಬೆಂಗಳೂರು: ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಮೊಬೈಲ್ ನಿಷೇಧ ಮಾಡುವ ಬಗ್ಗೆ ಚಿಂತನೆ ನಡೆದಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದ್ದಾರೆ.

ಸೋಮವಾರ ಸದಾಶಿವನಗರದ ನಿವಾಸದ ಬಳಿ ಮಾಧ್ಯಮದವರಿಗೆ ಹೇಳಿಕೆ ನೀಡಿದ ಅವರು, 16 ವರ್ಷದೊಳಗಿನ ಮಕ್ಕಳಿಗೆ ಮೊಬೈಲ್ ಕೊಟ್ಟರೆ ವಿದ್ಯಾಭ್ಯಾಸದ ಮೇಲೆ ಬೇರೆ ರೀತಿಯ ಪರಿಣಾಮ ಬೀರುತ್ತದೆ. ಬಹಳಷ್ಟು ದೇಶಗಳಲ್ಲಿ ಅಧ್ಯಯನ ನಡೆಸಿ ಮೊಬೈಲ್ ನಿಷೇಧ ಮಾಡಿದ್ದಾರೆ. ಅದರಂತೆ ಮೊಬೈಲ್ ನಿಷೇಧಮಾಡುವ ಬಗ್ಗೆ ಚಿಂತನೆ ನಡೆದಿದೆ ಎಂದಿದ್ದಾರೆ.



ಮೊಬೈಲ್ ನಿಷೇಧ ಮಾಡುವ ಬಗ್ಗೆ ಸಿಎಂ ಕೂಡ ಚಿಂತನೆ ಹರಿಸಿದ್ದಾರೆ. ಇದರ ಸಾಧಕ-ಬಾಧಕಗಳನ್ನು ಅಧ್ಯಯನ ನಡೆಸಿ ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು.

ಸಿದ್ದು ನ್ಯಾಯದ ಪರ: ಸಿಎಂ ಸಿದ್ದರಾಮಯ್ಯ ಅವರ ರಾಜಕೀಯದ ಅಡಿಪಾಯವೇ ಸಾಮಾಜಿಕ ನ್ಯಾಯ. ಆ ಸಿದ್ಧಾಂತದ ಮೇಲೆ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಇದರಲ್ಲಿ ಹೊಸದೇನು ಇಲ್ಲ, ಅವರು ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿದ್ದಾರೆ. ಹಿಂದಿನಿಂದಲೂ ಕೂಡ ಸಾಮಾಜಿಕ ನ್ಯಾಯದ ಪರವಾಗಿದ್ದಾರೆ. ಅವರ ರಾಜಕೀಯದ ಅಡಿಪಾಯವೇ ಸಾಮಾಜಿಕ ನ್ಯಾಯ. ಹೊಸದಾಗಿ ಇವತ್ತು ಮಾಡುತ್ತಿಲ್ಲ ಎಂದರು.

ರಂಜಾನ್, ಹೋಳಿ ಹಬ್ಬ ಆಚರಣೆ ವೇಳೆ ಯಾರು ಕೂಡ ಕಾನೂನು ಕೈಗೆತ್ತಿಕೊಳ್ಳಲು ಅವಕಾಶ ಕೊಡಬಾರದು. ಸಂತೋಷದಿಂದ ಹಬ್ಬ ಆಚರಿಸಬೇಕು. ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ನಡೆಸಲು ಅವಕಾಶವಿಲ್ಲ, ಅದಕ್ಕೆ ಅವಕಾಶ ಕೊಡು ವುದೂ ಇಲ್ಲ, ಈ ಬಗ್ಗೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿ ಚುನಾವಣೆ ಕ್ಯಾಬಿನೆಟ್‌ನಲ್ಲಿ ನಿರ್ಧಾರ

ಚುನಾವಣೆ ತಂದರೆ ವಿದ್ಯಾರ್ಥಿಗಳ ನಡುವೆ ಗುಂಪುಗಳಾಗಿ ಹೊಡೆದಾಡಿಕೊಳ್ಳುತ್ತಾರೆ ಎಂಬ ಕಾರಣದಿಂದ ನಾನು ಉನ್ನತ ಶಿಕ್ಷಣ ಸಚಿವನಾಗಿದ್ದ ಸಂದರ್ಭದಲ್ಲಿ ಸಿಂಡಿಕೇಟ್ ಚುನಾವಣೆಯನ್ನು ನಿಷೇಧ ಮಾಡಲಾಯಿತು. ಈಗ ವಿದ್ಯಾರ್ಥಿ ಚುನಾವಣೆ ನಡೆಸುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂಬ ಒತ್ತಡ ಬರುತ್ತಿದೆ. ಈ ಬಗ್ಗೆ ಕ್ಯಾಬಿನೆಟ್ ಏನು ನಿರ್ಧಾರ ಮಾಡುತ್ತದೆ ನೋಡಬೇಕು ಎಂದು ಹೇಳಿದರು.

ಕನ್ನಡ ವಿವಿ ಕುಲಪತಿ ಡಾ.ಪರಮಶಿವಮೂರ್ತಿ ಹೇಳಿಕೆ

ಮೂವರಿಗೆ ನಾಡೋಜ ಗೌರವ

ವಿಜಯನಗರ: ಕನ್ನಡ ವಿಶ್ವವಿದ್ಯಾಲಯದಿಂದ ನೀಡಲಾಗುವ ನಾಡಿನ ಪ್ರತಿಷ್ಠಿತ 'ನಾಡೋಜ' ಗೌರವ ಪದವಿಗೆ ಈ ಬಾರಿ ಬಹುಭಾಷೆ ಹಾಗೂ ಬಹುಶಿಸ್ತುಗಳ ತಜ್ಞರು, ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಪ್ರಕಾಂಡ ಪಂಡಿತ ಶತಾಯುಷಿ ಪ್ರೊ.ಸಿ.ಮಹಾದೇವಪ್ಪ, ಮಾರ್ಕ್ಸ್‌ವಾದಿ ಡಾ.ಜಿ.ರಾಮಕೃಷ್ಣ ಹಾಗೂ ದಕ್ಷ ಆಡಳಿತಗಾರ, ರಾಜ್ಯ ಮಾಹಿತಿ ಹಕ್ಕು ಆಯುಕ್ತ ಡಾ.ಎಚ್.ಸಿ.ಸತ್ಯನ್ ಭಾಜನರಾಗಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಪರಮಶಿವಮೂರ್ತಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಈ ವಿಷಯ ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿರುವ 'ನವರಂಗ' ಬಯಲು ರಂಗಮಂದಿರದಲ್ಲಿ ಫೆ.24 ರಂದು ಸಂಜೆ 5.30ಕ್ಕೆ ಆಯೋಜಿಸಿರುವ ಕನ್ನಡ ವಿಶ್ವವಿದ್ಯಾಲಯದ 34ನೇ ನುಡಿಹಬ್ಬ (ಘಟಿಕೋತ್ಸವ)ದಲ್ಲಿ ರಾಜ್ಯಪಾಲರೂ ಆಗಿರುವ ಕನ್ನಡ ವಿವಿ ಕುಲಾಧಿಪತಿ ಥಾವರ್ ಚಂದ್ ಗೆಹಲೋತ್ ಅಧ್ಯಕ್ಷತೆಯಲ್ಲಿ ಗಣ್ಯರಿಗೆ 'ನಾಡೋಜ' (ಗೌರವ ಡಾಕ್ಟರೇಟ್) ಪದವಿ ಪ್ರದಾನ ಮಾಡಲಾಗುತ್ತದೆ. ವಿಶ್ರಾಂತ ಪ್ರಾಧ್ಯಾಪಕ ಹಾಗೂ ಸಂಸ್ಕೃತಿ ಚಿಂತಕ ಡಾ.ಕೆ. ಮರುಳಸಿದ್ದಪ್ಪ ಅವರು ಘಟಿಕೋತ್ಸವ ಭಾಷಣವನ್ನು ನೆರವೇರಿಸಲಿದ್ದಾರೆ. ಸಹ ಕುಲಪತಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಇದೇ ವೇಳೆ ಕನ್ನಡ ವಿಶ್ವವಿದ್ಯಾಲಯದ ವಿವಿಧ ನಿಕಾಯಗಳಡಿ ಕನ್ನಡ ವಿಶ್ವವಿದ್ಯಾಲಯ ಹಾಗೂ





ವಿಸ್ತರಣಾ ಕೇಂದ್ರಗಳಲ್ಲಿ ಸಂಶೋಧನೆ ನಡೆಸಿರುವ 107 ಜನ ವಿದ್ಯಾರ್ಥಿಗಳು ಪಿಎಚ್‌ಡಿ ಪದವಿ ಪಡೆಯಲಿದ್ದಾರೆ ಎಂದು ಕುಲಪತಿ ಪ್ರೊ.ಪರಮಶಿವಮೂರ್ತಿ ಮಾಹಿತಿ ನೀಡಿದರು.

ರಾಜ್ಯ ಮಾಹಿತಿ ಹಕ್ಕು ಆಯುಕ್ತ ಡಾ.ಎಚ್.ಸಿ.ಸತ್ಯನ್ ವಿರುದ್ಧದ ಪ್ರಕರಣಗಳು ಲೋಕಾಯುಕ್ತ ಹಾಗೂ ಇತರೆ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುತ್ತಿವೆ.

ಕಾನೂನು ಸಂಘರ್ಷದಲ್ಲಿರುವ ವ್ಯಕ್ತಿಗೆ ನಾಡಿನ ಪ್ರತಿಷ್ಠಿತ 'ನಾಡೋಜ' ಗೌರವ ಸೂಕ್ತವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕುಲಪತಿ ಪ್ರೊ.ಪರಮಶಿವಮೂರ್ತಿ, ಈ ಬಗ್ಗೆ ಈಗಾಗಲೇ ಕನ್ನಡ ವಿಶ್ವವಿದ್ಯಾಲಯಕ್ಕೆ ಎರಡ್ಮೂರು ಪತ್ರಗಳು ಬಂದಿದ್ದು, ರಾಜ್ಯಪಾಲರಿಗೆ ಮಾಹಿತಿ ನೀಡಲಾಗಿದೆ. ಎಲ್ಲ ಪ್ರಕರಣಗಳು ಇತ್ಯರ್ಥವಾಗಿವೆ. ಅವರಿಗೆ ನಾಡೋಜ ನೀಡಬೇಕೆಂಬ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ನೀಡಲಾಗುತ್ತದೆ. ಆದರೂ, ಈ ಬಗ್ಗೆ ಮತ್ತೊಮ್ಮೆ ರಾಜ್ಯಪಾಲರ ಗಮನ ಸೆಳೆಯುವುದಾಗಿ ತಿಳಿಸಿದರು.

ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿ.ವೈ. ವಿಜಯೇಂದ್ರ ಆಕ್ಷೇಪ

ಬಂಜಾರರ ವಿರುದ್ಧ ದ್ವೇಷ ರಾಜಕಾರಣ

ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರ್ಕಾರವು ಬಂಜಾರ ಸಮಾಜದ ವಿರುದ್ಧ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ಷೇಪಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ಸಿನವರು ಯಾವ ನೈತಿಕತೆ ಇಟ್ಟುಕೊಂಡು ಭ್ರಷ್ಟಾಚಾರದ ಕುರಿತು ಮಾತನಾಡುತ್ತಾರೆ? ಭ್ರಷ್ಟಾಚಾರದ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಪ್ರಿಯಾಂಕ್ ಖರ್ಗೆ ಅವರು ಮಾತನಾಡುತ್ತಿದ್ದಾರೆ. ಭ್ರಷ್ಟಾಚಾರದ ಕುರಿತು ಮಾತನಾಡುವ ಯೋಗ್ಯತೆ ಕಾಂಗ್ರೆಸ್ಸಿನವರಿಗೆ ಇದೆಯೇ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದಾಗಿನಿಂದ ಬಂಜಾರ ಸಮಾಜವನ್ನು ಟಾರ್ಗೆಟ್ ಮಾಡುತ್ತಿರುವುದು ಜಗಜ್ಜಾಹೀರಾಗಿದೆ. ಈ ಸಮಾಜವು ಕಳೆದ 30-40 ವರ್ಷಗಳಿಂದ ಬಿಜೆಪಿ ಜೊತೆ ಗಟ್ಟಿಯಾಗಿ ಗುರುತಿಸಿಕೊಂಡಿದೆ. ಬಿಜೆಪಿಯನ್ನು ರಾಜ್ಯದಲ್ಲಿ ಶೇ.100ಕ್ಕೆ ನೂರು ಬೆಂಬಲಿಸುತ್ತಿದೆ. ಇದರ ಪರಿಣಾಮವಾಗಿ ಸಿದ್ದರಾಮಯ್ಯ ಅವರ ಸರ್ಕಾರದಿಂದ ಕಳೆದ ಎರಡೂವರೆ ವರ್ಷದಲ್ಲಿ ಈ ಸಮಾಜಕ್ಕೆ ಅನ್ಯಾಯವೂ ಆಗಿದೆ ಎಂದು ವಿಶ್ಲೇಷಿಸಿದರು.



ಚಂದ್ರು ಲಮಾಣಿ ಅವರ ವಿಚಾರ ಕೋರ್ಟಿನಲ್ಲಿದ್ದು, ಅದರ ಬಗ್ಗೆ ಹೆಚ್ಚೇನೂ ಹೇಳಲು ಹೋಗುವುದಿಲ್ಲ, ಆಡಿಯೋ ಲೀಕ್ ಆಗಿದೆ. ಏನೇನು ಚರ್ಚೆ ಆಗಿದೆ? ಯಾವ ರೀತಿ ರಾಜಕೀಯವಾಗಿ ಟಾರ್ಗೆಟ್ ಆಗಿದ್ದಾರೆ; ಇವೆಲ್ಲವೂ ಬಹಿರಂಗ ಆಗಿದೆ ಎಂದು ತಿಳಿಸಿದರು.

ಬಜೆಟ್ ಅಧಿವೇಶನ ಕುರಿತಾಗಿ ಚರ್ಚೆ: ರಾಜ್ಯದ ಬಜೆಟ್ ಅಧಿವೇಶನ ಮಾರ್ಚ್ ಮೊದಲ ವಾರದಲ್ಲಿ ಆರಂಭವಾಗಲಿದೆ. ಬಜೆಟ್ ಅಧಿವೇಶನದ ಸಂಬಂಧ ಪ್ರತಿಪಕ್ಷ ನಾಯಕ ಆರ್.ಅಶೋಕ ಅವರು ಸದನವನ್ನು ಎದುರಿಸುವ ಕುರಿತು ಚರ್ಚಿಸಿದ್ದೇವೆ ಎಂದರು.

ಆನೆ ಹಾವಳಿ: ಶೃಂಗೇರಿ ಬಂದ್‌ಗೆ ಉತ್ತಮ ಪ್ರತಿಕ್ರಿಯೆ

ಚಿಕ್ಕಮಗಳೂರು: ಕಾಡಾನೆಗಳ ಹಾವಳಿ ನಿಯಂತ್ರಣಕ್ಕೆ ಆಗ್ರಹಿಸಿ ಭಾನುವಾರ ಬಾಳೆಹೊನ್ನೂರು ಸಮೀಪ ಕಡಬಗೆರೆಯಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದವರ ಮೇಲೆ ಪೊಲೀಸರು ನಡೆಸಿದ ಲಾಠಿ ಪ್ರಹಾರ, ಪ್ರಮುಖರ ಬಂಧನ ಖಂಡಿಸಿ ಮಲೆನಾಡು ನಾಗರಿಕ ರೈತ ಹಿತರಕ್ಷಣಾ ಸಮಿತಿ ಕರೆ ನೀಡಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರ ಬಂದ್ ಯಶಸ್ವಿಯಾಗಿದೆ.

ಶೃಂಗೇರಿ, ಕೊಪ್ಪ, ಎನ್.ಆರ್.ಪುರ ಮತ್ತು ಚಿಕ್ಕಮಗಳೂರು ತಾಲೂಕಿನ ಖಾಂಡ್ಯ ಹೋಬಳಿ ಪ್ರದೇಶಗಳಲ್ಲಿ ಬಂದ್‌ಗೆ ಉತ್ತಮ ಸ್ಪಂದನೆ ಸಿಕ್ಕಿದೆ. ಅಂಗಡಿ ಮುಂಗಟ್ಟುಗಳು ಮುಚ್ಚಿ ವರ್ತಕರು ಬಂದ್‌ಗೆ ಬೆಂಬಲ ಸೂಚಿಸಿದರು.

ಕೆಲವೆಡೆ ಸಾರಿಗೆ ವಾಹನಗಳು, ಆಟೋ ರಿಕ್ಷಾಗಳ ಸಂಚಾರ ಕಂಡುಬಂತು. ಪೆಟ್ರೋಲ್ ಬಂಕ್, ಮೆಡಿಕಲ್ ಶಾಪ್, ಬಸ್ ಸೇವೆ ಸಾಮಾನ್ಯವಾಗಿತ್ತು. ಶಾಲಾ-ಕಾಲೇಜುಗಳು ಎಂದಿನಂತೆ ನಡೆದವು.

ಮಾರ್ಗಸೂಚಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿರುವ ಮುಜರಾಯಿ ಇಲಾಖೆ | ಯಾತ್ರಿಕರಿಗೆ 5000 ರೂ.

ವೈಷ್ಣೋದೇವಿ ಯಾತ್ರಿಕರಿಗೂ ಸಹಾಯಧನ ಲಭ್ಯ

▸ ದೇವಿತಾ ಸಿ.ಎಸ್.

ಬೆಂಗಳೂರು: ವೈಷ್ಣೋದೇವಿ ಭಕ್ತರಿಗೆ ಸಿಹಿಸುದ್ದಿ ಇಲ್ಲಿದೆ. ಕಾಶಿ ಯಾತ್ರೆ ಮಾದರಿಯಲ್ಲೇ ವೈಷ್ಣೋದೇವಿ ಯಾತ್ರೆ ಕೈಗೊಳ್ಳುವವರಿಗೂ ಸಹಾಯಧನ ಸಿಗಲಿದೆ. ಈ ನಿಟ್ಟಿನಲ್ಲಿ ರಾಜ್ಯ ಮುಜರಾಯಿ ಇಲಾಖೆ ಈಗಾಗಲೇ ಸಿದ್ಧತೆ ನಡೆಸಿದ್ದು, ಈ ಸಂಬಂಧ ಮಾರ್ಗಸೂಚಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದೆ.

ಜಮ್ಮು-ಕಾಶ್ಮೀರದ ಪ್ರಸಿದ್ಧ ವೈಷ್ಣೋದೇವಿ ದೇವಾಲಯಕ್ಕೆ ತೆರಳುವ ಯಾತ್ರಾರ್ಥಿಗಳಿಗೆ ಸಹಾಯಧನ ನೀಡುವ ಯೋಜನೆ ಜಾರಿಗೆ ತರಲು ಉದ್ದೇಶಿಸಲಾಗಿದೆ. ಯಾತ್ರಾರ್ಥಿಗಳು ಸಹಾಯಧನ ಪಡೆಯಲು ಯಾತ್ರೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಒದಗಿಸಿದರೆ 5 ಸಾವಿರ ರೂ.ಗಳನ್ನು ನೀಡಲಾಗುತ್ತದೆ. ಇದಕ್ಕಾಗಿ ಇಲಾಖೆಯಿಂದ ಮಾರ್ಗಸೂಚಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಮುಂದಿನ ಬಜೆಟ್‌ನಲ್ಲಿ ಅನುಮೋದನೆ ದೊರೆತ ನಂತರ ಈ ಯೋಜನೆಗೆ ಚಾಲನೆ ದೊರೆಯಲಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೊಸ ದಿಂಗತಕ್ಕೆ ಮಾಹಿತಿ ನೀಡಿದ್ದಾರೆ. ಯಾತ್ರೆ ಸಂಬಂಧ ಕಳೆದ ವರ್ಷ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಧಾರ್ಮಿಕ ಪರಿಷತ್ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು.



ಆನ್‌ಲೈನ್‌ನಲ್ಲೇ ಅರ್ಜಿ: ಯಾತ್ರಾರ್ಥಿಗಳು ಪ್ರಯಾಣದ ಟಿಕೆಟ್, ದೇವಾಲಯದ ಬಳಿ ಜಿಪಿಎಸ್ ಫೋಟೊ, ವಯಸ್ಸಿನ ದೃಢೀಕರಣ ಪತ್ರ, ಆಧಾರ್ ಕಾರ್ಡ್ ಪ್ರತಿ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಸೇವಾ ಸಿಂಧು ಮೂಲಕ ಆನ್‌ಲೈನ್‌ನಲ್ಲಿ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಬಹುದು. ಈ ಪ್ರವಾಸದ ಸಹಾಯಧನ ಪಡೆಯಲು ಫಲಾನುಭವಿಗಳು 18 ವರ್ಷ ಮೇಲ್ಪಟ್ಟವರಾಗಿರಬೇಕು. ಕರ್ನಾಟಕದ ಖಾಯಂ ನಿವಾಸಿಗಳಾಗಿರಬೇಕು. ಒಂದು ಯಾತ್ರೆಗೆ ಒಂದು ಬಾರಿ ಮಾತ್ರ ಈ ಸೌಲಭ್ಯ ಪಡೆಯಬಹುದಾಗಿದೆ. ಕಾಶಿ, ಚಾರ್‌ಧಾಮ್, ಮಾನಸ ಸರೋವರ ಯಾತ್ರೆ ಯಂತೆ ವೈಷ್ಣೋದೇವಿ ಯಾತ್ರೆಯೂ ಸೇರಿದಂತೆ ಕೇವಲ ಒಂದು ಬಾರಿ ಮಾತ್ರ ಸಹಾಯಧನ ಪಡೆಯಬಹುದಾಗಿದೆ.

> ಕಾಶಿಯಾತ್ರೆ ಮಾದರಿಯಲ್ಲಿಯೇ ವೈಷ್ಣೋದೇವಿ ಯಾತ್ರೆಗೂ ಸಹಾಯಧನ ನೀಡಲು ಇಲಾಖೆ ವತಿಯಿಂದ ಮಾರ್ಗಸೂಚಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಬಾರಿ ಬಜೆಟ್‌ನಲ್ಲಿ ಅನುಮೋದನೆ ಸಿಕ್ಕ ಬಳಿಕ ಯೋಜನೆ ಜಾರಿಗೊಳಿಸಲಾಗುವುದು.
> ■ ರಾಮಲಿಂಗಾ ರೆಡ್ಡಿ, ಸಾರಿಗೆ ಮತ್ತು ಮುಜರಾಯಿ ಸಚಿವ

ಮಾರ್ಚ್-ಅಕ್ಟೋಬರ್ ವೇಳೆ ಹೆಚ್ಚು ಭಕ್ತರು

ಜಮ್ಮು ಮತ್ತು ಕಾಶ್ಮೀರದ ತ್ರಿಕೂಟ ಪರ್ವತಗಳಲ್ಲಿರುವ ವೈಷ್ಣೋದೇವಿ ದೇವಾಲಯವು (ಮಾತಾ ರಾಣಿ) ಹಿಂದುಗಳ ಅತಿದೊಡ್ಡ ಪವಿತ್ರ ಯಾತ್ರಾ ಸ್ಥಳಗಳಲ್ಲಿ ಒಂದಾಗಿದೆ. ಸಮುದ್ರ ಮಟ್ಟದಿಂದ ಸುಮಾರು 5,300 ಅಡಿ ಎತ್ತರದಲ್ಲಿರುವ ಈ ಗುಹಾಂತರ ದೇವಾಲಯವು ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿಯರ ರೂಪವಾಗಿ ಮಾತಾ ವೈಷ್ಣೋದೇವಿಯನ್ನು ಪೂಜಿಸಲಾಗುತ್ತದೆ. ಪ್ರತಿ ವರ್ಷ ಮಾರ್ಚ್‌ನಿಂದ ಅಕ್ಟೋಬರ್ ವರೆಗೆ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಾರೆ. ಕತ್ರಾದಿಂದ ಸುಮಾರು 14 ಕಿ.ಮೀ. ಪಾದಯಾತ್ರೆ ಮೂಲಕ ತಲುಪಬಹುದು. ಹೆಲಿಕಾಪ್ಟರ್ ಸೇವೆಗಳಿದ್ದು, ಕುದುರೆ ಸವಾರಿ ಮೂಲಕವೂ ವೈಷ್ಣೋದೇವಿ ಸನ್ನಿಧಿ ತಲುಪಬಹುದಾಗಿದೆ.

ವಿದ್ಯಾರ್ಥಿಗಳಿಗೆ ಸಚಿವ ಮಧು ಬಂಗಾರಪ್ಪ ಸಲಹೆ

ಅಂಕಗಳಿಗೆ ಸೀಮಿತವಾಗದಿರಿ

ಬೆಂಗಳೂರು: ವಿದ್ಯಾರ್ಥಿಗಳು ಕೇವಲ ಅಂಕಗಳಿಗಾಗಿ ಓದಬಾರದು. ವಿಷಯವನ್ನು ಆಳವಾಗಿ ಅರ್ಥೈಸಿಕೊಳ್ಳುವುದರ ಕಡೆಗೆ ಗಮನ ಹರಿಸಬೇಕು. ಅರಿವು ಮೂಡಿದರೆ ಫಲಿತಾಂಶ ತಾನಾಗಿಯೇ ಉತ್ತಮವಾಗುತ್ತದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ವಿದ್ಯಾರ್ಥಿಗಳಿಗೆ ಕಿವಿ ಮಾತು ತಿಳಿಸಿದರು.



ಸೋಮವಾರ ವಿಕಾಸಸೌಧದಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ (ಎಸ್‌ಎಸ್‌ಕೆ) ಹಾಗೂ ಡಬ್ಲ್ಯುಡಬ್ಲ್ಯುಎಫ್ ಇಂಡಿಯಾ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮಿಷನ್ ಪ್ರಕೃತಿ: ತರಗತಿಯಿಂದ ಸಂರಕ್ಷಣೆಯತ್ತ ಕಾರ್ಯಕ್ರಮದಲ್ಲಿ ರಾಜ್ಯದ ಹತ್ತು ಅತ್ಯುತ್ತಮ ಶಾಲೆಗಳಿಗೆ ಪ್ರಶಸ್ತಿ ಪ್ರದಾನ ನೆರವೇರಿಸಿ ಮಾತನಾಡಿದ ಅವರು, ಮುಂದಿನ ವರ್ಷದಿಂದ 1 ರಿಂದ 10ನೇ ತರಗತಿಯವರೆಗೆ ನೈತಿಕ ವಿಜ್ಞಾನ ಪಠ್ಯಪುಸ್ತಕವನ್ನು ಪರಿಚಯಿಸಲಾಗುತ್ತದೆ. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಶಿಕ್ಷಣದ ಮೊದಲ ಮೆಟ್ಟಿಲು ಎಂದು ಪ್ರತಿಪಾದಿಸಿದರು. ಸರ್ಕಾರಿ ಶಾಲಾ ಶಿಕ್ಷಕರ ಮೆರಿಟ್ ಮತ್ತು ಕಾರ್ಯಕ್ಷಮತೆಯನ್ನು ಶ್ಲಾಘಿಸಿದ ಸಚಿವರು, ವಿದ್ಯಾರ್ಥಿಗಳಿಗೆ ಸರ್ಕಾರ ನೀಡುತ್ತಿರುವ ಬಿಸಿಯೂಟ, ರಾಗಿಮಾಲ್ಟ್, ಹಾಲು, ಮೊಟ್ಟೆ/ಬಾಳೆಹಣ್ಣು, ಮತ್ತು ಸಮವಸ್ತ್ರಗಳ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದರು.

ಪ್ರಶಸ್ತಿ ವಿಜೇತ 10 ಶಾಲೆ

ಜಿ.ಎಂ.ಪಿ.ಎಚ್.ಎಸ್, ಎಮ್ಮಿಗನೂರು, ಬಳ್ಳಾರಿ., ಜಿ.ಕೆ.ಎಚ್.ಪಿ.ಎಸ್, ಕಾತ್ರಾಳ, ಕಾಗವಾಡ, ಬೆಳಗಾವಿ., ಜಿ.ಎಚ್.ಎಸ್, ಅಲಿಪುರ, ಚಿಕ್ಕಬಳ್ಳಾಪುರ., ಜಿ.ಎಚ್.ಪಿ.ಎಸ್, ಹಿರೇಗೋಣಿಗೆರೆ, ದಾವಣಗೆರೆ., ಜಿ.ಎಚ್.ಪಿ.ಎಸ್, ಜೋಡಳ್ಳಿ, ಕಲಘಟಗಿ., ಕೆ.ಪಿ.ಎಸ್, ಕೋಟೇಶ್ವರ, ಕುಂದಾಪುರ, ಉಡುಪಿ., ಡಿ.ಕೆ.ಜೆಡ್.ಪಿ, ಅಳಿಯೂರು, ದಕ್ಷಿಣ ಕನ್ನಡ., ಕೆ.ಎಸ್.ಎಸ್ ಜಿ.ಎಚ್.ಎಸ್, ಹಕ್ಲಾಡಿ, ಬೈಂದೂರು, ಉಡುಪಿ., ಕೆ.ಜಿ.ಬಿ.ವಿ, ಯಳಂದೂರು, ಚಾಮರಾಜನಗರ., ಜಿ.ಎಚ್.ಪಿ.ಎಸ್, ಮಲ್ಲೂರು, ಉಡುಪಿ.

ದೇಶಾದ್ಯಂತ ಆರೆಸ್ಸೆಸ್ ಕಾರ್ಯ: ಅಂಬೇಕರ್

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಮೂಲ ಕಾರ್ಯವಿಧಾನವು ದೈನಂದಿನ ಶಾಖೆಯಾಗಿದೆ. ಇದು ಎಳವೆಯಲ್ಲೇ ಶಿಸ್ತು, ತಂಡದ ಕೆಲಸ, ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರೀಯ ಪ್ರಜ್ಞೆ ಬೆಳೆಸಲು ವಿನ್ಯಾಸಗೊಳಿಸಲಾದ ಒಂದು ತಾಸಿನ ರಚನಾತ್ಮಕ ಸಭೆಯಾಗಿದೆ ಎಂದು ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಹೇಳಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ವರ್ಷದ ಹಿನ್ನೆಲೆಯಲ್ಲಿ ಐಟಿ ಮಿಲನ್, ಬೆಂಗಳೂರು ಸಿಎಂಆರ್ ಐಟಿಯಲ್ಲಿ ಆಯೋಜಿಸಿದ್ದ ಐಟಿ ನಾಯಕರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ನಾಗ್ಪುರದಲ್ಲಿ 1925ರಲ್ಲಿ ಡಾ. ಕೇಶವ್ ಬಲಿರಾಮ್ ಹೆಡ್ಗೆವಾರ್ ಅವರು ಸ್ಥಾಪಿಸಿದ ಆರ್‌ಎಸ್‌ಎಸ್ ಒಂದು ಶಾಖೆಯಿಂದ ಪ್ರಾರಂಭವಾಗಿ ಈಗ ದೇಶಾದ್ಯಂತ ಕಾರ್ಯನಿರ್ವಹಿಸುತ್ತಿದೆ. ಆರ್‌ಎಸ್‌ಎಸ್ ರಾಜಕೀಯ ಪಕ್ಷ, ಅರೆಸೈನಿಕ ಸಂಸ್ಥೆ ಅಥವಾ ಕೇವಲ ಸೇವಾ ಸಂಘಟನೆಯಲ್ಲ, ಇದು ಸ್ವಯಂಸೇವಕ ಚಟುವಟಿಕೆಗಳು ಮತ್ತು ವಿದ್ಯಾರ್ಥಿ, ಕಾರ್ಮಿಕ, ಬುಡಕಟ್ಟು ಮುಂತಾದ ವಿವಿಧ ಕ್ಷೇತ್ರಗಳಲ್ಲಿ ವಿವಿಧ ಅಂಗಸಂಸ್ಥೆಗಳ ಮೂಲಕ ರಾಷ್ಟ್ರೀಯ ಜೀವನದ ಬಹು ಆಯಾಮಗಳಲ್ಲಿ ತೊಡಗಿಸಿಕೊಂಡಿರುವ ರಾಷ್ಟ್ರ ನಿರ್ಮಾಣ ಚಳವಳಿಯಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಯಾದವ್ ರಾವ್ ಜೋಶಿ ಅವರಂತಹ ಆರಂಭಿಕ ಪ್ರಚಾರಕರ ಮೂಲಕ ಕರ್ನಾಟಕ ಸೇರಿದಂತೆ ಪ್ರಾಂತಗಳಲ್ಲಿ ಸಂಘಟನಾತ್ಮಕ



ವಿಸ್ತರಣೆ, ವಿಭಜನೆಯ ಸಮಯದಲ್ಲಿ ಪರಿಹಾರ ಮತ್ತು ಪುನರ್ವಸತಿ ಪ್ರಯತ್ನಗಳು, ತುರ್ತು ಪರಿಸ್ಥಿತಿಯ ಸಮಯದಲ್ಲಿ ಪ್ರತಿರೋಧ ಮತ್ತು ರಾಜಕೀಯ ಅಥವಾ ಆರ್ಥಿಕ ಶಕ್ತಿಯ ಬದಲು ನಿಸ್ವಾರ್ಥ ಕಾರ್ಯದ ಮೂಲಕ ಸಂಘದ ನಿರಂತರ ಬೆಳವಣಿಗೆ ಮುಂತಾದ ಐತಿಹಾಸಿಕ ಹಂತಗಳನ್ನು ಅಂಬೇಕರ್ ಉಲ್ಲೇಖಿಸಿದರು. ಸಂಘವು ಸಮಾಜದ ಎಲ್ಲಾ ವರ್ಗಗಳನ್ನು ಸಂಪರ್ಕಿಸಲು ಪ್ರಯತ್ನಿಸುತ್ತದೆ. ಸಾಮಾಜಿಕ ಸಾಮರಸ್ಯ ಮತ್ತು ರಾಷ್ಟ್ರೀಯ ಏಕೀಕರಣವನ್ನು ಪ್ರತಿಪಾದಿಸುವಾಗ ಪ್ರತ್ಯೇಕತಾವಾದ, ಭಯೋತ್ಪಾದನೆ ಮತ್ತು ಸಾಮಾಜಿಕ ವಿಘಟನೆಯಂತಹ ವಿಭಜಕ ಪ್ರವೃತ್ತಿಗಳನ್ನು ವಿರೋಧಿಸುತ್ತದೆ. ಸಂಘ ಶತಮಾನೋತ್ಸವದ ಪ್ರಯುಕ್ತ ಪಂಚ ಪರಿವರ್ತನ (ಸಾಮಾಜಿಕ ಸಾಮರಸ್ಯ, ಸ್ವದೇಶಿ ಜೀವನ ಶೈಲಿ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ ಮತ್ತು ನಾಗರಿಕ ಶಿಷ್ಟಾಚಾರ)ದ ಕುರಿತು ಮಾತನಾಡಿದರು.

ಆರ್‌ಎಸ್‌ಎಸ್ ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ, ಬೆಂಗಳೂರು ಮಹಾನಗರ ಸಂಘಚಾಲಕ ಮಿಲಿಂದ್ ಗೋಖಲೆ ವೇದಿಕೆಯಲ್ಲಿದ್ದರು.

ವಾಟ್ಸ್ಯಾಪ್ ಗ್ರೂಪ್ ಮೂಲಕ ಮಾಹಿತಿ ನೀಡಿ

ಬೆಂಗಳೂರು: ವನ್ಯಜೀವಿ-ಮಾನವ ಸಂಘರ್ಷ ಇರುವ ಪ್ರದೇಶಗಳ ಸ್ಥಳೀಯ ಮುಖಂಡರ, ಗ್ರಾಮಗಳ ಜಮೀನು ಮಾಲೀಕರ ವಾಟ್ಸ್ಯಾಪ್ ಗ್ರೂಪ್ ಮಾಡಿ ಮಾಹಿತಿ ಪ್ರಸಾರ ಮಾಡುವಂತೆ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಚಿಕ್ಕಮಗಳೂರು ತಾಲೂಕು ಹುಣಸೆಹಳ್ಳಿ ಬಳಿಯ ತೋಟದಲ್ಲಿ ಕಳೆದ 7 ದಿನಗಳ ಅಂತರದಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟಿರುವ ಹಿನ್ನೆಲೆಯಲ್ಲಿ ಉನ್ನತಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ತುರ್ತು ಸಭೆ ನಡೆಸಿದ ಸಚಿವರು ಸಲಹೆ ಸೂಚನೆ ನೀಡಿದರು. ಅರಣ್ಯದಂಚಿನ ಜಮೀನುಗಳಲ್ಲಿ ವನ್ಯಜೀವಿಗಳ ಸಂಚಾರದ ಬಗ್ಗೆ ಕಮಾಂಡ್ ಕೇಂದ್ರಕ್ಕೆ ಮಾಹಿತಿ ಬಂದ ಕೂಡಲೇ ತೋಟದ ಬೆಳೆಗಾರರ ಸಂಘಟನೆ ಮತ್ತು ಕಾರ್ಮಿಕ ಸಂಘಟನೆಗಳಿಗೆ, ಸ್ಥಳೀಯ ಮುಖಂಡರಿಗೆ ಮಾಹಿತಿ ರವಾನಿಸಲು ಕ್ರಮ ವಹಿಸುವಂತೆ ತಿಳಿಸಿದರು.

ಥರ್ಮಲ್ ಡ್ರೋನ್ ಬಳಕೆಗೆ ಸಲಹೆ: ಮಾನವ ಜೀವ ಅತ್ಯಮೂಲ್ಯವಾದ್ದು, ಒಂದು ಜೀವಹಾನಿ ಆದ ಬಳಿಕ ಮತ್ತೊಂದು ಜೀವ ಹಾನಿ ಆಗಿರುವುದು ಅತ್ಯಂತ ನೋವಿನ ಸಂಗತಿ. ಅಧಿಕಾರಿಗಳು ಮತ್ತು ಸಿಬ್ಬಂದಿ ಇಂತಹ ಘಟನೆ ಮರುಕಳಿಸದಂತೆ 24/7 ನಿಗಾ ಇಡಬೇಕು. ಕಡ್ಡಾಯವಾಗಿ ಸೆಕ್ಷನ್ 144 ಜಾರಿ ಮಾಡಿ ವನ್ಯಜೀವಿ ಸೆರೆ ಕಾರ್ಯಾಚರಣೆ ನಡೆಸಬೇಕು. ಅತ್ಯಾಧುನಿಕ ಸಲಕರಣೆಗಳಾದ ಥರ್ಮಲ್ ಡ್ರೋನ್ ಬಳಕೆ ಮಾಡಬೇಕು ಎಂದು ಸೂಚಿಸಿದರು.

ಮಾಹಿತಿಯ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯದ ಹೊರಗೆ 35 ಆನೆಗಳು 3 ಗುಂಪಿನಲ್ಲಿ ಸಂಚರಿಸುತ್ತಿದ್ದು, ಬೇಸಿಗೆಯಲ್ಲಿ ಅವುಗಳು ಕಾಡಿನಿಂದ ಹೊರಬರುವುದು ಸಾಮಾನ್ಯ. ಆದಾಗ್ಯೂ ಸಿಬ್ಬಂದಿ ಮತ್ತು ಅಧಿಕಾರಿಗಳು ವನ್ಯಜೀವಿ-ಮಾನವ ಸಂಘರ್ಷ ಆಗದಂತೆ ನಿಗಾ ಇಡಬೇಕು. ಪ್ರತಿ ವರ್ಷ ವನ್ಯಜೀವಿ-ಮಾನವ ದಾಳಿಯಲ್ಲಿ ಆಗುತ್ತಿರುವ ಸಾವಿನ ಸಂಖ್ಯೆ ಇಳಿಕೆಯಾಗಬೇಕೇ ಹೊರತು, ಹೆಚ್ಚಳ ಆಗಬಾರದು ನೀವೆಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಿ ಎಂದು ತಿಳಿಸಿದರು.



ಸಫಾರಿ ಪುನಾರಂಭ: ಕಾಡಿನಂಚಿನ ಗ್ರಾಮಗಳಲ್ಲಿ ಸಭೆ : ನಾಗರಹೊಳೆ ಮತ್ತು ಬಂಡೀಪುರದಲ್ಲಿ ಸಫಾರಿ ಪುನಾರಂಭ ಮಾಡಿರುವ ಬಗ್ಗೆ ಕೆಲವರು ಮಾತ್ರವೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ರಾಜ್ಯ ಸರ್ಕಾರ ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35 ರಷ್ಟನ್ನು ಕಾಡಿನಂಚಿನ ಗ್ರಾಮದ ಜನರ ಕಲ್ಯಾಣಕ್ಕಾಗಿ ಬಳಸಲು ತೀರ್ಮಾನಿಸಿದ್ದು, ಗ್ರಾಮಗಳಲ್ಲಿ ಸಭೆ ನಡೆಸಿ, ಸ್ಥಳೀಯರ ಅಗತ್ಯಕ್ಕೆ ಅನುಗುಣವಾಗಿ ಕಾರ್ಯಕ್ರಮ ರೂಪಿಸಬೇಕು. ಯುವಜನರಿಗೆ ಕೌಶಲ ತರಬೇತಿ ನೀಡಬೇಕು, ಕಾಡಿನಂಚಿನ ಶಾಲೆ- ಕಾಲೇಜುಗಳಿಗೆ ಅಗತ್ಯ ಸಲಕರಣೆ ನೀಡಬೇಕು. ವನ್ಯಜೀವಿಗಳು ನಾಡಿಗೆ ಬಂದಾಗ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ಅರಿವು ಮೂಡಿಸಲು ತಿಳಿಸಿದರು.

ವನ್ಯಜೀವಿ-ಮಾನವ ಸಂಘರ್ಷ ತಡೆಯಲು ಅಧಿಕಾರಿಗಳಿಗೆ ಖಂಡ್ರೆ ಸೂಚನೆ

ನಿರ್ಲಕ್ಷ್ಯ ತೋರಿದರೆ ದೂರು

ಚಿಕ್ಕಮಗಳೂರಿನಲ್ಲಿ ಕಳೆದ ವಾರ ಆನೆ ದಾಳಿಯಿಂದ ವ್ಯಕ್ತಿ ಮೃತಪಟ್ಟ ಬಳಿಕ, ಆನೆ ಸೆರೆಗೆ ಕ್ರಮ ಕೈಗೊಳ್ಳಲಾಗಿತ್ತು. ಸ್ಥಳೀಯರಿಗೆ ತೋಟಕ್ಕೆ ಹೋಗದಂತೆ ಮಾಹಿತಿ ನೀಡಲಾಗಿತ್ತು. ಆದಾಗ್ಯೂ ತೋಟಕ್ಕೆ ಹೋದ ಕಾರಣ ಈ ಸಾವು ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದರು. ಅರಣ್ಯ ಇಲಾಖೆ ಮುನ್ನೆಚ್ಚರಿಕೆ ನೀಡಿದ ಬಳಿಕವೂ ತೋಟದ ಮಾಲೀಕರು ಕಾರ್ಮಿಕರನ್ನು ತೋಟಕ್ಕೆ ಕಳಿಸಿದರೆ ಅಂತಹ ಮಾಲೀಕರಿಗೆ ಎಚ್ಚರಿಕೆ ನೀಡಿ, ತೋಟದ ಮಾಲೀಕರಿಗೂ ಜವಾಬ್ದಾರಿ ಇರಬೇಕು. ನಿರ್ಲಕ್ಷ್ಯ ತೋರಿದರೆ ದೂರು ದಾಖಲಿಸಿ ಎಂದು ತಿಳಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◆ ಉಡುಪಿ ಪರ್ಯಾಯದಲ್ಲಿ ಜಿಲ್ಲಾಧಿಕಾರಿಯವರು ಸಾಂಪ್ರದಾಯಿಕವಾಗಿ ಭಗವಾ ಧ್ವಜ ಹಾರಿಸಿದ್ದನ್ನು ವಿರೋಧಿಸುವ ಕಾಂಗ್ರೆಸ್ಸಿಗರು ಹಲವು ಕಡೆಗಳಲ್ಲಿ ಪಾಕಿಸ್ತಾನದ ಧ್ವಜ ಹಾರಿಸಿದಾಗ ಎಲ್ಲಿದ್ದರು?
- ಕ್ಯಾಪ್ಟನ್ ಬ್ರಿಜೇಶ್ ಚೌಟ

-ಬ್ರದರ್ಸ್ ಬೇರೆ, ಅದರ್ಸ್ ಬೇರೆ. ತಪ್ಪಾಗಿದೆ ಅಂತ ಬ್ರದರ್ಸ್ ಬಾಂಧವ್ಯವನ್ನು ಬಿಡೋದಕ್ಕಾಗುತ್ತಾ?

ದಿನ ಭವಿಷ್ಯ

ಮೇಷ ಗ್ರಹಗತಿ ನಿಮಗೆ ಪೂರಕ. ವೃತ್ತಿಯಲ್ಲಿ ಉನ್ನತಿ. ವೈಯಕ್ತಿಕ ಚಿಂತೆ ಪರಿಹಾರದ ಲಕ್ಷಣ ತೋರಲಿದೆ. ಮುನಿಸು ದೂರ, ಸಂಬಂಧ ಹತ್ತಿರ.

ವೃಷಭ ಇತ್ತೀಚಿನ ಕೆಲ ಕೆಲಸಗಳ ಪರಾಮರ್ಶೆ ನಡೆಸಿ. ತಪ್ಪಿದ್ದರೆ ತಿದ್ದಿಕೊಳ್ಳಿ. ಟೀಕೆಗಳಿಗೆ ನೋಯದಿರಿ. ಪ್ರಭಾವಿ ವ್ಯಕ್ತಿಗಳ ಸಂಪರ್ಕ ಸಾಧ್ಯವಾಗಲಿದೆ.

ಮಿಥುನ ದೈಹಿಕವಾಗಿ, ಮಾನಸಿಕವಾಗಿ ಇಂದು ಬಳಲುವಷ್ಟು ಕೆಲಸ. ಆರೋಗ್ಯ ಏರುಪೇರು. ಆತ್ಮೀಯರ ಸಂಗ ನೆಮ್ಮದಿ ತರಲಿದೆ. ಧನವ್ಯಯ.

ಕಟಕ ನಿಮ್ಮ ಮಾನಸಿಕ ದೃಢತೆ ಕೆಲವರಿಗೆ ಹೊಟ್ಟೆಯುರಿ ತರಲಿದೆ. ಪ್ರೀತಿಯ ವಿಷಯದಲ್ಲಿ ಮನಃಪರಿವರ್ತನೆ ಆದೀತು. ಆರೋಗ್ಯ ಸ್ಥಿರ.

ಸಿಂಹ ಅಧಿಕ ಕೆಲಸದ ಒತ್ತಡ. ಸಂಗಾತಿ ಜತೆ ವಿರಸದಿಂದ ಮನಸ್ಸು ಅಶಾಂತ. ಸ್ವಂತ ಉದ್ದಿಮೆಯಲ್ಲಿ ಹಿನ್ನಡೆ ಉಂಟಾದೀತು.

ಕನ್ಯಾ ನಿಮ್ಮ ನಿರ್ಧಾರ ದೀರ್ಘಾವಧಿ ಪರಿಣಾಮ ಬೀರಬಹುದು. ಯೋಚಿಸಿ ನಿರ್ಧಾರ ಕೈಗೊಳ್ಳಿ. ಸಣ್ಣ ವಿಷಯವೊಂದು ಮನಸ್ಸಿಗೆ ಕಿರಿಕಿರಿ ಸೃಷ್ಟಿಸಲಿದೆ.

ತುಲಾ ವೃತ್ತಿ ಕ್ಷೇತ್ರದಲ್ಲಿ ಎಲ್ಲರನ್ನು ಪೂರ್ಣವಾಗಿ ನಂಬದಿರಿ. ಹರಿತ ವಸ್ತುಗಳ ಜತೆ ಎಚ್ಚರವಿರಲಿ. ಆಧ್ಯಾತ್ಮಿಕ ಚಿಂತನೆ ಆವರಿಸಬಹುದು.

ವೃಶ್ಚಿಕ ಸಾಮಾಜಿಕ, ಖಾಸಗಿ ಬದ್ಧತೆ ಈಡೇರಿಸಬೇಕಾದ ಒತ್ತಡ. ಎಡೆಬಿಡದ ಕೆಲಸದಿಂದ ವಿರಾಮ ಸಿಗದು. ಕೌಟುಂಬಿಕ ಶಾಂತಿಗೆ ಭಂಗ ಬಂದೀತು.

ಧನು ಭಾವನಾತ್ಮಕ ಸವಾಲು ಎದುರಿಸುವಿರಿ. ಮನೋನಿಗ್ರಹ ಅವಶ್ಯ. ಬಹುಮುಖ್ಯ ಬಯಕೆ ಈಡೇರುವ ಕಾಲ ಬಂದಿದೆ. ಧನಪ್ರಾಪ್ತಿ.

ಮಕರ ಅಂತಃಪ್ರೇರಣೆ ಪ್ರಕಾರ ನಡಕೊಳ್ಳಿ. ಅದು ನಿಮ್ಮನ್ನು ಉನ್ನತಿಗೆ ಕೊಂಡೊಯ್ಯಲಿದೆ. ಸಣ್ಣ ವಿಷಯಕ್ಕೆ ಜಗಳ ಕಾಯಲು ಹೋಗಬೇಡಿ.

ಕುಂಭ ಇಂದು ತಾಳ್ಮೆ ಮುಖ್ಯ. ಪ್ರತಿಕೂಲ ಸನ್ನಿವೇಶ ಎದುರಾದರೂ ಧೃತಿಗೆಡದಿರಿ. ಬಳಿಕ ಎಲ್ಲವೂ ತಾನಾಗಿ ಸರಿಹೋಗಲಿದೆ.

ಮೀನ ಹೊಸತಾದುದನ್ನು ಅಳವಡಿಸಲು ಸಕಾಲ. ಕೆಲ ವಿಚಾರಗಳಲ್ಲಿ ಬದಲಾವಣೆ ತಂದುಕೊಳ್ಳಿ. ಸಂಘರ್ಷದ ಮನೋಭಾವ ಬಿಡಿ. ಹೊಂದಾಣಿಕೆ ಒಳಿತು.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 4,6,2,0

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಎಚ್ಚರಿಕೆ

ಮಾ.11ರಿಂದ ಒಪಿಡಿ ಸ್ಥಗಿತ

ಬೆಂಗಳೂರು: ಆರೋಗ್ಯ ಇಲಾಖೆಯ ನಾನ್-ಕೆಡರ್ ಹುದ್ದೆಗಳಿಗೆ ನೇಮಕಾತಿ, ಮುಂಬಡ್ತಿ, ವರ್ಗಾವಣೆ ಬದಲಾವಣೆ, ಕಾಲ-ಕಾಲಕ್ಕೆ ಸಮರ್ಪಕ ಔಷಧ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ವೈದ್ಯರು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರು ಮಾ.11ರಿಂದ ಹೊರರೋಗಿಗಳ ಸೇವೆಯನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸಲು ಮುಂದಾಗಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಡಾ. ರವೀಂದ್ರನಾಥ್ ಎಂ. ಮೇಟಿ ಅವರು, ಮಾ. 11ರಿಂದ 15ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ, ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಡಿಸ್ಪೆನ್ಸರಿಗಳಲ್ಲಿನ ಎಲ್ಲ ವೃಂದದ ವೈದ್ಯರು, ಅಧಿಕಾರಿಗಳು, ನೌಕರರು ಕಪ್ಪುಪಟ್ಟಿ ಧರಿಸಿ ಹೊರರೋಗಿಗಳ ಚಿಕಿತ್ಸೆಯನ್ನು ಸ್ಥಗಿತಗೊಳಿಸಿ, ತುರ್ತು ಸೇವೆಗಳನ್ನು ಮಾತ್ರ ನಿರ್ವಹಿಸುವ ಮೂಲಕ ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ರಾಜ್ಯ ಸರ್ಕಾರ ಪ್ರತಿಭಟನೆಗೆ ಸ್ಪಂದಿಸಿ, ಬೇಡಿಕೆಗಳನ್ನು ಈಡೇರಿಸದಿದ್ದರೆ ಮಾ.16ರಂದು ಇಲಾಖೆಯ ಎಲ್ಲ ನೌಕರರು, ಕರ್ತವ್ಯಕ್ಕೆ ಅನಿರ್ದಿಷ್ಟಾವಧಿವರೆಗೆ ಗೈರು ಹಾಜರಾಗುವ ಮೂಲಕ ಮುಷ್ಕರ ಕೈಗೊಳ್ಳಲು ನಿರ್ಧರಿಸಲಾಗಿದೆ. ಈ ಮುಷ್ಕರಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಕೂಡ ಸಂಪೂರ್ಣ ಬೆಂಬಲ ನೀಡಿದೆ ಎಂದು ತಿಳಿಸಿದರು.

ಆರೋಗ್ಯ ಇಲಾಖೆಯ ತಾಂತ್ರಿಕ ಹುದ್ದೆಗಳಿಗೆ ಇಲಾಖೆಯ ಅನುಭವಿ, ಪರಿಣಿತ ತಜ್ಞರನ್ನು ನಿಯೋಜಿಸುವ ಬದಲು, ಐಎಎಸ್ ಅಧಿಕಾರಿಗಳನ್ನೇ ನಿಯೋಜನೆ ಮಾಡಲಾಗುತ್ತಿದೆ. ಒಬ್ಬರು ವೈದ್ಯರಿಲ್ಲ, ವೈದ್ಯರನ್ನು ಮೂಲೆಗುಂಪು ಮಾಡಲಾಗುತ್ತಿದೆ. ಬದಲಾಗಿ ಆರೋಗ್ಯ ಇಲಾಖೆಯ ಎನ್-ಕೇಡರ್ ಹುದ್ದೆಗಳಿಗೆ ನೇಮಕಾತಿ, ಮುಂಬಡ್ತಿ ಮತ್ತು ವರ್ಗಾವಣೆಗೆ ಆರೋಗ್ಯ ಇಲಾಖೆಯ ವೈದ್ಯರು, ಅಧಿಕಾರಿ, ನೌಕರರನ್ನೇ ನಿಯೋಜಿಸಬೇಕು ಎಂದು ಒತ್ತಾಯಿಸಿದರು.



ಪ್ರಮುಖ ಬೇಡಿಕೆಗಳು

- ನಿಯಮದಂತೆ ಸೇವಾ ನಿರತ ಅಧಿಕಾರಿಗಳು, ಸಿಬ್ಬಂದಿಗೆ ಉನ್ನತ ವ್ಯಾಸಾಂಗಕ್ಕೆ ಅವಕಾಶ ನೀಡಬೇಕು.
- ವರ್ಗಾವಣೆ ಕಾಯಿದೆಯಲ್ಲಿ ನ್ಯೂನತೆಗಳನ್ನು ಶೀಘ್ರ ಸರಿಪಡಿಸಬೇಕು.
- ಖಾಲಿಯಿರುವ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು. ಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ನೀಡಬೇಕು.
- ಕೇಂದ್ರ ಪುರಸ್ಕೃತ ಯೋಜನೆಯಡಿ ಕೆಲಸ ಮಾಡುವ 6 ಸಾವಿರ ನೌಕರರಿಗೆ, ತಿಂಗಳ ಮೊದಲ ವಾರದಲ್ಲೇ ಸಂಬಳ ನೀಡುವುದು.
- ವೈದ್ಯರು, ತಜ್ಞರು ಮತ್ತು ಸಿಬ್ಬಂದಿಗಳಿಗೆ ಸಿಜಿಎಚ್‌ಎಸ್/ಎಐಸಿಟಿಇ ಮಾದರಿಯಲ್ಲಿ ವೇತನ ನೀಡಬೇಕು.

ನೌಕರರು ಕೇಳಿರುವ ಬೇಡಿಕೆಗಳು ಸುಲಭವಾಗಿ ಈಡೇರಿಸಬಹುದಾಗಿದೆ. ಆದರೆ, ಆಯಾ ಕಾಲಘಟ್ಟದಲ್ಲಿ ಕೆಲಸ ಮಾಡುವ ಇಲಾಖೆಯ ಅಧಿಕಾರಿಗಳ ಪ್ರತಿಷ್ಠೆಯಿಂದ ಇದು ಸಾಧ್ಯವಾಗುತ್ತಿಲ್ಲ. ಹಾಗಾಗಿ, ರಾಜ್ಯ ಸರಕಾರಿ ನೌಕರರ ಸಂಘ ಈ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡಿದೆ.
■ ಸಿ.ಎಸ್.ಷಡಾಕ್ಷರಿ, ರಾಜ್ಯಾಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

ನೌಕರರು ಹಲವು ವರ್ಷಗಳಿಂದ ಸಾಕಷ್ಟು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಪರಿಹರಿಸುವ ಕುರಿತು ಹಲವು ಸಭೆ, ಚರ್ಚೆಗಳಾದರೂ, ಬೇಡಿಕೆ ಮಾತ್ರ ಈಡೇರಿಲ್ಲ. ಹಾಗಾಗಿ ಅಂತಿಮವಾಗಿ ಮುಷ್ಕರದ ನಿರ್ಧಾರ ಮಾಡಲಾಗಿದೆ. ಈ ಕುರಿತು ಈಗಾಗಲೇ ಮುಖ್ಯಕಾರ್ಯದರ್ಶಿ ಅವರಿಗೆ ಪತ್ರ ಕೂಡ ನೀಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆರೋಗ್ಯ ಇಲಾಖೆ ನೌಕರರ ಕೇಂದ್ರ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಿ. ಬಳ್ಳಾರಿ, ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಕಾರ್ಯದರ್ಶಿ ಡಾ.ಪಿ.ಆರ್.ತಿಮ್ಮರಾಜು ಸೇರಿದಂತೆ ಇತರರಿದ್ದರು.

ಬಿಜೆಪಿ ನಿಯೋಗ ರಾಜ್ಯಪಾಲರ ಭೇಟಿ

18 ತಿಂಗಳು ಕಳೆದರೂ ಒಳಮೀಸಲು ಜಾರಿ ಇಲ್ಲ

ಬೆಂಗಳೂರು: ಒಳ ಮೀಸಲಾತಿ ಸಂಬಂಧಿಸಿ ಸುಪ್ರೀಂ ಕೋರ್ಟ್ ತೀರ್ಪು ಬಂದು 18 ತಿಂಗಳಾಗಿದ್ದರೂ ಕರ್ನಾಟಕದಲ್ಲಿ ಇನ್ನೂ ಒಳ ಮೀಸಲಾತಿ ಜಾರಿಯಾಗಿಲ್ಲ ಎಂದು ಬಿಜೆಪಿ ನಿಯೋಗವು ಸೋಮವಾರ ರಾಜ್ಯಪಾಲರನ್ನು ಭೇಟಿ ಮಾಡಿ ಗಮನ ಸೆಳೆದಿದೆ.

ನೆರೆಯ ತೆಲಂಗಾಣ, ಆಂಧ್ರಪ್ರದೇಶ, ದೂರದ ಹರ್ಯಾಣ ಸರ್ಕಾರಗಳು ಆರೇ ತಿಂಗಳಲ್ಲಿ ಒಳ ಮೀಸಲಾತಿಯನ್ನು ಜಾರಿ ಮಾಡಿ ನ್ಯಾಯ ಕೊಟ್ಟಿವೆ. ಆದರೆ, ಕರ್ನಾಟಕದಲ್ಲಿ ಮಾತ್ರ ಇನ್ನೂ ಜಾರಿಯಾಗಿಲ್ಲ. ನ್ಯಾ. ನಾಗಮೋಹನ್ ದಾಸ್ ಆಯೋಗ ರಚನೆ ಮಾದಿಗ ಸಮಾಜದ ಬೇಡಿಕೆ ಆಗಿರಲಿಲ್ಲ. ಈ ಹಿಂದೆ ತಯಾರಿಸಿದ ನ್ಯಾ. ಸದಾಶಿವ ಆಯೋಗದ ವರದಿ ಮತ್ತು ಮಾಧುಸ್ವಾಮಿ ಸಮಿತಿ ವರದಿಯ ದತ್ತಾಂಶಗಳು ಸರ್ಕಾರದ ಬಳಿ ಇದ್ದವು. ಆದರೂ ಸರ್ಕಾರ ನ್ಯಾ. ನಾಗಮೋಹನ ದಾಸ್ ಆಯೋಗ ರಚಿಸಿ ವರದಿ ಪಡೆಯಲು ನಿಶ್ಚಯಿಸಿತು. ಆರು ತಿಂಗಳು ಶ್ರಮವಹಿಸಿ, 110 ಕೋಟಿ ರೂ. ತೆರಿಗೆ ಹಣ ವ್ಯಯಿಸಿ ಆಯೋಗದಿಂದ ಶಿಫಾರಸುಗಳನ್ನು ಪಡೆಯಲಾಯಿತು ಎಂದು ನಿಯೋಗ ವಿವರಿಸಿದೆ.

ನ್ಯಾ.ನಾಗಮೋಹನ್ ದಾಸ್ ಶಿಫಾರಸ್ಸಿನಲ್ಲಿ ಪ್ರವರ್ಗ 1 (59 ಸಣ್ಣ ಅಲೆಮಾರಿ ಜಾತಿಗಳು) ಶೇ. 1, ಪ್ರವರ್ಗ 2 (ಮಾದಿಗ ಸಂಬಂಧಿತ ಜಾತಿಗಳು) ಶೇ. 6, ಪ್ರವರ್ಗ 3 (ಹೊಲೆಯ ಸಂಬಂಧಿತ ಜಾತಿಗಳು) ಶೇ. 5, ಪ್ರವರ್ಗ 4 (ಭೋವಿ, ಬಂಜಾರ, ಕೊರಚ, ಕೊರಮ ಜಾತಿಗಳು) ಶೇ. 4 ಹಾಗೂ ಪ್ರವರ್ಗ 5 (ಮೂಲ ಜಾತಿ ಗುರುತಿಸಿಕೊಳ್ಳದೆ ಉಳಿದ ಎಕೆ, ಎಡಿ, ಎಎ) ಶೇ. 1 ಮೀಸಲಾತಿಯನ್ನು ಉಲ್ಲೇಖಿಸಲಾಗಿದೆ. ಆದರೆ, ಸರ್ಕಾರ ಈ ಶಿಫಾರಸ್ಸನ್ನು ಏಕೆ ಪರಿಗಣಿಸಲಿಲ್ಲ? ಬದಲಾಗಿ ಸರ್ಕಾರ ರಾಜಕೀಯ ಒತ್ತಡಕ್ಕೆ ಮಣಿದು 6 : 6 : 5 ರ ಹೊಸ ಸೂತ್ರ ರೂಪಿಸಿತು. ಈ ಸೂತ್ರವನ್ನು ಯಾವ ಆಧಾರದಲ್ಲಿ ರೂಪಿಸಲಾಯಿತು ಎಂಬುದನ್ನು ಸರ್ಕಾರವಾಗಲಿ, ಸಚಿವರಾಗಲಿ, ಮುಖ್ಯಮಂತ್ರಿಗಳಾಗಲಿ ವಿವರಿಸಲಿಲ್ಲ ಎಂದು ಆಕ್ಷೇಪಿಸಿದೆ.

ಐತಿಹಾಸಿಕವಾದ ಒಳ ಮೀಸಲಾತಿಯನ್ನು ಜಾರಿ ಮಾಡುವ ಇಡೀ ಪ್ರಕ್ರಿಯೆಯಲ್ಲಿ ಸರ್ವಪಕ್ಷಗಳ ಪ್ರಮುಖರ ಸಭೆ ಮಾಡಲಿಲ್ಲ, ಸಲಹೆ ಕೇಳಲಿಲ್ಲ, ದಲಿತ ಸಂಘಟನೆಗಳ ಪ್ರಮುಖರ, ಹೋರಾಟಗಾರರ, ಕಾನೂನು ತಜ್ಞರ, ಬುದ್ಧಿಜೀವಿಗಳ ಸಭೆ ಕರೆಯಲಿಲ್ಲ ಎಂದು ಆಪಾದಿಸಿದೆ.

ನ್ಯಾ. ಸದಾಶಿವ ಆಯೋಗ, ಮಾಧುಸ್ವಾಮಿ ಆಯೋಗ, ನ್ಯಾ ನಾಗಮೋಹನ್ ದಾಸ್ ಆಯೋಗ - ಮೂರೂ ವರದಿಗಳು ಅಲೆಮಾರಿ, ಸಣ್ಣ ಜಾತಿಗಳ ಗುಂಪಿಗೆ ಪ್ರತ್ಯೇಕ ಪ್ರವರ್ಗದಲ್ಲಿ ಶೇ. 1ರ ಮೀಸಲಾತಿ ಕೊಟ್ಟಿದ್ದವು. ಆದರೆ, ಕರ್ನಾಟಕ ಸರ್ಕಾರ ಸುಪ್ರೀಂಕೋರ್ಟ್ ನಿರ್ದೇಶನಗಳನ್ನು ಗಾಳಿಗೆ ತೂರಿ ಬೇಕಾಬಿಟ್ಟಿಯಾಗಿ ಒಳ ಮೀಸಲಾತಿಯನ್ನು ಜಾರಿ ಮಾಡಲು ಹೋಗಿ ಜಾರಿಬಿದ್ದು ನಗೆಪಾಟಲಿಗೀಡಾಗಿದೆ. ಅಲೆಮಾರಿಗಳು, ಸಣ್ಣ ಜಾತಿಯವರನ್ನು ಬೀದಿಪಾಲು ಮಾಡಿದೆ ಎಂದು ಅಸಮಾಧಾನವ್ಯಕ್ತಪಡಿಸಿದೆ. ಸಂಸದ ಗೋವಿಂದ ಕಾರಜೋಳ, ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, ಶಾಸಕರಾದ ದುರ್ಯೋಧನ ಐಹೊಳೆ, ಬಸವರಾಜ್ ಮತ್ತಿಮಡು, ನಿವೃತ್ತ ಐಎಎಸ್ ಅಧಿಕಾರಿ ಲಕ್ಷ್ಮೀನಾರಾಯಣ್ ನಿಯೋಗದಲ್ಲಿದ್ದರು.

ರಾಷ್ಟ್ರ ನಿರ್ಮಾಣಕ್ಕೆ ಸಂಘ ಆದ್ಯತೆ

ಪುಟ ೧➔ ಯಾಕೆಂದರೆ ಜಗತ್ತು ಇಂದು ಎದುರಿಸುತ್ತಿರುವ ಅನೇಕ ಸಮಸ್ಯೆ, ಸವಾಲುಗಳಿಗೆ ಉತ್ತರ ಕಂಡುಕೊಳ್ಳಬಲ್ಲ ಶಕ್ತಿ, ಸಾಮರ್ಥ್ಯಗಳಿರುವುದು ಭಾರತಕ್ಕೆ ಮಾತ್ರ ಎಂದು ವಿಶ್ವವಿಂದು ಭಾವಿಸುತ್ತಿದೆ ಎಂದರು. ಯಾರು ಹಿಂದುಗಳ ಏಕತೆಗಾಗಿ ಕೆಲಸ ಮಾಡುತ್ತಾರೋ ಅವರು ಮಾತೃಭೂಮಿಯ ಮೇಲೆ ನಿಷ್ಠೆ ಮತ್ತು ಭಕ್ತಿ ಹೊಂದಿರುವುದು ಅತ್ಯಗತ್ಯ. ನಿಜ, ಇಂದು ಜಗತ್ತು ಸತ್ಯಕ್ಕಿಂತ ಹೆಚ್ಚಾಗಿ ಶಕ್ತಿಯನ್ನು ಅರ್ಥ ಮಾಡಿಕೊಳ್ಳುತ್ತದೆ. ಆದ್ದರಿಂದ ಅಧಿಕಾರ, ಶಕ್ತಿ ಅತ್ಯಗತ್ಯ. ಆದರೆ ಈ ಅಧಿಕಾರದ ಬಳಕೆಯು ಸಂಯಮ ಮತ್ತು ನಿಯಂತ್ರಣದೊಳಗಿರಬೇಕು ಎಂದು ಅವರು ತಿಳಿಸಿದರು.

ಮಹಿಳೆಯರಿಗೆ ಶೇ.33 ಅಲ್ಲ, ಶೇ.50 ಪಾಲುದಾರಿಕೆ ಬೇಕು

ಪುಟ ೧➔ ಇದೇ ರೀತಿ ಉತ್ತರಾಖಂಡದಲ್ಲಿ ನದಿಗಳು ಮತ್ತು ಪರಿಸರವನ್ನು ಸಂರಕ್ಷಿಸಲು ಸ್ಥಳೀಯರ ಪಾಲುದಾರಿಕೆ ಮತ್ತು ಸಂಘಟಿತ ನೀತಿಯೊಂದರ ಅಗತ್ಯವಿದೆ ಎಂದು ಹೇಳಿದರು.

ಯೂನುಸ್ ಕುತಂತ್ರ ಬಯಲು

ಪುಟ ೧➔ ಬೆಂಗಾಲಿ ಡೈಲಿ ಕಾಲೇರ್ ಕಾಂಥೊ ಬಾಂಗ್ಲಾ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅಧ್ಯಕ್ಷ ಶಹಾಬುದ್ದೀನ್ ಸ್ಫೋಟಕ ಹೇಳಿಕೆಗಳನ್ನು ನೀಡಿದ್ದಾರೆ.

ಶಾಶ್ವತ ಅಶಾಂತಿ, ಅಸ್ಥಿರತೆ ಷಡ್ಯಂತ್ರ: ಬಾಂಗ್ಲಾದೇಶದಲ್ಲಿ ಶಾಶ್ವತವಾಗಿ ಅಶಾಂತಿಯ ವಾತಾವರಣ ಸೃಷ್ಟಿಸಬೇಕು ಮತ್ತು ಆಡಳಿತ ವ್ಯವಸ್ಥೆಯಲ್ಲಿ ಅಸ್ಥಿರತೆ ತರಬೇಕೆಂಬ ದುರುದ್ದೇಶದಿಂದ ಯೂನುಸ್ ಆಡಳಿತವು ದೇಶದ ವಿರುದ್ಧವೇ ಹಲವು ಷಡ್ಯಂತ್ರಗಳನ್ನು ನಡೆಸಿದೆ. ನನ್ನ ಅಧಿಕಾರ ಕಸಿಯಲೂ ಯೂನುಸ್ ಕುತಂತ್ರ ನಡೆಸಿದ್ದರು. ಯೂನುಸ್ 14ರಿಂದ 15 ವಿದೇಶ ಪ್ರವಾಸಗಳನ್ನು ಮಾಡಿದ್ದು, ಅಧ್ಯಕ್ಷನಾದ ನನಗೆ ಒಮ್ಮೆಯೂ ಮಾಹಿತಿ ನೀಡಿರಲಿಲ್ಲ.

ಹೀಗೆ ಹಲವು ಬಾರಿ ಯೂನುಸ್ ಆಡಳಿತ ಅಸಾಂವಿಧಾನಿಕ ರೀತಿಯಲ್ಲಿ ನಡೆದುಕೊಂಡಿದೆ. ಮುಖ್ಯ ಸಲಹೆಗಾರನೇ ಸಾಂವಿಧಾನಿಕ ನಿಯಮಗಳ ಪಾಲನೆ ಮಾಡುತ್ತಿರಲಿಲ್ಲ ಎಂದು ಶಹಾಬುದ್ದೀನ್ ಆಕ್ರೋಶ ಹೊರಹಾಕಿದ್ದಾರೆ.

ಇರಾನ್-ಅಮೆರಿಕ ಯುದ್ಧ: ಭಾರತದ ಮೇಲೆ ಪರಿಣಾಮಗಳು

ಭಾರತದ ಕಚ್ಚಾ ತೈಲ ಮತ್ತು ಎಲ್‌ಎನ್‌ಜಿ ಆಮದಿನ ಬಹುತೇಕ ಪಾಲು ಪರ್ಷಿಯಾ ಮತ್ತು ಒಮನ್ ನಡುವಿನ ಹೊರ್ಮುಜ್ ಜಲಸಂಧಿ ಮೂಲಕ ತಲುಪುತ್ತವೆ. ಇರಾನ್ ಮೇಲೆ ಅಮೆರಿಕ ದಾಳಿ ನಡೆಸುವುದರಿಂದ ಕಚ್ಚಾ ತೈಲ ಆಮದು ವೆಚ್ಚ ಏಕಾಏಕಿ ಭಾರೀ ಏರಿಕೆಯಾಗಲಿದೆ. ಇದರಿಂದ ತೈಲ ಆಮದು ಮಾಡಿಕೊಳ್ಳುವ ಭಾರತೀಯ ಗ್ರಾಹಕರು ಮತ್ತು ವ್ಯವಹಾರಗಳು ಹಣದುಬ್ಬರ ಎದುರಿಸಬೇಕಾದ ಸ್ಥಿತಿ ಬರುವ ಸಾಧ್ಯತೆಯಿದೆ.

- ತೈಲ, ಎಲ್‌ಎನ್‌ಜಿ, ರಾಸಾಯನಿಕ, ರಸಗೊಬ್ಬರ ಬೆಲೆ ಏರಿಕೆ
- ಉಳಿದೆಲ್ಲಾ ಉದ್ಯಮ ಮತ್ತು ಆಹಾರದ ವೆಚ್ಚ ಏರಿಕೆ ಸಾಧ್ಯತೆ
- ಹೂಡಿಕೆದಾರರ ಈಕ್ವಿಟಿ ಮಾರಾಟ ಮಾಡಿ, ಸ್ವರ್ಣದಂತಹ ಸುರಕ್ಷಿತ ಹೂಡಿಕೆ ಮಾಡುವ ಸಾಧ್ಯತೆ
- ಮಧ್ಯಪ್ರಾಚ್ಯದ ಪ್ರಾದೇಶಿಕ ಅಸ್ಥಿರತೆಗೆ ಭಾರತೀಯ ಮಾರುಕಟ್ಟೆ ಕುಸಿಯುವ ಅಪಾಯ

ಜಾಗತಿಕ ಪರಿಣಾಮಗಳು

- ಮಧ್ಯಪ್ರಾಚ್ಯದಲ್ಲಿ ಪ್ರಾದೇಶಿಕ ಅಸ್ಥಿರತೆ
- ತೈಲ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಬೆಲೆ ಏರಿಕೆ
- ಹಲವು ರಾಷ್ಟ್ರಗಳಲ್ಲಿ ಹಣದುಬ್ಬರ ಸಮಸ್ಯೆ
- ಜಾಗತಿಕ ಇಂಧನ ಪೂರೈಕೆ ಸರಪಣಿ ಅಸ್ತವ್ಯಸ್ತವಾಗುವ ಆತಂಕ
- ವಿಶ್ವ ಷೇರು ಮಾರುಕಟ್ಟೆ ಪಾತಾಳಕ್ಕಿಳಿಯುವ ಅಪಾಯ
- ಗಲ್ಫ್ ರಾಷ್ಟ್ರಗಳ ಮೂಲಕ ಸಾಗುವ ನೌಕೆಗಳ ಇನ್ಸೂರೆನ್ಸ್ ವೆಚ್ಚ ಏರಿಕೆಯಾಗುವ ಸಾಧ್ಯತೆ
- ಜಾಗತಿಕ ವ್ಯಾಪಾರ ವೇಗ ಕುಂಠಿತ
- ಮಧ್ಯಪ್ರಾಚ್ಯ, ಅಮೆರಿಕ, ಚೀನಾ, ರಷ್ಯಾ ಭಾಗಿಯಾದರೆ ಜಾಗತಿಕ ಅಸ್ಥಿರತೆ ಇನ್ನಷ್ಟು ಏರಿಕೆ ಸಾಧ್ಯತೆ

ಮೆರವಣಿಗೆ ವೇಳೆ ಗಲಾಟೆ: 8 ಜನರ ಸೆರೆ

ಬಾಗಲಕೋಟೆ: ಛತ್ರಪತಿ ಶಿವಾಜಿ ಮೆರವಣಿಗೆ ಸಂದರ್ಭದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಎಂಟು ಜನರನ್ನು ಬಂಧನ ಮಾಡಲಾಗಿದ್ದು, ಇನ್ನೂ ಕೆಲವರ ಮೇಲೆ ತನಿಖೆ ನಡೆಯುತ್ತಿದೆ. ವಿಡಿಯೋ ಪರಿಶೀಲಿಸಿ ತಪ್ಪು ಮಾಡಿದವರ ಮೇಲೆ ಪಕ್ಕಾ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಹಿಂದೆ ಮುಂದೆ ನೋಡುವುದಿಲ್ಲ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3 ಪ್ರಕರಣಗಳು ದಾಖಲಾಗಿವೆ. ಪ್ರಕರಣದಲ್ಲಿ ಕಿಡಿಗೇಡಿಗಳನ್ನು ಬಂಧಿಸಲಾಗಿದೆ. ಕೆಲವು ಸಾಮಾಜಿಕ ಜಾಲತಾಣಗಳ ಮುಖಾಂತರ ಕೆಲವು ಸಂಘಟನೆಯವರು ಬಾಗಲಕೋಟೆ ಶಹರದಲ್ಲಿ ಫೆ.26 ರಂದು ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ತಿಳಿದು ಬಂದಿರುತ್ತದೆ.

ಮನರೇಗಾ ಸ್ಥಾಪನೆಗೆ ಹೋರಾಟ

ಪುಟ ೧➔ ಇದೇ ಕಾಯ್ದೆಯಲ್ಲದೇ, ಶಿಕ್ಷಣ, ಆಹಾರ, ಮಾಹಿತಿ ಹಕ್ಕು ಸೇರಿದಂತೆ ಹಲವು ಜನಪರ ಕಾಯ್ದೆಗಳನ್ನು ಜಾರಿಗೆ ತಂದಿದ್ದರು. ಆದರೆ ಈ ಎಲ್ಲ ಜನಪರ ಕಾಯ್ದೆಗಳನ್ನು ದುರ್ಬಲಗೊಳಿಸುವ ಕೆಲಸವನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮಾಡುತ್ತಿದೆ ಎಂದರು.

ಮನರೇಗಾದಲ್ಲಿ 12.16 ಕೋಟಿ ಜನರಿಗೆ ಉದ್ಯೋಗ: ಸದನದಲ್ಲಿ ಕೇವಲ 8 ಗಂಟೆಗಳ ಕಾಲ ಚರ್ಚೆ ಮಾಡಿದ ಕೇಂದ್ರ ಸರ್ಕಾರ, ನಂತರ ಹೊಸ ಕಾಯ್ದೆಯನ್ನು ಜಾರಿಗೆ ತಂದಿದೆ. ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಜೀವಿಕ ಮಿಷನ್ ಗ್ರಾಮೀಣ ಕಾಯ್ದೆ, 12.16 ಕೋಟಿ ಜನರು ಕೆಲಸ ಪಡೆಯುತ್ತಿದ್ದರು. ಇದರಲ್ಲಿ ಸುಮಾರು 53% ಉದ್ಯೋಗ ಪಡೆಯುತ್ತಿದ್ದರು. ಅಲ್ಲದೇ ಪರಿಶಿಷ್ಟ ಜಾತಿಯ 17% ಮತ್ತು ಪರಿಶಿಷ್ಟ ವರ್ಗದ 11% ಜನರು ಉದ್ಯೋಗ ಪಡೆಯುತ್ತಿದ್ದರು. ಈ ಎಲ್ಲ ಜನರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ ಎಂದರು.

ನಿರಂತರ ಆಂದೋಲನ

ವಿಬಿ ಜಿ ರಾಮ್ ಜಿ ಯೋಜನೆಯನ್ನು ಸಂಪೂರ್ಣವಾಗಿ ರದ್ದುಪಡಿಸಿ, ಮನರೇಗಾವನ್ನು ಮರು ಜಾರಿಗೊಳಿಸಬೇಕು. ಜನರ ಉದ್ಯೋಗದ ಹಕ್ಕನ್ನು ಮರುಸ್ಥಾಪಿಸಬೇಕು. ಪಂಚಾಯತ್ ಸ್ವಯಂ ಆಡಳಿತದ ಹಕ್ಕು ಮರುಸ್ಥಾಪನೆ, ದಿನಕ್ಕೆ 400 ರೂ.ಗಳ ಕನಿಷ್ಠ ವೇತನವನ್ನು ದೇಶಾದ್ಯಂತ ನೀಡಬೇಕು. ಈ ಬೇಡಿಕೆಗಳು ಈಡೇರುವವರೆಗೆ ನಮ್ಮ ಆಂದೋಲನ ನಿಲ್ಲುವುದಿಲ್ಲ ಎಂದರು. ರೈತವಿರೋಧಿ ಕಾಯ್ದೆಗಳನ್ನು ಹೋರಾಟದ ಫಲವಾಗಿ ರದ್ದುಗೊಳಿಸಲಾಯಿತು. ಅದೇ ರೀತಿಯಲ್ಲಿ ಈ ಹೋರಾಟ ನಿಲ್ಲುವುದಿಲ್ಲ. ಈ ಹೋರಾಟಕ್ಕೆ ರಾಜ್ಯದ ಜನರೆಲ್ಲರೂ ನಮ್ಮ ಜತೆಯಾಗಬೇಕು. ಹಳ್ಳಿಗಾಡಿನ ಜನರಿಗೆ ಅನುಕೂಲ ಕಲ್ಪಿಸುವ ಮನರೇಗಾ ಯೋಜನೆಯ ಮರುಸ್ಥಾಪಿಸುವ ಕಾಂಗ್ರೆಸ್‌ನ ಸಾರ್ಥಕ ಉದ್ದೇಶವನ್ನು ಜನರು ಬೆಂಬಲಿಸಬೇಕು ಎಂದು ಕರೆ ನೀಡಿದರು.

ಮಹಾತ್ಮಾ ಗಾಂಧಿ ಅವರ ಹೆಸರಿನಲ್ಲಿ 20 ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರ ಬಡವರಿಗಾಗಿ ಉದ್ಯೋಗ ಖಾತರಿ ಕಾರ್ಯಕ್ರಮ ನೀಡಿತ್ತು. ಇದು ದೇಶದ ಪಾಲಿಗೆ ಕ್ರಾಂತಿಕಾರಿ ಕಾರ್ಯಕ್ರಮ. ಇಂತಹ ಯೋಜನೆಯನ್ನು ಕೇಂದ್ರ ಸರ್ಕಾರ ಕಸಿಯುತ್ತಿದೆ. ಮನರೇಗಾ ಉಳಿಸಿ, ಹಳ್ಳಿಗಳು, ಕಾರ್ಮಿಕರು, ಪಂಚಾಯಿತಿಗಳು ಹಾಗೂ ಮಹಾತ್ಮಾ ಗಾಂಧಿ ಹೆಸರು ರಕ್ಷಿಸಬೇಕು.
■ ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ತ.ನಾಡು: 74 ಲಕ್ಷ ಮತದಾರರು ಪಟ್ಟಿಯಿಂದ ಹೊರಕ್ಕೆ

ಪುಟ ೧➔ ಎಸ್‌ಐಆರ್ ಅಭಿಯಾನದ ವೇಳೆ 97.37 ಲಕ್ಷ ಮತದಾರರ ಹೆಸರುಗಳನ್ನು ಅಳಿಸಲಾಗಿದ್ದು, ಪರಿಷ್ಕರಣೆ ನಂತರ ಒಟ್ಟು 74,07,207 ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಪ್ರಸ್ತುತ ರಾಜ್ಯದ ಮತದಾರರ ಸಂಖ್ಯೆ 5.67 ಕೋಟಿಯಾಗಿದೆ ಎಂದರು.

18-19 ವರ್ಷದ ವಯೋಮಾನದ 7.40 ಲಕ್ಷ ಯುವ ಮತದಾರರನ್ನು ಪಟ್ಟಿಗೆ ಸೇರಿಸಲಾಗಿದೆ. ನಿರಂತರ ನವೀಕರಣ ಪ್ರಕ್ರಿಯೆ ತಕ್ಷಣದಿಂದಲೇ ಪ್ರಾರಂಭವಾಗುತ್ತದೆ ಎಂದು ತಿಳಿಸಿದರು.

2026ರ ಜ.1 ಅರ್ಹತಾ ದಿನಾಂಕವಾಗಿ ಪರಿಗಣಿಸಿ ಎಸ್‌ಐಆರ್ ಪ್ರಕ್ರಿಯೆ 2025ರ ಅ.27ರಿಂದ ರಾಜ್ಯದಲ್ಲಿ ನಡೆಸಲಾಗಿತ್ತು. ಅಂತಿಮ ಮತದಾರರ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದೆ. 2025ರ ಅ.27ರಂದು ರಾಜ್ಯದಲ್ಲಿ 6,41,14,587 ಮತದಾರರು ನೋಂದಾಯಿತರಾಗಿದ್ದರು. ಗಣನೆ ನಂತರ 2025ರ ಡಿ. 19ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಿದ್ದು, ಆ ವೇಳೆಗೆ ಮತದಾರರ ಸಂಖ್ಯೆ 5,43,76,756 ಆಗಿತ್ತು. ಡಿ.19, 2025ರಿಂದ ಜ.30, 2026ರವರೆಗೆ ದಾವೆಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯಲ್ಲಿ 27.53 ಲಕ್ಷ ಅರ್ಹ ಮತದಾರರ ಹೆಸರುಗಳನ್ನು ಸೇರಿಸಲಾಗಿದ್ದು, 4.23 ಲಕ್ಷ ಅನರ್ಹರ ಹೆಸರುಗಳನ್ನು ತೆಗೆದುಹಾಕಲಾಗಿದೆ ಎಂದು ಅವರು ಹೇಳಿದರು.

ಅಂತಿಮ ಪಟ್ಟಿಯ ಪ್ರಕಾರ ಪುರುಷ ಮತದಾರರು 2,77,38,925; ಮಹಿಳಾ ಮತದಾರರು 2,89,60,838; ತೃತೀಯ ಲಿಂಗ ಮತದಾರರು 7,617. 18-19 ವರ್ಷದ ವಯೋಮಾನದ ಒಟ್ಟು ಮತದಾರರು 12.51 ಲಕ್ಷ, ವಿಶಿಷ್ಟ ಚೇತನರು 4.63 ಲಕ್ಷ ಮತ್ತು 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕ ಮತದಾರರು 3.99 ಲಕ್ಷ ಎಂದು ಪಟ್ನಾಯಕ್ ತಿಳಿಸಿದ್ದಾರೆ.

ಇಂಡಿ ಒಕ್ಕೂಟದಲ್ಲಿ ಮತ್ತೆ ಬಿರುಕು

ಪುಟ ೧➔ ಹಿರಿಯ ಕಾಂಗ್ರೆಸ್ ನಾಯಕಿ, ಮಾಜಿ ಕೇಂದ್ರ ಸಚಿವೆ ಮತ್ತು ಮಾಜಿ ರಾಜ್ಯಪಾಲರಾದ ಮಾರ್ಗರೇಟ್ ಆಳ್ವಾ, ಅಂತಾರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಶಿಸ್ತು ಮತ್ತು ಹೊಣೆಗಾರಿಕೆ ಮುಖ್ಯವೆಂದು ಹೇಳಿದ್ದಾರೆ. ಹೆಸರು ಬಹಿರಂಗಪಡಿಸಲಿಚ್ಛಿಸದ ಮತ್ತೊಬ್ಬ ಕಾಂಗ್ರೆಸ್ ಹಿರಿಯ ನಾಯಕರೊಬ್ಬರು, ಪ್ರತಿಭಟನೆ ಹಕ್ಕಾಗಿದ್ದರೂ, ವೇದಿಕೆ ಆಯ್ಕೆ ಸರಿಯಾಗಿರಲಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಎಸ್‌ಪಿ, ಆರ್‌ಜೆಡಿ ದೂರ: ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷ(ಎಸ್‌ಪಿ) ಮತ್ತು ಲಾಲು ಪ್ರಸಾದ್ ಯಾದವ್ ಅವರ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಕೂಡ ಕಾಂಗ್ರೆಸ್ ಪ್ರತಿಭಟನೆಗೆ ಅಸಮಾಧಾನ ವ್ಯಕ್ತಪಡಿಸಿವೆ. ಅಖಿಲೇಶ್ ಯಾದವ್ ಬಿಜೆಪಿ ವಿರುದ್ಧ ಟೀಕೆ ನಡೆಸಿದರೂ, ವಿದೇಶಿ ಪ್ರತಿನಿಧಿಗಳನ್ನು ಅವಮಾನಿಸುವ ರೀತಿಯ ಪ್ರತಿಭಟನೆಗೆ ಬೆಂಬಲವಿಲ್ಲ ಎಂದಿದ್ದಾರೆ. ಆರ್‌ಜೆಡಿ ನಾಯಕ ಮನೋಜ್ ಜಾ ಕೂಡ ದೇಶದಲ್ಲಿ ಅಸಮಾಧಾನವಿದ್ದರೂ, ಪ್ರತಿಭಟನೆಗೆ ಇಂತಹ ವೇದಿಕೆ ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇಶದ ಗೌರವಕ್ಕೆ ಧಕ್ಕೆ : ಶಿವಸೇನೆ (ಯುಬಿಟಿ) ಪಕ್ಷದ ನಾಯಕರಾದ ಅರವಿಂದ್ ಸಾವಂತ್ ಮತ್ತು ಆದಿತ್ಯ ಠಾಕ್ರೆ ಮಾತನಾಡಿ, ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಇಂತಹ ಪ್ರತಿಭಟನೆ ತಪ್ಪಿಸಬೇಕಿತ್ತು ಎಂದಿದ್ದಾರೆ. ಪಶ್ಚಿಮ ಬಂಗಾಳದ ಐಟಿ ಸಚಿವ, ಟಿಎಂಸಿ ನಾಯಕ ಬಾಬುಲ್ ಸುಪ್ರಿಯೋ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯೆ ನೀಡಿ, ಜಾಗತಿಕ ನಾಯಕರು ಮತ್ತು ಉದ್ಯಮಿಗಳ ಸಮ್ಮುಖದಲ್ಲಿ ನಡೆದ ಘಟನೆಯಿಂದ ದೇಶದ ಗೌರವಕ್ಕೆ ಧಕ್ಕೆಯಾಗಿದೆ ಎಂದಿದ್ದಾರೆ. ಚೆನ್ನೈನಲ್ಲಿ ಇಂಡಿ ಮೈತ್ರಿಯ ಮತ್ತೊಂದು ಒಳಬಿರುಕು ಸ್ಪಷ್ಟವಾಗಿದೆ. ಬಿಜೆಪಿ ವಿರುದ್ಧದ ಹೋರಾಟವನ್ನು ಎಂ.ಕೆ. ಸ್ಟಾಲಿನ್ ಮುನ್ನಡೆಸಬೇಕು ಎಂದು ತಮಿಳುನಾಡಿನ ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಹೇಳಿದ್ದಾರೆ. ಇತರ ರಾಜ್ಯಗಳ ನಾಯಕರು ಎಂ.ಕೆ. ಸ್ಟಾಲಿನ್ ಅವರನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ನಾಯಕನಾಗಿ ನೋಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಸಚಿವ ಸ್ಥಾನಕ್ಕೆ ಬೇಡಿಕೆ

ಪುಟ ೧➔ ಯುವಕರು ಮತ್ತು ಅನುಭವಿಗಳ ಸಮತೋಲನದ ಸಂಪುಟವು ದೂರದೃಷ್ಟಿಯ ನಾಯಕತ್ವದೊಂದಿಗೆ ಉತ್ತಮ ಆಡಳಿತ ಸಿಗಲಿದೆ ಎಂದು ನಾವು ಖಚಿತವಾಗಿ ಹೇಳುತ್ತೇವೆ. ಆದ್ದರಿಂದ, ಸಂಪುಟ ಪುನರ್‌ರಚನೆ ಸಮಯದಲ್ಲಿ ಕನಿಷ್ಠ ಐವರು ಹೊಸ ಶಾಸಕರನ್ನು ಕರ್ನಾಟಕದಲ್ಲಿ ಸಚಿವರನ್ನಾಗಿ ನೇಮಿಸಿಕೊಳ್ಳುವಂತೆ ನಾವು ನಿಮ್ಮನ್ನು ವಿನಂತಿಸುತ್ತೇವೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಅಭಿಪ್ರಾಯ

ಹಿಂದೂಗಳಲ್ಲಿ ಒಗ್ಗಟ್ಟು ಅವಶ್ಯ

ಹುಬ್ಬಳ್ಳಿ: ಹಿಂದು ಸಮಾಜ ಒಗ್ಗಟ್ಟಾದರೆ ಮಾತ್ರ ದೇಶ ಇಬ್ಭಾಗ ಹಾಗೂ ಮತಾಂತರ ಮಾಡುವ ಶಕ್ತಿಗಳ ತಡೆಯಲು ಸಾಧ್ಯವಾಗಲಿದೆ ಎಂದು ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಅಭಿಪ್ರಾಯಪಟ್ಟರು.

ನವನಗರ, ಗಾಮನಗಟ್ಟಿ, ಅಮರಗೋಳ, ಸುತಗಟ್ಟಿ, ರಾಯಾಪೂರ ಹಿಂದೂ ಸಮ್ಮೇಳನ ಸಮಿತಿಯಿಂದ ಇಲ್ಲಿಯ ನವನಗರದ ಹಳೇ ಕೆಎಚ್‌ಬಿ ಕಾಲನಿ ಹತ್ತಿರದ ಬಜರಂಗಿ ಮೈದಾನದಲ್ಲಿ ಭಾನುವಾರ ಏರ್ಪಡಿಸಿದ್ದ ಬೃಹತ್ ಹಿಂದೂ ಸಮಾವೇಶದಲ್ಲಿ ಮುಖ್ಯ ವಕ್ತಾರರಾಗಿ ಅವರು ಮಾತನಾಡಿದರು.



ಭಾರತವನ್ನು ಮುಸ್ಲಿಮರು, ಬ್ರಿಟಿಷರು ಸೇರಿದಂತೆ ಬಹಳಷ್ಟು ಜನರು ಆಳ್ವಿಕೆ ಮಾಡಿದರು. ಆದರೆ, ಭಾರತವನ್ನು ಗೆಲ್ಲಲು ಸಾಧ್ಯವಿರಲಿಲ್ಲ, ಆದರೆ ನಮ್ಮ ನಮ್ಮ ಮಧ್ಯೆ ಇರುವ ಕುತಂತ್ರಿಗಳ ಸಹಾಯ ಪಡೆದು ಸುದೀರ್ಘ ಆಳ್ವಿಕೆ ಮಾಡಿದರು. ಹಾಗಾಗಿ ನಾವೆಲ್ಲ ಹಿಂದೂಗಳು ಒಂದಾಗಿದ್ದರೆ, ಯಾವ ಶಕ್ತಿಗಳೂ ನಮ್ಮನ್ನು ಸದೆ ಬಡೆಯಲು ಸಾಧ್ಯವಿಲ್ಲ ಎಂದರು.

ಗದಗ ಶಿವಾನಂದ ಬೃಹನ್ಮಠದ ಸದಾಶಿವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಜೀವನ ಸಂಸ್ಕೃತಿ ಕಲಿಸಿದವರು ನಮ್ಮ ಹಿರಿಯರು. ನಾವು ಇವುಗಳನ್ನು ಈಗ ಮರೆಯುತ್ತಿದ್ದೇವೆ. ಊಟ ಮಾಡುವುದು, ನೀರು ಕುಡಿಯುವುದರ ಬಗ್ಗೆ ಅರಿವು, ಆಚಾರಗಳು ಮರೆಯಾಗುತ್ತಿವೆ. ವಿಶ್ವದ ವಿವಿಧ ದೇಶಗಳಲ್ಲಿ ಮತಗಳು, ಪಂಥಗಳು, ಸಂಪ್ರಾದಯಗಳು ಜನಿಸಿವೆ. ಧರ್ಮ ಭಾರತದಲ್ಲಿ ಜನಿಸಿದೆ. ನಮ್ಮದು ಧರ್ಮ ಭೂಮಿ. ಇದಕ್ಕೆ ಸಂಸ್ಥಾಪಕರು ಇಲ್ಲ. ಹಿಂದೂ ಧರ್ಮದಲ್ಲಿ ಶ್ರೇಷ್ಠ ಜೀವನ ವಿಧಾನ ರೂಪಿಸಿ ಕೊಟ್ಟಿದ್ದಾರೆ. ಹಿಂದೂ ಧರ್ಮ ಅಮೂಲ್ಯವಾದದು ಎಂದು ಬಣ್ಣಿಸಿದರು.

ನಿವೃತ್ತ ಪ್ರಾಧ್ಯಾಪಕ ಡಾ.ಸಿ.ಎಂ. ಮಠ ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕ ಸ್ವಾಮಿ ಮಹಾಜನಶೆಟ್ಟರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಧಾನಸಭೆ ಪ್ರತಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ, ಪ್ರಮುಖರಾದ ಸುಭಾಷಸಿಂಗ್ ಜಮಾದಾರ, ಜಯತೀರ್ಥ ಕಟ್ಟಿ, ನರೇಂದ್ರ ಕುಲಕರ್ಣಿ, ಬಸವರಾಜ ಕುಂದಗೋಳಮಠ ಸೇರಿದಂತೆ ಬಹಳಷ್ಟು ಜನರು ಭಾಗವಹಿಸಿದ್ದರು.

ಹಿಂದೂ ಜಾಗರಣ ವೇದಿಕೆ ಉತ್ತರ ಪ್ರಾಂತ ಸಹ ಸಂಯೋಜಕ ಶ್ರೀಕಾಂತ ಆಗ್ರಹ

ಕಲ್ಲು ತೂರಾಟ ನಡೆದ ಮಸೀದಿ ಬಂದ್ ಮಾಡಿ

ಬಾಗಲಕೋಟೆ: ಪದೇ ಪದೆ ಪಂಕಾ ಮಸೀದಿಯಿಂದಲೇ ಹಿಂದೂ ಧರ್ಮದ ಮೆರವಣಿಗೆ, ಕಾರ್ಯಕ್ರಮಗಳು ನಡೆಯುವ ಸಂದರ್ಭದಲ್ಲಿ ಗಲಾಟೆಗಳು ಸಂಭವಿಸುತ್ತಿದ್ದು, ಜಿಲ್ಲಾಡಳಿತ ಪಂಕಾ ಮಸೀದಿಯನ್ನು ಕೂಡಲೇ ಬಂದ್ ಮಾಡಿ, ಶಿವಾಜಿ ಮೆರವಣಿಗೆಯಲ್ಲಿ ಕಲ್ಲು ತೂರಾಟ ನಡೆಸಿದ ಅಕ್ರಮ ಕೂಟವನ್ನು ರಚಿಸಿದವರನ್ನು ಬಂಧನ ಮಾಡಬೇಕು ಎಂದು ಹಿಂದೂ ಜಾಗರಣ ವೇದಿಕೆ ಉತ್ತರ ಪ್ರಾಂತ ಸಹ ಸಂಯೋಜಕ ಶ್ರೀಕಾಂತ ಹೊಸಕೇರಾ ಆಗ್ರಹಿಸಿದರು.



ನವನಗರದ ಪತ್ರಿಕಾಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶಕ್ಕಾಗಿ, ಧರ್ಮಕ್ಕಾಗಿ ಹೋರಾಟ ಮಾಡಿದ ಮಹಾಪುರುಷರ ಮೆರವಣಿಗೆ ಮೇಲೆ ಮತಾಂಧ ಶಕ್ತಿಗಳು ಶಿವಾಜಿಗೆ ಅಪಮಾನ ಮಾಡಲು ಕಲ್ಲು, ಚಪ್ಪಲಿ ತೂರಿದ್ದು, ಇದನ್ನು ಪೊಲೀಸ್ ಇಲಾಖೆ ಗಂಭಿರವಾಗಿ ತೆಗೆದುಕೊಂಡು ತಪ್ಪಿತಸ್ಥರನ್ನು ಬಂಧಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಘಟನೆ ನಡೆದ ದಿನ ಮಸೀದಿಯಲ್ಲಿದ್ದ ಜನರ ಮೇಲೆ ಕೇಸ್ ದಾಖಲಾಗಬೇಕು. ಬಾಗಲಕೋಟೆಯಲ್ಲಿ ಅಶಾಂತಿಗೆ ಕಾರಣರಾದ 200 ಜನರನ್ನು ಬಂಧಿಸಬೇಕು. ಮಸೀದಿ ಕಮೀಟಿಯವರನ್ನು ಸಹ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ಇಲಾಖೆಯನ್ನು ಒತ್ತಾಯಿಸಿದರು.

ಸ್ವತ: ಎಸ್ಪಿಯವರಿಗೆ ಕಲ್ಲು ಬಿದ್ದಿದೆ. ಟೇಬಲ್ ಕೆಳಗಡೆ ಕಲ್ಲು ಇರುವುದನ್ನು ತೆಗೆದುಕೊಂಡು ಎಸೆದಿದ್ದಾರೆ ಎಂದು ಎಸ್ಪಿಯವರು ಹೇಳಿಕೆ ನೋಡಿದರೆ ಘಟನೆ ಮರೆಮಾಚಲು ಅಕಾರಿಗಳ ಹೇಳಿಕೆ ತರವಲ್ಲ. ಎಸ್ಪಿಯವರು ಹಾಗೂ ಸಿಬ್ಬಂದಿ ಭದ್ರತೆ ಇದ್ದರೂ ಕಲ್ಲು ಬೀಳುತ್ತವೆ ಎಂದರೆ ಪೊಲೀಸರ ನಿರ್ಲಕ್ಷ್ಯ ಕಾರಣವಾಗಿದೆ. ಎಸ್ಪಿಯವರ ಮೇಲೆ ಸರ್ಕಾರ ಶಿಸ್ತು ಕ್ರಮ ಜರುಗಿಸಬೇಕು. ಮತಾಂಧರ ಪೂರ್ವನಿಯೋಜಿತ ಕೃತ್ಯವನ್ನು ತಡೆಯಲು ಪೊಲೀಸ್ ಇಲಾಖೆ ವೈಫಲ್ಯವಾಗಿದೆ ಎಂದು ಆರೋಪಿಸಿದರು.

ಅಕಾರಿಗಳು, ರಾಜಕಾರಣಿಗಳ ಕುಮ್ಮಕ್ಕಿನಿಂದ ನವನಗರದಲ್ಲಿ ಅಕ್ರಮ ಮಸೀದಿ ನಿರ್ಮಾಣ ನವನಗರದಲ್ಲಿ ಆಗುತ್ತಿದೆ ಎಂದು ದೂರಿದರು.

ಹಿಂದೂ ಜಾಗರಣ ವೇದಿಕೆಯ ಮುಖಂಡ ಕಿರಣ್ ಪವಾಡಶೆಟ್ಟರ ಮಾತನಾಡಿದರು. ಹಿಂದೂ ಜಾಗರಣ ವೇದಿಕೆಯ ಕುಮಾರಸ್ವಾಮಿ ಹಿರೇಮಠ, ವೆಂಕಣ್ಣ ಕಳ್ಳಿಗುದ್ದಿ, ಶರಣ ವಜ್ಜಲ, ಮಲ್ಲು ಕೋಟಿ ಪತ್ರಿಕಾಗೋಷ್ಠಿಯಲ್ಲಿದ್ದರು.

ಬಿಜೆಪಿ ಟೀಕಿಸಲು ಜಿಲ್ಲೆಗೆ ಬಂದ ಸಿಎಂ: ಸದಾನಂದ ಭಟ್

ಶಿರಸಿ: ಉ.ಕ. ಜಿಲ್ಲೆಯ ಜ್ವಲಂತ ಸಮಸ್ಯೆಗಳ ಕುರಿತು ಯಾವುದೇ ಮಾತನಾಡದ ಮುಖ್ಯಮಂತ್ರಿಗಳ ಪ್ರವಾಸದ ಫಲ ಶ್ರುತಿ ಏನು ಎಂದು ಬಿಜೆಪಿ ಜಿಲ್ಲಾ ವಕ್ತಾರ ಸದಾನಂದ ಭಟ್ ನಿಡುಗೋಡ್ ಪ್ರಶ್ನೆ ಮಾಡಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು 22ರಂದು ಜಿಲ್ಲೆಗೆ ಭೇಟಿ ನೀಡಿದಾಗ ಜಿಲ್ಲೆಯ ಜನತೆಯ ಜ್ವಲಂತ ಸಮಸ್ಯೆಗಳ ಕುರಿತು ಕಿಂಚಿತ್ತು ಗಮನಹರಿಸದೆ ಈ ಕುರಿತು ತಮ್ಮ ಮಾತುಗಳಲ್ಲಿ ಯಾವುದೇ ಉಲ್ಲೇಖ ಮಾಡದೆ ಇರುವುದು ವಿಷಾದನೀಯ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹು ಚರ್ಚಿತವಾಗಿ ಜನರ ತೀವ್ರ ವಿರೋಧಕ್ಕೆ ಕಾರಣವಾದ ನದಿ ತಿರುವು ಯೋಜನೆಗಳು, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ, ಬಂದರುಗಳ ಕಾಮಗಾರಿ, ಅರಣ್ಯ ಅತಿಕ್ರಮಣ ಸಮಸ್ಯೆ ಮತ್ತು ಎಲೆ ಚುಕ್ಕೆ ರೋಗದಿಂದ ಸಂಕಷ್ಟದಲ್ಲಿರುವ ರೈತರ ವಿಚಾರಗಳಿಗೆ ಯಾವುದೇ ರೀತಿಯಲ್ಲಿ ಗಮನಹರಿಸಿದಂತೆ ಕಂಡುಬಂದಿಲ್ಲ. ಈ ವಿಷಯಗಳ ಕುರಿತು ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿಗಳು ಯಾವುದೇ ಪ್ರಸ್ತಾಪ ಮಾಡದಿರುವುದನ್ನು ನೋಡಿದರೆ ಮುಖ್ಯಮಂತ್ರಿಗಳ ಪ್ರವಾಸ ಕೇವಲ ರಾಜಕೀಯ ಉದ್ದೇಶಕ್ಕಾಗಿ ಬಿಜೆಪಿಯನ್ನು ಟೀಕಿಸುವ ಉದ್ದೇಶಕ್ಕಾಗಿ ಎಂದು ಭಾಸವಾಗುತ್ತಿದೆ. ಜಿಲ್ಲೆಯ ಉಸ್ತುವಾರಿ ಸಚಿವರು ಮತ್ತು ಕಾಂಗ್ರೆಸ್ ಶಾಸಕರುಗಳು ಜಿಲ್ಲೆಯ ಜ್ವಲಂತ ಸಮಸ್ಯೆಗಳ ಕುರಿತು ಮುಖ್ಯಮಂತ್ರಿಗಳಿಗೆ ತಿಳಿಸಿ ಈ ಕುರಿತು ಯಾವ ಮನವಿ ನೀಡಿದ್ದಾರೆ ಎನ್ನುವುದನ್ನು ತಿಳಿಸಲಿ ಎಂದಿದ್ದಾರೆ.

ಹಿಂದಿನ ಬಿಜೆಪಿ ಕಾಂಗ್ರೆಸ್ ಸರಕಾರಗಳ ಕಾಲದಿಂದ ಆರಂಭಗೊಂಡು ನಡೆದ ಕಾಮಗಾರಿಗಳ ಉದ್ಘಾಟನೆ ಮಾಡಿ ಅಭಿವೃದ್ಧಿ ಎಲ್ಲವನ್ನೂ ಕೇವಲ ಕಾಂಗ್ರೆಸ್ ಮಾತ್ರ ಮಾಡಿದೆ ಎನ್ನುವ ರೀತಿಯಲ್ಲಿ ಮುಖ್ಯಮಂತ್ರಿಗಳು ಉಪಮುಖ್ಯಮಂತ್ರಿಗಳು ಮಾತನಾಡಿದ್ದು ಕೇವಲ ರಾಜಕೀಯ ಉದ್ದೇಶಗಳಿಗೆ ಎನ್ನುವುದು ಸ್ಪಷ್ಟವಾಗಿದೆ. ಬರುವ ಬಜೆಟ್ ನಲ್ಲಿ ಜಿಲ್ಲೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸುತ್ತೇವೆ ಎಂದಿರುವುದು ಸ್ವಾಗತಾರ್ಹವಾದರೂ, ಕಾರವಾರದ ಕ್ರಿಮ್ಸ್ ಆಸ್ಪತ್ರೆ ಮತ್ತು ಶಿರಸಿಯ ಪಂಡಿತ್ ಜನರಲ್ ಆಸ್ಪತ್ರೆಗಳಿಗೆ ಅಗತ್ಯವಾದ ವೈದ್ಯಕೀಯ ಉಪಕರಣಗಳು ಮತ್ತು ನುರಿತ ವೈದ್ಯರುಗಳ ನಿಯೋಜನೆಯನ್ನು ಮಾಡದೆ ಕೇವಲ ಬಜೆಟ್ ನಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸುತ್ತೇವೆ ಎಂದು ಘೋಷಿಸುವುದು ಜಿಲ್ಲೆಯ ಜನರ ಮೂಗಿಗೆ ತುಪ್ಪ ಸವರುವ ಕೆಲಸ ಆಗಬಾರದು. ಜಿಲ್ಲೆಯ ಎಲ್ಲಾ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಕಾಲಮಿತಿಯಲ್ಲಿ ವೈದ್ಯಕೀಯ ಸೇವೆ ದೊರಕುವಂತಹ ಕ್ರಮ ಕೈಗೊಳ್ಳಬೇಕು.

ಇನ್ನು ಮುಂದಾದರೂ ಜಿಲ್ಲೆಯ ಕಾಂಗ್ರೆಸ್ ಶಾಸಕ ಸಚಿವರು ರಾಜ್ಯ ಸರಕಾರಕ್ಕೆ ಜಿಲ್ಲೆಯ ಜನವಿರೋಧಿ ಯೋಜನೆಗಳ ಕುರಿತು ತಿಳಿಸಿ, ಯೋಜನೆಗಳ ಡಿಪಿಆರನ್ನು ಕೈಬಿಡಲು ಆಗ್ರಹಿಸಲಿ. ರಾಜ್ಯ ಬಜೆಟ್ಟಿನಲ್ಲಿ ಜಿಲ್ಲೆಗೆ ನ್ಯಾಯ ದೊರಕುವಂತೆ ಮಾಡಿಕೊಡಲಿ ಎಂದು ಹೇಳಿದ್ದಾರೆ.

ಫೆ.28ರಂದು ಬಸವ ಶರಣರ ಹಿಂದೂ ಸಮಾವೇಶ :ಸವದಿ



ಬಾಗಲಕೋಟೆ: ಜಿಲ್ಲೆಯ ಬನಹಟ್ಟಿಯಲ್ಲಿ ಫೆ.28ರಂದು ಬಸವ ಶರಣರ ಹಿಂದೂ ಸಮಾವೇಶವನ್ನು ಆಯೋಜಿಸಲಾಗಿದ್ದು ಸಮಾವೇಶಕ್ಕೆ ಜಿಲ್ಲೆಯ ಜನಪ್ರತಿನಿಗಳು, ಮಠಾಕಾರಿಗಳು, ಸನಾತನ ಹಿಂದೂ ಧರ್ಮದ ಪ್ರೇಮಿಗಳು,ಸಾರ್ವಜನಿಕರು ಭಾಗವಹಿಸಲಿದ್ದಾರೆ ಎಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಸಮಾವೇಶದಲ್ಲಿ ಕನ್ನೇರಿ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳ ಜಿಲ್ಲಾ ಪ್ರವೇಶ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಗುವುದು. ಪೂಜ್ಯರಿಗೆ ಎಲ್ಲಿ ನಿರ್ಬಂಧ ಹೇರಿ ಅಪಮಾನ ಮಾಡಲಾಗಿತ್ತು ಅಲ್ಲಿಯೇ ಸಮಾರಂಭವನ್ನು ಮಾಡಿ ಅವರಿಗೆ ಗೌರವ ನೀಡುವ ಕೆಲಸ ಮಾಡುತ್ತೇವೆ ಎಂದು ಹೇಳಿದರು. ಬನಹಟ್ಟಿಯ ಎಸ್‌ಆರ್‌ಎ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿಜಯಪುರ ಶಾಸಕ, ಬಾಗಲಕೋಟೆ ಸಂಸದರು, ಜಿಲ್ಲೆಯ ಮಾಜಿ ಶಾಸಕರು , ಸನಾತನ ಧರ್ಮದ ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಶಿರೋಳದ ಶಂಕರಾರೂಢ ಶ್ರೀಗಳು ಮಾತನಾಡಿ, ಫೆ.28ರಂದು ನಡೆಯುವ ಬಸವ ಶರಣರ ಹಿಂದೂ ಸಮಾವೇಶಕ್ಕೆ 300 ಜನ ಶ್ರೀಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಹೇಳಿದರು. ಲಕ್ಷ್ಮಣ ಮೂರ್ತಿ, ಚನ್ನಯ್ಯ ಸ್ವಾಮೀಜಿ, ಶಿವಪುತ್ರ ಸ್ವಾಮೀಜಿ ಪತ್ರಿಕಾಗೋಷ್ಠಿಯಲ್ಲಿದ್ದರು.

ಕಲ್ಲು ತೂರಾಟ ಪೂರ್ವನಿಯೋಜಿತ ಕೃತ್ಯ: ಯತ್ನಾಳ

ಬಾಗಲಕೋಟೆ: ಸನಾತನ ಹಿಂದೂ ಧರ್ಮದವರ ಮೆರವಣಿಗೆ ಸಾಗುವ ಮಾರ್ಗದಲ್ಲಿ ಇರುವ ಮಸೀದಿಗಳನ್ನು ಸೀಜ್ ಮಾಡಬೇಕು. ಛತ್ರಪತಿ ಶಿವಾಜಿ ಮೆರವಣಿಗೆ ಹೋಗುವ ದಾರಿಯಲ್ಲಿರುವ ಪಂಕಾ ಮಸೀದಿಯಿಂದ ಕಲ್ಲು, ಚಪ್ಪಲಿ ತೂರಿ ಬರುತ್ತಿವೆ ಎಂದು ಇದೊಂದು ಪೂರ್ವನಿಯೋಜಿತ ಕೃತ್ಯವಾಗಿದೆ. ಎಸ್ಪಿಯವರಿಗೂ ಕಲ್ಲು ಬಿದ್ದಿದೆ. ಹಿಂದೂ ಕಾರ್ಯಕರ್ತರು ಕೂಡ ಗಾಯಗೊಂಡಿದ್ದಾರೆ. ಮೆರವಣಿಗೆ ಬರುವ ವೇಳೆ ಅಷ್ಟೊಂದು ಜನ ಅಲ್ಲಿ ಏಕೆ ಸೇರಿದ್ದರು ಎಂಬುದರ ಕುರಿತು ಪೊಲೀಸ್ ಇಲಾಖೆ ಕ್ರಮ ವಹಿಸಲು ಗುಪ್ತಚರ ಇಲಾಖೆ ವೈಫಲ್ಯವಾಗಿದೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು. ಕಲ್ಲು ತೂರಾಟದಲ್ಲಿ ಗಾಯಗೊಂಡಿದ್ದ ಕಾರ್ಯಕರ್ತರನ್ನು ಭೇಟಿಮಾಡಿದ



ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಪಂಕಾ ಮಸಿದಿಯಲ್ಲಿ ಇರುವ ಮೌಲ್ವಿಗಳು, ಸಮಿತಿಯ ಮುಖ್ಯಸ್ಥರು, ಘಟನೆಯ ಸಂದರ್ಭದಲ್ಲಿ ಸೇರಿದ್ದ ಎಲ್ಲರನ್ನು ಬಂಧನ ಮಾಡಿ ಗುಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು ಎಂದರು. ಜಿಲ್ಲಾ ಉಸ್ತುವಾರಿ ಸಚಿವರೂ ಕೂಡ ಒಂದು ಸಮುದಾಯದವರನ್ನು ಓಲೈಕೆ ಮಾಡುವುದನ್ನು ಬಿಡಬೇಕು. ಬಾಗಲಕೋಟೆಯಲ್ಲಿ ಬಸವೇಶ್ವರ, ಛತ್ರಪತಿ ಶಿವಾಜಿ ಮಹರಾಜರ ಮೂರ್ತಿಯನ್ನು ಪ್ರತಿಷ್ಠಾಪಿಸುವುದಾಗಿ ಭರವಸೆ ನೀಡಿದ್ದರು ಆದರೆ ಈಗ ಮತ್ತೊಮ್ಮೆ ಶಿವಾಜಿ ಜಯಂತಿಯನ್ನು ಮಾಡುವ ಸಂದರ್ಭದಲ್ಲಿ ಮೂರ್ತಿಗಳು ಪ್ರತಿಷ್ಠಾಪನೆ ಯಾಗಬೇಕು. ಇಲ್ಲವಾದರೆ ಮೂರ್ತಿ ಪ್ರತಿಷ್ಠಾಪನೆ ಚಲೋ ಕಾರ್ಯಕ್ರಮ ಮಾಡಿ ಭವ್ಯ ಮೆರವಣಿಗೆ ಮೂಲಕ ನಿಗದಿತ ಸ್ಥಳದಲ್ಲಿ ಪ್ರತಿಷ್ಠಾಪಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕೇರಳದ ವಿಧಾನ ಸಭೆ ಚುನಾವಣೆ

ಸಭೆಯಲ್ಲಿ ಶಾಸಕ ಟೆಂಗಿನಕಾಯಿ ಭಾಗಿ



ಹುಬ್ಬಳ್ಳಿ: ಕೇರಳ ವಿಧಾನ ಸಭೆ ಚುನಾವಣೆ ಹಿನ್ನೆಲೆ ಪಾಲ್ಕಲ್ ವಿಧಾನ ಸಭೆ ಕ್ಷೇತ್ರದ ಉಸ್ತುವಾರಿಯಾಗಿ ಶಾಸಕ ಮಹೇಶ ಟೆಂಗಿನಕಾಯಿ ಅವರನ್ನು ನೇಮಕ ಮಾಡಲಾಗಿದೆ. ಕೇರಳ ಪ್ರವಾಸದಲ್ಲಿರುವ ಶಾಸಕರು ಈಗಾಗಲೇ ಕೋರ್ ಕಮಿಟಿ ಹಾಗೂ ಸ್ಥಳೀಯ ಮಹಾನಗರ ಪಾಲಿಕೆ ಸದಸ್ಯರ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಎರಡು ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಬಿಜೆಪಿ ಜಯಗಳಿಸಿ ಆಡಳಿತ ನಡೆಸುತ್ತಿದೆ. ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಪಾಲ್ಕಡ್ ವಿಧಾನ ಸಭಾ ಕ್ಷೇತ್ರದಲ್ಲಿ ಕಡಿಮೆ ಅಂತರದಿಂದ ಸೋತಿದ್ದೇವೆ. ಈ ಬಾರಿ ಕ್ಷೇತ್ರದಲ್ಲಿ ಜಯಗಳಿಸಲು ಶ್ರಮವಹಿಸಬೇಕು ಎಂದು ತಿಳಿಸಿದರು. ಪ್ರಧಾನಿ ಮೋದಿ ಅವರು ಜಾರಿಗೆ ತಂದಿರುವ ಜನಪರ ಯೋಜನೆಗಳನ್ನು ಕ್ಷೇತ್ರದ ಮನೆ ಮನೆಗೆ ತೆರಳಿ ಮತದಾರರಿಗೆ ತಿಳಿಸುವ ಕೆಲಸ ಆಗಬೇಕಿದೆ. ಪಕ್ಷದ ಪದಾಧಿಕಾರಿಗಳು ಹಾಗೂ ಪಾಲಿಕೆ ಸದಸ್ಯರು ಎರಡು ತಿಂಗಳು ಚುನಾವಣೆ ಕಾರ್ಯದಲ್ಲಿ ನಿರಂತರಾಗಬೇಕು ಎಂದರು.

ಪಾಲ್ಕಡ ಜಿಲ್ಲೆಯ ಅಧ್ಯಕ್ಷ ಪ್ರಶಾಂತ್ ಶಿವನ್, ಪ್ರಧಾನ ಕಾರ್ಯದರ್ಶಿ ಆರ್.ಮಿಲನ್ ಮಂಡಲದ ಅಧ್ಯಕ್ಷ ಶಶಿಮಾಲ್ ಎಂ., ವಿಜಿಶ್ ಕೆ.,ರಮೇಶ್ ಕೆ., ಪ್ರಧಾನ ಕಾರ್ಯದರ್ಶಿ ವಿನಿಲ್ ಎಂ., ಹಾಗೂ ಪಕ್ಷದ ಮುಖಂಡರು ಕಾರ್ಯಕರ್ತರು ಮೊದಲಾದವರು ಉಪಸ್ಥಿತರಿದ್ದರು.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	6425	8000
ಅಡಿಕೆ	51937	51937
ಕಡಲೆಬೇಳೆ	6500	9900
ಕಡಲೆಕಾಳು	2001	5729
ಉದ್ದಿನಬೇಳೆ	8350	8500
ಉದ್ದಿನಕಾಳು	2659	7151
ಧನಿಯಾ	8375	8375
ಒಣ ಮೆಣಸಿನಕಾಯಿ	1000	44119
ಹೆಸರುಬೇಳೆ	8600	9100
ಬಟಾಣಿ	5121	9201
ಹೆಸರುಕಾಳು	1289	6211
ನೆಲಗಡಲೆ (ಶೇಂಗಾ)	5370	7890
ಹುರುಳಿ ಕಾಳು	3516	3516
ಬೆಲ್ಲ	3900	4632
ಜೋಳ	1826	4332
ಅರಳೆ	10000	10000
ಮೆಕ್ಕೆಜೋಳ	1466	1815
ಮಡಿಕೆ (ಮಟಕಿ)	3025	13121
ಸಾಸುವೆ	5556	6031
ಈರುಳ್ಳಿ	600	2100
ಆಲೂಗಡ್ಡೆ	1300	1700
ಅಕ್ಕಿ	3830	6135
ಕುಸುಬೆ	4889	4889
ಸೋಯಾಬಿನ್	555	5259
ತೊಗರಿ	2809	5631
ತೊಗರಿ ಬೇಳೆ	6200	10201
ಗೋಧಿ	2366	3625

ರೈತನಿಗೆ ಪರಿಹಾರ ನೀಡಲು ವಿಳಂಬ

ರೈಲ್ವೆ ಇಲಾಖೆಯ ಕಚೇರಿ ಪೀಠೋಪಕರಣ ಜಪ್ತಿ

ಹುಬ್ಬಳ್ಳಿ: ಗಂಗಾವತಿ ತಾಲೂಕಿನ ಕಲಗುಡಿ ಗ್ರಾಮದ ರೈತರ 12.5 ಎಕರೆ ಜಾಗ ಸ್ವಾಧೀನ ಪಡಿಸಿಕೊಂಡು ಭೂಮಿಗೆ ಪರಿಹಾರ ನೀಡಲು ವಿಳಂಬ ಮಾಡಿರುವ ಕಾರಣಕ್ಕೆ ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗೀಯ ವ್ಯವಸ್ಥಾಪಕ ಕಚೇರಿ ವ್ಯಾಪ್ತಿಯ ನಿರ್ಮಾಣ ವಿಭಾಗದ ಕಚೇರಿ ಪೀಠೋಪಕರಣಗಳನ್ನು ಕೋರ್ಟ್ ಆದೇಶದಂತೆ ಸೋಮವಾರ ರೈತರು ವಶಕ್ಕೆ ಪಡೆದರು.

2017 ರಲ್ಲಿ ರೈಲ್ವೆ ಯೂ ನಿಲ್ದಾಣ ನಿರ್ಮಿಸಲು ಸ್ವಧೀನ ಪಡಿಸಿಕೊಂಡಿತ್ತು. ಕೃಷಿ ಭೂಮಿಯೆಂದು ಎಕರೆಗೆ18 ಲಕ್ಷ ಪರಿಹಾರ ನಿಗದಿಪಡಿಸಿತ್ತು. ಅದು ಕೃಷಿಭೂಮಿಯಲ್ಲ. ಕೃಷಿಯೇತರ ಭೂಮಿಯ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ರೈತರು ಕೊಪ್ಪಳದ ಜಿಲ್ಲಾ ನ್ಯಾಯಾಲಯದ ಮೊರೆ ಹೋಗಿದ್ದರು. ಅರ್ಜಿ ಪರಿಗಣಿಸಿದ ನ್ಯಾಯಾಲಯ ಚ.ಅಡಿ ಗೆ 800 ಪರಿಹಾರ ನೀಡುವಂತೆ ತೀರ್ಪು ನೀಡಿತ್ತು. ಜೊತೆಗೆ, ಪರಿಹಾರ ಮೊತ್ತದ ಶೇ 50ರಷ್ಟನ್ನು ಠೇವಣಿ ಇಡುವಂತೆಯೂ ನಿರ್ದೇಶಿಸಿತ್ತು.

ಈ ಕುರಿತು ವಕೀಲ ಎಸ್.ಎಚ್. ಸುರಪುರ ಪ್ರತಿಕ್ರಿಯಿಸಿ, ನ್ಯಾಯಾಲಯದ ಆದೇಶ ಪಾಲಿಸುವಲ್ಲಿ ರೈಲ್ವೆ ಇಲಾಖೆ ವಿಫಲವಾಗಿದೆ. ಮೂರು ಬಾರಿ ಕಾಲಾವಕಾಶ ಕೇಳಿತ್ತು. ಆದರೂ ಪರಿಹಾರ ನೀಡಿರಲಿಲ್ಲ. ರೈತರು ಮತ್ತೆ ಕೋರ್ಟ್ ಮೊರೆ ಹೋಗಿದ್ದರು. ರೈಲ್ವೆ ಕಚೇರಿಯು ಹುಬ್ಬಳ್ಳಿಯಲ್ಲಿ ಇರುವ ಕಾರಣ ಇಲ್ಲಿಯ 5ನೇ ಜಿಲ್ಲಾ ನ್ಯಾಯಾಲಯದ ಮೂಲಕ ಜಪ್ತಿ ಆದೇಶ ಪಡೆದುಕೊಂಡು ಕಂಪ್ಯೂಟರ್ ಸೇರಿದಂತೆ ಪೀಠೋಪಕರಣಗಳನ್ನು ವಶಕ್ಕೆ ಪಡೆಯಲಾಗಿದೆ ಎಂದರು.

ನಗರಸಭೆ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಗೆ ಅಧಿಸೂಚನೆ

ಗದಗ: ಜಿಲ್ಲೆಯಲ್ಲಿ ರಾಜಕೀಯ ಶೀತಲ ಸಮರಕ್ಕೆ ಕಾರಣವಾಗಿದ್ದ ಬಿಜೆಪಿಯ ನಗರಸಭೆ ಮೂವರ ಸದಸ್ಯರ ಅನರ್ಹತೆ ಪ್ರಕರಣಕ್ಕೆ ಸಬಂಧಿಸಿದಂತೆ ಬೆಳಗಾವಿ ಪ್ರಾದೇಶಿಕ ಆಯುಕ್ತರ ಸದಸ್ಯತ್ವ ಅನರ್ಹತೆ ಆದೇಶವನ್ನು ಫೆ.10 ರಂದು ಎತ್ತಿ ಹಿಡಿದ ಹೈಕೋರ್ಟ ಆದೇಶ ಬೆನ್ನಲ್ಲೇ ನಗರಸಭೆ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನದ ಚುನಾವಣೆಗೆ ಮತ್ತೊಮ್ಮೆ ದಿನಾಂಕ ನಿಗದಿಗೊಳಿಸಲಾಗಿದೆ.

ಚುನಾವಣಾ ಅಧಿಕಾರಿ ಎಂ ಗಂಗಪ್ಪ ಅವರು ಮಾ.3ರಂದು ಮಧ್ಯಾಹ್ನ 2ಕ್ಕೆ ಚುನಾವಣೆ ನಡೆಸಲು ಸೋಮವಾರ ಅಧಿಸೂಚನೆ ಹೊರಡಿಸಿದ್ದಾರೆ. ಕಳೆದ ಬಾರಿ ಕಾಂಗ್ರೆಸ್‌ನಿಂದ ಅಧ್ಯಕ್ಷ ಸ್ಥಾನಕ್ಕೆ ಕೃಷ್ಣ ಪರಾಪುರೆ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶಕುಂತಲಾ ಅಕ್ಕಿ ಅವರು ಸ್ಪರ್ಧಿಸಿದ್ದರು. ಈ ಬಾರಿಯೂ ಅಧಿಕೃತ ಅಭ್ಯರ್ಥಿಯಾಗಿ ಇವರಿಬ್ಬರನ್ನೇ ಕಾಂಗ್ರೆಸ್ ಕಣಕ್ಕಿಳಿಸಲಿದೆ ಎಂದು ತಿಳಿದುಬಂದಿದೆ.

ಕಾಡಾನೆ ಓಡಾಟ: ಆತಂಕ

ಯಲ್ಲಾಪುರ: ತಾಲೂಕಿನ ಕಣ್ಣಿಗೇರಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಡಾನೆ ಓಡಾಟ ಹೆಚ್ಚಿದ್ದು, ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ಎರಡು ಮೂರು ದಿನದ ಹಿಂದೆ ಯಲ್ಲಾಪುರ ಗ್ರಾಮದೇವಿ ಜಾತ್ರೆಗೆ ಬಂದು ಮರಳಿ ಹೋಗುವವರನ್ನು ಕಣ್ಣಿಗೇರಿ-ವಡೆಹುಕ್ಕಳಿ ರಸ್ತೆಯಲ್ಲಿ ಆನೆ ಅಡ್ಡಗಟ್ಟಿದೆ. ಕಾರಿನಲ್ಲಿದ್ದವರು ಭಯಗೊಂಡು ಕೆಲಕಾಲ ಮುಂದಕ್ಕೂ ಹೋಗಲಾಗದೇ, ಹಿಂದಿರುಗಿ ಹೋಗಲೂ ಆಗದೇ ಸಿಲುಕೊಂಡಿದ್ದರು. ನಂತರ ಆನೆ ಕಾಡಿನೊಳಗೆ ಹೋಗಿದ್ದು, ಪ್ರಯಾಣಿಕರು ನಿರಾಳರಾಗಿದ್ದಾರೆ. ಆನೆ ಕಳೆದ ಕೆಲವು ದಿನಗಳಿಂದ ಕಣ್ಣಿಗೇರಿ ಭಾಗದಲ್ಲಿ ಸುತ್ತಾಡುತ್ತಿದ್ದು, ಸಮೀಪದ ರೈತರ ತೋಟ-ಗದ್ದೆಗಳಿಗೆ ನುಗ್ಗಿ ಹಾನಿ ಮಾಡುತ್ತಿದೆ. ಚಿಪ್ಪನಗದ್ದೆ ಬಳಿ ಹಗಲು ಹೊತ್ತಿನಲ್ಲೇ ಅಡಕೆ ತೋಟಕ್ಕೆ ನುಗ್ಗಿ ಗಿಡಗಳನ್ನು ನಾಶ ಮಾಡಿದೆ. ದಾಂಡೇಲಿ ಅಭಯಾರಣ್ಯದ ಗಡಿ ಭಾಗದಲ್ಲಿರುವದರಿಂದ ಅಲ್ಲಿಂದ ಆನೆಗಳು ಬರುತ್ತವೆ. ಕಣ್ಣಿಗೇರಿ ವ್ಯಾಪ್ತಿಯಲ್ಲಿ ಆನೆ ಅಗಳಗಳನ್ನು ತೋಡಲಾಗುತ್ತಿದೆ. ಅಡಿಕೆ,ಕಬ್ಬು,ಭತ್ತ , ಬೆಳೆ ಹಾನಿಗಳ ಕುರಿತಂತೆ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜಕೀಯ ಲಾಭಕ್ಕಾಗಿ ಜಿಲ್ಲೆಗೆ ಸಿಎಂ, ಡಿಸಿಎಂ ಭೇಟಿ

ಶಿರಸಿ: ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಲಾಭ ಪಡೆಯುವ ಉದ್ದೇಶದಿಂದಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜಿಲ್ಲೆಗೆ ಭೇಟಿ ನೀಡಿದ್ದಾರೆಯೇ ಹೊರತು ಜಿಲ್ಲೆಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಲ್ಲ ಎಂದು ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಅನಂತಮೂರ್ತಿ ಹೆಗಡೆ ಟೀಕಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕಾರವಾರದ ಕ್ರಿಮ್ಸ್ ನೂತನ ಕಟ್ಟಡವು ಹಿಂದಿನ ಶಾಸಕಿ ರೂಪಾಲಿ ನಾಯ್ಕ್ ಅವರ ವಿಶೇಷ ಪ್ರಯತ್ನ ಮತ್ತು ಬಿಜೆಪಿ ಸರ್ಕಾರದ ಪರಿಶ್ರಮದಿಂದ ನಿರ್ಮಾಣಗೊಂಡಿದೆ. ಸಿದ್ಧವಾಗಿದ್ದ ಕಟ್ಟಡವನ್ನು ಉದ್ಘಾಟಿಸಿ, ಎಲ್ಲವನ್ನೂ ತಾವೇ ಮಾಡಿದ್ದೇವೆ ಎಂದು ಕಾಂಗ್ರೆಸ್ ನಾಯಕರು ಹೇಳಿಕೊಳ್ಳುತ್ತಿರುವುದು ಕೇವಲ ರಾಜಕೀಯ ಗಿಮಿಕ್ ಎಂದು ಕಿಡಿಕಾರಿದ್ದಾರೆ. ಜಿಲ್ಲೆಯ ಜನರ ತೀವ್ರ ವಿರೋಧವಿರುವ ನದಿ ತಿರುವು ಯೋಜನೆಗಳು, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ, ಅರಣ್ಯ ಅತಿಕ್ರಮಣ ಸಮಸ್ಯೆ ಹಾಗೂ ಅಡಿಕೆ ಬೆಳೆಯನ್ನು ಬಾಸುತ್ತಿರುವ ಎಲೆಚುಕ್ಕೆ ರೋಗದಂತಹ ಗಂಭೀರ ವಿಷಯಗಳ ಬಗ್ಗೆ ಮುಖ್ಯಮಂತ್ರಿಗಳು ಮೌನವಹಿಸಿರುವುದು ವಿಷಾದನೀಯ ಎಂದು ಅವರು ತಿಳಿಸಿದ್ದಾರೆ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಬಜೆಟ್‌ನಲ್ಲಿ ಘೋಷಿಸುವುದಾಗಿ ಹೇಳಿರುವುದು ಜಿಲ್ಲೆಯ ಜನರ ಮೂಗಿಗೆ ತುಪ್ಪ ಸವರುವ ಕೆಲಸವಾಗಿದೆ. ಸರ್ಕಾರಕ್ಕೆ ನಿಜವಾಗಿಯೂ ಕಾಳಜಿ ಇದ್ದರೆ ಬಜೆಟ್ ವರೆಗೆ ಕಾಯದೆ ಕೂಡಲೇ ಹಣ ಬಿಡುಗಡೆ ಮಾಡಲಿ. ಜಿಲ್ಲೆ ವಿಶಾಲವಾಗಿರುವುದರಿಂದ ಕಾರವಾರ ಎಲ್ಲರಿಗೂ ಸುಲಭವಾಗಿ ತಲುಪಲು ಸಾಧ್ಯವಿಲ್ಲ. ಹೀಗಾಗಿ, ಈ ಹಿಂದೆ ಬಿಜೆಪಿ ಸರ್ಕಾರ ಘೋಷಿಸಿದ್ದ ಕುಮಟಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ತಕ್ಷಣವೇ ಪ್ರಾರಂಭಿಸಬೇಕು ಮತ್ತು ಶಿರಸಿ ಪಂಡಿತ್ ಜನರಲ್ ಆಸ್ಪತ್ರೆಗೆ ಅಗತ್ಯ ವೈದ್ಯರ ನೇಮಕಾತಿ ಹಾಗೂ ವೈದ್ಯಕೀಯ ಉಪಕರಣಗಳ ಖರೀದಿಗಾಗಿ ಟೆಂಡರ್ ಪ್ರಕ್ರಿಯೆ ಆರಂಭಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಜಿಲ್ಲೆಯ ಪ್ರತಿಯೊಂದು ಇಲಾಖೆಯಲ್ಲೂ ಅಧಿಕಾರಿ ಹಾಗೂ ಸಿಬ್ಬಂದಿಗಳ ಕೊರತೆ ಎದ್ದು ಕಾಣುತ್ತಿದ್ದು, ಈ ಬಗ್ಗೆ ಸರ್ಕಾರ ಗಮನಹರಿಸಲಿ ಎಂದು ಅವರು ಆಗ್ರಹಿಸಿದ್ದಾರೆ.

ಸಂಪಾದಕೀಯ

ಭಯೋತ್ಪಾದನೆ: ಬಾಂಗ್ಲಾ ನಂಟು

ಭಾರತದಲ್ಲಿ ನಡೆಯುವ ಭಯೋತ್ಪಾದಕ ಕೃತ್ಯಗಳಿಗೆಲ್ಲ ಪಾಕಿಸ್ತಾನದ ನಂಟು ಇರುವುದು ತಿಳಿದಿರುವುದೆ. ದಶಕಗಳಿಂದಲೇ ಪಾಕಿಸ್ತಾನವು ಭಾರತದಲ್ಲಿ ಭಯೋತ್ಪಾದನಾ ಕೃತ್ಯಗಳನ್ನು ಎಸಗುತ್ತಲೇ ಬಂದಿದೆ. ಭಯೋತ್ಪಾದನೆಗೆ ಪ್ರೇರಣೆ ನೀಡುವುದರ ಜತೆಗೇ ಶಸ್ತ್ರಾಸ್ತ್ರ ಮತ್ತು ಇತರ ಸಾಮಗ್ರಿಗಳನ್ನು ಒದಗಿಸುವುದು, ಭಯೋತ್ಪಾದಕರನ್ನು ವಿಧ್ವಂಸಕ ಕೃತ್ಯಗಳಿಗೆ ಕಳಿಸಿಕೊಡುವುದು ಮುಂತಾದ ಕೃತ್ಯಗಳಲ್ಲಿ ಪಾಕಿಸ್ತಾನವು ಸಕ್ರಿಯವಾಗಿ ಪಾಲ್ಗೊಳ್ಳುತ್ತಲೇ ಬಂದಿದೆ. ಇದೀಗ ಬಾಂಗ್ಲಾ ದೇಶೀಯರು ಕೂಡಾ



ಭಾರತ ವಿರೋಧಿ ಭಯೋತ್ಪಾದಕ ಕೃತ್ಯಗಳಲ್ಲಿ ಪಾಕಿಸ್ತಾನದೊಂದಿಗೆ ಕೈಜೋಡಿಸಿರುವುದು ತಿಳಿದುಬಂದಿದೆ. ಬಾಂಗ್ಲಾ ದೇಶದ ಕೆಲವರು ಭಾರತದಾದ್ಯಂತ ವಿಧ್ವಂಸಕ ಕೃತ್ಯಗಳನ್ನು ಎಸಗಲು ಯೋಜನೆ ರೂಪಿಸಿದ್ದುದು ಬೆಳಕಿಗೆ ಬಂದಿದೆ. ಆ ಸಂಬಂಧ ಪಶ್ಚಿಮ ಬಂಗಾಳ, ತಮಿಳ್ನಾಡು ಹಾಗೂ ದಿಲ್ಲಿ ಪೊಲೀಸರು ನಡೆಸಿರುವ ಕಾರ್ಯಾಚರಣೆಯಲ್ಲಿ ಎಂಟು ಮಂದಿಯನ್ನು ಬಂಧಿಸಲಾಗಿದೆ. ಇವರಲ್ಲಿ ಏಳು ಮಂದಿ ಬಾಂಗ್ಲಾ ದೇಶೀಯರಾಗಿದ್ದಾರೆ. ಆದರೆ ಇವರ ಮುಖ್ಯಸ್ಥನೊಬ್ಬ ಮಾತ್ರ ಇನ್ನೂ ತಲೆತಪ್ಪಿಸಿಕೊಂಡಿದ್ದಾನೆ. ಆತ ಕೂಡಾ ಬಾಂಗ್ಲಾ ದೇಶೀಯನಾಗಿದ್ದು, ಆತನ ಸೆರೆಗೆ ಬಲೆ ಬೀಸಲಾಗಿದೆ. ದಿಲ್ಲಿಯಲ್ಲಿ ಭಾರತ ವಿರೋಧಿ ಪೋಸ್ಟರ್‌ಗಳನ್ನು ಹಚ್ಚಿದ ಸಂಬಂಧ ಪೊಲೀಸರು ತನಿಖೆ ನಡೆಸಿದ ವೇಳೆ ಈ ಭಯೋತ್ಪಾದಕರ ದುಷ್ಟ ಯೋಜನೆ ಬೆಳಕಿಗೆ ಬಂದಿದೆ.

ಇತ್ತೀಚಿನ ವರ್ಷಗಳಲ್ಲಿ ಪಾಕಿಸ್ತಾನದಂತೆಯೆ ಬಾಂಗ್ಲಾದಲ್ಲಿ ಕೂಡಾ ಭಾರತ ವಿರೋಧಿ ಭಾವನೆಯು ಹೆಚ್ಚುತ್ತಿದೆ. ವಿದ್ಯಾರ್ಥಿ ದಂಗೆಯ ಬಳಿಕವಂತೂ ಇದು ಇನ್ನಷ್ಟು ಮಿತಿಮೀರಿದೆ. ಪಾಕಿಸ್ತಾನದ ಐಎಸ್‌ಐ ಮತ್ತು ಲಷ್ಕರ್ ಇ ತೊಯ್ಬಾ ಕೂಡಾ ಬಾಂಗ್ಲಾದ ಉಗ್ರವಾದಿ ಶಕ್ತಿಗಳಿಗೆ ನೆರವು ನೀಡುತ್ತಿವೆ. ಆತಂಕಕಾರಿ ಸಂಗತಿಯೆಂದರೆ ಲಕ್ಷಾಂತರ ಬಾಂಗ್ಲಾ ದೇಶೀಯರು ಭಾರತದೊಳಕ್ಕೆ ನುಸುಳಿ ದೇಶಾದ್ಯಂತ ಹರಡಿಹೋಗಿದ್ದಾರಲ್ಲದೆ, ಬಹುತೇಕ ಸಂದರ್ಭಗಳಲ್ಲಿ ಭಾರತದ ಪ್ರಮಾಣಪತ್ರಗಳನ್ನು ಪಡೆಯುವಲ್ಲೂ ಸಫಲರಾಗಿದ್ದಾರೆ. ಅವರಿಗೆ ಭಾರತದೊಳಗಿದ್ದುಕೊಂಡೇ ಭಯೋತ್ಪಾದಕ ಕೃತ್ಯಗಳನ್ನು ಎಸಗಲು ಇದು ಹೆಚ್ಚು ನೆರವಾಗಿದೆ. ಅಕ್ರಮ ಬಾಂಗ್ಲಾ ದೇಶಿಗಳು ದೇಶದ ಭದ್ರತೆಗೆ ಸದಾ ಅಪಾಯಕಾರಿಗಳು ಎಂದು ಹೇಳುತ್ತಾ ಬಂದಿರುವುದನ್ನು ಇದು ಸತ್ಯಗೊಳಿಸಿದೆ. ದುರಂತವೆಂದರೆ ನಮ್ಮ ದೇಶದಲ್ಲೇ ರಾಜಕೀಯ ಲಾಭಕ್ಕಾಗಿ ಕೆಲವು ಶಕ್ತಿಗಳು ಇಂತಹ ಬಾಂಗ್ಲಾ ದೇಶೀಯರಿಗೆ ಆಶ್ರಯ ನೀಡುತ್ತಿರುವುದು. ಇನ್ನು ಮುಂದೆ ಬಾಂಗ್ಲಾ ದೇಶಿ ಭಯೋತ್ಪಾದಕರತ್ತಲೂ ಭಾರತವು ಹದ್ದಿನ ಕಣ್ಣಿಡಬೇಕಾದ ಅಗತ್ಯ ಬಂದಿದೆ.

ಬುದ್ಧಿವಂತರು ಪಾಪವೆಸಗಬಾರದು

ಸಂದಿಗ್ಧೇ ಪರಲೋಕೇಽಪಿ ತ್ಯಾಜ್ಯಮೇವಾಶುಭಂ ಬುಧೈಃ।
ನಾಸ್ತಿ ಚೇನ್ನಾಸ್ತಿ ನೋ ಹಾನಿಃ ಅಸ್ತಿ ಚೇನ್ನಾಸ್ತಿಕೋ ಹತಃ ॥ –ಮಹಾಭಾರತ

ಪರಲೋಕದ ಬಗೆಗೆ ಸಂದೇಹವಿದ್ದಾಗ್ಯೂ ಬುದ್ಧಿವಂತರು ಪಾಪವನ್ನು ಮಾಡಬಾರದು. ಪರಲೋಕವು ಇಲ್ಲದಿದ್ದರೆ ಇಲ್ಲ, ಅದರಿಂದ ನಷ್ಟವೇನಿಲ್ಲ, ಆದರೆ ಪರಲೋಕವಿದ್ದ ಪಕ್ಷದಲ್ಲಿ ನಾಸಿಕನು ಹಾಳಾಗುತ್ತಾನೆ –ಎಂಬುದು ಶ್ಲೋಕಾರ್ಥ.

ಸನಾತನ ಪರಂಪರೆಯಲ್ಲಿ ಪರಲೋಕದ ಕಲ್ಪನೆ ದಟ್ಟವಾಗಿದೆ. ಧರ್ಮಮಾರ್ಗದಲ್ಲಿ ನಡೆದರೆ ಉನ್ನತಿ, ಅಧರ್ಮಮಾರ್ಗದಲ್ಲಿ ನಡೆದರೆ ಅವನತಿ (ಧರ್ಮೇಣ ಗಮನಾಮೂರ್ಧ್ವಂ ಗಮನಮಧಸ್ತಾತ್ ಅಧರ್ಮೇಣ) ಎಂಬುದು ನಂಬಿಕೆ. ಉತ್ತಮ



ಕೆಲಸವನ್ನು ಮಾಡಿದವರು ಸ್ವರ್ಗವನ್ನು ಪಡೆದರೆ ಕೆಟ್ಟ ಕೆಲಸವನ್ನು ಮಾಡಿದವರು ನರಕವನ್ನು ಪಡೆಯುತ್ತಾರೆ ಎಂಬುದನ್ನು ಶಾಸ್ತ್ರಗಳು ಹೇಳಿ ಉತ್ತಮ ದಾರಿಯನ್ನು ತುಳಿಯುಂತೆ ಪ್ರೇರೇಪಿಸುತ್ತವೆ.

ಇಷ್ಟೊಂದು ನಂಬಿಕೆ ಪರಲೋಕದ ಕುರಿತು ಇದ್ದರೂ, ಇವೆಲ್ಲವೂ ಗ್ರಂಥಲಿಖಿತ ಹಾಗೂ ಹಿರಿಯರ ಉಪದೇಶ. ಆದರೆ ನೋಡಿ ಬಂದವರು ಯಾರೊಬ್ಬರೂ ಇಲ್ಲ. ಆದರೂ ಗ್ರಂಥಗಳು ಹೇಳಿವೆ ಎಂಬ ಕಾರಣಕ್ಕೆ ನಂಬುತ್ತಾರೆ. ಸಂದೇಹವೇ ವಿನಾ ಪ್ರತ್ಯಕ್ಷದರ್ಶಿ ಯಾವೊಬ್ಬನೂ ಇಲ್ಲ. ಇದನ್ನು ನಂಬುವುದರಿಂದ ಹಾನಿಯಿದೆಯೇ? ಎಂದರೆ ಅದೂ ಇಲ್ಲ. ಬದಲಾಗಿ ಮನುಷ್ಯನನ್ನು ಒಳ್ಳೆಯ ಮಾರ್ಗಕ್ಕೆ ಹಚ್ಚುವುದಕ್ಕೆ ಕಾರಣವಾಗಿವೆ. ಪುಣ್ಯ–ಪಾಪ, ಸ್ವರ್ಗ–ನರಕ ಇತ್ಯಾದಿ ವಿಚಾರಗಳನ್ನು ಶಾಸ್ತ್ರಗಳು ಪ್ರಚುರಪಡಿಸಿ ಒಳ್ಳೆಯದರತ್ತ ಮುಖ ಮಾಡಲು ಪ್ರೇರೇಪಿಸುತ್ತವೆ. ಪರಲೋಕದ ಕುರಿತಾದ ಸಂದೇಹವಿದ್ದಾಗಲೂ ಪಾಪ ಮಾಡಬಾರದು. ಇದು ಬುದ್ಧಿವಂತರ ಲಕ್ಷಣ ಕೂಡ. ಏನೇನೂ ಕೆಡುಕಿಲ್ಲದೆ ಒಳ್ಳೆಯದನ್ನು ಮಾಡಲು ಪ್ರೇರಣೆ ಕೊಡುವುದಾದಲ್ಲಿ ತೊಂದರೆಯೇನಿದೆ? ಪರಲೋಕವಿಲ್ಲದಿದ್ದರೆ ಇಲ್ಲ, ಅದಿಲ್ಲದಿದ್ದರೂ ಒಳ್ಳೆಯ ಕೆಲಸದಿಂದ ಹಾನಿಯೇನೂ ಆಗದು. ಅಕಸ್ಮಾತ್ ಇದ್ದದ್ದೇ ಆದರೆ ಟೀಕೆ ಮಾಡಿದ ನಾಸ್ತಿಕನು ಹಾಳಾಗುತ್ತಾನೆ. ತೊಂದರೆಯನ್ನು ಅನುಭವಿಸುತ್ತಾನೆ.

ಪಾಪ–ಪುಣ್ಯ, ಸ್ವರ್ಗ–ನರಕಗಳ ಕಲ್ಪನೆಯೇ ಇಹದಲ್ಲಿ ಚೆನ್ನಾಗಿ ಬದುಕುವುದಕ್ಕೆ. ಈ ಭಯದಿಂದಲಾದರೂ ಒಳ್ಳೆಯ ಕೆಲಸವನ್ನು ಮಾಡಲಿ ಎಂಬುದು ಕಲ್ಪನೆಯ ಹಿಂದಿನ ಆಶಯ. ನಾವೇ ಬುದ್ಧಿವಂತರು, ಬುದ್ಧಿಜೀವಿಗಳು, ನಾವು ತಾರ್ಕಿಕವಾಗಿ ಯೋಚಿಸಿ ಮುಂದು ವರಿಯುವವರು... ಇತ್ಯಾದಿ ಹೇಳಿಕೊಂಡು ಇತರರನ್ನು ದಾರಿ ತಪ್ಪಿಸುವವರು ಸಾಕಷ್ಟು ಜನರಿದ್ದಾರೆ. ಇವರು ತಮ್ಮನ್ನು ತಾವು ವಿಚಾರವಾದಿಗಳೆಂದು ಕರೆದುಕೊಳ್ಳುತ್ತಾರೆ. ಇವರೆಂದೂ ಭಾವನಾತ್ಮಕವಾಗಿ ನಡೆದುಕೊಳ್ಳುವುದಿಲ್ಲ, ಆಚಾರ–ವಿಚಾರಗಳನ್ನು ಟೀಕಿಸುವುದರಲ್ಲೇ ಜೀವನ ಕಳೆಯುತ್ತಾರೆ. ಭಾರತೀಯ ಮೂಲ ಗ್ರಂಥಗಳನ್ನು ಅದರ ಆಶಯದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದಿಲ್ಲ. ಜನರು ಗೊತ್ತಿಲ್ಲದೆ ತಪ್ಪಾಗಿ ಆಚರಿಸಿದ್ದನ್ನು ಎತ್ತಿಕೊಂಡು ಗೇಲಿ ಮಾಡುತ್ತಾರೆ. ಇವರು ಅಲ್ಪಸ್ವಲ್ಪ ಓದಿರುವುದು ಪಾಶ್ಚಾತ್ಯ ಸಾಹಿತ್ಯವನ್ನು, ಕಮ್ಯುನಿಸ್ಟ್ ಸಿದ್ಧಾಂತವನ್ನು. ದೇವರು, ದೈವಗಳನ್ನು ನಂಬಿ ನಡೆದು ಜೀವನದಲ್ಲಿ ನೆಮ್ಮದಿಯನ್ನು, ಪ್ರೇರಣೆಯನ್ನು ಪಡೆದುಕೊಳ್ಳುವವರ ಬಗ್ಗೆ ಆಡಿಕೊಳ್ಳುತ್ತಾರೆ.

ಇಹದ ಜೀವನವನ್ನು ಚೆನ್ನಾಗಿ ನಿರ್ವಹಿಸಲು, ಬದುಕಿನ ಬಗ್ಗೆ ಭರವಸೆ ತಾಳಲು ಇಂತಹ ನಂಬಿಕೆ ಬೇಕಾಗುತ್ತವೆ. ಯಾರಿಗೂ ತೊಂದರೆ ನೀಡದ ಆಚರಣೆ ಹಾಗೂ ಕಲ್ಪನೆ ನಷ್ಟವನ್ನೇನೂ ಉಂಟು ಮಾಡುವುದಿಲ್ಲ. ಒಂದೊಮ್ಮೆ ಪರಲೋಕಾದಿಗಳಿದ್ದರೆ ಪಡೆಯುತ್ತಾನೆ. ಇಲ್ಲದಿದ್ದರೆ ನಷ್ಟವೇನಿಲ್ಲ. ಆದರೆ ಇದನ್ನೇ ಗುರಿ ಮಾಡಿ ಟೀಕಿಸುವವನು, ಅಲ್ಲಗಳೆಯುವವನು ಒಂದೊಮ್ಮೆ ಪರಲೋಕವಿದ್ದ ಪಕ್ಷದಲ್ಲಿ ಹಾಳಾಗುತ್ತಾನೆ.

ಅವರವರ ನಂಬಿಕೆಗಳನ್ನು ಗೌರವಿಸೋಣ. ಬೆಲೆ ಕೊಡೋಣ. ಅತಿ ಬುದ್ಧಿವಂತಿಕೆ ಪ್ರದರ್ಶಿಸಿ ಇನ್ನೊಬ್ಬರ ನಂಬಿಕೆಯನ್ನು ಹೀಗಳೆಯುವ ಅಧಿಕಾರ ಯಾರಿಗೂ ಇಲ್ಲ.

ಯಾಕ್ ಎಂಬ ಪ್ರಾಣಿಗಿದೆ ಸಾವಿರಾರು ವರ್ಷಗಳ ಇತಿಹಾಸ

ಹಿಮಾಲಯದ ತಪ್ಪಲಿನ ಸಾಕಷ್ಟು ದೇಶಗಳ ನಾಗರಿಕತೆಯ ಹಿಂದಿನ ಹಲವು ಶಕ್ತಿಗಳಲ್ಲಿ ಯಾಕ್ ಎಂಬ ಈ ದೈತ್ಯ ಪ್ರಾಣಿಯೂ ಒಂದಾಗಿತ್ತು.



ಮಾನವನ ಜೊತೆಗೆ ಬಹು ಹಿಂದಿನಿಂದ ನಡೆದುಕೊಂಡು ಬಂದ ಕೆಲವೇ ಪ್ರಾಣಿಗಳಲ್ಲಿ ಯಾಕ್ ಸಹ ಒಂದು ಎಂಬುದನ್ನು ಇತ್ತೀಚಿನ ಒಂದು ಸಂಶೋಧನೆ ಬಹಿರಂಗಪಡಿಸಿದೆ. ಹಿಮಾಲಯದ ತಪ್ಪಲು ಪ್ರದೇಶದಲ್ಲಷ್ಟೇ ಕಂಡುಬರುವ ಈ ಸಸ್ತನಿ ಪ್ರಾಣಿಯ ಅಸ್ತಿತ್ವ, ಮೂಲ ಮತ್ತು ಉಳಿವಿಗೆ ಸಂಬಂಧಿಸಿದಂತೆ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ಹೀಗೆ ನಡೆದ ಒಂದು ಸಂಶೋಧನಾ ವರದಿ ಯಾಕ್ ಒಂದು ಬಹು ಪ್ರಾಚೀನ ಪ್ರಾಣಿ ಎಂಬುದನ್ನು ಸ್ಪಷ್ಟಪಡಿಸಿದೆ. ಆ ವರದಿಯ ಪ್ರಕಾರ ಗೋವುಗಳಂತೆ ಕಾಡಿನಲ್ಲಿದ್ದ ಯಾಕ್ ಪ್ರಾಣಿಯನ್ನು ಸಹ ಮನುಷ್ಯ ಪಳಗಿಸಿ ಸಾಕಿಕೊಂಡಿರುವುದು ಅತಿ ಕಡಿಮೆ ಸಮಯ ಎಂಬುದಾಗಿ ಹೇಳಲಾಗಿದೆ. ಸುಮಾರು ಮೂರು ಸಾವಿರ ವರ್ಷಗಳ ಹಿಂದಿನಿಂದಲೇ ಮಾನವರೊಂದಿಗೆ ಈ ಪ್ರಾಣಿ ಬೆಸೆದುಕೊಂಡಿದ್ದನ್ನು ದೊರೆತ ದಾಖಲೆಗಳೊಂದಿಗೆ ಈ ವರದಿ ದೃಢಪಡಿಸಿದೆ. ಚೀನಾದ ಇತಿಹಾಸದಲ್ಲಿ ಇವುಗಳ ಸಾಗಾಣಿಕೆ ಮತ್ತು ಸಾಕಾಣಿಕೆ ಬಹು ಹಿಂದಿನಿಂದಲೂ ಇದ್ದುದನ್ನು ದೊರೆತ ಕೆಲ ದಾಖಲೆಗಳೊಂದಿಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕಾಡು ಪ್ರಾಣಿಯಾದ ಇದನ್ನು ಮೊದಲಿಗೆ ಭಾರತದ ಗಡಿಯಿಂದ ಸ್ವಲ್ಪ ದೂರದಲ್ಲಿರುವ ಟಿಬೆಟ್‌ನ ಬ್ರಹ್ಮಪುತ್ರ ಬಳಿ ಸುಮಾರು ಇಂದಿಗೆ 2,500 ವರ್ಷಗಳ ಹಿಂದೆ ಪಳಗಿಸಲಾಯಿತು ಎಂಬುದಾಗಿ ಈ ಸಂಶೋಧನಾ ವರದಿ ಹೇಳಿದೆ. ಇದರೊಂದಿಗೆ ಇಂದು ಚೀನಾದ ಸುಪರ್ದಿಯಲ್ಲಿರುವ ಟಿಬೇಟಿಯನ್ ಪ್ರದೇಶದ ಶಾನನ್ ಪ್ರಾಂತ್ಯದ ಬಂಗ್ಗಾ ಎಂಬಲ್ಲಿ ಯಾಕ್‌ನ್ನು ಮಾನವರು ಮೊದಲಿಗೆ ಸಾಕಿಕೊಂಡಿದ್ದರು ಎಂದು ಹೇಳಲಾದ ಅತ್ಯಂತ ಹಳೆಯ ದಾಖಲೆಗಳು ದೊರೆತಿವೆ ಎಂಬುದಾಗಿ ಹೊಸ ಅಧ್ಯಯನವೊಂದು ತಿಳಿಸಿದೆ.

ಟಿಬೇಟ್‌ನ ಬಂಗ್ಗಾದಲ್ಲಿ ನೆಲೆಸಿದ್ದ ಜನರು ಸುಮಾರು 2,500 ವರ್ಷಗಳ ಹಿಂದೆ ಯಾಕ್ ಪ್ರಾಣಿಯನ್ನಷ್ಟೇ ಅಲ್ಲದೆ ಅದರೊಂದಿಗೆ ಟೌರಿನ್ ಪ್ರಭೇದದ ದನಗಳನ್ನು ಸಹ ಸಾಕಿಕೊಂಡಿದ್ದರು ಎಂಬ ಅಚ್ಚರಿಯ ಸಂಗತಿಯನ್ನು ಸಂಶೋಧನಾ ವರದಿಗಳು ಬಹಿರಂಗಪಡಿಸಿವೆ. ನಂತರ ಬಂಗ್ಗಾದಲ್ಲಿನ ಸ್ಥಳೀಯ ನಿವಾಸಿಗಳು ಇವೆರಡನ್ನು ಸಂಕರಿಸಿ ಅಂದರೆ ತಮ್ಮಲ್ಲಿದ್ದ ದನಗಳೊಂದಿಗೆ ಈ ಯಾಕ್‌ನ್ನು ಸೇರಿಸಿ ಹೊಸದಾದ ಹೈಬ್ರೀಡ್ ತಳಿಯೊಂದನ್ನು ಹುಟ್ಟುಹಾಕಿಕೊಂಡರು ಎಂಬುದಾಗಿ ಸಂಶೋಧನಾ ವರದಿಗಳು ಸ್ಪಷ್ಟಪಡಿಸಿವೆ. ಇದರೊಂದಿಗೆ ವರ್ಗೀಕರಣ ಶಾಸ್ತ್ರಜ್ಞರು ಈ ಎರಡು ತಳಿಗಳೊಂದಿಗೆ ಇಲ್ಲಿನ ಪ್ರಾಚೀನ ತಳಿಯಾದ ಔರೋಕ್‌ನ್ನು ಸಹ ಬಾಸ್ ವರ್ಗದ ಅಡಿಯಲ್ಲಿ ವರ್ಗೀಕರಿಸಿದ್ದಾರೆ ಎಂಬುದಾಗಿ ತಿಳಿಸಿದ್ದಾರೆ. ಮತ್ತೊಂದು ಸಮೀಕ್ಷೆಯು ಹಿಮಾಲಯ ಮತ್ತು ಟಿಬೇಟಿಯನ್ ಪ್ರಸ್ಥಭೂಮಿಯಾದ್ಯಂತ ಇರುವ ಕೆಲ ಸಮುದಾಯಗಳು ಇಂದು ತಮ್ಮಲ್ಲಿರುವ ಡಿಜೋ ಎಂಬ ಗಂಡು ಮತ್ತು ಡಿಜೊಮೊ ಎಂಬ ಹೆಣ್ಣು ಹೈಬ್ರೀಡ್ ತಳಿಗಳೊಂದಿಗೆ ಸ್ಥಳೀಯ ದನಗಳನ್ನು ಸೇರಿದಂತೆ ಯಾಕ್‌ನ್ನು ಸಂಕರಿಸುವಲ್ಲಿ ತೊಡಗಿದ್ದಾರೆ ಎಂಬುದಾಗಿ ತಿಳಿಸಿದೆ.

ಸಂಶೋಧನೆಯ ಕೇಂದ್ರ ಬಿಂದುವಾದ ಶಾನನ್ ಪ್ರದೇಶವು ಚೀನಾದ ಟಿಬೆಟಿಯನ್ ಸ್ವಾಯತ್ತ ಪ್ರದೇಶದ ಪ್ರಾಂತ್ಯವಾಗಿದ್ದು, ಅದರೊಳಗೆ ಬಂಗ್ಗಾ ಎಂಬ ಪ್ರದೇಶವಿದೆ. ಈ ಪ್ರದೇಶವು ಸಮುದ್ರ ಮಟ್ಟದಿಂದ ಸರಿಸುಮಾರು 3,750 ಮೀಟರ್ ಅಂದರೆ ಸುಮಾರು 12,300 ಅಡಿ ಎತ್ತರದಲ್ಲಿದೆ. ಈ ಶಾನನ್ ಪ್ರದೇಶವು ಭೂತಾನ್ ಮತ್ತು ಪಶ್ಚಿಮ ಅರುಣಾಚಲ ಪ್ರದೇಶದೊಂದಿಗೆ ಗಡಿಯನ್ನು ಬೆಸೆದುಕೊಂಡಿದ್ದು, ಅರುಣಾಚಲ ಪ್ರದೇಶದ ಕೇಂದ್ರಾಡಳಿತ ಪ್ರದೇಶವಾದ ತವಾಂಗ್‌ಗೆ ಸಮೀಪದಲ್ಲೇ ಇದೆ. ಟಿಬೇಟ್‌ನಲ್ಲಿ ಯಾರ್ಲುಂಗ್–ತ್ಸಾಂಗ್ಪೋ ಎಂದು ಕರೆಯುವ ಬ್ರಹ್ಮಪುತ್ರ ನದಿ ಇದೇ ಪ್ರದೇಶವನ್ನು ತಾಕಿಕೊಂಡೇ ಮುಂದಕ್ಕೆ ಹರಿದುಹೋಗುತ್ತದೆ.

ಈ ಎಲ್ಲಾ ಸಂಶೋಧನೆಗಳೊಂದಿಗೆ ಇತ್ತೀಚೆಗೆ ವೈಜ್ಞಾನಿಕರ ಒಂದು ದಂಡು ಈ ತಳಿಯ ಅಸ್ತಿತ್ವ ಹಾಗೂ ಬಂಗ್ಗಾ ಪ್ರದೇಶದ ಅಂತರಾಳದಲ್ಲಿ ಸಂಶೋಧನೆ ನಡೆಸಿ ಅಚ್ಚರಿಯ ಸಂಗತಿಗಳನ್ನು ಬಹಿರಂಗಪಡಿಸಿದೆ. ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿರುವ ವಾಷಿಂಗ್ಟನ್ ವಿಶ್ವವಿದ್ಯಾಲಯದ ಪುರಾತತ್ತ್ವ ಶಾಸ್ತ್ರಜ್ಞರನ್ನು ಒಳಗೊಂಡ ಈ ಅಂತಾರಾಷ್ಟ್ರೀಯ ಸಂಶೋಧಕರ ತಂಡ ಬಂಗ್ಗಾದಲ್ಲಿ ನಿರಂತರ ಸಂಶೋಧನೆ ನಡೆಸಿ ಇಲ್ಲಿಯ ಭೂಮಿಯ ತಳಭಾಗವು ಪ್ರಾಣಿಗಳ ಪಳೆಯುಳಿಕೆಗಳಿಂದ ಸಮೃದ್ಧವಾಗಿದೆ ಎಂಬುದಾಗಿ ತಿಳಿಸಿದೆ. ವಾಷಿಂಗ್ಟನ್ ವಿಶ್ವವಿದ್ಯಾಲಯದ ಹೇಳಿಕೆಯ ಪ್ರಕಾರ ಈ ಪ್ರದೇಶವು ದಕ್ಷಿಣ ಪ್ರಸ್ಥಭೂಮಿಯಲ್ಲಿನ ಆರಂಭಿಕ ಕೃಷಿಪಾಸ್ಟೋರಲ್ ವಸಾಹತುಗಳಲ್ಲಿ ಒಂದಾಗಿದೆ ಎನ್ನುವುದಾಗಿದೆ. ಈ ತಂಡವು ಇತ್ತೀಚಿನ ದಶಕಗಳಲ್ಲಿ ವ್ಯವಸ್ಥಿತವಾಗಿ ನಡೆಸಿದ ಉತ್ಖನನದ ನಂತರದ ವರದಿಯು ಈ ಪ್ರದೇಶವು ಸುತ್ತಮುತ್ತಲಿನ ಪ್ರದೇಶಗಳಿಗೆ ಹೋಲಿಸಿದ್ದಲ್ಲಿ ಹೇರಳವಾದ ಪ್ರಾಣಿಗಳ ಅವಶೇಷಗಳನ್ನು ಹೊಂದಿರುವ ಜಗತ್ತಿನ ಏಕೈಕ ತಾಣವಾಗಿರುವುದು ಕಂಡುಬಂದಿದೆ.

ಇಲ್ಲಿ ಲೆಕ್ಕವಿಲ್ಲದಷ್ಟು ಪ್ರಾಣಿಗಳ ಅವಶೇಷಗಳನ್ನು ಉತ್ಖನನದ ಸಮಯದಲ್ಲಿ ಹೊರತೆಗೆದ ಸಂಶೋಧಕರು ಅದರಲ್ಲಿನ ಸುಮಾರು 10,000ಕ್ಕೂ ಹೆಚ್ಚು ಸಸ್ತನಿ ಪ್ರಾಣಿಗಳ ಮೂಳೆಗಳನ್ನು ನಿರಂತರ ಸಂಶೋಧನೆಗೆ ಒಳಪಡಿಸಿದ್ದರು. ಇದರಲ್ಲಿ ಅವರುಗಳು ಬಾಸ್ ಇಂಡಿಕಸ್ ಜಾತಿಗೆ ಸೇರಿದ ಸುಮಾರು 193 ಮಾದರಿಗಳನ್ನು ಗುರುತಿಸಿ ವಿಂಗಡಿಸಿದ್ದರು. ನಂತರ ಇದರಲ್ಲಿ ಐದು ಉತ್ತಮವಾಗಿ ಸಂರಕ್ಷಿಸಲ್ಪಟ್ಟ ಮೂಳೆಗಳನ್ನು ಆಯ್ಕೆ ಮಾಡಿ ತೀವ್ರ ಸಂಶೋಧನೆಗೆ ಗುರಿಪಡಿಸಿದ್ದರು. ಈ ಐದು ಮೂಳೆಗಳನ್ನು ಅನುವಂಶಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಅದರಲ್ಲಿನ ಒಂದು ಮೂಳೆ ಗಂಡು ಯಾಕ್ ಪ್ರಾಣಿಯದ್ದಾಗಿದ್ದು ಕಂಡುಬಂತು. ಇನ್ನುಳಿದ ನಾಲ್ಕು ಮೂಳೆಗಳು ಟೌರಿನ್ ಜಾತಿಗೆ ಸೇರಿದ ಹೆಣ್ಣು ಜಾನುವಾರಿನದ್ದಾಗಿತ್ತು.

ಯುರೋಪಿನ ಹೆಚ್ಚಿನ ಆಧುನಿಕ ಜಾನುವಾರು ತಳಿಗಳು ಮತ್ತು ಏಷ್ಯಾದ ಸಮಶೀತೋಷ್ಣ ಪ್ರದೇಶದಲ್ಲಿರುವ ಬಹುತೇಕ ಜಾನುವಾರು ತಳಿಗಳನ್ನು ಟೌರಿನ್ ಎಂದು ಕರೆಯಲಾಗುತ್ತದೆ. ಇವುಗಳು ಭಾರತೀಯ ಉಪಖಂಡ ಮತ್ತು ಏಷ್ಯಾದ ಉಷ್ಣ ವಲಯದಲ್ಲಿ ಸ್ಥಳೀಯವಾಗಿ ಕಾಣಸಿಗುವ ಜೇಬು ತಳಿ ಅಥವಾ ಬೆನ್ನಿನ ಗುಪ್ಪೆಯನ್ನು ಹೊಂದಿರುವ ತಳಿಗಳಿಗಿಂತ ಬಹುತೇಕ ಭಿನ್ನವಾಗಿರುತ್ತವೆ. ಆದರೆ ಜೇಬು ದನಗಳ ಪ್ರಾಬಲ್ಯವಿರುವ ಭಾರತೀಯ ಉಪಖಂಡದ ಸಮೀಪವಿರುವ ಈ ಪ್ರದೇಶದಲ್ಲಿ ಟೌರಿನ್ ಜಾನುವಾರುಗಳ ಉಪಸ್ಥಿತಿ ಬರೀ ಸಂಶೋಧಕರಷ್ಟೇ ಅಲ್ಲದೇ ವಿಶ್ವದ ಜಾನುವಾರು ಪ್ರಭೇದದ ಕುರಿತಂತಿನ ಇಲ್ಲಿಯವರೆಗಿನ ಎಲ್ಲಾ ಸಂಶೋಧನಾ ವರದಿಗಳಿಗೆ ಹೊಸದೊಂದು ಪ್ರಶ್ನೆಯನ್ನು ಹುಟ್ಟುಹಾಕಿದೆ. ಆ ಸಂಶೋಧನಾ ವರದಿಯಲ್ಲಿ ಉಲ್ಲೇಖಿಸಿರುವಂತೆ ಟೌರಿನ್ ಜಾನುವಾರುಗಳು ಸಿಲ್ಕ್ ರೂಟ್ ಮತ್ತು ಉತ್ತರ ಟಿಬೇಟ್ ಮೂಲಕ ಅನಾಟೋಲಿಯಾ ಅಂದರೆ ಇಂದಿನ ತುರ್ಕಿಯಿಂದ ಮಧ್ಯ ಮತ್ತು ಪೂರ್ವ ಟಿಬೇಟ್‌ನ್ನು ತಲುಪಿರಬಹುದು ಎಂಬುದಾಗಿ ಅಂದಾಜಿಸಲಾಗಿದೆ. ಈ ಕುರಿತಂತೆ ಸುವಿಸ್ತಾರವಾದ ಅಧ್ಯಯನದ ವರದಿಯನ್ನು ಡಿಸೆಂಬರ್ 13, 2023ರಂದು ಸೈನ್ಸ್ ಅಡ್ವಾನ್ಸ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಟಿಬೇಟಿಯನ್ ಪ್ರಸ್ಥಭೂಮಿಯಲ್ಲಿ ಆರಂಭಿಕ ದೇಶಿ ಯಾಕ್, ಟೌರಿನ್ ಜಾನುವಾರುಗಳು ಮತ್ತು ಅವುಗಳ ಮಿಶ್ರ ತಳಿಗಳ ಪುರಾವೆಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ಈ ವರದಿ ಪ್ರಕಟವಾಗಿತ್ತು.

ಭಾರತವಷ್ಟೇ ಅಲ್ಲದೆ ಹಿಮಾಲಯದ ತಪ್ಪಲಿನ ಸಾಕಷ್ಟು ದೇಶಗಳ ನಾಗರಿಕತೆಯ ಹಿಂದಿನ ಹಲವು ಶಕ್ತಿಗಳಲ್ಲಿ ಈ ದೈತ್ಯ ಪ್ರಾಣಿಯೂ ಒಂದಾಗಿತ್ತು ಎಂಬುದು ಬಹಳಷ್ಟು ಜನರಿಗೆ ತಿಳಿದಿಲ್ಲ. ಇಂತಹ ದೇಶಿ ಯಾಕ್ ತಳಿಗಳಿಂದು ಏಷ್ಯಾದ ಎತ್ತರದ ಪ್ರದೇಶಗಳಲ್ಲಿ ಸುಮಾರು 14 ರಿಂದ 15 ಮಿಲಿಯನ್‌ನಷ್ಟು ಮಾತ್ರ ಇರುವುದಾಗಿ ಸಂಶೋಧನಾ ವರದಿಗಳು ಹೇಳುತ್ತವೆ. ಭಾರತದಲ್ಲಿ ಇವುಗಳು ಹಿಮಾಲಯದ ಗಡಿ ರಾಜ್ಯಗಳು, ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ, ಅರುಣಾಚಲ ಪ್ರದೇಶ ಮತ್ತು ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನಲ್ಲಿ ಕಂಡುಬರುತ್ತವೆ. ಇವುಗಳು ವೈಜ್ಞಾನಿಕವಾಗಿ ಬಾಸ್ ಗ್ರೂನ್ನಿಯೆನ್ಸ್ ಮತ್ತು ಬಾಸ್ ಮೂಟಸ್ ಎಂಬ ಜಾತಿಗೆ ಸೇರಿದವುಗಳಾಗಿವೆ. ಈ ಬಾಸ್ ಮೂಟಸ್ ಅಥವಾ ಕಾಡು ಯಾಕ್ ಎಂಬ ಜಾತಿ ಇಂದು ಅಪರೂಪವಾಗಿದ್ದು, ಭಾಗಶಃ ವಿನಾಶದ ಅಂಚಿನಲ್ಲಿದೆ. ಹೀಗೆ ಮನುಷ್ಯನ ಹಸ್ತಕ್ಷೇಪವೇ ಇಲ್ಲದೆ, ಮನುಷ್ಯ ಪಳಗಿಸದೇ ಕಾಡಿನಲ್ಲಿ ವಾಸವಿರುವ ಈ ಯಾಕ್‌ಗಳ ಸಂತತಿ ಬೆರಳೆಣಿಕೆಯಷ್ಟಾಗಿರುವುದಕ್ಕೆ ಸಾಕಷ್ಟು ಕಾರಣಗಳು ಕಂಡುಬರುತ್ತವೆ. ಒಂದು ಸಮೀಕ್ಷೆಯ ಪ್ರಕಾರ ಕಾಡಿನಲ್ಲಿ ಇವುಗಳ ಸಂಖ್ಯೆ ಸುಮಾರು 7,500 ರಿಂದ 10,000ದಷ್ಟು ಮಾತ್ರ ಉಳಿದಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಹೀಗಾಗಿ ಇವುಗಳನ್ನು ಈಗ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ ಮೂಲಕ ಅಳಿವಿನಂಚಿನಲ್ಲಿರುವ ದುರ್ಬಲ ಪ್ರಾಣಿಗಳು ಎಂಬುದಾಗಿ ಪಟ್ಟಿ ಮಾಡಲಾಗಿದೆ.

ನಶಿಸಿ ಹೋಗುತ್ತಿರುವ ಸಾಕಷ್ಟು ಜೀವಿಗಳಂತೆ ಈ ಪ್ರಾಣಿಯೂ ಇನ್ನೈದು ಹತ್ತು ವರ್ಷಗಳಲ್ಲಿ ವಿಶೇಷವಾಗಿ ಭಾರತದಿಂದ ಸಂಪೂರ್ಣ ಕಣ್ಮರೆಯಾಗಬಹುದು ಎಂಬುದಾಗಿ ಅಂದಾಜಿಸಲಾಗುತ್ತಿದೆ. ಹೀಗಾದಲ್ಲಿ ಮತ್ತೊಂದು ಅಪರೂಪದ ಜೀವ ಸಂಕುಲ ನಮ್ಮಿಂದ, ಈ ಭೂಮಿಯಿಂದ ಶಾಶ್ವತವಾಗಿ ಕಣ್ಮರೆಯಾಗಲಿದೆ. ತಡವಾದರೂ ಎಚ್ಚೆತ್ತು ಈ ಜೀವ ಸಂಕುಲವನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯ ಯೋಜನೆಯನ್ನು ಸರ್ಕಾರವಾಗಲಿ, ಇಲ್ಲವೇ ಯಾವುದೇ ಸರ್ಕಾರೇತರ ಸಂಸ್ಥೆಗಳಾಗಲಿ ಸಿದ್ಧಪಡಿಸಿ ಕಾರ್ಯಗತಗೊಳಿಸಬೇಕಿದೆ.

ಒತ್ತಡ ಹೇರಹೊರಟವರೇ ಒತ್ತಡಕ್ಕೀಡಾದರೆ!?

ಶಶಿಧರ್ ತಲ್ಲೂರಂಗಡಿ



ಭಾರತ ವಿಶ್ವಗುರುವಿನ ಸ್ಥಾನಕ್ಕೇರಿದ್ದು ಮೋದಿ ಪ್ರಧಾನಿಯಾದ ಮೇಲೆ ಎಂದರೆ ಅದಕ್ಕಿಂತ ದೊಡ್ಡ ಭ್ರಮೆ ಬೇರಿಲ್ಲ. ಮೋದಿಯನ್ನು ವಿರೋಧಿಸುವ ಭರದಲ್ಲಿ ಕಾಂಗ್ರೆಸಿಗರು ಈ ರಾಷ್ಟ್ರದ ಬಗ್ಗೆಯೇ ಅಣಕ ಮಾಡುತಿರುವುದನ್ನು ಪ್ರಜ್ಞಾವಂತರು ಗಮನಿಸುತ್ತಿರುತ್ತಾರೆ ಎಂಬ ಸಾಮಾನ್ಯ ಪ್ರಜ್ಞೆಯೂ ಅವರಿಗಿಲ್ಲವಾಗಿದೆ.

ಇತ್ತೀಚೆಗೆ ಅಮೆರಿಕಾದ ಅಧ್ಯಕ್ಷ ಟ್ರಂಪ್ ಮೋದಿಯವರಿಗೆ ಕರೆ ಮಾಡಿ ಮಾತನಾಡಿದ್ದು, ಭಾರತದ ಮೇಲೆ ಹೇರಿದ್ದ ಶೇ.25 ಸುಂಕವನ್ನು ಶೇ.18ಕ್ಕೆ ಇಳಿಸಿದ್ದು ಹಾಗೂ ಭಾರತ ಅಮೆರಿಕಾ ನಡುವೆ ವ್ಯಾಪಾರ ಒಪ್ಪಂದವಾಗಿದ್ದು ಎಲ್ಲರಿಗೂ ತಿಳಿದಿದೆ. ಈ ಒಪ್ಪಂದದ ನಂತರ ಟ್ರಂಪ್ ಅವರ ಮನಸ್ಸಿಗೆ ಇಷ್ಟ ಬಂದಂತೆ ಹೇಳಿಕೆ ಕೊಡತೊಡಗಿದ್ದು ಅಮೆರಿಕಾದ ಪತ್ರಿಕೆಗಳೇ ಆತನ ಮಾತಿಗೆ ಸೊಪ್ಪು ಹಾಕದೆ ಭಾರತದ ಪರವಾಗಿ ವರದಿ ಮಾಡುತ್ತಿರುವ ಸಂದರ್ಭದಲ್ಲಿಯೂ ಭಾರತದ ವಿಪಕ್ಷಗಳು ಮಾತ್ರ ಭಾರತ ಅಮೆರಿಕಾದೆದುರು ಮಂಡಿಯೂರಿದೆ ಎನ್ನತೊಡಗಿದ್ದಾರೆ. ಈ ವ್ಯಾಪಾರ ಒಪ್ಪಂದದ ಎಲ್ಲ ಮಾಹಿತಿ ಬಹಿರಂಗಗೊಂಡ ನಂತರ ಈ ವಿಚಾರದಲ್ಲಿ ರಾಜಕೀಯ ಮಾಡಲು ಸಾಧ್ಯವಿಲ್ಲ. ಹೀಗಾಗಿ ಈಗ ಟ್ರಂಪ್ ಹೇಳಿದ್ದೆ ಪರಮಸತ್ಯವೆಂಬ ನೆಲೆಯಲ್ಲಿ ವಿಪಕ್ಷಗಳು ತಮ್ಮ ಬೇಳೆ ಬೇಯಿಸುವ ಕೆಲಸ ಮಾಡುತ್ತಿವೆ. 'ಇನ್ನು ಮುಂದೆ ಭಾರತ ರಷ್ಯಾದಿಂದ ಪೆಟ್ರೋಲಿಯಂ ಉತ್ಪನ್ನಗಳನ್ನು ಖರೀದಿಸುವುದಿಲ್ಲ' ಎಂದು ಟ್ರಂಪ್ ಹೇಳತೊಡಗಿದ್ದಾರೆ. ಅವರ ಈ ಹೇಳಿಕೆಯ ಆಧಾರದಲ್ಲಿ ಭಾರತ ಸೋತಿತೆಂದು ವಿಪಕ್ಷದವರು ವಿಜೃಂಭಿಸುವುದನ್ನು ಕಂಡರೆ ಇವರು ಯಾವ ರಾಷ್ಟ್ರಕ್ಕೆ ಸಂಬಂಧ ಪಟ್ಟವರು ಎಂಬ ಅನುಮಾನ ಕಾಡುತ್ತದೆ.

ಅಮೆರಿಕಾದ ಪತ್ರಿಕೆಗಳು ಟ್ರಂಪ್ ವಿರುದ್ಧ ಲೇಖನಗಳನ್ನು ಪ್ರಕಟಿಸುತ್ತಿವೆ. ಅವರೀಗ ಅಮೆರಿಕಾಗಿಂತ ಜಾಸ್ತಿ ಭಾರತವನ್ನು ನಂಬುತ್ತಿದ್ದಾರೆ. ಸುಂಕದ ವಿಚಾರವಾಗಿ ಅಜಿತ್ ಧೋವಲ್‌ರು ಅಮೆರಿಕಾವನ್ನು ಹೆದರಿಸಿದ್ದರ ಪರಿಣಾಮ ಟ್ರಂಪ್ ಮೋದಿಗೆ ಕರೆ ಮಾಡಿ ಟ್ರೇಡ್ ಡೀಲ್ ಮಾಡಿಕೊಂಡಿದ್ದಾರೆ ಎಂದು ಅಮೆರಿಕಾದ ಪತ್ರಿಕೆಗಳು ವರದಿ ಮಾಡುತ್ತಿವೆ. ಭಾರತ ರಷ್ಯಾದಿಂದ ತೈಲ ಖರೀದಿಸುವ ವಿಚಾರದಲ್ಲಿ ಆರಂಭದ ದಿನಗಳಲ್ಲಿ ಟ್ರಂಪ್‌ಗೇನೂ ಸಮಸ್ಯೆಯಿರಲಿಲ್ಲ. ಭಾರತ ಯಾವಾಗ ಟ್ರಂಪ್‌ನ ಟ್ರೇಡ್ ಡೀಲ್‌ಗೆ ಒಪ್ಪಲಿಲ್ಲವೋ ಆಗ ಶುರುವಾಗಿತ್ತು ಹೆದರಿಸುವ ಕೆಲಸ. ಸುಂಕ ಏರಿಸುತ್ತಾ ಸಾಗಿದ ಟ್ರಂಪ್‌ನ ಹುಚ್ಚಾಟಕ್ಕೆ ಭಾರತ ಜಪ್ಪೆಂದಿರಲಿಲ್ಲ. ಈಗ ಒಪ್ಪಂದವಾದ ಮೇಲೆ "ಭಾರತ ಅಮೆರಿಕಾ ಹಾಗೂ ವೆನೆಜುವೆಲಾದಿಂದ ಮಾತ್ರ ಆಯಿಲ್ ಖರೀದಿಸಲಿದೆ, ರಷ್ಯಾದಿಂದ ನಡೆಯುತ್ತಿರುವ ಖರೀದಿ ಸಂಪೂರ್ಣ ಸ್ಥಗಿತಗೊಳ್ಳಲಿದೆ. ಹೀಗೆಂದು ಭಾರತ ಒಪ್ಪಿಕೊಂಡಿದೆ" ಎಂದು ಟ್ರಂಪ್ ಹೇಳಿದ್ದು ನಿಜವೆಂದು ನಂಬಿ ವಿಪಕ್ಷಗಳು ಸರ್ಕಾರದ ವಿರುದ್ಧ ಹರಿಹಾಯತೊಡಗಿದ್ದಾರೆ. ಅಷ್ಟಕ್ಕೂ ರಷ್ಯಾ "ಭಾರತ ಆಯಿಲ್ ಖರೀದಿಯನ್ನು ನಿಲ್ಲಿಸುವ ಯಾವ ಸುಳಿವನ್ನೂ ನಮಗೆ ನೀಡಿಲ್ಲ, ಹಲವು ರಾಷ್ಟ್ರಗಳಿಂದ ಭಾರತ ಆಯಿಲ್ ಖರೀದಿಸುವುದು ಮೊದಲಿಂದಲೂ ನಡೆದು ಬಂದಿರುವ ನೀತಿ. ಆ ವಿಚಾರದಲ್ಲಿ ಭಾರತ ಸಂಪೂರ್ಣ ಸ್ವತಂತ್ರ. ಅವರು ಯಾರಿಂದ ಬೇಕಿದ್ದರೂ ಖರೀದಿಸಬಹುದು" ಎಂಬ ಹೇಳಿಕೆಯನ್ನು ನೀಡುವ ಮೂಲಕ ಭಾರತದೊಂದಿಗೆ ನಿಂತಿದೆ. ಆದರೆ ಭಾರತ ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸುವ ಸಾಧ್ಯತೆಯನ್ನು ಲೆಕ್ಕ ಹಾಕಿ ಇದು ಆಗದ ಮಾತು ಎಂದು ಅಮೆರಿಕಾದ ಪತ್ರಿಕೆಗಳು ಬರೆಯುತ್ತಿದ್ದರೆ ಭಾರತದ ವಿಪಕ್ಷಗಳು ಮಾತ್ರ ಈಗೇನು ಮಾಡುತ್ತೆ ನಿಮ್ಮ ವಿಶ್ವಗುರು ಎಂದು ಪ್ರಶ್ನಿಸುತ್ತಿವೆ!

ವಾಸ್ತವದಲ್ಲಿ ರಷ್ಯಾ ಭಾರತಕ್ಕೆ ರಿಯಾಯಿತಿ ದರದಲ್ಲಿ ತೈಲ ಕೊಡುತ್ತಿರುವುದರಿಂದ ವಾರ್ಷಿಕ ಸುಮಾರು 4ರಿಂದ 5 ಬಿಲಿಯನ್ ಡಾಲರ್‌ನಷ್ಟು ಲಾಭವಾಗುತ್ತಿದೆ. ಹೀಗಾಗಿ ಭಾರತದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯಲ್ಲಿ ಹೆಚ್ಚಿನ ವ್ಯತ್ಯಾಸಗಳನ್ನು ಕಳೆದ ಐದಾರು ವರ್ಷಗಳಿಂದ ನಾವು ಕಾಣುತ್ತಿಲ್ಲ. ಈಗಿನ ಚಿನ್ನ ಬೆಳ್ಳಿಯ ದರದಂತೆ ಪ್ರತಿ ದಿನ ವ್ಯತ್ಯಾಸ ಕಾಣುತ್ತಿದ್ದ ಪೆಟ್ರೋಲಿಯಂ ಬೆಲೆ ಈಗ ಸ್ಥಿರವಾಗಿದೆಯೆಂದರೆ ಅದಕ್ಕೆ ರಷ್ಯಾದ ಆಮದೇ ಕಾರಣ. ದೊಡ್ಡ ಪ್ರಮಾಣದಲ್ಲಿ ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತ ಅದಕ್ಕೊಂದು ಪ್ರಾಕೃತಿಕ ವ್ಯವಸ್ಥೆ ಮಾಡಿಕೊಂಡಿರುತ್ತದೆ. ಈಗ ಅಮೆರಿಕಾದ ಮಾತಿಗೆ ಓಗೊಟ್ಟು ಒಮ್ಮೆಗೇ



ಅದನ್ನು ಸಂಪೂರ್ಣ ನಿಲ್ಲಿಸಿ ಅಮೆರಿಕಾ ಅಥವಾ ವೆನಿಜುವೆಲಾದಿಂದ ಖರೀದಿಸಲು ಸಾಧ್ಯವೇ ಇಲ್ಲ. ಒಂದೊಮ್ಮೆ ಹಾಗೆ ಮನಸ್ಸು ಮಾಡಿದರೂ ಅದಕ್ಕೆ ವ್ಯವಸ್ಥೆ ಮಾಡಿಕೊಳ್ಳಲು ಒಂದೆರಡು ವರ್ಷಗಳಷ್ಟು ಸಮಯ ಬೇಕಾಗುತ್ತದೆ. ಹೆಚ್ಚೆಂದರೆ ಈಗ ರಷ್ಯಾದಿಂದ ಖರೀದಿಸುತ್ತಿರುವ ತೈಲ ಪ್ರಮಾಣದಲ್ಲಿ ಸ್ವಲ್ಪ ಇಳಿಕೆಯಾಗಬಹುದು. ಅಮೆರಿಕಾದಿಂದ ಇರುವ ಶೇ.6 ರಷ್ಟಿರುವ ತೈಲ ಆಮದು ಶೇ.10ರಷ್ಟಾಗಬಹುದು. ಇದಕ್ಕಿಂತ ಹೆಚ್ಚಿನದ್ದೇನೂ ನಡೆಯಲಿಕ್ಕಿಲ್ಲ ಎಂಬುದು ಅಮೆರಿಕಾ ಪತ್ರಿಕೆಗಳ ವಾದ. ಅದು ಸತ್ಯವೂ ಹೌದು. ಆದರಿದು ವಿಪಕ್ಷಗಳಿಗೆ ಅರ್ಥವಾಗುತ್ತಿಲ್ಲ.

ಹೆದರಿಸಿ ಕೆಲಸ ಮಾಡಿಸಿಕೊಳ್ಳುವುದು ಅಮೆರಿಕಾದ ಹಳೆಯ ನೀತಿ. ಅದೇ ನೀತಿಯನ್ನು ವ್ಯಾಪಾರ ಒಪ್ಪಂದದ ವಿಚಾರದಲ್ಲಿ ಟ್ರಂಪ್ ಮುಂದುವರೆಸಿದ್ದರು. ಆದರೆ ಭಾರತ ಬಗ್ಗಲಿಲ್ಲ. ಭಾರತದ ಆರ್ಥಿಕತೆಯನ್ನು ಕುಗ್ಗಿಸುವ ಪ್ರಯತ್ನ ಕಳೆದ ಆಗಸ್ಟ್ ನಿಂದ ಆರಂಭವಾಗಿತ್ತಾದರೂ ಫಲ ನೀಡಲಿಲ್ಲ. ಸುಂಕ ಶೇ.50ಕ್ಕೆ ಏರಿದಾಗಲೂ ಭಾರತ ಜಗ್ಗಿರಲಿಲ್ಲ. "ನಿಮ್ಮ ಈ ಗೊಡ್ಡು ಬೆದರಿಕೆಗಳಿಗೆ ಹೆದರುವವರಲ್ಲ, ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಟ್ರಂಪ್ ಅವಧಿ ಮುಗಿಯುವಲ್ಲಿಯವರೆಗೂ ಕಾಯುವ ತಾಳ್ಮೆ ಹಾಗೂ ಶಕ್ತಿ ನಮಗಿದೆ" ಎಂದು ಅಮೆರಿಕಾದ ಸೆಕ್ರೆಟರಿ ಆಫ್ ಸ್ಟೇಟ್ ಆದ ಮಾರ್ಕೋ ರುಬಿಯೊ ಅವರಿಗೆ ಅಜಿತ್ ದೋವಲ್‌ರು ಸ್ಪಷ್ಟ ಸಂದೇಶ ರವಾನಿಸಿದ್ದರು. ಟ್ರಂಪ್ ಹಿಂದಿನ ಬಾರಿ ಅಧಿಕಾರಕ್ಕೆ ಬರುವಾಗ ಇಲ್ಲಿ ಮೋದಿ ಸರ್ಕಾರವಿತ್ತು. ಅಧಿಕಾರದಿಂದ ಇಳಿಯುವಾಗಲೂ ಮೋದಿ ಸರ್ಕಾರವಿತ್ತು. ಮತ್ತೆ ಅಧಿಕಾರಕ್ಕೆ ಬರುವಾಗಲೂ ಮೋದಿ ಸರ್ಕಾರವಿದೆ. ಟ್ರಂಪ್ ಆಡಳಿತ ಅವಧಿ ಮುಗಿದರೂ ಭಾರತದಲ್ಲಿ ಮೋದಿ ಸರ್ಕಾರದ ಅವಧಿ ಮುಗಿದಿರುವುದಿಲ್ಲ! ಹೀಗಾಗಿ ದೋವಲ್ ಹೇಳಿದ ಮಾತು ಸತ್ಯವಾಗಿದ್ದು ಅವರ ಎಚ್ಚರಿಕೆಗೆ ನಿಜಕ್ಕೂ ಭಯಗೊಂಡಿದ್ದು ಅಮೆರಿಕಾ ಸರ್ಕಾರ ಎಂದು ಅಮೇರಿಕಾದ Bloomberg ಪತ್ರಿಕೆ ವರದಿ ಮಾಡಿದೆ. ಅಮೆರಿಕಾದ ಬೆದರಿಕೆಗೆ ಭಾರತ ಬಗ್ಗುವುದಿಲ್ಲ ಎಂಬುದನ್ನು ಅರಿತ ಮೇಲೆ ಅಮೆರಿಕಾ ಮೆತ್ತಗಾಗದೆ ಬೇರೆ ದಾರಿ ಇರಲಿಲ್ಲ. ಭಾರತವೀಗ ಮೊದಲಿನಂತಿಲ್ಲ ಎಂಬುದು ಅಮೆರಿಕಾಕ್ಕೆ ಅರ್ಥವಾದಷ್ಟು ವಿಪಕ್ಷಗಳಿಗೆ ಅರ್ಥವಾಗುತ್ತಿಲ್ಲ.

'ಐ ಲವ್ ಇಂಡಿಯಾ, ಮೋದಿ ಈಸ್ ಮೈ ಫ್ರೆಂಡ್' ಎನ್ನುತ್ತಿದ್ದ ಟ್ರಂಪ್ ತಲೆಗೆ ತಾನೇ ದೊಡ್ಡಣ್ಣ ಎಂಬ ಭ್ರಮೆ ಕಾಡಿದಾಗ ಸ್ವಲ್ಪ ಮಟ್ಟಿಗೆ ಭಾರತವನ್ನು ಹೆದರಿಸುವ ಕಾರ್ಯಕ್ಕೆ ಮುಂದಾದರು. ಆದರೆ ಭಾರತ ಸರ್ಕಾರ ಗಟ್ಟಿ ನಿಂತಾಗ ಮತ್ತೆ ತಣ್ಣಗಾಗದೆ ವಿಧಿಯಿಲ್ಲದಾಯ್ತು. ಟ್ರಂಪ್‌ರ ಆಪ್ತ ಕಾರ್ಯದರ್ಶಿಯಾದ ಕರೋಲಿನ್ ಲೀವಿಟ್ ವ್ಯಾಪಾರ ಒಪ್ಪಂದವನ್ನು ಉಲ್ಲೇಖಿಸುತ್ತಾ "ಟ್ರಂಪ್ ವಿಶ್ವನಾಯಕರ ಜೊತೆ ಮಾತನಾಡಲು ಸದಾ ಉತ್ಸುಕರಾಗಿರುತ್ತಾರೆ. ಆದರೆ ಪ್ರಧಾನಿ ನರೇಂದ್ರ ಮೋದಿಯವರ ವಿಚಾರ ಬಂದಾಗ ಅದು ಬೇರೆಯದ್ದೆ ಮಟ್ಟದಲ್ಲಿರುತ್ತದೆ" ಎಂಬ ಹೇಳಿಕೆ ನೀಡಿದ್ದಾರೆ. ಈ ಮೂಲಕ ಭಾರತದ ಪ್ರಧಾನಿ ನಮಗೆ ಬಹಳ ಪ್ರಮುಖರು ಎಂಬ ವಿಚಾರವನ್ನು ಅವರು ಒತ್ತಿ ಹೇಳುತ್ತಿದ್ದಾರೆ. ಟ್ರಂಪ್ ಅಂತೂ ಮೋದಿಯ ಬಗ್ಗೆ ಬಹಳ ಉತ್ತಮ ಮಾತುಗಳನ್ನಾಡುತ್ತಿದ್ದಾರೆ. Truth Social ಎಂಬ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಭಾರತದ 'ಇಂಡಿಯಾ ಗೇಟ್'ನ ಚಿತ್ರವನ್ನು ಹಂಚಿಕೊಂಡಿದ್ದಾರೆ. ಇದೇ ಅಮೇರಿಕಾದ ಕೆಲ ತಿಂಗಳುಗಳ ಹಿಂದಿನ ಧೋರಣೆಗೂ ಈಗಕ್ಕೂ ಬಹಳ ವ್ಯತ್ಯಾಸವಿದೆ. ಹಿಂದೆ ಟ್ರಂಪ್ ಟೀಂನಲ್ಲಿದ್ದವರೆಲ್ಲರೂ ಭಾರತದ ವಿರುದ್ಧ ಹರಿಹಾಯ್ದಿದ್ದರು. ಲಿಂಡ್ಸೆ ಗ್ರಹಮ್ ಎಂಬ ಒಬ್ಬ ಸಾಮಾನ್ಯ ಸಂಸದ ಕೂಡ ಭಾರತದ ವಿರುದ್ಧ ಮಾತನಾಡುತ್ತಿದ್ದ. ಹೌವಾರ್ಡ್ ಲುಟ್ನಿಕ್ ಎಂಬಾತ "ಇನ್ನೆರಡು ತಿಂಗಳೊಳಗೆ ಭಾರತ ನಮ್ಮ ಬಳಿ ಬಂದು ಕ್ಷಮೆ ಯಾಚಿಸಲಿದೆ, ವ್ಯಾಪಾರ ಒಪ್ಪಂದ ಮಾಡಿಕೊಳ್ಳಬೇಕೋ ಬೇಡವೋ ಎಂದು ಅನಂತರ ಟ್ರಂಪ್ ನಿರ್ಧರಿಸುತ್ತಾರೆ" ಎಂಬ ಹೇಳಿಕೆ ನೀಡಿದ್ದ. ಭಾರತಕ್ಕೆ ಅತಿದೊಡ್ಡ ವ್ಯಾಪಾರ ಪಾಲುದಾರ ಅಮೆರಿಕಾ, ನಮ್ಮ ಅತಿ ಹೆಚ್ಚಿನ ರಫ್ತು ವಹಿವಾಟಿರುವುದು ಅಮೆರಿಕಾದೊಂದಿಗೆ ಹೀಗಾಗಿ ಭಾರತ ಮೆತ್ತಗಾಗಲೇಬೇಕು. ಅಮೆರಿಕಾದೆದುರು ಮಂಡಿಯೂರಲೇಬೇಕು ಎಂಬ ಭ್ರಮೆಯಲ್ಲಿದ್ದ ಅಮೆರಿಕಾದ ನಿರೀಕ್ಷೆ ಸುಳ್ಳಾಗಿದೆ. ಅಜಿತ್ ದೋವಲ್ ನಾವು ಕಾಯಲು ಸಿದ್ಧರಿದ್ದೇವೆ ಎಂದರು. ಭಾರತ ಹೊಸ ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಲಾರಂಭಿಸಿತು. ಹೀಗೆ ಒತ್ತಡ ಹೇರಹೊರಟ ಅಮೆರಿಕಾ ತಾನೇ ಒತ್ತಡಕ್ಕೆ ಸಿಲುಕಿ ಭಾರತಕ್ಕೆ ಮಣಿದು ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ ಎಂಬುದು ಅಮೆರಿಕಾದ ಮಾಧ್ಯಮಗಳ ವಾದ. ಸದ್ಯಕ್ಕಂತೂ ಟ್ರಂಪ್‌ರನ್ನು ಅಮೆರಿಕಾದ ಪ್ರಜೆಗಳು ಬಿಡಿ ಅಮೆರಿಕಾದ ಪ್ರಮುಖ ಪತ್ರಿಕೆಗಳೂ ನಂಬುತ್ತಿಲ್ಲ. ಆದರೆ ಭಾರತದ ವಿಪಕ್ಷಗಳು ಮಾತ್ರ ಅವರ ಮಾತನ್ನು ವೇದವಾಕ್ಯವೆಂದು ಪರಿಗಣಿಸಿವೆ.

ಶ್! ಇದು ಪರೀಕ್ಷಾ ಸಮಯ

ಡಾ.ಮೈತ್ರಿ ಭಟ್, ವಿಟ್ಲ



ಜನವರಿ ಕಳೆದು ಫೆಬ್ರವರಿ ತಿಂಗಳು ಕಾಲಿಡುತ್ತಿದ್ದ ಹಾಗೆ ವಿದ್ಯಾರ್ಥಿಗಳಲ್ಲಿ ಅದೇನೋ ಒಂದು ರೀತಿಯ ಭಯ, ಗಾಬರಿ, ಗೊಂದಲ, ಚಡಪಡಿಕೆ ಮನದೊಳಗೆ ಮೂಡಲಾರಂಭಿಸುತ್ತದೆ. ಮಾರ್ಚ್ ಬಂತೆಂದರೆ ಕೇಳುವುದೇ ಬೇಡ. ಬಿಸಿಲಿನ ಕಾವಿನೊಡನೆ ಮೂಡುವ ಪರೀಕ್ಷೆಯ ಕಾವು ಮನೆಯೊಳಗೆ ಒಂದು ಬಗೆಯ ಬಿಸಿ ವಾತಾವರಣವನ್ನು ಸೃಷ್ಟಿಸುತ್ತದೆ. ವಿದ್ಯಾರ್ಥಿಗಳಿಗೆ ಅವರ ವಿದ್ಯಾರ್ಥಿ ಬದುಕಿನ ಅಗ್ನಿಪರೀಕ್ಷೆ ಈ ಸಮಯದಲ್ಲಿ ಆರಂಭವಾಗುತ್ತದೆ. ಅದುವರೆಗೆ ಶಾಲೆಯಲ್ಲಿ ನಡೆದ ಪಾಠ, ಪ್ರವಚನಗಳನ್ನು ಸರಿಯಾಗಿ ಓದಿ ಯಾವುದೇ ರೀತಿಯಲ್ಲಿ ಭಯ, ಗೊಂದಲಕ್ಕೆ ಒಳಗಾಗದೆ ಮೂರು ಗಂಟೆಗಳಲ್ಲಿ ನೆನಪಿನಿಂದ ಹೆಕ್ಕಿ ತೆಗೆದು ಸಲೀಸಾಗಿ ಪ್ರಶ್ನೆಗಳಿಗೆ ಉತ್ತರಿಸುವುದು ವಿದ್ಯಾರ್ಥಿ ಜೀವನದಲ್ಲಿ ಎದುರಿಸುವ ಬಹುಮುಖ್ಯ ಸವಾಲೇ ಆಗಿರುತ್ತದೆ.

ಎಲ್ಲಾ ವಿದ್ಯಾರ್ಥಿಗಳ ಮನಃಸ್ಥಿತಿ ಒಂದೇ ಆಗಿರುವುದಿಲ್ಲ. ಕೆಲವರು ಅಂದಂದಿನ ಪಾಠ ಅಂದೇ ಓದಿ ಪರೀಕ್ಷೆಗೆ ಬೇಕಾದ ತಯಾರಿ ನಡೆಸಿದ್ದರೆ, ಇನ್ನೂ ಕೆಲವರು ಪರೀಕ್ಷೆಯ ಹಿಂದಿನ ದಿನ ಮೆಲ್ಲನೆ ಪುಸ್ತಕ ತೆರೆಯುತ್ತಾರೆ. ಹಾಗೆಂದು ಪರೀಕ್ಷಾ ಭಯ ಓದದ ವಿದ್ಯಾರ್ಥಿಗೆ ಮಾತ್ರ ಇರುತ್ತದೆ ಅಥವಾ ಇರಲೇಬೇಕು ಎಂದೇನೂ ಇಲ್ಲ. ಬದುಕಿನ ಯಾವುದೋ ಕ್ಷಣದಲ್ಲಿ ಈ ಭಯ ಹೆಚ್ಚಿನ ಎಲ್ಲರನ್ನೂ ಕಾಡಿರುತ್ತದೆ.

ಪರೀಕ್ಷೆ ಎನ್ನುವುದು ವಿದ್ಯಾರ್ಥಿಯ ಜೀವನಘಟ್ಟದಲ್ಲಿ ಮಹತ್ತರವಾದ ಮೈಲುಗಲ್ಲು. ಪರೀಕ್ಷೆಯಲ್ಲಿ ಜಯವನ್ನು ಸಾಧಿಸಿ ಬರುವುದಕ್ಕೆ ಅದು ಯುದ್ಧವೇನೂ ಅಲ್ಲ. ಇಲ್ಲಿ ನಮ್ಮೊಡನೆ ನಾವು ಸ್ಪರ್ಧಿಸಬೇಕಿದೆ. ಅದು ಶಿಕ್ಷಣದ ಒಂದು ಮೆಟ್ಟಿಲು ಏರಿದುದರ ಸೂಚಕ. ಪರೀಕ್ಷೆ ಎನ್ನುವುದು ಕೊನೆಯ ಅವಕಾಶವಲ್ಲ; ಅದು ಸುದೀರ್ಘ ಜೀವನವನ್ನು ಕಳೆಯಲು ನಮ್ಮನ್ನು ನಾವು ರೂಪಿಸಿಕೊಳ್ಳುವ ಸದವಕಾಶ. ಪ್ರತಿಯೊಬ್ಬ ಹೆತ್ತವರೂ ತಮ್ಮ ಮಕ್ಕಳು ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಲಿ ಎಂದು ಆಶಿಸುವುದು ಸಹಜ. ವಿದ್ಯಾರ್ಥಿಯು ಮನಸ್ಸಿನ ಚಂಚಲತೆಯನ್ನು ಹೋಗಲಾಡಿಸಿ ಏಕಾಗ್ರತೆಯಿಂದ ಯಾವ ರೀತಿ ತನ್ನನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಪರೀಕ್ಷೆಯ ಸಮಯದಲ್ಲಿ ತೊಡಗಿಸಿಕೊಳ್ಳುತ್ತಾನೆ ಎಂಬುದರ ಮೇಲೆ ವಿದ್ಯಾರ್ಥಿಯ ಭವಿಷ್ಯ ಅಡಗಿರುತ್ತದೆ.

ತಾವು ಕಲಿಸಿದ ವಿದ್ಯೆಯನ್ನು ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಕಲಿತಿದ್ದಾರೆ ಎಂಬುದನ್ನು ಪರೀಕ್ಷಿಸುವ ಪರಿಪಾಠ ಇಂದು ನಿನ್ನೆಯದಲ್ಲ, ಅದು ಪುರಾಣ ಕಾಲದಿಂದಲೂ ನಡೆದು ಬಂದಿದೆ. ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳು ಕಾಲಕಾಲಕ್ಕೆ ಪಡೆದ ಜ್ಞಾನ, ಕೌಶಲಗಳನ್ನು ಅಳೆಯಲಾಗುತ್ತದೆ. ಇದರಿಂದ ನಮ್ಮ ಜ್ಞಾನ, ಕೌಶಲದ ಮಟ್ಟವನ್ನು ತಿಳಿದು ದೌರ್ಬಲ್ಯಗಳನ್ನು ಉತ್ತಮಪಡಿಸಿಕೊಳ್ಳಬಹುದು. ಇಂದು ಅದು ಭವಿಷ್ಯವನ್ನು ನಿರ್ಧರಿಸುವ ಮಾರ್ಗವೂ ಆಗಿದೆ.

ಚೆನ್ನಾಗಿ ಓದಿ ತಯಾರಿ ನಡೆಸಿದ ವಿದ್ಯಾರ್ಥಿ ಕೂಡಾ ಓದಿದ್ದೆಲ್ಲ ಎಲ್ಲಿ ಮರೆತು ಹೋಗುವುದೋ ಎಂದು ಚಿಂತಿಸಿದರೆ, ಓದದೇ ಇರುವ ವಿದ್ಯಾರ್ಥಿಯ ಆತಂಕ ಹೇಳತೀರದು. ಬದಲಾದ ಸಾಮಾಜಿಕ ಪರಿಸ್ಥಿತಿ ಹಾಗೂ ಹೆಚ್ಚಿದ ಸಾಮಾಜಿಕ ಒತ್ತಡದಿಂದ 'ಪರೀಕ್ಷೆ' ಎಂಬುದು 'ಆತಂಕ'ವಾಗಿ ಹಿಂದೆಂದೂ ಕಾಣದಷ್ಟು ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಒಂಭತ್ತನೆಯ ತರಗತಿಯವರೆಗೆ ವಿದ್ಯಾರ್ಥಿಗಳನ್ನು ಫೇಲ್ ಮಾಡುವಂತಿಲ್ಲ ಎನ್ನುವ ಸತ್ಯ ಗೊತ್ತಿದ್ದರೂ ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಆತಂಕ ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲ. ಬದಲಾಗಿ ಎಲ್‌ಕೆಜಿ, ಯುಕೆಜಿಯಲ್ಲಿ ಕಲಿಯುತ್ತಿರುವ ಮಕ್ಕಳೂ ಕೂಡಾ ಪರೀಕ್ಷೆಯೆಂದರೆ ಭಯಪಡುವ ಸಂದರ್ಭಗಳನ್ನು ಕಾಣುತ್ತಿದ್ದೇವೆ.

ಇಂತಹ ಕಾಲೇಜಿನಲ್ಲೇ ಸೀಟ್ ತೆಗೆದುಕೊಳ್ಳಬೇಕು, ಇದೇ ವಿಷಯ, ವೃತ್ತಿ ಆಯ್ಕೆಯ ಚಿಂತನೆಗಳು, ಹೆಚ್ಚುತ್ತಿರುವ

ಪರೀಕ್ಷೆಯು ವಿದ್ಯಾರ್ಥಿಗಳನ್ನು ಹೆದರಿಸಲು ಬರುವುದಿಲ್ಲ, ಅದು ವಿದ್ಯಾರ್ಥಿಗಳ ಪ್ರತಿಭೆ, ಸಾಮರ್ಥ್ಯವನ್ನು ಪ್ರದರ್ಶಿಸಲು ಒಂದು ಸದವಕಾಶವಾಗಿರುತ್ತದೆ.



ಸಹಪಾಠಿಗಳೊಂದಿಗಿನ ಸ್ಪರ್ಧೆ, ಇತರರೊಂದಿಗೆ ಹೋಲಿಕೆ, ತಮ್ಮ ಸ್ಥಾನ ಕಾಯ್ದಿರಿಸಿಕೊಳ್ಳಲು ಉಂಟಾಗುವ ಸ್ಪರ್ಧೆ, ಪೋಷಕರ ಹೆಚ್ಚಿನ ನಿರೀಕ್ಷೆಗಳ ಕಾರಣ ಮಕ್ಕಳಲ್ಲಿ ಒತ್ತಡ, ಆತಂಕ ಮತ್ತು ಭಯ ಹೆಚ್ಚಾಗುತ್ತದೆ. ಈ ಪರೀಕ್ಷಾ ಸಮಯ ಎಂಬುದು ವರ್ಷದಲ್ಲಿ ಒಮ್ಮೆ ಎದುರಾಗುವ ಒತ್ತಡದ ಸಮಯ. ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ, ಚೆನ್ನಾಗಿ ಅಭ್ಯಾಸ ಮಾಡಿದ್ದರೆ ಪರೀಕ್ಷೆಗೆ ಹೆದರಬೇಕಿಲ್ಲ. ನಿಜವಾಗಿ ನೋಡಿದರೆ ಪರೀಕ್ಷೆ ವಿದ್ಯಾರ್ಥಿಗಳನ್ನು ಹೆದರಿಸಲು ಬರುವುದಿಲ್ಲ. ಬದಲಿಗೆ ವಿದ್ಯಾರ್ಥಿಗಳ ಪ್ರತಿಭೆ, ಸಾಮರ್ಥ್ಯವನ್ನು ಪ್ರದರ್ಶಿಸಲು ಒಂದು ಸದವಕಾಶವಾಗಿರುತ್ತದೆ.

ಬಾಲ್ಯ ಎನ್ನುವುದು ಸುಂದರ ಸಮಯ. ತನ್ನ ಸುತ್ತಲಿನ ಪರಿಸರ, ತಾನು ಬೆಳೆಯುವ ವಾತಾವರಣ ಪ್ರತಿಯೊಂದು ವಿದ್ಯಾರ್ಥಿಯ ಬದುಕಿನ ಮೇಲೆ ಅಗಾಧವಾದಂತಹ ಪರಿಣಾಮವನ್ನು ಬೀರುತ್ತದೆ ಎನ್ನುವ ವಿಚಾರ ನಮಗೆಲ್ಲರಿಗೂ ತಿಳಿದೇ ಇದೆ. ಬಾಲ್ಯವನ್ನು ಬಾಲ್ಯವನ್ನಾಗಿಯೇ ಉಳಿಸಿ ಅವರ ಮನಸ್ಸಿನ ಎಲ್ಲಾ ಮುಗ್ಧ ಕನಸು ಕಲ್ಪನೆಗಳನ್ನು ಹಾಗೆಯೇ ಬೆಳೆಯಲು ಅವಕಾಶ ನೀಡಿದಾಗ ಅವರು ಪ್ರಬುದ್ಧರಾಗಿ, ಸುಂದರ ಮನಸ್ಸಿನ ಮೂಲಕ ಸ್ವಚ್ಛ ಮನಸ್ಸಿನ ಕಳಂಕರಹಿತ ರೀತಿಯಲ್ಲಿ ಬೆಳೆಯಲು ಸಾಧ್ಯ. ಆದರೆ ಮನಸ್ಸಿನ ತುಂಬಾ ಗೊಂದಲ, ಆತಂಕಗಳೇ ಮನೆ ಮಾಡಿದಾಗ ಅವರ ಭವಿಷ್ಯ ಎನ್ನುವುದು ಕತ್ತಲಲ್ಲಿ ಕರಟಿ ಹೋಗದೇ?

ಪರೀಕ್ಷೆ ಎನ್ನುವುದು ಮಕ್ಕಳ ಮನದ ಗಟ್ಟಿತನದ ಪರೀಕ್ಷೆ ಆಗದಿರಲಿ. ಅವರ ಮನಸ್ಸನ್ನು ಗೊಂದಲಕ್ಕೆ ದೂಡಿ, ಆತಂಕಕ್ಕೆ ಕಾರಣವಾಗಿ ಅವರ ಮನಸ್ಸಿನಲ್ಲಿ ಉಂಟಾದ ಗೊಂದಲ, ಭಯ, ಆತಂಕಗಳ ಪರಿಣಾಮವಾಗಿ ಅವರು ಯಾವುದೇ ರೀತಿಯ ತಪ್ಪು ನಿರ್ಧಾರಗಳಿಗೆ ಬರುವಂತೆ ಮಾಡದಿರಲಿ. ಅವರ ಮನಸ್ಸಿಗೆ ಯಾವುದೇ ಘಾಸಿಯನ್ನು ಉಂಟುಮಾಡದಿರಲಿ. ಮಕ್ಕಳ ಮನಸ್ಸಿನ ಚಿಂತನೆಯನ್ನು ಮಾಡುವಂತಹ ಖಚಿತ, ಸ್ಪಷ್ಟ ನಿರ್ಧಾರಗಳು ಹರಿದು ಬರಲಿ ಎಂಬ ಆಶಯವನ್ನು ಮತ್ತೆ ಹೊಂದಬೇಕಾದ ಮಕ್ಕಳ ಬಾಲ್ಯದ ಮತ್ತು ಶಿಕ್ಷಣದ ಬಗೆಗೆ ಆತಂಕಿರಾಗಬೇಕಾದ ಆಲೋಚಿಸಬೇಕಾದ ಕ್ಷಣದ ಎದುರಿನಲ್ಲಿ ನಾವಿದ್ದೇವೆ ಮತ್ತೆ ಮತ್ತೆ ಈ ಬಗ್ಗೆ ಒಂದಷ್ಟು ಚಿಂತನೆಗಳು ಎಲ್ಲೆಡೆಯಿಂದ ಹರಿದು ಬರಲಿ ಎಂಬ ಆಶಯವನ್ನು ಇಟ್ಟು ಸಾಗೋಣ.

ಅವ್ಯವಸ್ಥೆ ಸರಿಪಡಿಸುವುದಾಗಿ ಮೋದಿ ಭರವಸೆ

ವಿಕಸಿತ ಪ.ಬಂಗಾಳಕ್ಕೆ ಸಂಪೂರ್ಣ ಸಹಕಾರ



ಕೋಲ್ಕತ್ತಾ : ಮಮತಾ ಬ್ಯಾನರ್ಜಿ ಆಡಳಿತದಲ್ಲಿ ರಾಜ್ಯದ ಎಲ್ಲಾ ವರ್ಗದ ಜನರು ಎದುರಿಸುತ್ತಿರುವ ವಂಚನೆ, ವೇದನೆ ಅತ್ಯಂತ ದಯನೀಯ. ವಿಕಸಿತ ಪಶ್ಚಿಮ ಬಂಗಾಳ ರಚನೆ ಮೂಲಕ ತಾನು ಈ ಅವ್ಯವಸ್ಥೆಯನ್ನು ಸರಿಪಡಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಬಂಗಾಳದ ಜನರಿಗೆ ಭರವಸೆ ನೀಡಿದ್ದಾರೆ. ಪ.ಬಂಗಾಳದಲ್ಲಿ ವಿಧಾನಸಭಾ ಚುನಾವಣೆ ಘೋಷಣೆಯಾಗಲು ಕೆಲ ವಾರಗಳು ಬಾಕಿಯಿರುವಂತೆ ಪ್ರಧಾನಿ ಮೋದಿ ಜನರಿಗೆ ಧೈರ್ಯ ತುಂಬಿದ್ದಾರೆ. ರಾಜಕೀಯ ಬದಲಾವಣೆ ಅನಿವಾರ್ಯ. ಆದರೆ ಮತದಾರರು ನ್ಯಾಯೋಚಿತ ಆಯ್ಕೆ ಮಾಡಿದಲ್ಲಿ ಪಶ್ಚಿಮ ಬಂಗಾಳದಲ್ಲೂ ದೇಶದ ಇತರೆಡೆ ಗೋಚರಿಸುತ್ತಿರುವ ಅಭಿವೃದ್ಧಿ ಸಾಕಾರವಾಗಲು ಸಾಧ್ಯವೆಂದು ಹೇಳಿದ್ದಾರೆ. ಬಂಗಾಳಿಯಲ್ಲಿ ಬರೆದಿರುವ ಬಹಿರಂಗ ಪತ್ರದಲ್ಲಿ ಜೈ ಮಾ ಕಾಳಿ ಎಂದು ಲಿಖಿತ ಘೋಷಣೆ ಮಾಡಿದ್ದಾರೆ. ಅಸಮರ್ಪಕ ಆಡಳಿತ , ನಕಲಿ ಮತದಾರರಿಗಾಗಿ ತುಷ್ಟೀಕರಣ ರಾಜನೀತಿ, ಉದ್ಯೋಗ ಕೊರತೆ ಮತ್ತು ಮಹಿಳೆಯರ ಸುರಕ್ಷೆಯ ಕೊರತೆ ಇತ್ಯಾದಿ ಎಲ್ಲಾ ವಿಚಾರಗಳಲ್ಲೂ ಟಿಎಂಸಿ ಸರಕಾರವನ್ನು ಪ್ರಧಾನಿ ಮೋದಿ ಪತ್ರದಲ್ಲಿ ಕಟುವಾಗಿ ತರಾಟೆಗೆತ್ತಿಕೊಂಡಿದ್ದಾರೆ.

ನಿರಾಶ್ರಿತರಿಗೆ ಪೌರತ್ವ: 'ನಿರಾಶ್ರಿತರಿಗೆ ಸಿಎಎ ಮುಖೇನ ಪೌರತ್ವ ನೀಡುತ್ತೇನೆ. ರಾಜ್ಯದ ಗಡಿಗಳಿಂದಾಗಿ ಅಕ್ರಮ ನುಸುಳುವಿಕೆಯನ್ನು ನಿಲ್ಲಿಸುವುದಾಗಿ ಪ್ರಧಾನಿ ಮೋದಿ ಚುನಾವಣಾ ಪೂರ್ವ ಭರವಸೆಗಳನ್ನು ನೀಡಿದ್ದಾರೆ. ಸ್ವಾತಂತ್ರ್ಯನಂತರ ಭಾರತದಲ್ಲಿ ಬಂಗಾಳವು ಹಣಕಾಸು ಮತ್ತು ಉದ್ದಿಮೆ ರಂಗಗಳಲ್ಲಿ ಮುಂದಾಳುತ್ವ ವಹಿಸಿದ್ದ ರಾಜ್ಯ. ಆದರಿಂದು ರಾಜ್ಯದ ರೋಗಗ್ರಸ್ಥ ದುಸ್ಥಿತಿ ಕಾಣುವಾಗ ವೇದನೆಯಾಗುತ್ತಿದೆ. ಆರು ದಶಕಗಳ ದುರಾಡಳಿತ ಮತ್ತು ತುಷ್ಟೀಕರಣ ರಾಜನೀತಿಯಿಂದ ಪ.ಬಂಗಾಳಕ್ಕಾಗಿರುವ ಹಾನಿಯನ್ನು ವರ್ಣಿಸಲಸಾಧ್ಯವೆಂದು ಹೇಳಿದ್ದಾರೆ.

ಆವರಿಸಿದೆ ಕತ್ತಲೆ: ಒಂದೆಡೆ ಸರಿಯಾದ ಉದ್ಯೋಗಾವಕಾಶವಿಲ್ಲದೆ ಯುವಕರು ನೆರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದರೆ ,ಮಗದೊಂದೆಡೆ ಮಾತೆಯರು ಸುರಕ್ಷಾ ಕೊರತೆಯಿಂದ ಭಯಭೀತರಾಗಿದ್ದಾರೆ. ಸ್ವಾಮಿ ವಿವೇಕಾನಂದ, ಋಷಿ ಅರಬಿಂದೊ, ಸುಭಾಷ್ ಚಂದ್ರ ಬೋಸ್, ರಬೀಂದ್ರನಾಥ ಠಾಗೋರ್, ಶ್ಯಾಮ ಪ್ರಸಾದ್ ಮುಖರ್ಜಿಯವರಂತಹ ಸಾಕಷ್ಟು ಸಂಖ್ಯೆಯ ರಾಜಕೀಯ , ಸಾಂಸ್ಕೃತಿಕ ದಂತಕಥೆಗಳು ಬಾಳಿದ ನಾಡಿದು. ಆದರೆ ಇಂದು ಈ ರಾಜ್ಯವನ್ನು ಕಗ್ಗತ್ತಲೆ ಆವರಿಸಿದೆ ಎಂದು ಪ್ರಧಾನಿ ಮೋದಿ ಖೇದ ವ್ಯಕ್ತಪಡಿಸಿದ್ದಾರೆ.

ಲುಟಿನ್ಸ್ ಪ್ರತಿಮೆ ಜಾಗಕ್ಕೆ ರಾಜಾಜಿ ಪ್ರತಿಮೆ

ಹೊಸದಿಲ್ಲಿ: ರಾಷ್ಟ್ರಪತಿ ಭವನದಲ್ಲಿದ್ದ ಬ್ರಿಟಿಷ್ ವಾಸ್ತುಶಿಲ್ಪಿ ಎಡ್ವಿನ್ ಲುಟಿನ್ಸ್ ಪ್ರತಿಮೆ ಜಾಗದಲ್ಲಿ ಸ್ವತಂತ್ರ ಭಾರತದ ಮೊದಲ ಮತ್ತು ಏಕೈಕ ಭಾರತೀಯ ಗವರ್ನರ್ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರಿ (ರಾಜಾಜಿ) ಅವರ ಪ್ರತಿಮೆ ಸ್ಥಾಪಿಸಲಾಗಿದೆ. ಅಶೋಕ ಮಂಟಪದ ಸಮೀಪ, ಮಹಾತ್ಮ ಗಾಂಧಿಯವರ ಪ್ರತಿಮೆಗೆ ಎದುರಾಗಿ ಇದನ್ನು ಸ್ಥಾಪಿಸಲಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಪ್ರತಿಮೆಯನ್ನು ಅನಾವರಣಗೊಳಿಸಿದ್ದು, ಈ ವೇಳೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಸೇರಿದಂತೆ ಗಣ್ಯರು ಹಾಜರಿದ್ದರು.

ರಾಷ್ಟ್ರಪತಿ ಕಚೇರಿ ಪ್ರಕಟಣೆಯ ಪ್ರಕಾರ, ವಸಾಹತು ಮನೋಭಾವದ ಅವಶೇಷಗಳನ್ನು ತೊಡೆದುಹಾಕುವ ಕ್ರಮಗಳ ಸರಣಿಯ ಭಾಗವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸಂದೇಶ ಕಳಿಸಿದ್ದು, ಇದನ್ನು 'ಮನೋವೈಜ್ಞಾನಿಕ ವಸಾಹತುಮುಕ್ತಿಯ ಮಹತ್ವದ ಹೆಜ್ಜೆ' ಎಂದು ವಿವರಿಸಿದರು. ಅನಾವರಣದ ಬಳಿಕ ರಾಷ್ಟ್ರಪತಿ ಅವರು ರಾಜಾಜಿ ಉತ್ಸವದಲ್ಲಿ ಭಾಗವಹಿಸಿ, ರಾಜಾಜಿಯವರ ಜೀವನ ಕುರಿತ ಪ್ರದರ್ಶನ ವೀಕ್ಷಿಸಿದರು. ರಾಜಾಜಿಯವರ ಬಹುಮುಖ ಕೊಡುಗೆಗಳನ್ನು ರಾಷ್ಟ್ರಪತಿಗಳು ಸ್ಮರಿಸಿದರು. ರಾಜಾಜಿ ಉತ್ಸವದ ಅಂಗವಾಗಿ ಮಂಗಳವಾರದಿಂದ ಮಾ. 1ರವರೆಗೆ ಅಮೃತ ಉದ್ಯಾನದಲ್ಲಿ ಪ್ರದರ್ಶನ ನಡೆಯಲಿದೆ.

ದೈಹಿಕ ಸಂಬಂಧ ಬೆಳೆಸಿ ವಿವಾಹ ನಿರಾಕರಣೆ: ದಿಲ್ಲಿ ಹೈ ಆಕ್ರೋಶ

ಕುಂಡಲಿ ನೆಪದಲ್ಲಿ ವಿವಾಹ ನಿರಾಕರಣೆ ಸಲ್ಲ

ಹೊಸದಿಲ್ಲಿ: ವಿವಾಹದ ಭರವಸೆಯ ಆಧಾರದ ಮೇಲೆ ದೈಹಿಕ ಸಂಬಂಧ ಬೆಳೆಸಿದ ಬಳಿಕ ಕುಂಡಲಿ(ಜಾತಕ) ಹೊಂದಿಕೆಯಾಗಿಲ್ಲವೆಂಬ ಕಾರಣಕ್ಕೆ ಮದುವೆಗೆ ನಿರಾಕರಿಸುವುದು ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಕಲಂ 69 ಅಡಿಯಲ್ಲಿ ಅಪರಾಧಕ್ಕೆ ಒಳಪಡಬಹುದು ಎಂದು ದಿಲ್ಲಿ ಹೈಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ಮಹಿಳೆಯೊಂದಿಗೆ ದೈಹಿಕ ಸಂಬಂಧಗಳನ್ನು ಹೊಂದಿ ಬಳಿಕ ಜಾತಕಗಳು ಹೊಂದಿಕೆಯಾಗಿಲ್ಲವೆಂಬ ನೆಪದಲ್ಲಿ ವಿವಾಹ ನಿರಾಕರಿಸಿದ ಆರೋಪ ಎದುರಿಸುತ್ತಿರುವ ವ್ಯಕ್ತಿಗೆ ಜಾಮೀನು ನೀಡಲು ನಿರಾಕರಿಸಿದ ವೇಳೆ ನ್ಯಾಯಾಲಯ ಈ ಆದೇಶ ನೀಡಿದೆ. ಆರೋಪಿತನು ಕುಂಡಲಿ ಹೊಂದಿಕೆ ಸೇರಿದಂತೆ ವಿವಾಹಕ್ಕೆ ಯಾವುದೇ ಅಡೆತಡೆಗಳಿಲ್ಲವೆಂದು ಭರವಸೆ ನೀಡಿದ್ದ ಹಿನ್ನೆಲೆ, ದೈಹಿಕ ಸಂಬಂಧಗಳು ನಿರಂತರವಾಗಿ ನಡೆದಿರುವುದು ಪ್ರಕರಣದ ಗಂಭೀರತೆಯನ್ನು ತೋರಿಸುತ್ತದೆ. ಈ ಹಂತದಲ್ಲಿ ಆರೋಪಿತನ ನಡೆ ಪರಿಶೀಲನೆಗೆ ಒಳಪಡುತ್ತದೆ ಎಂದು ನ್ಯಾಯಾಲಯ ತಿಳಿಸಿದೆ.

ಜ.4ರಿಂದ ನ್ಯಾಯಾಂಗ ಬಂಧನದಲ್ಲಿರುವ ಆರೋಪಿತ, ಸಂಬಂಧ ಪರಸ್ಪರ ಸಮ್ಮತಿಯ ಮೇಲಾಗಿದ್ದು, ಇಬ್ಬರೂ ದೀರ್ಘಕಾಲದಿಂದ ಪರಿಚಿತರಾಗಿದ್ದರು ಎಂಬ ಕಾರಣ ನೀಡಿ ಜಾಮೀನು ಕೋರಿದ್ದ. ವಿವಾಹದ ಸುಳ್ಳು ಭರವಸೆಯ ಆಧಾರದ ಮೇಲೆ ಅತ್ಯಾಚಾರ ಆರೋಪ ಅನ್ವಯಿಸುವುದಿಲ್ಲ ಎಂದು ಆವನ ಪರ ವಕೀಲರು ವಾದಿಸಿದ್ದರು.



ಭಯೋತ್ಪಾದನೆ ವಿರುದ್ಧ ಪ್ರಹಾರ

ಕೇಂದ್ರ ಗೃಹ ಇಲಾಖೆಯಿಂದ ರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ನೀತಿ ಪ್ರಹಾರ್ ಘೋಷಣೆ

ಭಯೋತ್ಪಾದಕ ದಾಳಿಗಳನ್ನು ಪರಿಣಾಮಕಾರಿಯಾಗಿ ತಡೆಯುವುದು, ತತ್ಕ್ಷಣ ದಾಳಿಗೆ ತ್ವರಿತ ಮತ್ತು ಸೂಕ್ತ ಪ್ರತಿಕ್ರಿಯೆ, ಸರಕಾರದ ಸಮಗ್ರ ಪ್ರಯತ್ನಗಳೊಂದಿಗೆ ಆಂತರಿಕ ಸಾಮರ್ಥ್ಯ ಬಲಪಡಿಸುವಿಕೆ ಮತ್ತು ನಾಡಿನ ಕಾನೂನಿಗೆ ಕಟಿಬದ್ಧತೆಯೊಂದಿಗೆ ಮಾನವ ಹಕ್ಕುಗಳ ರಕ್ಷಣೆ ಈ ರೀತಿ ಸಮಗ್ರ ಚೌಕಟ್ಟಿನೊಂದಿಗೆ ಭಯೋತ್ಪಾದನೆ ಬೆದರಿಕೆಗಳನ್ನು ಮಟ್ಟ ಹಾಕುವುದು ಹೊಸ ರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ನೀತಿ ಪ್ರಹಾರ್ ಮೂಲೋದ್ದೇಶ. ಏನಿದು ಪ್ರಹಾರ್? ದೇಶದಲ್ಲಿ ಭಯೋತ್ಪಾದನೆ ಕಿತ್ತೊಗೆಯಲು ಇದು ಹೇಗೆ ಸಹಕಾರಿಯಾಗಲಿದೆ?

ಸುದ್ದಿ ಸಮಗ್ರ



ಯಾವುದೇ ಮತದ ಜತೆ ಜೋಡಣೆಯಿಲ್ಲ

ಭಾರತವು ಭಯೋತ್ಪಾದನೆಯನ್ನು ಯಾವುದೇ ನಿರ್ದಿಷ್ಟ ಮತಧರ್ಮ, ಜನಾಂಗೀಯತೆ, ರಾಷ್ಟ್ರೀಯತೆ ಅಥವಾ ನಾಗರೀಕತೆ ಜತೆ ಜೋಡಿಸಲ್ಲವೆಂದು ಭಾರತ ಸರಕಾರ ಪ್ರತಿಪಾದಿಸಿದೆ. ಭಾರತ ಭಯೋತ್ಪಾದನೆಯನ್ನು ಯಾವತ್ತೂ ಖಡಾಖಂಡಿತವಾಗಿ ಮತ್ತು ಬೇಶರತ್ತಾಗಿ ಖಂಡಿಸಿದೆ. ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ಧೋರಣೆಯು ಸರಕಾರದ ಪ್ರಸ್ತುತ ಪ್ರಹಾರ್ ನೀತಿಗೆ ಪ್ರೇರಣೆಯಾಗಿದೆ.

ಹಿಂಸಾಚಾರಕ್ಕೆ ಸಮರ್ಥನೆ ಕೂಡದು



ಭಯೋತ್ಪಾದನೆಗೆ ಬಲಿಪಶುಗಳಾದವರ ಜತೆಗಿದೆ ಕೇಂದ್ರ ಸರಕಾರ. ಸರಕಾರದ ಈ ದೀರ್ಘಕಾಲೀನ ಬದ್ಧತೆ ಮತ್ತು ಜಗತ್ತಿನಲ್ಲಿ ಯಾವ ಕಾರಣಕ್ಕೂ ಹಿಂಸಾಚಾರಗಳಿಗೆ ಸಮರ್ಥನೆ ಕೂಡದೆಂಬ ಸರಕಾರದ ಅಚಲ ಧೋರಣೆ ಪ್ರಹಾರ ರಚನೆಗೆ ಪ್ರೇರಣೆಯಾಗಿದೆ. ಭಯೋತ್ಪಾದನೆಗೆ ಕುಮ್ಮಕ್ಕೀವ ದುರ್ಬಲ ಸನ್ನಿವೇಶಗಳತ್ತ ಬೆಳಕು ಚೆಲ್ಲಿರುವ ಪ್ರಹಾರ್, ಭಯೋತ್ಪಾದನೆ ನಿಗ್ರಹ ನಿಟ್ಟಿನಲ್ಲಿ ಜಾಗತಿಕ ಪ್ರಯತ್ನಗಳಿಗೆ ಬೆಂಬಲದ ಜತೆ ಜತೆ ಸಂತ್ರಸ್ತ ಸಮಾಜದ ಪುನಶ್ಚೇತನ ಹಾಗೂ ಕ್ರಿಯಾಶೀಲತೆಗೆ ತುಂಬು ಆದ್ಯತೆ ನೀಡಿದೆ.

ಉಗ್ರರಿಂದ ಅತ್ಯಾಧುನಿಕ ತಂತ್ರಜ್ಞಾನ ದುರ್ಬಳಕೆ

ಭಯೋತ್ಪಾದಕ ಸಂಘಟನೆಗಳು ಅತ್ಯಾಧುನಿಕ ತಂತ್ರಜ್ಞಾನಗಳನ್ನು ದುರ್ಬಳಸುತ್ತಿವೆ. ಪಂಜಾಬ್ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗಾಗಿ ಡ್ರೋನ್ ಸಹಿತ ಆಧುನಿಕ ತಂತ್ರಜ್ಞಾನಗಳ ದುರ್ಬಳಸುತ್ತಿವೆ. ಭಯೋತ್ಪಾದಕ ಸಂಘಟನೆಗಳಿಗೆ ಯುವಕರ ನೋಂದಣಿ, ಸಂಪರ್ಕ, ಪ್ರಚಾರಕ್ಕಾಗಿ ಇವು ಸಾಮಾಜಿಕ ಜಾಲತಾಣ ಹಾಗೂ ತುರ್ತು ಸಂದೇಶವಾಹಕ ಅಪ್ಲಿಕೇಶನ್‌ಗಳ ಬಳಸುತ್ತಿವೆ. ನಿಗೂಢ ಕಾರ್ಯಾಚರಣೆಗಳಿಗೆ ಎನ್‌ಕ್ರಿಪ್ಶನ್, ಡಾರ್ಕ್‌ವೆಬ್ ಮತ್ತು ಕ್ರಿಪ್ಟೊ ವಾಲೆಟ್‌ಗಳಂತಹ ತಂತ್ರಜ್ಞಾನಗಳ ದುರ್ಬಳಸುತ್ತಿವೆ ಎಂದು ಗುಪ್ತಚರ ಪಡೆ ಎಚ್ಚರಿಸಿದೆ.

ನಿರಂತರ ತನಿಖಾ ಪ್ರಕ್ರಿಯೆ

ಭಾವೀ ಭಯೋತ್ಪಾದಕ ದಾಳಿಗಳ ಯಶಸ್ವೀ ಮಟ್ಟ ಹಾಕುವ ನಿಟ್ಟಿನಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮತ್ತು ರಾಜ್ಯ ಪೊಲೀಸ್ ಪಡೆಗಳು ನಿರಂತರ ತನಿಖಾ ಪ್ರಕ್ರಿಯೆಯಲ್ಲಿ ತೊಡಗಿವೆ ಮತ್ತು ಅತ್ಯುಚ್ಚ ಸಂಖ್ಯೆಯಲ್ಲಿ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತಿವೆ. ಪ್ರಸ್ತುತ ಉಪಕ್ರಮದಲ್ಲಿ, ತರಬೇತಿ ವ್ಯವಸ್ಥೆಯ ಆಧುನೀಕರಣ, ಅತ್ಯಾಧುನಿಕ ತಂತ್ರಜ್ಞಾನಗಳ ಹೊಂದುವುದು ಮತ್ತು ತನಿಖಾ ಸಂಸ್ಥೆಗಳಲ್ಲಿ ನಿಯಮಾವಳಿಗಳ ಕ್ರಮಬದ್ಧಗೊಳಿಸುವಿಕೆ ಇತ್ಯಾದಿ ಪ್ರಮುಖ ಹೆಜ್ಜೆಗಳ ಮುಖೇನ ಸಾಮರ್ಥ್ಯ ವರ್ಧನೆಗೆ ಆದ್ಯತೆ ಕೊಡಲಾಗಿದೆ. ಭಾರತೀಯ ಭಯೋತ್ಪಾದನೆ ವಿರೋಧಿ ಕಾನೂನುಗಳು ಮಾನವ ಹಕ್ಕುಗಳಿಗೆ ಪ್ರಾಮುಖ್ಯತೆ ನೀಡಿದ್ದು, ನಾಡಿನ ಕಾನೂನು ವ್ಯವಸ್ಥೆ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತವೆ. ಜನರ ಮೂಲಭೂತ ಹಕ್ಕುಗಳ ಸಂರಕ್ಷಣೆ ಕಾನೂನು ವ್ಯವಸ್ಥೆಯ ಧ್ಯೇಯವಾಗಿದ್ದು, ಭಾರತ ಈ ಸಿದ್ಧಾಂತಗಳಿಗೆ ಬದ್ಧವಾಗಿದೆ.

ಬೇಹುಗಾರಿಕೆ ಆಧಾರದಲ್ಲಿ ಉಗ್ರನಿಗ್ರಹ

ಭಯೋತ್ಪಾದನೆ ನಿಗ್ರಹಕ್ಕೆ ಭಾರತವು ಕ್ರಿಯಾಪರ ಮತ್ತು ಗುಪ್ತಚರ ಮಾಹಿತಿ ಆಧಾರಿತ ಪ್ರಯತ್ನಗಳ ನಡೆಸುತ್ತಿದೆ. ವಸ್ತುನಿಷ್ಠ ಬೇಹುಗಾರಿಕಾ ಮಾಹಿತಿ ಹಂಚಿಕೆ ಮತ್ತು ಸಂಘಟಿತ ಕಾರ್ಯಾಚರಣೆ ನಿಟ್ಟಿನಲ್ಲಿ, ಗುಪ್ತಚರ ಪಡೆಯಲ್ಲಿನ ಮಲ್ಟಿ ಏಜೆನ್ಸಿ ಸೆಂಟರ್ (ಎಂಎಸಿ) ಮತ್ತು ಬೇಹುಗಾರಿಕೆ ಕುರಿತ ಜಂಟಿ ಕಾರ್ಯಪಡೆ (ಜೆಟಿಎಫ್‌ಐ)ಗಳು ನೋಡಲ್ ಮಾಧ್ಯಮಗಳಾಗಿ ಕಾರ್ಯ ನಿರ್ವಹಿಸುತ್ತಿವೆ.

ಸಹಕಾರ ಜಾಲ ಅಗತ್ಯ

ಬೇಹುಗಾರಿಕಾ ಪಡೆ ಸಹಿತ ಕಾನೂನು ಅನುಷ್ಠಾನ ಸಂಸ್ಥೆಗಳ ನಡುವಣ ಸಹಕಾರ ಜಾಲ ಮತ್ತಷ್ಟು ವಿಸ್ತೃತವಾಗಬೇಕು , ನಿಯತಕಾಲಿಕ ಕಾನೂನು ಸುಧಾರಣೆಗಳು, ರಾಜ್ಯ ಉಗ್ರ ನಿಗ್ರಹ ಘಟಕಗಳ ಸಾಮರ್ಥ್ಯ ವರ್ಧನೆ ಅತ್ಯಗತ್ಯವೆಂಬುದು ಗೃಹ ವ್ಯವಹಾರಗಳ ಖಾತೆ ಅಭಿಪ್ರಾಯ. ಭಾವೀ ಭಯೋತ್ಪಾದಕ ಬೆದರಿಕೆಗಳ ಮಟ್ಟ ಹಾಕಲು ತಂತ್ರಜ್ಞಾನ ಮತ್ತು ಪಾಲುದಾರಿಕೆಗಳಿಗೆ ಹೂಡಿಕೆಯನ್ನು ಪ್ರಹಾರ್ ಪ್ರತಿಪಾದಿಸಿದೆ. ಉಗ್ರರಿಗೆ ಹಣಕಾಸು, ಶಸ್ತ್ರಾಸ್ತ್ರ, ಅಡಗುತಾಣಗಳು ಸಿಗದಂತೆ ತಡೆಯುವುದು ಪ್ರಹಾರ್ ಗುರಿಯಾಗಿದೆ.

ಭಯೋತ್ಪಾದನೆ ನಿಗ್ರಹ



ಪ್ರಹಾರ್ ಮುಖೇನ ಸಮನ್ವಯದ ರಾಷ್ಟ್ರೀಯ ಕ್ರಮದ ಬಲವರ್ಧನೆ ಜತೆ ಭಯೋತ್ಪಾದನೆ ನಿಗ್ರಹಕ್ಕೆ ಸಮಗ್ರ ಪ್ರಯತ್ನ ನಡೆಸುವುದು ಭಾರತದ ಧ್ಯೇಯವಾಗಿದೆ. ಏಕಕಾಲಕ್ಕೆ ಪ್ರಜಾತಾಂತ್ರಿಕ ಮೌಲ್ಯಗಳು ಹಾಗೂ ಸಾಮಾಜಿಕ ಚೈತನ್ಯವನ್ನು ಕಾಪಾಡುವುದು ಕೂಡ ಪ್ರಹಾರ್ ಗುರಿಯಾಗಿದೆ.

ಉಗ್ರರಿಗೆ ಹಣಕಾಸು ಪೂರೈಕೆ ತಡೆಯೋದು

ಉಗ್ರರಿಗೆ ನಿಧಿ ಪೂರೈಕೆ ಜಾಲಗಳನ್ನು ಮಟ್ಟಹಾಕಲು ಕಾನೂನು ವ್ಯವಸ್ಥೆ ಮುಖೇನ ವಿಶೇಷ ಪ್ರಾಮುಖ್ಯತೆ ನೀಡಲಾಗಿದೆ. ಭೂ, ವಾಯು, ಜಲ ಮಾರ್ಗಗಳಿಂದ ಎದುರಾಗೋ ಬೆದರಿಕೆಗಳ ಎದುರಿಸಲು ಗಡಿ ಪಹರೆ ಪಡೆಗಳು ಹಾಗೂ ವಲಸೆ ಅಧಿಕಾರಿಗಳಿಗೆ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒದಗಿಸಲಾಗಿದೆ.

ಉಗ್ರವಾದ ಮಟ್ಟ ಹಾಕಲು ಆದ್ಯತೆ

ಹಿಂಸಾತ್ಮಕ ಉಗ್ರವಾದವನ್ನು ಹತ್ತಿಕ್ಕಲು ಪ್ರಹಾರ್ ಅಗ್ರ ಆದ್ಯತೆ ನೀಡಲಿದೆ. ಇದರನ್ವಯ ಉಚ್ಚ ದರ್ಜೆ ಪ್ರತಿಕ್ರಿಯೆಗಳ ಬೇಹುಗಾರಿಕಾ ಸಂಸ್ಥೆ ಮತ್ತು ಕಾನೂನು ಜಾರಿ ಸಂಸ್ಥೆಗಳು ನೀಡಲಿವೆ. ಇದೇ ವೇಳೆ ಸಮುದಾಯ ನಾಯಕರು, ಎನ್‌ಜಿಓಗಳು ಮತ್ತು ಆದರ್ಶ ಬೋಧಕರು ಉಗ್ರವಾದದ ಹಿಂಸಾಚಾರಗಳಿಂದಾಗುವ ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಿದ್ದಾರೆ. ಜೈಲುಗಳಲ್ಲಿ ಉಗ್ರವಾದದ ಪ್ರಭಾವ ತಡೆಯಲು ಪ್ರಯತ್ನಗಳಾಗುತ್ತಿವೆ. ಯುವಶಕ್ತಿ ಮತ್ತು ಮಹಿಳೆಯರನ್ನು ಕೇಂದ್ರೀಕರಿಸಿ ಶಿಕ್ಷಣ, ಉದ್ಯೋಗ, ಕಲ್ಯಾಣ ಉಪಕ್ರಮಗಳನ್ನು ಕೈಗೊಳ್ಳುವ ಮುಖೇನ ಸಾಮಾಜಿಕ-ಆರ್ಥಿಕ ದೌರ್ಬಲ್ಯ ನಿವಾರಣೆಗೆ ಪ್ರಯತ್ನಿಸಲಾಗುತ್ತಿದೆ.

ಅಂತಾರಾಷ್ಟ್ರೀಯ ಸಹಕಾರವಿನ್ನೂ ಸಂಕೀರ್ಣ

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಇ–ಟೆಂಡರ್ ವೆಬ್‌ಸೈಟ್: **https://kppp.karnataka.gov.in** ರಲ್ಲಿ ಪಡೆಯಬಹುದು ಅಥವಾ ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಆದಲ್ಲಿ ವೆಬ್‌ಸೈಟಿನಲ್ಲಿ ಮಾತ್ರ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ ಸಹಿ/– ಆಡಳಿತಾಧಿಕಾರಿಗಳು

ವಾಸಾಸಂಇ/ವಾಪ್ರ/5822/ಸ್ಕ್ಯಾನ್/2025–26

ಉಪ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಳಗಾವಿ

No:DYES/BGV/OUTSOURCE/2025-26. ದಿನಾಂಕ: 21/02/2026

ಇ– ಟೆಂಡರ್ ಪ್ರಕಟಣೆ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಳಗಾವಿಯ ಜಿಲ್ಲಾ ಕ್ರೀಡಾಂಗಣ, ತಾಲ್ಲೂಕು ಕ್ರೀಡಾಂಗಣಗಳು ಹಾಗೂ ಕ್ರೀಡಾ ವಸತಿ ನಿಲಯಕ್ಕೆ ಡಾಟಾ ಎಂಟ್ರಿ ಆಪರೇಟರ್, ಕಾವಲುಗಾರರು, ಸ್ವಚ್ಛತಾಗಾರರು, ಪೌರಕಾರ್ಮಿಕರು, ಕೇರ್ ಟೇಕರ (ಮಹಿಳೆ) ಒಟ್ಟು 26 ಜನ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು 2 ವರ್ಷದ ಅವಧಿಗೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999, ನಿಯಮಗಳು 2000 ರ ಪ್ರಕಾರ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ.

1	ಟೆಂಡರ್ ಪ್ರಕಟಣೆ ದಿನಾಂಕ	No. DYES/BGV/OUTSOURCE/2025-26 Dtd: 21/02/2026
2	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	09–03–2026 ಸಾಯಂಕಾಲ 5.00 ಗಂಟೆವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	11–03–2026 ಮುಂಜಾನೆ 11.00 ಗಂಟೆಗೆ
4	ಆರ್ಥಿಕ ಬಿಡ್ ತೆರೆಯುವ ದಿನಾಂಕ	13–03–2026 ಮುಂಜಾನೆ 11.00 ಗಂಟೆಗೆ
5	ಟೆಂಡರಗೆ ಇಟ್ಟ ಮೊತ್ತ	ಅಂದಾಜು ರೂ.150.51 ಲಕ್ಷಗಳು
6	ಇ.ಎಂ.ಡಿ. ಮೊತ್ತ	ರೂ.2.26 ಲಕ್ಷಗಳು
7	ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ	ಉಪ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ಬೆಳಗಾವಿ ದೂ: 0831–2474101

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಉಪ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಬೆಳಗಾವಿ ಇವರಿಂದ ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–22501216/25501227 ಹಾಗೂ ಕಛೇರಿಯ ದೂರವಾಣಿ 0831–2950306 ಮೂಲಕ ಪಡೆಯಬಹುದಾಗಿದೆ.

ಸಹಿ/–ಉಪ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಳಗಾವಿ

DIPR/BGM/RO-NO-1913/KSMCA/2025-26

ಕರ್ನಾಟಕ ಸರ್ಕಾರ
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಚಿಕ್ಕಮಗಳೂರು
ಜಿಲ್ಲಾ ಪಂಚಾಯತಿಕಟ್ಟಡ,ಕೊಠಡಿ ಸಂಖ್ಯೆ–26, ಮೊದಲನೇ ಮಹಡಿ, ಜ್ಯೋತಿ ನಗರ–577102.
ದೂರವಾಣಿ–08262–220779 E.mail: itdpchikmagalur@gmail.com

ಸಂಖ್ಯೆ: ಗಿಅಯೋಚಿ/ಗಿಕವಿಅ/ಸಿಆರ್11/ಹೊ.ಸಂ.ಟೆ/2025–26 ದಿನಾಂಕ:23–02–2026

ಇ–ಟೆಂಡರ್ ಪ್ರಕಟಣೆ

ಚಿಕ್ಕಮಗಳೂರು ಜಿಲ್ಲೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಮೆಟ್ರಿಕ್ ಪೂರ್ವ/ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮ ಶಾಲೆ/ಏಕಲವ್ಯ ಮಾದರಿ ವಸತಿ ಶಾಲೆ/ಮೊರಾರ್ಜಿ ದೇಸಾಯಿ ವಸತಿ ಶಾಲೆ/ ಡಾ.ಬಿ.ಆರ್.ಅಂಬೇಡ್ಕರ್ ವಸತಿ, ಶಾಲೆಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಂದಾಜು ಮೊತ್ತ ರೂ 4.79 ಕೋಟಿ ಮೊತ್ತದ ಟೆಂಡರ್ ಕರೆಯಲಾಗಿದ್ದು,ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ಟೆಂಡರ್‌ನಲ್ಲಿ ಭಾಗ ವಹಿಸಬಹುದು.ಟೆಂಡರ್‌ನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ **ದಿನಾಂಕ: 04.03.2026 ಸಂಜೆ5.00**ಗಂಟೆಯವರೆಗೆ ಹಾಗೂ ಟೆಂಡರ್ ದಾಖಲಾತಿಗಳನ್ನು ಪರಿಶೀಲಿಸುವ **ದಿನಾಂಕ:05.03.2026 ರಂದು ಬೆಳಗ್ಗೆ 11.00 ಗಂಟೆಗೆ** (ಸಾಧ್ಯವಾದಲ್ಲಿ), ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್‌ಸೈಟ್ http://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದಾಗಿದೆ.

ಸಹಿ/– ಯೋಜನಾ ಸಮನ್ವಯಾಧಿಕಾರಿ,
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಚಿಕ್ಕಮಗಳೂರು

ಕರ್ನಾಟಕ ಸರ್ಕಾರ, ಜಲಸಂಪನ್ಮೂಲ ಇಲಾಖೆ
(ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ)

ಸಂ: ಕಾ.ಇಂ/ಭ.ಕಾ/ವಿ–2/PMKSY/ಟೆಂ.ಪ್ರ/2025–26/786

ದಿನಾಂಕ : 20.02.2026

ಟೆಂಡರ್ ಪ್ರಕಟಣೆ IFT-14
(ಕೆ.ಪಿ.ಪಿ.ಪಿ–ಪೋರ್ಟಲ್ ಮುಖಾಂತರ)

ಮಾನ್ಯ ಆಡಳಿತಾಧಿಕಾರಿಗಳು ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ–2, ಭದ್ರಾಕಾಡಾ, ರಾಣೇಬೆನ್ನೂರು ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆ/ ಪಂಚಾಯಿತಿ ರಾಜ್ಯ ಇಂಜಿನಿಯರಿಂಗ್ ಇಲಾಖೆ/ಜಲಸಂಪನ್ಮೂಲ ಇಲಾಖೆಯಲ್ಲಿ ನೊಂದಾಯಿತರಾದ 2ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 4701–ಪಿ.ಎಂ.ಕೆ.ಎಸ್.ವೈ ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ. **318.02** ಲಕ್ಷ, ಟೆಂಡರ್‌ಗಿಟ್ಟ ಮೊತ್ತದ ಹೊಲಗಾಲುವೆ ಕಾಮಗಾರಿಗೆ ಟೆಂಡರ್‌ನ್ನು KW-4 ದಾಖಲಾತಿಯನ್ವಯ ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ನಿಯಮ 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಮೂಲಕ ಆಹ್ವಾನಿಸಲಾಗಿದೆ. ವಿವರ ಮುಂದಿನಂತಿದೆ. ಟೆಂಡರನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ **20.02.2026** ರಿಂದ ಭರ್ತಿ ಮಾಡಿದ ಬಿಡ್‌ಗಳನ್ನು ದಿನಾಂಕ : **12.03.2026** ಸಂಜೆ 4.30 ರ ವರೆಗೆ ಅಪ್ ಲೋಡ್ ಮಾಡಬಹುದು. ವಿಚಾರಣೆಗೆ ಕೊನೆಯ ದಿನಾಂಕ : **11.03.2026** ಸಂಜೆ 4.30 ರ ವರೆಗೆ ತಾಂತ್ರಿಕ ಬಿಡ್ಡನ್ನು ದಿನಾಂಕ : **13.03.2026** ಸಂಜೆ 5.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ಕೆಳ ಸಹಿದಾರರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **(http://KPPP.Karnataka.gov.in)** ಮತ್ತು ದೂರವಾಣಿ ಸಂಖ್ಯೆ : **08373–297346** ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಇಂಜಿನೀಯರಿಂಗ್ ವಿಭಾಗ–2 ಭದ್ರಾಕಾಡಾ, ರಾಣೇಬೆನ್ನೂರು–581115.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/737/2025–26

IN THE COURT OF THE HON'BLE CIVIL JUDGE AND JMFC AT SIRUGUPPA
CRIMINAL MISCELLENEOUS CASE. NO 116 OF 2026

Between:Sri. B Rajashekar .....Petitioner

-V/s-

The Birth & Death Registrar, Chief Officer, Town Panchayath Tekkalakote .....Respondent

TO WHOMSOEVER IT MAY CONCERN NOTICE

WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Father by Name Sri. Rangappa S/O Duggappa, who was died on 22-02-2008 at Devinagar Camp, Tekkalakote Town, Siruguppa tq. Ballari dist, Siruguppa taluk, Ballari dist, at his residence.

Any person interested are here by summoned to appear before this court in person or by pleader duly instructed and able to answer all material questions relating to the petition on 26-03-2026 at 11.00 am before this court. In default of your appearance on the date/ day of above petition will be heard and determined as "Ex-parte"

Given under my hand & seal of the court this 21st day of FEB-2026.

By Order of the court,
Sd/- Chief ministrial officer,
Civil judge & JMFC Court Siruguppa.

Sd/- M.Rudragouda
Advocates Siruguppa,

"ಕನ್ನಡ ಕಾಯಕ ವರ್ಷ 2025–26"
ಪ್ರವಾಸೋದ್ಯಮ ಇಲಾಖೆ

Karnataka One state. Many worlds. www.karnatakatourism.org

ಜಂಟಿ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಬೆಳಗಾವಿ ವಿಭಾಗ,

ಬೆಳಗಾವಿ ಸುವರ್ಣ ಸೌಧ ಬಿಲ್ಡಿಂಗ್, 3ನೇ ಮಹಡಿ, ದಕ್ಷಿಣ ದ್ವಾರ ಪ್ರವೇಶ, ಕೊಠಡಿ ಸಂಖ್ಯೆ: 333 334, ಹಲಗಾ, ಬೆಳಗಾವಿ–590 020. ದೂರವಾಣಿ: 0831–2002799 ಇ–ಮೇಲ್: ddtourismb@gmail.com

ಸಂಖ್ಯೆ: ಪ್ರ.ಇ/ಜ.ನಿ.ಕ/ಬೆ.ವಿ/ಬೆ/43/2025–26 ದಿನಾಂಕ: 23–02–2026

MANUAL TENDER NOTIFICATION
(ಮಾನ್ಯುವಲ್ ಟೆಂಡರ್ ಪ್ರಕಟಣೆ)

ಜಂಟಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಳಗಾವಿ ಕಛೇರಿಗೆ ಒಬ್ಬ ಗ್ರೂಪ್ 'ಡಿ' ನೌಕರರ ಸೇವೆಯನ್ನು ಹೊರಗುತ್ತಿಗೆ ಮೇಲೆ **ದಿನಾಂಕ: 01–04–2026** ರಿಂದ ಅನ್ವಯಿಸಿ **ದಿನಾಂಕ: 31–03–2027** ರವರೆಗೆ ಒದಗಿಸಲು, ನಿಯಮಾನುಸಾರ ಪ್ರಸಕ್ತ ಸಾಲಿನ ಕಾರ್ಮಿಕ ಇಲಾಖೆಯ Minimum rate of wages ದರದ ಅನ್ವಯ ಅರ್ಹ ನೋಂದಾಯಿತ ಮಾನವ ಸಂಪನ್ಮೂಲ ಸರಬರಾಜು ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಗಳು ಈ ಕೆಳಗಿನ ಷರತ್ತುಗಳಿಗೊಳಪಟ್ಟು ಸಂಸ್ಥೆಯ ಎಲ್ಲಾ ಅಗತ್ಯ ನೊಂದಾಯಿತ ಅಧಿಕೃತ ದಾಖಲೆಗಳೊಂದಿಗೆ ದರಪಟ್ಟಿಗಳನ್ನು ಮುಚ್ಚಿದ ಲಕೋಟೆಯಲ್ಲಿ **ದಿನಾಂಕ: 13–03–2026 ರ ಸಂಜೆ 5–30** ರ ಒಳಗಾಗಿ ಜಂಟಿ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ, ಸುವರ್ಣ ಸೌಧ ಬಿಲ್ಡಿಂಗ್, 3ನೇ ಮಹಡಿ, ದಕ್ಷಿಣ ದ್ವಾರ ಪ್ರವೇಶ ಕೊಠಡಿ ಸಂಖ್ಯೆ: 334, ಹಲಗಾ, ಬೆಳಗಾವಿ–590020 ಇವರ ಕಛೇರಿಗೆ ಮಾನ್ಯುವಲ್ ಟೆಂಡರ್ ನಮೂನೆಯನ್ನು ಈ ಕೆಳಗಿನ ವಿವರಗಳೊಂದಿಗೆ ಸಲ್ಲಿಸುವುದು.

1) ಬಿಡ್‌ದಾರರು ಆರ್ಥಿಕ ಲಕೋಟೆಯಲ್ಲಿ ಕಾರ್ಮಿಕ ಇಲಾಖೆಯ Minimum rate of wages ದರದ ಅನ್ವಯ ಎಲ್ಲಾ ಕಡಿತಗಳನ್ನು (PF, ESI, GST Service Tax etc) ಒಳಗೊಂಡ ನಿಗದಿಪಡಿಸಲಾದ ಒಂದು ತಿಂಗಳ ಒಟ್ಟು ಸಂಭಾವನೆಯ ಮೊತ್ತಕ್ಕೆ ಭದ್ರತಾ ಠೇವಣೆಯನ್ನು, Deputy Director, Department of Tourism, Belagavi ಇವರ ಪದನಾಮದಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ DD ತೆಗೆದು ಲಗತ್ತಿಸುವುದು. ಕಾರ್ಯಾದೇಶ ಅವಧಿ ಮುಗಿದ ನಂತರ ಅರ್ಹ ಬಿಡ್‌ದಾರರ ಡಿ.ಡಿ ಮೊತ್ತವನ್ನು ಹಿಂದಿರುಗಿಸಲಾಗುವುದು.
2) ನಿಯಮಾನುಸಾರ ಹೊರಗುತ್ತಿಗೆ ನೌಕರರ ಪಿ.ಎಫ್. ಮತ್ತು ಇ.ಎಸ್.ಐ. ಗಳನ್ನು ಕಡಿತಗೊಳಿಸಿ ಪಾವತಿಸಿರುವ ಬಗ್ಗೆ ಪ್ರತಿ ತಿಂಗಳು ಈ ಕಛೇರಿಗೆ ಮಾಹಿತಿ ಒದಗಿಸುವುದ್ದಾಗಿದ್ದು ಈ ಬಗ್ಗೆ ದರಪಟ್ಟಿಯೊಂದಿಗೆ ನೊಂದಾಯಿತ ದಾಖಲೆ ಲಗತ್ತಿಸುವುದು.
3) ಯಾವುದೇ ಕಾರಣಕ್ಕೂ ಬಾಹ್ಯ ಮೂಲದ ಸೇವೆಯನ್ನು ಸರ್ಕಾರಿ ಸೇವೆಯನ್ನಾಗಿ ಪರಿಗಣಿಸುದಾಗಲಿ ಅಥವಾ ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.
4) ನಿಯಮಾನುಸಾರ ಪ್ರಸಕ್ತ ಸಾಲಿನಲ್ಲಿ ಕಾರ್ಮಿಕ ಇಲಾಖೆಯಿಂದ ಅನುಮೋದಿತವಾಗಿರುವ ದರವನ್ನು ನಮೂದಿಸತಕ್ಕದ್ದು ಈ ದರವನ್ನು ಹೊರತುಪಡಿಸಿ ಇನ್ನಿತರ ಯಾವುದೇ ಪ್ರಯಾಣ ಹಾಗೂ ದಿನ ಭತ್ಯೆಯನ್ನು ನೀಡಲಾಗುವುದಿಲ್ಲ.
5) ತುರ್ತು ಸೇವೆ ಅಗತ್ಯ ಬಂದಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು.
6) ನಿಯಮಾನುಸಾರ ರೂ.100/– ರ ಮೊತ್ತದ ಇ–ಸ್ಟಾಂಪ್ ಪೇಪರ್‌ನಲ್ಲಿ ಕರಾರು ಒಡಂಬಡಿಕೆ ನೀಡತಕ್ಕದ್ದಾಗಿರುತ್ತದೆ.
7) ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ನೌಕರರ ಗೌರವ ಸಂಭಾವನೆಯನ್ನು ಅವರ ಇ–ಪೇಮೆಂಟ್ ಖಾತೆಗೆ ಕಡ್ಡಾಯವಾಗಿ ಜಮಾ ಮಾಡತಕ್ಕದಾಗಿರುತ್ತದೆ. ಮತ್ತು ನೌಕರರ PF, ESI ಗಳನ್ನು ಅವರ ಸಂಬಂಧಿಸಿದ ಖಾತೆಗೆ ಜಮಾ ಮಾಡಿ ಅದರ ರಶೀದಿಯೊಂದಿಗೆ ಮಾಸಿಕ ಸಂಭಾವನೆ ಪಾವತಿಗಾಗಿ ದ್ವಿಪ್ರತಿಯಲ್ಲಿ ಬಿಲ್ಲುಗಳನ್ನು ಹಾಜರುಪಡಿಸತಕ್ಕದ್ದು.
8) ಬಾಹ್ಯ ಮೂಲದ ಈ ಸೇವೆಯನ್ನು ರದ್ದುಗೊಳಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಜಂಟಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ಪ್ರದತ್ತವಾಗಿರುತ್ತದೆ.

ಸಹಿ/–
ಜಂಟಿ ನಿರ್ದೇಶಕರು
ಪ್ರವಾಸೋದ್ಯಮ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.

ವಾ.ಸಾ.ಇ./ಬೆಳಗಾವಿ/1905/2025–26/ದೇಶಪಾಂಡೆಪಬ್ಲಿಸಿಟಿ

The CAMPCO Ltd.

Chocolate Factory, Darbe Post, Kemminje Village, Puttur, D.K., Karnataka India - 574 202.

REQUEST FOR SELECTION OF BIDDERS

Sl No	Description	Last date to receive sealed biddings.
1	The Campco Limited, Mangalore invites bids from the eligible bidders to participate in the Request for Selection (RFS) of Bidders for Design, manufacture, supply, erection, testing and commissioning including warranty, operation & maintenance of 420kWp Roof Top Solar PV power system to be installed at Campco Chocolate Factory, Kemminje, Puttur, D.K., Karnataka in India.	On 03.04.2026 before 5.30 PM

For Bid Information Sheet with details, Conditions of Contract, Technical Specifications and for other details visit www.campco.org. Bid Forms with details are available at Campco Chocolate Factory, Kemminje, Puttur, D.K., Karnataka, India on payment of Rs.1000/- per bid form (non-Refundable) along with applicable GST.

Sealed Bid along with EMD of Rs.8,85,000/-(Rupees Eight Lakh Eighty Five thousand only) demand draft drawn in favour of "The Campco Limited Puttur" payable at Puttur shall be sent to the above address or submitted during the Office hours. The Management reserves its right to accept or reject any quotation without assigning any reason. For any clarification contact +91 98805 18041 (only during office hours).

Place: Puttur. Sd/-
Date: 23.02.2026 MANAGING DIRECTOR

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಉಡುಪಿ
(ಮೀನುಗಾರಿಕೆ ಇಲಾಖೆ)
ಮೀನುಗಾರಿಕೆ ಉಪನಿರ್ದೇಶಕರ ಕಛೇರಿ

ಹಳೇ ಜಿಲ್ಲಾ ಪಂಚಾಯತ್ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576101

ಸಂಖ್ಯೆ: ಇ.ಎಸ್.ಟಿ/05/2025–26 ದಿನಾಂಕ: 23/02/2026

ಇ–ಟೆಂಡರ್ ಪ್ರಕಟಣೆ

ವಿಷಯ: 2026–27ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆ ಉಡುಪಿ ಜಿಲ್ಲೆಯ ಅಧೀನ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೊರಗುತ್ತಿಗೆ ಸಿಬ್ಬಂದಿ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯವರಿಂದ ಪಡೆಯಲು ಇ–ಟೆಂಡರ್ ಆಹ್ವಾನಿಸುವ ಬಗ್ಗೆ.

2026–27ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆ ಉಡುಪಿ ಜಿಲ್ಲೆಯ ಜಿಲ್ಲಾ ಪಂಚಾಯತ್ ಅಧೀನ ಕಛೇರಿಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್–1, ಮೀನುಗಾರಿಕೆ ಸಹಾಯಕರು–5 ಮತ್ತು 'ಡಿ' ಗ್ರೂಪ್–4, ಒಟ್ಟು–10 ಹುದ್ದೆಗಳಿಗೆ ಸಿಬ್ಬಂದಿಗಳನ್ನು ಮಾನವ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಆಸಕ್ತರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

Tender Reference Number & Date: DOF/2025-26/SE3970/CALL-3 Date: 23/02/2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 04/03/2026 ಅಪರಾಹ್ನ 5.30 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 06/03/2026 ಬೆಳಿಗ್ಗೆ 11.00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 07/03/2026 ಬೆಳಿಗ್ಗೆ 11.30 ಗಂಟೆಗೆ.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮೀನುಗಾರಿಕೆ ಉಪನಿರ್ದೇಶಕರು, ಉಡುಪಿ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಮೀನುಗಾರಿಕೆ ಉಪನಿರ್ದೇಶಕರು, ಉಡುಪಿ.

ವಾಸಾಇ/ಸನಿಉ/ಕೆಎಸ್‌ಎಂಸಿಎ/739/25–26 ದಿ: 23.02.2026

ಕರ್ನಾಟಕ ಸರ್ಕಾರ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ತಾಲೂಕ : ಲಕ್ಷ್ಮೇಶ್ವರ, ಜಿಲ್ಲೆ : ಗದಗ email:apmclaxmeshwar@gmail.com Ph : 08487–273380

ಸಂಖ್ಯೆ:ಕೃಮಾಇ/ಕೃಉಮಾಸ(ಲ):ಅಭಿಕೆ/452/2025–26 ದಿನಾಂಕ : 19–02–2026

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಗದಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಯನ್ನು **KW-2** ರನ್ವಯ **https://kppp.karnataka.gov.in** ಪೋರ್ಟಲ್‌ನಲ್ಲಿ, ಆಹ್ವಾನಿಸಲಾದ ಟೆಂಡರನ ವಿವರ ಈ ಕೆಳಗಿನಂತಿರುತ್ತದೆ.

(1) ಬಿಡ್ ಪೂರ್ವಭಾವಿ (Prebid) ಸಭೆ ದಿನಾಂಕ : **04–03–2026** ಬೆಳಿಗ್ಗೆ 11–30 ಘಂಟೆಗೆ. (2) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ : **13–03–2026** ಸಂಜೆ 5–00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **16–03–2026** ಬೆಳಿಗ್ಗೆ 11–00 ಗಂಟೆಗೆ. (4) ಆರ್ಥಿಕ ಬಿಡ್ (ಸಾಧ್ಯವಾದಲ್ಲಿ) ತೆರೆಯುವ ದಿನಾಂಕ : **23–03–2026** ಬೆಳಿಗ್ಗೆ 11–00 ಘಂಟೆಗೆ. (5) ಟೆಂಡರ್ ತೆರೆಯುವ ಸ್ಥಳ : ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ


Sl. No.	Name of work	Approximate value of work (Rs)	Earnest Money Deposit (Rs.)	Transaction fee, only in case Tenderers who wish to participate (Rs.)	Period of completion
1	PROPOSED CONSTRUCTION OF SHRAMIKA BHAVANA AT MAIN MARKET YARD OF APMC LAXMESHWAR	4490822.00	89850.00	As per e-Procrument Norms KW-2	175 days (inclusive of monsoon)

ಟೆಂಡರ ಷರತ್ತು ಹಾಗೂ ನಿಬಂಧನೆಗಳಿಗಾಗಿ ಕಾರ್ಯಾಲಯದ ಕಚೇರಿ ವೇಳೆಯಲ್ಲಿ ಅಥವಾ **Karnataka e-Procurement website https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/671/2025–26



ಇಂದಿನ ಪಂದ್ಯ

ಇಂಗ್ಲೆಂಡ್ vs ಪಾಕಿಸ್ತಾನ
ಸಂಜೆ 7 (ಪಲ್ಲೆಕೆಲೆ)

ಸೂಪರ್-8 ಅಂಕಪಟ್ಟಿ (ಗುಂಪು 1)

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ದ.ಆಫ್ರಿಕಾ	1	1	0	0	2	+3.80
ವಿಂಡೀಸ್	1	1	0	0	2	+2.60
ಜಿಂಬಾಬ್ವೆ	1	0	1	0	0	-2.60
ಭಾರತ	1	0	1	0	0	-3.80

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್	1	1	0	0	2	+2.55
ಕಿವೀಸ್	1	0	0	1	1	0.00
ಪಾಕಿಸ್ತಾನ	1	0	0	1	1	0.00
ಶ್ರೀಲಂಕಾ	1	0	1	0	0	-2.55

ಕಿರುಸುದ್ದಿ

ಟೂರ್ನಿಯ ಪ್ರದರ್ಶನವೇ ನಮಗೆ ವಿಶ್ವಾಸ: ಪಡಿಕ್ಕಲ್

ಹುಬ್ಬಳ್ಳಿ: ನಮ್ಮ ತಂಡ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದೆ. ಫೈನಲ್‌ನಲ್ಲಿಯೂ ಅತ್ಯುತ್ತಮ ಪ್ರದರ್ಶನ ನೀಡಲಿದ್ದೇವೆ. ಹಿಂದೆ ಹುಬ್ಬಳ್ಳಿಯಲ್ಲಿ ಆಡಿದಾಗ ಉತ್ತಮ ಫಲಿತಾಂಶ ಸಿಕ್ಕಿದೆ. ಪಂದ್ಯ ಆರಂಭವಾಗುವುದಕ್ಕಿಂತ ಮುಂಚೆ ಎಷ್ಟು ರನ್ ಗಳಿಸುತ್ತೇವೆ ಎಂಬುದನ್ನು ಹೇಳಲಾಗುವುದಿಲ್ಲವೆಂದು ಕರ್ನಾಟಕ ತಂಡದ ನಾಯಕ ದೇವದತ್ತ ಪಡಿಕ್ಕಲ್ ತಿಳಿಸಿದರು. ಪಂದ್ಯಕ್ಕೂ ಮುನ್ನ ನಡೆದ ಮಧ್ಯಮಗೋಷ್ಠಿಯಲ್ಲಿ ಪಿಚ್ ಸೇರಿದಂತೆ ತಂಡದ ತಯಾರಿ ಕುರಿತಂತೆ ಮಾತನಾಡಿ, ಹುಬ್ಬಳ್ಳಿಯಲ್ಲಿ ಆಡುವುದು ಖುಷಿ ನೀಡುತ್ತಿದೆ, ಗಾಯದಿಂದ ನಾನು ಚೇತರಿಸಿಕೊಂಡಿದ್ದೇನೆ ಎಂದರು. ಜಮ್ಮು ಮತ್ತು ಕಾಶ್ಮೀರ ತಂಡದ ನಾಯಕ ಪಾರಸ್ ಡೋಗ್ರಾ ಮಾತನಾಡಿ, ತಂಡದ ಆಟಗಾರರ ಉತ್ತಮ ಪ್ರದರ್ಶನದಿಂದ ಫೈನಲ್ ತಲುಪಿದ್ದೇವೆ. ಎರಡು ಬಾರಿಯ ಚಾಂಪಿಯನ್ ತಂಡ ಪಶ್ಚಿಮ ಬಂಗಾಳವನ್ನು ಸೋಲಿಸಿದ್ದರಿಂದ ನಮ್ಮ ತಂಡದ ಆಟಗಾರರರದಲ್ಲಿ ಸಹಜವಾಗಿ ಆತ್ಮವಿಶ್ವಾಸ ಹೆಚ್ಚಿದೆ. ಕರ್ನಾಟಕ ತಂಡದಲ್ಲಿ ಖ್ಯಾತ, ಅನುಭವಿ ಆಟಗಾರರಿದ್ದರೆ. ಆದರೆ, ನಾವು ನಮ್ಮ ಆಟ ಆಡುತ್ತೇವೆ ಎಂದರು.

ಟಿಕೆಟ್ ದರ: ಪಂದ್ಯ ವೀಕ್ಷಣೆ ಮೈದಾನ ಮೂರನೇ ಗೇಟ್‌ನಲ್ಲಿ 100 ಹಾಗೂ 4 ನೇ ಗೇಟ್‌ನಲ್ಲಿ 200 ದರ ನಿಗದಿ ಪಡಿಸಲಾಗಿದೆ ಎಂದು ಕೆ.ಎ ಧಾರವಾಡ ವಲಯದ ಅಧ್ಯಕ್ಷ ಅಲ್ತಾಫ್ ಕಿತ್ತೂರು ತಿಳಿಸಿದರು. ಮಂಗಳವಾರ ಬೆಳಿಗ್ಗೆ 8.30 ಕ್ಕೆ ಟಿಕೆಟ್ ನೀಡಲು ಆರಂಭಿಸಲಾಗುವುದು. ಪ್ರತಿ ದಿನ 4500 ಟಿಕೆಟ್ ಮಾತ್ರ ನೀಡಲಗುವುದು ಎಂದರು.

ಡೋಪಿಂಗ್: ನಾಲ್ವರ ಶಿಕ್ಷೆ ಕಡಿತ

ಹೊಸದಿಲ್ಲಿ: ಡೋಪಿಂಗ್ ಪ್ರಕರಣ ಸಂಬಂಧ ನೈತಿಕ ವಾಗಿ ತಪ್ಪೊಪ್ಪಿಕೊಂಡು ಸುಧಾರಿಸಿಕೊಳ್ಳುವ ಆಶ್ವಾಸನೆ ನೀಡಿದ ಬಳಿಕ ನಾಲ್ಕು ಅಥ್ಲೀಟ್‌ಗಳಿಗೆ ನಾಡಾ(ರಾಷ್ಟ್ರೀಯ ಡೋಪಿಂಗ್ ವಿರೋಧಿ ಸಂಸ್ಥೆ) ವಿಧಿಸಿದ್ದ ನಿಷೇಧ ಶಿಕ್ಷೆಯನ್ನು ಕ್ರಮವಾಗಿ ಇಳಿಸಲಾಗಿದೆ. ಅಥ್ಲೀಟ್‌ಗಳಾದ ಹಿಮಾಂಶು ರಾಥಿ, ಬಸಂತಿ ಕುಮಾರಿ ಮತ್ತು ಶಶಿ ಭೂಷಣ್ ಅವರಿಗೆ ಡೋಪಿಂಗ್ ಮಾಡಿದ ಅಪರಾಧದಲ್ಲಿ ಸರಿಸುಮಾರು 3 ವರ್ಷಗಳ ನಿಷೇಧ ಹೇರಿತ್ತು ನಾಡಾ. ಬಲವಿಂದರ್ ಸಿಂಗ್ ಎಂಬುವವರಿಗೆ 5 ವರ್ಷದ ನಿಷೇಧ ಹೇರಲಾಗಿತ್ತು. ಆದರೆ ತಾವು ಮಾಡಿದ ಅಪರಾಧವನ್ನು 20ದಿನದ ಒಳಗಾಗಿ ಒಪ್ಪಿಕೊಂಡ ನಂತರ ತಲಾ ಒಂದು ವರ್ಷದ ಶಿಕ್ಷೆ ಕಡಿತಗೊಳಿಸಲಾಗಿದೆ. ಇದು ನಾಡಾ ಸಂಪ್ರದಾಯ ಮತ್ತು ನಿಯಮವಾಗಿದೆ. ತಪ್ಪೊಪ್ಪಿ ಕೊಂಡು ನಡೆಯುವವರ ಶಿಕ್ಷೆಯನ್ನು ಕಡಿತ ಗೊಳಿಸಿ ಅವರಿಗೆ ಪ್ರೋತ್ಸಾಹ ನೀಡುವುದು ಇದರ ಉದ್ದೇಶ. ಉತ್ತೇಜಕ ಮೆಫೆನ್ಟರ್ಮೈನ್ ಸೇವಿಸಿರುವುದು ದೃಢಪಟ್ಟ ನಂತರ ಮಿಡಲ್ ಡಿಸ್ಟನ್ಸ್ ರನ್ನರ್ ಹಿಮಾಂಶು ರಾಥಿ ಅವರನ್ನು ನವೆಂಬರ್‌ನಲ್ಲೇ ನಿಷೇಧ ಹೇರಲಾಗಿತ್ತು. ವಿಶ್ವ ಯುನಿವರ್ಸಿಟಿ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದ ಬಸಂತಿ ಕುಮಾರಿ 19-ನೊರಾಂಡ್ರೊಸ್ಟೆರಾನ್ ಸೇವಿಸಿ ರುವುದು ದೃಢಪಟ್ಟ ನಂತರ ಮೂರು ವರ್ಷದ ನಿಷೇಧ ನವೆಂಬರ್‌ನಲ್ಲೇ ಆರಂಭವಾಗಿತ್ತು. 1500 ಮೀ. ಓಟದಲ್ಲಿ ಬೆಳ್ಳಿ ಗೆದ್ದಿರುವ ರಾಷ್ಟ್ರೀಯ ರನ್ನರ್ ಭೂಷಣ್ ಅವರ ನಿಷೇಶ ಸೆಪ್ಟೆಂಬರ್‌ನಲ್ಲೇ ಆರಂಭವಾಗಿತ್ತು. ನಾಡಾ ಆ್ಯಂಟಿ ಡೋಪಿಂಗ್ ರೂಲ್ಸ್ 2021ರ ಆರ್ಟಿಕಲ್ 8.3 ಮತ್ತು 10.8ರ ಕೇಸ್ ರೆಸೊಲೇಶನ್ ಅಡಿಯಲ್ಲಿ ಶಿಕ್ಷೆ ಕಡಿತಗೊಳಿಸಲಾಗಿದೆ.

ಟಿಟಿ: ಭಾರತಕ್ಕೆ ಮಿಶ್ರ ಫಲ

ಹೊಸದಿಲ್ಲಿ: ಸಿಂಗಾಪೂರ್ ಸ್ಮ್ಯಾಷ್ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಯಾವುದೇ ಭಾರತೀಯ ಷಟ್ಲರ್‌ಗಳು ಕೂಡ ಮುಂದಿನ ಸುತ್ತಿಗೆ ಹೋಗಲಾಗಲಿಲ್ಲ, ಆದರೆ ಡಬಲ್ಸ್ ವಿಭಾಗದಲ್ಲಿ ಮಿಂಚಿತು. ಕಳೆದ ಕಂಟೆಂಡರ್ ಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಭಾರತದ ಆಟಗಾರರು ನಿರೀಕ್ಷೆಯೊಂದಿಗೆ ಕಣಕ್ಕಿಳಿದಿದ್ದರು. ಭರವಸೆಯ ಆಟಗಾರ ಮಾನವ್ ಟಕ್ಕರ್ ಚೀನಾದ ಹುವಾಂಗ್ ಅವರೊಂದಿಗೆ 1-3 (8-11, 11-9, 6-11, 3-11) ರಿಂದ ಸೋತರು. ಮಹಿಳೆಯರ ವಿಭಾಗದಲ್ಲಿ ಮನಿಕಾ ಬಾತ್ರಾ, ಚೀನಾದ ಝು ಯುಲಿಂಗ್ ಅವರೊಂದಿಗೆ 1-3 (10-12, 8-11, 11-4, 9-11) ರಿಂದ ಸೋತರು. ಇನ್ನು ಭಾರತದ ನಂಬರ್ 1 ಆಟಗಾರ್ತಿ ಶ್ರೀಜಾ ಅಕೂಲಾ ಅನ್ನಾ ಅವರೊಂದಿಗೆ 1-3 (8-11, 5-11, 11-8, 5-11)ರಿಂದ ಸೋತರು. ಮಹಿಳಾ ವಿಭಾಗದಲ್ಲಿ ದಿಯಾ ಮತ್ತು ಯಶಸ್ವಿನಿ ಘೋರ್ಪಡೆ ಜೋಡಿ ಆಸ್ಟ್ರೇಲಿಯಾದ ಮಿನ್ಯ್ಯುಂಗ್ ಜೀ ಮತ್ತು ಕಾನ್ಸ್ಟಂಟಿನಾ ಸೈಹೋಗಿಯೋಸ್ ವಿರುದ್ಧ 3-1 (6-11, 11-5, 11-6, 11-8) ಅಂತರದಲ್ಲಿ ಜಯಗಳಿಸಿ 16ರ ಸುತ್ತು ತಲುಪಿತು. ಮಿಶ್ರ ಡಬಲ್ಸ್‌ನಲ್ಲಿ, ಮೊದಲ ಸುತ್ತಿನಲ್ಲಿ ಬೈ ಪಡೆದ ಆರನೇ ಶ್ರೇಯಾಂಕದ ದಿಯಾ ಮತ್ತು ಮನುಷ್ ಶಾ ಜೋಡಿ, ಸಿಂಗಾಪುರದ ವೈಲ್ಡ್‌ಕಾರ್ಡ್‌ಗಳಾದ ಪಾಂಗ್ ಕೊಯೆನ್ ಮತ್ತು ಝುಂಗ್ ಜಿಯಾನ್ ಅವರನ್ನು 3-0 (11-8, 11-4, 11-5) ಅಂತರದಲ್ಲಿ ಸೋಲಿಸಿ ಕ್ವಾರ್ಟರ್ ಫೈನಲ್‌ಗೆ ತಲುಪಿತು.

ಇಂದು ಕರ್ನಾಟಕ-ಜಮ್ಮು ಮತ್ತು ಕಾಶ್ಮೀರ ಮಧ್ಯೆ ಫೈನಲ್ ಕದನ

ರಣಜಿ ರಾಜ ಯಾರು?

▸ ವಿಜಯಕುಮಾರ್ ಬೆಳ್ಳೇರಿಮಠ





ಹುಬ್ಬಳ್ಳಿ: 15 ವರ್ಷ ಬಳಿಕ ಫೈನಲ್‌ಗೇರಿರುವ ಕರ್ನಾಟಕ ಮತ್ತು ಕೂಟದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿದ ಜಮ್ಮು ಮತ್ತು ಕಾಶ್ಮೀರ ಪ್ರತಿಷ್ಠಿತ ರಣಜಿ ಚಾಂಪಿಯನ್ ಪಟ್ಟವನ್ನು ಕಟ್ಟಿಕೊಳ್ಳಲು ಕಾದಾಟ ನಡೆಸಲಿವೆ. 'ದಾವಣಗೆರೆ ಎಕ್ಸ್‌ಪ್ರೆಸ್' ಆರ್.ವಿನಯಕುಮಾರ್ ನಾಯಕತ್ವದಲ್ಲಿ ಸತತ ಎರಡು ವರ್ಷ ಟ್ರೋಫಿ ಗೆದ್ದ ನಂತರ ಒಂದು ದಶಕಕ್ಕೂ ಅಧಿಕ ಕಾಲ ಪ್ರಶಸ್ತಿಯ ಬರ ಎದುರಿಸುತ್ತಿರುವ ಕರ್ನಾಟಕ ತಂಡ ಟ್ರೋಫಿ ಮುಡಿಗೇರಿಸಿಕೊಳ್ಳಲು ಅಣಿಯಾಗಿದೆ.

ಇಲ್ಲಿನ ನೃಪತುಂಗ ಬೆಟ್ಟದ ಹಸಿರು ತಪ್ಪಲಿನಲ್ಲಿರುವ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ದೇಸೀ ಕ್ರಿಕೆಟ್‌ನ ಅತ್ಯುನ್ನತ ಪಂದ್ಯಾವಳಿಯ ಅಂತಿಮ ಪಂದ್ಯವೂ ಇದೇ ಮೊದಲ ಬಾರಿಗೆ ನಡೆಯುತ್ತಿದೆ. ಕಳೆದ ವಾರ ಲಖನೌನ ಏಕನಾ ಮೈದಾನದಲ್ಲಿ ಉತ್ತರಾಖಂಡ ವಿರುದ್ಧ ನಡೆದಿದ್ದ ಸೆಮಿನಲ್ಲಿ ಕರ್ನಾಟಕ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ ಫೈನಲ್‌ಗೇರಲು ಬೇಕಾದ ಮುನ್ನಡೆ ಗಳಿಸಿ ಪ್ರಶಸ್ತಿ ಸುತ್ತಿಗೇರಿದೆ. ಇತ್ತ ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆದಿದ್ದ ಮತ್ತೊಂದು ಸೆಮಿಫೈನಲ್‌ನಲ್ಲಿ ಆತಿಥೇಯ ಬಂಗಾಳ ವಿರುದ್ಧ ಜಮ್ಮು ಮತ್ತು ಕಾಶ್ಮೀರ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 26 ರನ್‌ಗಳ ಹಿನ್ನಡೆ ಅನುಭವಿಸಿದರೂ ಬೌಲರ್‌ಗಳ ಸಾಂಘಿಕ ಪ್ರದರ್ಶನದಿಂದ ಎದುರಾಳಿಯನ್ನು ಎರಡನೇ ಇನ್ನಿಂಗ್ಸ್‌ನಲ್ಲಿ 100ರೊಳಗೆ (99) ಕಟ್ಟಿ ಹಾಕಿ, 126ರ ಗುರಿಯನ್ನು ನಾಲ್ಕು ವಿಕೆಟ್ ಕಳೆದುಕೊಳ್ಳುವ ಮೂಲಕ ಜಯಗಳಿಸಿ ಇತಿಹಾಸ ಸೃಷ್ಟಿಸಿತ್ತು.

9ನೇ ಟ್ರೋಫಿ ಗೆಲ್ಲುವುದೇ ಕರ್ನಾಟಕ?: ಮುಂಬೈ ಹೊರತುಪಡಿಸಿ (45 ಬಾರಿ ಪ್ರಶಸ್ತಿ) ದೇಶದಲ್ಲೇ ಅತಿ ಹೆಚ್ಚು ಬಾರಿ ಪ್ರಶಸ್ತಿ ಗಳಿಸಿರುವ ಎರಡನೇ ತಂಡ (8 ಬಾರಿ) ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಆತಿಥೇಯ ಕರ್ನಾಟಕ 9ನೇ ಪ್ರಶಸ್ತಿಯ ಮೇಲೆ ಕಣ್ಣಿರಿಸಿದೆ.

ನಾಯಕ ಪರಾಸ್ ಡೋಗ್ರಾ ನಾಯಕತ್ವದ ಜಮ್ಮು-ಕಾಶ್ಮೀರ ತಂಡ ಪ್ರಸಕ್ತ ಸಾಲಿನಲ್ಲಿ ಅಷ್ಟೇ ಉತ್ತಮ ಪ್ರದರ್ಶನ ತೋರಿದೆ. ಐಪಿಎಲ್‌ನ ಹೈದರಾಬಾದ್ ತಂಡ ಆಟಗಾರ ಅಬ್ದುಲ್ ಸಮದ್ ಜಮ್ಮು-ಕಾಶ್ಮೀರ ಪರ (655 ರನ್) ಹೆಚ್ಚು ರನ್‌ಗಳಿಸಿ ಬ್ಯಾಟರ್ ಆಗಿದ್ದಾರೆ. ನಾಯಕ ಪಾರಸ್ ಡೋಗ್ರಾ (551 ರನ್), ವಿಕೆಟ್ ಕೀಪರ್ ಕನ್ಹಯ್ ವಾಧ್ವಾನ್ ಹಾಗೂ ಆರಂಭಿಕ ಆಟಗಾರ ಶುಭಂ ಖಜೂರಿಯಾ (369ರನ್) ಗಳಿಸಿದ್ದಾರೆ.

ಬೌಲಿಂಗ್‌ನಲ್ಲಿ ಆಖಿಬ್ ನಂಬಿ ದಾರ್ (55 ವಿಕೆಟ್) ಟೂರ್ನಿಯಲ್ಲಿ ಎರಡನೇ ಹೆಚ್ಚು ವಿಕೆಟ್ ಪಡೆದಿದ್ದಾರೆ. ಎಸ್.ಆರ್. ಕುಮಾರ (29 ವಿಕೆಟ್) ಹಾಗೂ ಅಬಿದ್ ಮುಷ್ತಾಕ್ (417 ರನ್- 20 ವಿಕೆಟ್) ಆಲ್‌ರೌಂಡ್ ಆಟ ಆಡಿದ್ದು, ಫೈನಲ್ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

ಬಲಿಷ್ಠ ಬ್ಯಾಟಿಂಗ್ ಪಡೆ

ಮೂರೂ ವಿಭಾಗದ ಆಟಗಾರರು ಯಾವುದೇ ಬವಣೆ ಎದುರಿಸಲು ಬಿಟ್ಟಿಲ್ಲ. ಬ್ಯಾಟಿಂಗ್‌ನಲ್ಲಿ ಯುವಕರ ಅಗ್ರೆಶನ್‌ಗೆ ಹಿರಿಯರ ಅನುಭವ ಸಿಕ್ಕಂತಾಗಿರುವುದು ವಿಶ್ವಾಸ ಹೆಚ್ಚಿಸಿದೆ. ನಾಯಕ ದೇವದತ್ತ ಪಡಿಕ್ಕಲ್ ಈ ಋತುವಿನಲ್ಲಿ 532ರನ್ ಗಳಿಸಿದ್ದಾರೆ. ಆರ್.ಸ್ಮರಣ್ ಟೂರ್ನಿಯಲ್ಲಿ (950 ರನ್) ಅತೀ ಹೆಚ್ಚು ರನ್ ಗಳಿಸಿದ್ದಾರೆ, ಇದರಲ್ಲಿ 4 ಶತಕಗಳಿವೆ. ಮಯಾಂಕ್ ಅಗರವಾಲ್ (518 ರನ್), ಕರುಣ್ ನಾಯರ್ (699 ರನ್), ರಾಷ್ಟ್ರೀಯ ತಂಡದಲ್ಲಿದ್ದುದರಿಂದ ಕೆಲವು ಪಂದ್ಯಗಳನ್ನು ತಪ್ಪಿಸಿಕೊಂಡಿದ್ದ ಕೆ.ಎಲ್. ರಾಹುಲ್ (457ರನ್) ಸಹ ಉಪಯುಕ್ತ ಕೊಡುಗೆ ನೀಡಿದ್ದಾರೆ.

ಶುಭಂಗೆ ಗಾಯ

ಎರಡು ತಂಡದ ಆಟಗಾರರು ಸೋಮವಾರವೂ ಅಭ್ಯಾಸ ನಡೆಸಿದರು. ಜಮ್ಮು ಮತ್ತು ಕಾಶ್ಮೀರ ತಂಡ ಆರಂಭಿಕ ಆಟಗಾರ ಶುಭಂ ಖಜೂರಿಯಾ ಫೀಲ್ಡಿಂಗ್ ಅಭ್ಯಾಸದ ವೇಳೆ ಡೈವ್ ಮಾಡಿ ದಾಗ ಬೆನ್ನು ನೋವು ಅನುಭವಿಸಿದರು. ತಕ್ಷಣ ಇತರ ಆಟಗಾರರು ಹಾಗೂ ಮೈದಾನ ಸಿಬ್ಬಂದಿ ಅವರನ್ನು ಹೊತ್ತು ಆಸ್ಪತ್ರೆಗೆ ಕರೆದೊಯ್ದರು.

ಸಮಯೋಚಿತ, ಸಮತೋಲಿತ ಬೌಲಿಂಗ್

ಕರ್ನಾಟಕದ ಬೌಲರ್‌ಗಳೂ ಪರಿಣಾಮಕಾರಿ ಪ್ರದರ್ಶನ ನೀಡಿದ್ದು, ಲೆಗ್ ಸ್ಪಿನರ್ ಶ್ರೇಯಸ್ ಗೋಪಾಲ್ 46 ವಿಕೆಟ್ ಪಡೆದಿದ್ದಾರೆ. ವೇಗಿಗಳಾದ ವಿದ್ವತ್ ಕಾವೇರಪ್ಪ ಹಾಗೂ ಶಿಖರ್ ಶೆಟ್ಟಿ (ತಲಾ 21 ವಿಕೆಟ್) ಉಪಯುಕ್ತ ಬೌಲಿಂಗ್ ಮಾಡಿದ್ದು, ವಿದ್ಯಾಧರ್ ಪಾಟೀಲ್ ಆಲ್ ರೌಂಡ್ ಪ್ರದರ್ಶನದಿಂದ ಗಮನ ಸೆಳೆದಿದ್ದಾರೆ. ರಾಷ್ಟ್ರೀಯ ತಂಡದಲ್ಲಿರುವ ವೇಗಿ ಪ್ರಸಿದ್ಧ ಕೃಷ್ಣ ಮೇಲೆ ಅಂತಿಮ ಪಂದ್ಯದಲ್ಲೂ ನಿರೀಕ್ಷೆ ಇದೆ.



ತಂಡಗಳು


ಕರ್ನಾಟಕ: ದೇವದತ್ತ ಪಡಿಕಲ್ (ನಾಯಕ), ಕೆ.ಎಲ್. ರಾಹುಲ್, ಕರುಣ್ ನಾಯರ್, ಮಯಾಂಕ್ ಅಗರವಾಲ್, ಆರ್. ಸ್ಮರಣ್, ಕೆ.ವಿ. ಅನೀಶ್, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ (ವಿಕೆಟ್ ಕೀಪರ್), ಪ್ರಸಿದ್ಧ ಕೃಷ್ಣ, ವಿದ್ವತ್ ಕಾವೇರಪ್ಪ, ವಿದ್ಯಾಧರ ಪಾಟೀಲ್, ಮೊಹಿಸಿನ್ ಖಾನ್, ಶಿಖರ್ ಶೆಟ್ಟಿ, ಶ್ರೀಜಿತ್ ಕೆ.ಎಲ್.(ವಿಕೆಟ್ ಕೀಪರ್) , ವೈಶಾಖ್ ವಿಜಯಕುಮಾರ್.

ಜಮ್ಮು ಮತ್ತು ಕಾಶ್ಮೀರ: ಪಾರಸ್ ಡೋಗ್ರಾ (ನಾಯಕ), ಶುಭಂ ಖಜುರಿಯಾ, ಶುಭಂ ಪುಂಡಿರ್, ಯಾರಾ ಹಸನ್, ಅಬ್ದುಲ್ ಸಮದ್, ಎಸ್.ಆರ್. ಕುಮಾರ್, ಕನ್ಹಯ್ ವಾಧ್ವಾನ್ (ವಿಕೆಟ್ ಕೀಪರ್), ಅಬಿದ್ ಮುಷ್ತಾಕ್, ಅಖಿಬ್ ನಬಿ, ವೈ. ಸಿಂಗ್, ವಿ. ಶರ್ಮಾ, ಸುನೀಲ್ ಕುಮರ್, ಕೆ. ಸಿಂಗ್, ಸಾಹಿಲ್ ಲೋತ್ರಾ, ಡಿ. ಕುಂಡಲ್, ಉಮರ್ ನಜೀರ್.

ಇಂದಿನಿಂದ ಕಬಡ್ಡಿ ಕಬಡ್ಡಿ...

ವಡೋದರ:72 ನೇ ಸೀನಿಯರ್ ರಾಷ್ಟ್ರೀಯ ಪುರುಷರ ಕಬಡ್ಡಿ ಚಾಂಪಿಯನ್‌ಶಿಪ್ ಪಂದ್ಯಾವಳಿಯು ಮಂಗಳವಾರದಿಂದ ಶುರುವಾಗಲು ಸಜ್ಜಾಗಿದೆ.

ವಡೋದರದ ಸಾಮಾ ಒಳಾಂಗಣ ಸಂಕೀರ್ಣ ಪಂದ್ಯಾವಳಿಯನ್ನು ಆಯೋಜಿಸುವುದಕ್ಕೆ ಸಜ್ಜಾಗಿದೆ. ಚಾಂಪಿಯನ್‌ಶಿಪ್‌ನಲ್ಲಿ ದೇಶದ 31 ಬಲಿಷ್ಠ ತಂಡಗಳು ಭಾಗವಹಿಸಲಿದ್ದು, ಸುಮಾರು 400 ಆಟಗಾರರು ಪ್ರಶಸ್ತಿಯನ್ನು ಪಡೆಯಲು ತೀವ್ರ ಸೆಣಸಾಟ ನಡೆಸಲಿದ್ದಾರೆ. ಫೈನಲ್ ಪಂದ್ಯ 27ರಂದು ನಡೆಯಲಿದೆ. ಅಮೆಚೂರ್ ಕಬಡ್ಡಿ ಫೆಡರೇಶನ್ ಆಫ್ ಇಂಡಿಯಾ (ಎಕೆಎಫ್ಐ) ಆಶ್ರಯದಲ್ಲಿ ಆಯೋಜಿಸಲಾಗಿರುವ ಈ ಪಂದ್ಯಾವಳಿಯಲ್ಲಿ ಅನುಭವಿಗಳು ಮತ್ತು ಉದಯೋನ್ಮುಖ ತಾರೆಗಳು ಭಾಗವಹಿಸುತ್ತಿರುವುದು ಪಂದ್ಯಾವಳಿಗೆ ರೋಚಕ ಜೀವ ತುಂಬಿದೆ. ಇನ್ನೂ ವಿಶೇಷವಾಗಿ ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಸೀಸನ್ 12 ರಲ್ಲಿ ಅಸಾಧಾರಣ ಪ್ರದರ್ಶನ ನೀಡಿದ ಆಟಗಾರರೂ ಸಹ ಇಲ್ಲಿ ಆಡಲಿದ್ದಾರೆ.



ಯಾರ್‍ಯಾರು ಬಲಿಷ್ಠರು?: ಪಿಕೆಎಲ್ ಸೀಸನ್ 12ರ ಅಗ್ರ ಮೂರು ರೈಡರ್‌ಗಳಲ್ಲಿ ಅಯಾನ್ ಲೋಹ್ಚಾಬ್ (ಹರಿಯಾಣ) ಪರಿಣಾಮಕಾರಿಯಾದ 316 ರೈಡ್ ಪಾಯಿಂಟ್‌ಗಳನ್ನು ಗಳಿಸಿದಾರೆ, ದೇವಾಂಕ್ ದಲಾಲ್ (ಸರ್ವೀಸಸ್) 271 ರೈಡ್ ಪಾಯಿಂಟ್‌ಗಳನ್ನು ಗಳಿಸಿದ್ದಾರೆ ಹಾಗೂ ಭರತ್ ಹೂಡಾ 230 ರೈಡ್ ಪಾಯಿಂಟ್‌ಗಳೊಂದಿಗೆ ಸೀಸನ್ ಅನ್ನು ಕೊನೆಗೊಳಿಸಿದ್ದಾರೆ. ಕಳೆದ ಋತುವಿನಲ್ಲಿ ದಬಾಂಗ್ ದೆಹಲಿ ಪ್ರಶಸ್ತಿ ಗೆಲ್ಲುವಲ್ಲಿ ಪ್ರಮುಖ ಕಾರಣವಾಗಿದ್ದ ಆಶು ಮಲಿಕ್ ರೈಲ್ವೆಯನ್ನು ಪ್ರತಿನಿಧಿಸಲಿದ್ದು, ಅರ್ಜುನ್ ದೇಶ್ವಾಲ್ ಮತ್ತೊಮ್ಮೆ ಉತ್ತರ ಪ್ರದೇಶದ ನಾಯಕರಾಗಿ ತಂಡವನ್ನು ಮುನ್ನಡೆಸಲಿದ್ದಾರೆ. ಬೆಂಗಳೂರು ಬುಲ್ಸ್ ಪರ 64 ಟ್ಯಾಕಲ್ ಪಾಯಿಂಟ್‌ಗಳನ್ನು ದಾಖಲಿಸಿದ ಮತ್ತು ಪಿಕೆಎಲ್ 12 ರಲ್ಲಿ ಋತುವಿನ ಹೊಸ ಯುವ ಆಟಗಾರ ಎಂದು ಹೆಸರಿಸಲ್ಪಟ್ಟ ದೀಪಕ್ ಶಂಕರ್ (ತಮಿಳುನಾಡು) ಅವರಂತಹ ಉದಯೋನ್ಮುಖ ಪ್ರತಿಭೆಗಳ ಮೇಲೆಯೂ ಈ ಪಂದ್ಯಾವಳಿ ಬೆಳಕು ಚೆಲ್ಲಲಿದೆ. ಮಹಾರಾಷ್ಟ್ರವನ್ನು ಪುಣೇರಿ ಪಲ್ಟನ್‌ನ ರೈಡರ್ ಆದಿತ್ಯ ಶಿಂಧೆ ಪ್ರತಿನಿಧಿಸಲಿದ್ದು, ಅವರು ಐದು ಸೂಪರ್ ರೈಡ್‌ಗಳೂ ಸೇರಿದಂತೆ 159 ರೈಡ್ ಪಾಯಿಂಟ್‌ಗಳನ್ನು ಸಂಗ್ರಹಿಸಿದ್ದಾರೆ. 65 ಟ್ಯಾಕಲ್ ಪಾಯಿಂಟ್‌ಗಳು ಮತ್ತು ಐದು ಹೈ 5 ಗಳ ಜೊತೆ ಅದ್ಭುತವಾದ ಪ್ರದರ್ಶನ ನೀಡಿದ ಹರಿಯಾಣದ ಡಿಫೆಂಡರ್ ಆದ ನಿತೇಶ್ ಕುಮಾರ್, ಭರವಸೆಯ ಆಟಗಾರರಾದ ಅನಿಲ್ (ಹಿಮಾಚಲ ಪ್ರದೇಶ) ಮತ್ತು ಉದಯ್ ಪಾರ್ಟೆ (ಮಧ್ಯಪ್ರದೇಶ) ಕೂಡ ಚಾಂಪಿಯನ್‌ಶಿಪ್‌ನ ಭಾಗವಾಗಲಿದ್ದಾರೆ.

ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಶಿಪ್

ಹೆಟ್ಮೇರ್ ಅಬ್ಬರಕ್ಕೆ ಬೆಚ್ಚಿದ ಜಿಂಬಾಬ್ವೆ

ಮುಂಬೈ:ಶ್ರೀಲಂಕಾ, ಆಸ್ಟ್ರೇಲಿಯಾ ಅಂತಹ ತಂಡಗಳೆದರು ಎಲ್ಲಿಲ್ಲದ ಸಾಹಸ ಪ್ರದರ್ಶಿಸಿದ ಜಿಂಬಾಬ್ವೆ ವಿಂಡೀಸ್ ವಿರುದ್ಧ ಮಂಕಾಯಿತು. ಇದರೊಂದಿಗೆ ಜಿಂಬಾಬ್ವೆ ವಿಶ್ವಕಪ್‌ನಲ್ಲಿ ಮೊದಲ ಸೋಲು ಕಂಡಿದೆ.

ಅಜೇಯ ಗೆಲುವಿನೋಟದಿಂದ ಅಚ್ಚರಿ ಮೂಡಿಸಿದ್ದ ಜಿಂಬಾಬ್ವೆಯ ಆಟ ಸೂಪರ್-8 ಮೊದಲ ಪಂದ್ಯದಲ್ಲಿ ನಿಂತಿತು. ಬಂದ ಬೌಲರ್‌ಗಳನ್ನು ಹಿಗ್ಗಾಮುಗ್ಗಾ ದಂಡಿಸಿದ ಶಿಮ್ರಾನ್ ಹೆಟ್ಮೇರ್, ವಿಂಡೀಸ್ ತಂಡವನ್ನು ದಾಖಲೆ ಮೊತ್ತದತ್ತ ದೂಗಿದರು. ರೋಮನ್ ಪೋವೆಲ್ ಮತ್ತು ರುದರ್ ಫೋರ್ಡ್ ಅದಕ್ಕೆಷ್ಟು ಕಿಕ್ ನೀಡಿದ ನಂತರ ಮೊದಲು ಬ್ಯಾಟಿಂಗ್ ಮಾಡಿರುವ ವೆಸ್ಟ್ ಇಂಡೀಸ್ 20 ಓವರ್ ಗಳಲ್ಲಿ ಬರೋಬ್ಬರಿ 254 ರನ್ ಚಚ್ಚಿತು. ಗುರಿ ಬೆನ್ನತ್ತಿದ ಜಿಂಬಾಬ್ವೆ 147 ರನ್‌ಗಳಿಗೆ ಪತನಗೊಂಡಿತು. ಹೆಟ್ಮೇರ್ ಪಂದ್ಯದ ರೂವಾರಿಯಾದರು, ಬೌಲಿಂಗ್‌ನಲ್ಲಿ ವಿಂಡೀಸ್ ತಂಡದ ಗುಡಕೇಶ್ 4 ವಿಕೆಟ್ ಪಡೆದು ಮಿಂಚಿದರು. ಈ ಗೆಲುವಿನೊಂದಿಗೆ ವಿಂಡೀಸ್ ಪಡೆಯ ಸೆಮಿ ಅವಕಾಶಗಳು ಹೆಚ್ಚಿವೆ. ಭಾರತಕ್ಕೆ ಭಾರೀ ಹಿನ್ನಡೆಯಾಗಿದೆ.

ವಿಂಡೀಸ್ ದಾಖಲೆ: ಬರೋಬ್ಬರಿ 254 ರನ್ ಬಾರಿಸಿದ ವೆಸ್ಟ್ ಇಂಡೀಸ್ ದಾಖಲೆ ಮಾಡಿತು. ಟಿ20 ವಿಶ್ವಕಪ್ ಇತಿಹಾಸದಲ್ಲಿ ತನ್ನ ಅತಿ ಹೆಚ್ಚು ರನ್ ಬಾರಿಸಿದ ದಾಖಲೆ ಮಾಡಿದ ವಿಂಡೀಸ್, ವಿಶ್ವಕಪ್ ಇತಿಹಾಸದಲ್ಲಿ ಅತಿ ಹೆಚ್ಚು ರನ್ ಗುರಿ ನೀಡಿದ ಎರಡನೇ ತಂಡ ಎನಿಸಿತು. ಇದಲ್ಲದೆ, ಸಿಕ್ಸರ್ ಬಾರಿಸುವುದರಲ್ಲಿ ಮತ್ತು, 19 ಬಾಲ್‌ಗಳಲ್ಲಿ ವೇಗವಾಗಿ ಅರ್ಧ ಶತಕ ಬಾರಿಸುವುದರಲ್ಲಿ ಹೆಟ್ಮೇರ್ ಕೂಡ ದಾಖಲೆ ಮಾಡಿದ್ದಾರೆ.



ತತ್ತರಿಸಿದ ಜಿಂಬಾಬ್ವೆ

ಗುರಿ ಬೆನ್ನತ್ತಿದ ಜಿಂಬಾಬ್ವೆ ಮೊದಲಿನಿಂದಲೂ ತತ್ತರಿಸಿತು. 3ನೇ ಕ್ರಮಾಂಕದಲ್ಲಿ ಬಂದ ಮೇಯ್ಸ್ 28 ರನ್ ಗಳಿಸಿದ್ದು ಬಿಟ್ಟರೆ ಇನ್ನುಳಿದ ಬ್ಯಾಟರ್‌ಗಳು ಆಘಾತ ಎದುರಿಸಿದರು. ಕೊನೆಯಲ್ಲಿ ಇವಾನ್ಸ್ 43 ರನ್ ಗಳಿಸಿ ಅಂತರ ಕುಗ್ಗಿಸಿದರು. ವಿಂಡೀಸ್ ಪರ ಗುಡಕೇಶ್ 4, ಹೋಸೈನ್ 3 ವಿಕೆಟ್ ಕಿತ್ತರು.

ಸ್ಫೋಟಕ ಆರಂಭ

ಮೊದಲು ಬ್ಯಾಟಿಂಗ್‌ಗಿಳಿದ ವಿಂಡೀಸ್‌ಗೆ ಆಕ್ರಮಣಕಾರಿ ಆರಂಭ ಸಿಗಲಿಲ್ಲ, 12 ಬಾಲ್‌ಗಳಲ್ಲಿ 9 ರನ್ ಗಳಿಸಿದ್ದ ಕಿಂಗ್ ವಿಕೆಟ್ ಒಪ್ಪಿಸಿದರು. ಅಲ್ಲಿಗೆ ಜಿಂಬಾಬ್ವೆ ಸಂಭ್ರಮ ನಿಂತಿತು, ಹೆಟ್ಮೇರ್ ಆಟ ಶುರುವಾಯಿತು. ಸಿಂಗಲ್‌ಗಳ ಮೂಲಕ ಸೆಟ್ ಆಗಿ ನಂತರ ಬೌಂಡರಿ ಬಾರಿಸುವ ಔಪಚಾರಿಕತೆಗೆ ಬೀಳಲ ಇಲ್ಲ, ಬರುವ ಎಲ್ಲ ಬಾಲ್‌ಗಳನ್ನು ಸಿಕ್ಸರ್‌ಗಟ್ಟುತ್ತೇನೆ ಎಂಬ ಅವರ ಆಕ್ರಮಣಕಾರಿ ಮನಸ್ಥಿತಿ ಸ್ಪಷ್ಟವಾಗಿ ಗೋಚರಿಸಿತು. ಬಾನೆತ್ತರಕ್ಕೆ ಬಾಲ್ ತಾಕಿದ ಅವರು 7 ಬೌಂಡರಿ ಮತ್ತು 7 ಸಿಕ್ಸರ್ ಬಾರಿಸಿದರು. 34 ಬಾಲ್‌ಗಳಲ್ಲಿ 85 ರನ್ ಸಿಡಿಸಿದರು. ಅವರಿಗೆ ಮಧ್ಯಮ ಕ್ರಮಾಂಕದಲ್ಲಿ ರೋಮಾನ್ ಪೋವೆಲ್ ಸಾಥ್ ಸಿಕ್ಕಿತು. ಜಿಂಬಾಬ್ವೆ ತಂಡವನ್ನು ಇನ್ನಷ್ಟು ದಂಡಿಸಿದ ಅವರು, 35 ಬಾಲ್‌ಗಳಲ್ಲಿ 59 ರನ್ ಗಳಿಸಿದರು. ಅಂತಿಮದಲ್ಲಿ ಸ್ಕೋರ್ ಹೆಚ್ಚಿಸುವ ಜವಾಬ್ದಾರಿ ಹೊತ್ತಿಕೊಂಡ ರುದರ್‌ಫೋರ್ಡ್ 13 ಬಾಲ್‌ಗಳಲ್ಲಿ 31 ರನ್ ಬಾರಿಸಿದರು.

ಹೀಗಿದೆ ಭಾರತ ಸೆಮಿ ಲೆಕ್ಕಾಚಾರ

ಮುಂಬೈ: ಬಂದ ತಂಡವನ್ನೆಲ್ಲಾ ಸೋಲಿಸುತ್ತಾ ನಾಗಾಲೋಟದೊಂದಿಗೆ ವಿಶ್ವಚಾಂಪಿಯನ್ ಆಗಿ ಮೆರೆಯುತ್ತಿದ್ದ ಭಾರತ ತಂಡವನ್ನು ಕಟ್ಟಿಹಾಕಿದ ದ.ಆಫ್ರಿಕಾ ತಂಡವು ವಿಶ್ವಕಪ್‌ನಲ್ಲಿನ ಗೆಲುವಿನೋಟಕ್ಕೆ ತಡೆಯೊಡ್ಡಿದೆ. ಇದು ತಡೆಯೊಡ್ಡಿರುವುದಕ್ಕಷ್ಟೇ ಸೀಮಿತವಾಗಿರದೆ, ಪಂದ್ಯಾವಳಿಯಲ್ಲಿ ಹೊಸ ತಿರುವು ನೀಡಿದೆ. ರೋಚಕ ತಿರುವು, ಬಲಿಷ್ಠ ಭಾರತ ಹಾಲಿ ಚಾಂಪಿಯನ್‌ಗಳನ್ನು ಹೊರಹಾಕಬಲ್ಲ ತಿರುವಾಗಿದೆ. ಪಾಕಿಸ್ತಾನ ವಿರುದ್ಧ ಹೊರತು ಪಡಿಸಿ ಒಂದೂ ಪಂದ್ಯದಲ್ಲಿಯೂ ಸಮತೋಲಿತ ಬ್ಯಾಟಿಂಗ್ ಮಾಡದಿದ್ದರೂ ಒಮ್ಮೆ ಸೂರ್ಯ, ಒಮ್ಮೆ ಕಿಶನ್, ಒಮ್ಮೆ ದುಬೆ ಹೀಗೆ ಒಬ್ಬೊಬ್ಬರ ಸಹಾರೆ ಪಡೆದ ಭಾರತ ಎಂದಿನಂತೆ ಅಜೇಯವಾಗಿತ್ತು. ಯಾವುದೇ ತಂಡವನ್ನು ಸೋಲಿಸಬಲ್ಲ ಆತ್ಮವಿಶ್ವಾಸವನ್ನು ಹೊಂದಿ, ಸೆಮಿಗೆ ಲೀಲಾಜಾಲವಾಗಿ ಲಗ್ಗೆ ಹಾಕಲು ಅಣಿಯಾಗಿತ್ತು. ಆದರೆ ಭಾನುವಾರದ ಪಂದ್ಯವನ್ನು ಎಲ್ಲ ಲೆಕ್ಕಾಚಾರಗಳನ್ನೂ ತಿರುವುಸಿದೆ. ಭಾರತ ಸೆಮಿ ಲಗ್ಗೆಯ ಕನಸಿಗೆ ಬರೆ ಎಳೆದಿದೆ. ಹಾಗಿದ್ದರೆ ಭಾರತ ಸೆಮಿಗೇರಬೇಕಾದರೆ ಏನು ಮಾಡಬೇಕು?

ಎರಡು ರೀತಿ ಹಾದಿ: ಭಾರತಕ್ಕೆ ಸೆಮಿ ಅವಕಾಶ ಅಸಾಧ್ಯವಾಗಿಲ್ಲವಾದರೂ ಕಷ್ಟ, ಅವಲಂಬನೆ ಕೂಡ ಎದುರಿಸುವ ಹಾದಿಯಲ್ಲಿ ಎರಡೂ ಪಂದ್ಯಗಳನ್ನು ಗೆಲ್ಲಲೇಬೇಕಿದೆ ಭಾರತ. ಆದರಲ್ಲೂ ಹೀಗಾಗಲೇ ಬೇಕು.

ಮೊದಲನೇ ಹಾದಿ: ದ.ಆಫ್ರಿಕಾ ತನಗಿರುವ ಎರಡೂ ಪಂದ್ಯಗಳನ್ನು ಗೆದ್ದುಬಿಟ್ಟರೆ ಮುಗಿತು. ಭಾರತಕ್ಕೆ 2 ಗೆಲುವುಗಳು ಸೆಮಿ ಹಾದಿ ತೋರಿಸಿಬಿಡುತ್ತವೆ. ಹೇಗೆಂದರೆ, ಒಂದು ಗುಂಪಿನಲ್ಲಿ 4 ತಂಡಗಳಿವೆ. ದ.ಆಫ್ರಿಕಾ ಮೂರೂ ಪಂದ್ಯಗಳನ್ನು ಗೆದ್ದುಬಿಟ್ಟರೆ, ಉಳಿದತಂಡಗಳೆಲ್ಲ ಕನಿಷ್ಠ ಒಂದು ಪಂದ್ಯ ಸೋಲುತ್ತವೆ. ಭಾರತ ಎರಡು ಪಂದ್ಯಗಳನ್ನು ಗೆದ್ದರೆ, ಜಿಂಬಾಬ್ವೆ ವಿಂಡೀಸ್ ಸೋಲಿನ ಸಂಖ್ಯೆ ಎರಡಾಗುತ್ತವೆ. ಅಂಕ ಹೆಚ್ಚಿಸಿಕೊಳ್ಳುವ ಭಾರತ ಸೆಮಿಗೇರುತ್ತದೆ. ಅದು ತೀರಾ ಸರಳವಾದ ಕೆಲಸ.

ಎರಡನೇಯದ್ದು: ಭಾರತಕ್ಕೆ ಕಷ್ಟವೆನ್ನಿಸುವ ಹಾದಿ ಇದೆ. ಒಂದು ವೇಳೆ ದ.ಆಫ್ರಿಕಾ ಒಂದು ಪಂದ್ಯದಲ್ಲಿ ಸೋತುಬಿಟ್ಟರೆ, ಅದೂ ಜಿಂಬಾಬ್ವೆ ಹಾಗೂ ವಿಂಡೀಸ್ ಪಂದ್ಯ ವಿಜೇತರೊಂದಿಗೆ. ಅಂದರೆ ಭಾರತಕ್ಕೆ ಕಷ್ಟವಾಗಬಹುದು. ಏಕೆಂದರೆ ಜಿಂಬಾಬ್ವೆ-ವಿಂಡೀಸ್ ಪಂದ್ಯದ ವಿಜೇತರೂ ಕೂಡ 4 ಅಂಕಗಳನ್ನು ಪಡೆಯುತ್ತಾರೆ. ಆವಾಗ ರನ್‌ರೇಟ್ ನಿರ್ಧರಿಸಬೇಕಾಗುತ್ತದೆ.

ದ.ಆಫ್ರಿಕಾ ವಿರುದ್ಧ ಸೋಲಿನಿಂದ ಸೂರ್ಯ ಪಡೆಗೆ ಬಲವಾದ ಪೆಟ್ಟು

ಭಾರತ ಮೂಲದವರ ಬಗ್ಗೆ ಮೋದಿ ಮೆಚ್ಚುಗೆ

- ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಬೇರೆ ದೇಶಗಳನ್ನು ಪ್ರತಿನಿಧಿಸುತ್ತಿರುವವರ ಬಗ್ಗೆ ಪ್ರಸ್ತಾಪ
- ಮನ್ ಕಿ ಬಾತ್‌ನಲ್ಲಿ ಹೊಗಳಿದ ಪ್ರಧಾನಿ ಮೋದಿ

ಹೊಸದಿಲ್ಲಿ: ಟಿ20 ವಿಶ್ವಕಪ್‌ನಲ್ಲಿ ಭಾರತ ಮೂಲದ ವರದ್ದೇ ದರ್ಬಾರ್ ನಡೆಯುತ್ತಿರುವ ಮಧ್ಯೆ, ಪ್ರಧಾನಿ ನರೇಂದ್ರ ಮೋದಿ, ಬಿಸಿಸಿಐ ಅಲ್ಲದ ಸಂಸ್ಥೆಗಳನ್ನು ಪ್ರತಿನಿಧಿಸುತ್ತಿರುವ ಆಟಗಾರರನ್ನು ಪಾಡಿದ್ದಾರೆ.

ಟಿ20 ವಿಶ್ವಕಪ್ ಪಂದ್ಯಾವಳಿ ಭಾರತ ಹಾಗೂ ಶ್ರೀಲಂಕಾದಲ್ಲಿ ನಡೆಯುತ್ತಿದೆ. ಪಂದ್ಯಗಳು ಸಹಸ್ರಾರು ಅಭಿಮಾನಿಗಳನ್ನು ರಂಜಿಸುತ್ತಿವೆ. ಆಟಗಾರರು ಅಭಿಮಾನಿಗಳ ಚಿತ್ತ ಕದಿಯುತ್ತಿದ್ದಾರೆ. ಆಕರ್ಷಣೆಯಾಗುತ್ತಿದ್ದಾರೆ. ಒಮ್ಮೆ ಬ್ಯಾಟಿಂಗ್ ಮೂಲಕ, ಒಮ್ಮೆ ಬೌಲಿಂಗ್ ಮೂಲಕ ಒಮ್ಮೆ ಕ್ಯಾಚ್‌ಗಳ ಮೂಲಕ ಜನರ ಮನದಲ್ಲಿ ಬೆಸೆದು ಹೋಗುತ್ತಾರೆ. ಬೇರೆ ಬೇರೆ ದೇಶಗಳ ಆಟಗಾರರ ಆಟವೂ ನಮ್ಮ ದೇಶದಲ್ಲಿ ಚರ್ಚೆಗೆ ಬರುತ್ತದೆ. ಈ ಬಾರಿ ಹಾಗೇ ಕೇಳಲು ಬಂದ ಹೆಸರುಗಳನ್ನು ಗಮನಿಸಿದಾಗ ನಮ್ಮ ದೇಶದವರೇ ಆಡುತ್ತಿರುವುದು ಗಮನಕ್ಕೆ ಬರುತ್ತಿದೆ. ಮನ್ ಕಿ ಬಾತ್‌ನಲ್ಲಿ ಈ ಬಗ್ಗೆ ಮಾತನಾಡಿರುವ ಪ್ರಧಾನಿ ಮೋದಿ, ನಾವು ವಿಶ್ವಕಪ್ ಅನ್ನು ನೋಡುತ್ತೇವೆ. ಅಲ್ಲಿ ಬೇರೇ ದೇಶದ ಜೆರ್ಸಿಯಲ್ಲಿ ಆಟಗಾರರೊಬ್ಬರು ಮಿಂಚುತ್ತಾರೆ. ಹೆಸರು ಗಮನಿಸಿದಾಗ ಇವರು ನಮ್ಮ ದೇಶದವರೇ ಅನ್ನಿಸುತ್ತದೆ.

40 ಭಾರತೀಯರನ್ನು ಶ್ಲಾಘಿಸಿದ ಪ್ರಧಾನಿ ಮೋದಿ: ಈ ಪಂದ್ಯಾವಳಿಯಲ್ಲಿ ಭಾರತೀಯ ಮೂಲದ 40 ಆಟಗಾರರು ವಿವಿಧ ತಂಡಗಳನ್ನು ಪ್ರತಿನಿಧಿಸಿದರು. ಹಲವಾರು ಭಾರತೀಯ ಮೂಲದ ಆಟಗಾರರು ತಮ್ಮ ಕರ್ಮ ಭೂಮಿಯನ್ನು ಪ್ರತಿನಿಧಿಸುವುದನ್ನು ನೋಡುವುದಕ್ಕೆ ಹೆಮ್ಮೆಯನ್ನಿಸುತ್ತದೆ ಎಂದರು. ಕೆನಡಾ ತಂಡವು ಅತಿ ಹೆಚ್ಚು ಭಾರತೀಯ ಮೂಲದ ಆಟಗಾರರನ್ನು ಹೊಂದಿದೆ. ಆ ತಂಡದ ನಾಯಕ ದಿಲ್‌ಪ್ರೀತ್ ಬಾಜ್ವಾ ಪಂಜಾಬ್‌ನ ಗುರುದಾಸ್ಪುರದವರು. ನವನೀತ್ ಧಲಿವಾಲ್ ಚಂಡೀಗಢದವರು. ಭಾರತೀಯ ಮೂಲದವರ ದೊಡ್ಡ ಪಟ್ಟಿಯನ್ನೇ ಗಮನಿಸಿದೆ. ಹೆಮ್ಮೆ ಎನಿಸಿತು ಎಂದರು. ಯುಎಸ್‌ಎ ತಂಡದಲ್ಲಿ ನಾಯಕ ಮೋನಾಂಕ್ ಪಟೇಲ್, ಸೌರಭ್ ನೇತ್ರವಲ್ಕರ್ ಮತ್ತು ಹರ್‌ಪ್ರೀತ್ ಸಿಂಗ್ ಸೇರಿದಂತೆ ಭಾರತದ ದೇಶೀಯ ಕ್ರಿಕೆಟ್‌ನ ಅನೇಕ ಪ್ರತಿಭಾನ್ವಿತ ಆಟಗಾರರು ಇದ್ದಾರೆ. ಒಮನ್ ತಂಡದಲ್ಲಿರುವ ಹಲವಾರು ಭಾರತೀಯ ಮೂಲದ ಆಟಗಾರರ ಬಗ್ಗೆಯೂ ಪ್ರಧಾನಿ ಪ್ರಸ್ತಾಪಿಸಿದರು, ಇತರ ದೇಶಗಳಲ್ಲಿ ಕ್ರಿಕೆಟ್ ಗುಣಮಟ್ಟವನ್ನು ಹೆಚ್ಚಿಸಲು ಅವರು ಕೊಡುಗೆ ನೀಡುತ್ತಿರುವ ರೀತಿಗೆ ಹೆಮ್ಮೆ ವ್ಯಕ್ತಪಡಿಸಿದರು.

ತನ್ವಿ, ಶ್ರೀಕಾಂತ್ ಮೇಲೆ ಭಾರೀ ನಿರೀಕ್ಷೆ

ಹೊಸದಿಲ್ಲಿ: ಮಂಗಳವಾರದಿಂದ ನಡೆಯಲಿರುವ ಬಹು ನಿರೀಕ್ಷಿತ ಜರ್ಮನ್ ಓಪನ್ ಸೂಪರ್-300 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಅನುಭವಿ ಆಟಗಾರ, ಭರವಸೆಯ ಕಿಡಂಬಿ ಶ್ರೀಕಾಂತ್ ಮತ್ತು ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್ ಬೆಳ್ಳಿ ವಿಜೇತೆ ಉದಯೋನ್ಮುಖ ಸ್ಟಾರ್ ತನ್ವಿ ಶರ್ಮ ಭಾರತೀಯರಲ್ಲಿ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದಾರೆ.

ಮಲೇಷ್ಯಾ ಮಾಸ್ಟರ್ಸ್ ಹಾಗೂ ಸೈಯದ್ ಮೋದಿ ಇಂಡಿರ್‌ನ್ಯಾಷ್ನಲ್ ಪಂದ್ಯಾವಳಿಯಲ್ಲಿ ಭರ್ಜರಿ ಪ್ರದರ್ಶನ ತೋರಿಸುವುದರೊಂದಿಗೆ 2025 ರಲ್ಲಿ ಮಿಂಚಿರುವ ಕಿಡಂಬಿ ಶ್ರೀಕಾಂತ್ ಅವರು ಮಿಂಚಲು ಸಜ್ಜಾಗಿದ್ದಾರೆ. ತೀರಾ ಅಸಾಮಾನ್ಯ ಪ್ರದರ್ಶನದೊಂದಿಗೆ ಕಂಬ್ಯಾಕ್ ಮಾಡಿ ಗೆಲ್ಲುವುದು ಅವರ ರೂಢಿ. ಎದುರಾಳಿ ಮೇಲೆ ವೇಗವಾಗಿ ಪ್ರಬಲ್ಯ ಸಾಧಿಸುವುದು ಅವರ ಶಕ್ತಿ. ಇವರ ಈ ಎಲ್ಲ ಚಾಣಾಕ್ಷ ಪ್ರದರ್ಶನ ಭಾರತದ ಅಭಿಮಾನಿಗಳ ಆಸೆ ಹೆಚ್ಚಿಸಿದೆ. ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಫೈಟ್ ನಡೆಸಲಿದ್ದಾರೆ.

ತನ್ವಿ ಮೇಲೆ ಎಲ್ಲರ ಕಣ್ಣು: ಷಟ್ಲರ್‌ಗಳ ಹುಮ್ಮಸ್ಸನ್ನು ಕಾಯ್ದುಕೊಂಡಿದ್ದಲ್ಲದೆ, ಅಭಿಮಾನಿಗಳ ನಿರೀಕ್ಷೆಯನ್ನು ಮಹಿಳೆಯರ ವಿಭಾಗದಲ್ಲಿ ತನ್ವಿ ಶರ್ಮ ಹೆಚ್ಚಿಸಿದ್ದಾರೆ. ಇತ್ತೀಚಿನ ಟೂರ್ನಿಗಳಲ್ಲಿ ಭಾರತ ಕಡೆಯಿಂದ ದೊಡ್ಡ ಸವಾಲು ನೀಡುವ ಆಟಗಾರ್ತಿ ಅನ್ನಿಸಿಕೊಂಡಿರುವ ಅವರು, ಸೂಪರ್-500, ಸೂಪರ್-300 ಪಂದ್ಯಗಳಲ್ಲೂ ವಿಶೇಷ ಪ್ರದರ್ಶನಗಳೊಂದಿಗೆ ಮಿಂಚಿ ಮೆರೆದಿದ್ದಾರೆ. ಅವರೀಗ ಉದಯೋನ್ಮುಖ ಆಟಗಾರ್ತಿ ಅಲ್ಲದೆ, ಸ್ಟಾರ್ ಆಟಗಾರ್ತಿ ಕೂಡ ಹೌದು. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಭಾಗವಹಿ ಸಲಿರುವ ಅವರು, ಮಲೇಷ್ಯಾದ ವ್ಹೋಂಗ್ ಲಿಂಗ್ ಚಿಂಗ್ ಅವರನ್ನು ಎದುರಿಸಲಿದ್ದಾರೆ. ಭಾರತದ ಮತ್ತೋರ್ವ ಆಟಗಾರ್ತಿ ಮಾಳ್ವಿಕಾ ಬನ್ಸೋದ್ ತಮ್ಮ ವಾರ್ಷಿಕ ಆರನೇ ಟೂರ್ನಿ ಆಡುವುದಕ್ಕೆ ಅಣಿಯಾಗಿದ್ದಾರೆ. ಜೂನ್‌ನಲ್ಲಿ ನಡೆದಿದ್ದ ಇಂಡೋನೇಷ್ಯಾ ಓಪನ್ ಪಂದ್ಯಾವಳಿಯ ವೇಳೆ ತೀರಾ ಹಿನ್ನಡೆ ತಂದುಕೊಟ್ಟಿದ್ದ ಮೊಳಕಾಲು ಗಾಯ ಅವರನ್ನು ಬ್ಯಾಡ್ಮಿಂಟನ್‌ನಿಂದ ತೀರಾ ದೂರವಿಟ್ಟಿತ್ತು. ಮೊದಲ ಪಂದ್ಯದಲ್ಲಿ ಅವರು ಡೆನ್ಮಾರ್ಕ್‌ನ ಹೋಜ್ ಮಾರ್ಕ್ ಅವರನ್ನು ಎದುರಿಸಲಿದ್ದಾರೆ. ಇನ್ನೊಂದೆಡೆ ಇಶಾರಾಣಿ ಥೈಲ್ಯಾಂಡ್‌ನ ಕೊಚುವೊಂಗ್ ಅವರನ್ನು ಎದುರಿಸಲಿದ್ದಾರೆ.



ಇನ್ನುಳಿದ ಪಂದ್ಯಗಳು:ಪುರುಷರ ಸಿಂಗಲ್ಸ್ ಡ್ರಾ: ಕಿರಣ್ ಜಾರ್ಜ್ ಫ್ರಾನ್ಸ್‌ನ ಕ್ರಿಸ್ಟೋ ಪೊಪೊವ್ ಅವರನ್ನು ಎದುರಿಸಲಿದ್ದಾರೆ, ತರುಣ್ ಮನ್ನೆಪಲ್ಲಿ ಚೈನೀಸ್ ತೈಪೆಯ ವಾಂಗ್ ತ್ಸು ವೀ ಅವರನ್ನು ಎದುರಿಸಲಿದ್ದಾರೆ. ಅರ್ಹತಾ ಸುತ್ತಿನಲ್ಲಿ, ಆಕರ್ಷಿ ಕಶ್ಯಪ್ ಚೈನೀಸ್ ತೈಪೆಯ ಪೈ ಯು ಪೊ ಅವರನ್ನು ಎದುರಿಸಲಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ, ಭಾರತದ ಅಶ್ವಿನಿ ಭಟ್ ಮತ್ತು ಶಿಖಾ ಗೌತಮ್ ಜೋಡಿ ಚೈನೀಸ್ ತೈಪೆಯ ಹು ಯಿನ್-ಹುಯಿ ಮತ್ತು ಲಿನ್ ಜಿಹ್ ಯುನ್ ಅವರನ್ನು ಎದುರಿಸಲಿದೆ.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5905

ಎಡದಿಂದ ಬಲಕ್ಕೆ
2.ಮಿಡಿತ-ಸ್ಪಂದನೆ (3)
5.ಪದಾರ್ಥ ತುಂಬಲು ಮಾಡಿದ ಸೆಣಬಿನ ದೊಡ್ಡ ಸಂಚಿ (4)
6.ಕಣದ ನಡುವೆ ಹಸ್ತಕವಚವಿದೆ (4)
7.ದಿಕ್ಕು ಮುಗಿದಂತೆ ಕಾಣುವ ಎಲ್ಲೆ (3)
8.ಸುಟ್ಟ ವಾಸನೆಯಿಲ್ಲಿ ತಿರುಗಿ ಬರುತ್ತಿದೆ (3)
10.ಆಭರಣ-ಪೂಜಾಸಾಮಗ್ರಿಗಾಗಿ ಬಳಸುವ ಲೋಹ (3)
12.ಪುರುಷವ್ಯಕ್ತಿಯನ್ನು ಹೀಗೆನ್ನುತ್ತೇವೆ (3)
15.ಜೀವನಕ್ಕೆ ಸರಿದಾರಿ ತೋರಿಸುವ ತತ್ವ (4)
16.ಅಪರಾಧ ತನಿಖೆ ಮಾಡುವ ಅಧಿಕಾರಿ (4)
17.ಅತ್ತಲೂ ಇಲ್ಲದ ಇತ್ತಲೂ ಇಲ್ಲದ ಸ್ಥಿತಿ (3)

ಮೇಲಿನಿಂದ ಕೆಳಕ್ಕೆ
1.ಇದು ಬೌದ್ಧರ ದೇವಾಲಯ (3)
2.ಭಗವಂತನು ಮಾಡುತ್ತಿರುವ ಒತ್ತಾಯ (4)
3.ಕರು ಒಳಗೊಂಡ ಆಕ್ಷೇಪಣೆ (4)
4.ಅಣ್ಣನು ಬೆಳೆಸುತ್ತಿರುವ ನಾಯಿಕೊಡೆ (3)
7.ಪಾವತಿಪತ್ರವಿಲ್ಲಿ ತಲೆಕೆಳಗಾಗಿದೆ (3)
9.ಇನ್ನೂ ಕರು ಹಾಕದ ಹಸು (3)
11.ಕೇಡಿಗೆ ಗುರಿಯಾದವನು ತಲೆಕೆಳಗಾಗಿದ್ದಾನೆ (4)
12. ಇದು ಸುವಾಸನೆಯುಳ್ಳ ಎಲೆ (4)
13.ವಸ್ತು-ಸರಕುಗಳನ್ನು ಶೇಖರಿಸಿಡುವ ಸ್ಥಳ (3)
14.ಮೊಗ್ಗು ಬಿರಿದು ಹೂವಾಗುವುದು (3)

5904 ಉತ್ತರ

ಎಡದಿಂದ ಬಲಕ್ಕೆ:
3.ಅಮರಮುನಿ 6.ಗರತಿ
7.ಜಟಾಧರ 8. ಕಂದ
9.ಸುತ 12.ನಾಕ 14.ವಾನ
15.ಜನಮತ 17.ಗಾಯಕಾ
18.ಸರ್ಪಕಾವಲು

ಮೇಲಿನಿಂದ ಕೆಳಕ್ಕೆ :
1.ಜಗಜಗಿಸು 2.ಕ್ಷಿತಿಜ
4.ಮಧುರಸ್ವಪ್ನ
5.ನಿನಾದ 8.ಕಂಪನಾ
10.ತಪನ 11.ವನಜಭವ
13.ಕವಡೆಕಾಸು 14.ಮಾನಸ
16.ತಗಾದೆ

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಧ್ವನಿ

ಕಿರುಸುದ್ದಿ

ಸೈನಿಕ ಶಾಲೆಗೆ ಆಯ್ಕೆ



ಲಕ್ಷ್ಮೇಶ್ವರ: ಪಟ್ಟಣದ ವಿದ್ಯಾ ಪೀಠ ಪಾಠಶಾಲೆಯ 5ನೇ ತರಗತಿ ವಿದ್ಯಾರ್ಥಿನಿ ಆರ್ವಿ ಪ್ರವೀಣ ಸಜ್ಜನರ, ಕಿತ್ತೂರ ರಾಣಿ ಚೆನ್ನಮ್ಮ ಬಾಲಕಿಯರ ಸೈನಿಕ ವಸತಿ ಶಾಲೆ,ಕಿತ್ತೂರಗೆ ಆಯ್ಕೆಯಾಗಿದ್ದಾಳೆ.

ಸಚಿವರ ಮೇಲಿನ ಆರೋಪಕ್ಕೆ ಕಾಂಗ್ರೆಸ್ ಖಂಡನೆ

ಲಕ್ಷ್ಮೇಶ್ವರ: ಭ್ರಷ್ಟಾಚಾರದಿಂದ ಶಿಕ್ಷೆಗೊಳಗಾದ ಶಾಸಕರನ್ನು ಬಿಜೆಪಿ ಸಮರ್ಥಿಸಿಕೊಳ್ಳುವುದು ಸರಿಯಲ್ಲ. ಲೋಕಾಯುಕ್ತ ಸ್ವಾಯತ್ತ ಸಂಸ್ಥೆಯಾಗಿದೆ. ಶಾಸಕರು ಲೋಕಾಯುಕ್ತ ದಾಳಿಗೆ ರೆಡ್ ಹ್ಯಾಂಡ್ ಸಿಕ್ಕಿ ಬಿದ್ದಿದ್ದಾರೆ. ಆದಾಗ್ಯೂ ಇದು ರಾಜ್ಯ ಸರ್ಕಾರ ಮತ್ತು ಸಚಿವ ಎಚ್.ಕೆ ಪಾಟೀಲರು ಮಾಡಿದ ಷಡ್ಯಂತ್ರ ಎಂಬ ಆರೋಪ ಖಂಡನೀಯ ಎಂದು ಕಾಂಗ್ರೆಸ್ ಹೇಳಿದೆ.

ಈ ಕುರಿತು ಸೋಮವಾರ ಪಟ್ಟಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಸದಸ್ಯೆ, ಸುಜಾತಾ ದೊಡ್ಡಮನಿ, ಚನ್ನಪ್ಪ ಜಗಲಿ, ಕಾಂಗ್ರೆಸ್ ಪಕ್ಷದ ಬ್ಲಾಕ್ ಕಮೀಟಿ ಅಧ್ಯಕ್ಷ ಜಿ.ಆರ್ ಕೊಪ್ಪದ, ಫಕ್ಕಿರೇಶ ಮ್ಯಾಟಣ್ಣವರ, ವಿರೇಂದ್ರ ಪಾಟೀಲ,ನಾಗರಾಜ ಮಡಿವಾಳರ, ಎಸ್.ಪಿ ಬಳಿಗಾರ, ಶರಣು ಗೋಡಿ,ಸೋಮಣ್ಣ ಬೆಟಗೇರಿ ಅವರು, ಶಾಸಕರು ಗದಗ ಜಿಲ್ಲೆ, ಶಿರಹಟ್ಟಿ ಕ್ಷೇತ್ರಕ್ಕೆ ಕಪ್ಪು ಮಸಿ ಬಳೆದಿದ್ದಾರೆ. ಲೋಕಾ ದಾಳಿ ವೇಳೆ ಕೆಲ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಪಕ್ಷ, ಪಕ್ಷದ ನಾಯಕರ ಮೇಲೆ ಸುಳ್ಳು, ಷಡ್ಯಂತ್ರದ ಆರೋಪ ಮಾಡಿದ್ದಾರೆ. ಭ್ರಷ್ಟಾಚಾರ ಮಾಡಿದ್ದಲ್ಲದೇ ಕಾಂಗ್ರೆಸ್ ಪಕ್ಷದ ವಿರುದ್ಧ ಸುಳ್ಳು ಆರೋಪದ ಹೋರಾಟ ಮಾಡುವ ವಿಚಾರವೂ ವ್ಯಕ್ತವಾಗಿದೆ. ಬಿಜೆಪಿಗರ ಹೋರಾಟಕ್ಕೆ ಯಾರೂ ಬೆಂಬಲ ನೀಡಬಾರದು. ಹಾಗೇನಾದರೂ ಆದರೆ ಇದಕ್ಕೆ ಕಾಂಗ್ರೆಸ್ ಪಕ್ಷವೂ ದಿಟ್ಟ ಹೋರಾಟಕ್ಕೆ ಸಿದ್ಧ ಎಂದರು.

ಬಳಿಕ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಶಾಸಕ ಡಾ.ಚಂದ್ರು ಲಮಾಣಿ ಅವರ ರಾಜೀನಾಮೆ ಪಡೆಯಬೇಕು ಎಂದು ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ರಾಮಣ್ಣ ಲಮಾಣಿ(ಶಿಗ್ಲಿ), ಯಲ್ಲಪ್ಪ ಸೂರಣಗಿ, ನೀಲಪ್ಪ ಶರಸೂರಿ,ಶಿವಣ್ಣ ಕಬ್ಬೇರ, ಕಲ್ಲಪ್ಪ ಗಂಗಣ್ಣವರ, ಮನೋಜ ರಾಠೋಡ, ಜಗದೀಶ ಹುಲಿಗೆಮ್ಮನವರ, ಶಿವರಾಜಗೌಡ ಪಾಟೀಲ, ಪರಮೇಶ ಲಮಾಣಿ, (ಅಕ್ಕಿಗುಂದ) ತಿಪ್ಪಣ್ಣ ಸಂಶಿ, ನಾಗರಾಜ ದೊಡ್ಡಮನಿ, ವಾಸೀಂಅಕ್ರಮ ಮುಚ್ಚಾಲೆ, ರಾಜು ಓಲೇಕಾರ, ರಾಜರತ್ನ ಹುಲಗೂರ, ನೀಲಪ್ಪ ಪಡಗೇರಿ,ಶಶಿಕಲಾ ಬಡಿಗೇರ, ರಫೀಕ ಕಲಬುರ್ಗಿ, ಪ್ರಕಾಶ ಕೊಂಚಿಗೇರಿಮಠ, ಸಂತೋಷ ತೇಲಿ, ಯಲ್ಲಪ್ಪ ಹಂಜಗಿ ರಂಜಾನಸಾಬ ನಧಾಫ್ ಸೇರಿ ಅನೇಕರಿದ್ದರು.



ಗದಗ: ತಾಲೂಕಿನ ಹೊಂಬಳ ವಲಯದ ಹುಯಿಲಗೋಳ ಕಾರ್ಯಕ್ಷೇತ್ರದಲ್ಲಿ ಮಾಶಾಸನ ಪಡೆಯುತ್ತಿದ್ದ ಹುಸೇನಮ್ಮ ಅವರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಾತ್ಸಲ್ಯ ಮನೆ ನಿರ್ಮಿಸಿ ಜಿಲ್ಲಾ ನಿರ್ದೇಶಕ ಕೇಶವ ದೇವಾಂಗ ಉದ್ಘಾಟನೆ ಮಾಡಿದರು. ತಾಲೂಕು ಯೋಜನಾಧಿಕಾರಿ ಉಮಾ, ಕೊಪ್ಪಳ ಪ್ರಾದೇಶಿಕ ವಿಭಾಗದ ಜ್ಞಾನವಿಕಾಸ ಯೋಜನಾಧಿಕಾರಿ ಸುಧಾ, ಗ್ರಾಪಂ ಸದಸ್ಯರು, ನವಜೀವನ ಸಮಿತಿಯ ಸದಸ್ಯರು, ವಲಯದ ಮೇಲ್ವಿಚಾರಕರು, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಸೇವಾ ಪ್ರತಿನಿಧಿಗಳು ಒಕ್ಕೂಟದವರು ಇದ್ದರು.

ಮಾರುಕಟ್ಟೆ ಧಾರಣೆ

ಗದಗ — ಕ್ವಿಂಟಲ್

ಗೆಜ್ಜಿ ಶೇಂಗಾ	3873-9090
ಅಜವಾನ	8269-10519
ಸಜ್ಜಿ	1843-1843
ಕಡಲೆ	1617-5509
ಉದ್ದು	6039-6229
ಹವೀಜ	7650-7650
ಹೆಸರು	1212-5896
ಹುರಳಿ	3006-4509
ಜೋಳ	2012-4457
ಗೋವಿನಜೋಳ	1375-2200
ಮಡಕಿ	4214-4214
ಸಾಸವಿ	4712-4712
ಕುಸಬಿ	4119-5639
ಸೂರ್ಯಕಾಂತಿ	6550-6629
ತೊಗರಿ	4309-5759
ಗೋಧಿ	1869-5065
ಬೆಲ್ಲ	4200-4200



ಗದಗ: ತಾಲೂಕಿನ ಕಳಸಾಪೂರ ಗ್ರಾಮದ ಬಸವಕೇಂದ್ರದಲ್ಲಿ ಶಿವಾನುಭವ ಕಾರ್ಯಕ್ರಮದಲ್ಲಿ ಸಂತ ಸೇವಾಲಾಲರವರ 287ನೇ ಜಯಂತಿ ಆಚರಣೆ ಮಾಡಲಾಯಿತು.ಕಪ್ಪತ್ತಗಿರಿ ಸಾಹಿತ್ಯ ವೇದಿಕೆಯ ಅಧ್ಯಕ್ಷೆ ಚಂದ್ರಕಲಾ ಇಟಗಿಮಠ, ಬಸವಕೇಂದ್ರದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಖಂಡಮ್ಮನವರ ಮಾತನಾಡಿದರು. ಶರದರಾವ ಹುಯಿಲಗೋಳ ಅಧ್ಯಕ್ಷತೆ ವಹಿಸಿದ್ದರು.

ಪೋಷಕರು ಮಕ್ಕಳಲ್ಲಿ ಸಮಾನತೆ ಬೆಳೆಸಲಿ

ಗದಗ: ಲಿಂಗ ಸಂವೇದನೆ ಎಂದರೆ ಎಲ್ಲ ಲಿಂಗಗಳ ಅರಿವು, ಸಹಾನುಭೂತಿ ಮತ್ತು ಗೌರವ ಬೆಳೆಸುವ ಮೂಲಕ ಭೇದಭಾವ ನಿವಾರಿಸಿ ಸಮಾನ ಅವಕಾಶ ಕಲ್ಪಿಸುವ ಪ್ರಕ್ರಿಯೆ ಎಂದು ನಿವೃತ್ತ ಪ್ರಾಚಾರ್ಯೆ ಡಾ.ನಳಿನಿ ಬೆಂಗೇರಿ ಹೇಳಿದರು. ತಾಲೂಕಿನ ಹುಲಕೋಟಿಯ ಕೆ.ಎಚ್.ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ಘಟಕವು ಆಯೋಜಿಸಿದ್ದ ಲಿಂಗ ಸಂವೇದನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸೆಕ್ಸ್ ಜೈವಿಕ ಭೇದಗಳನ್ನು ಸೂಚಿಸುವುದಾದರೆ ಜೆಂಡರ್ ಸಮಾಜ ಮತ್ತು ಸಂಸ್ಕೃತಿಯಿಂದ ನಿರ್ಮಿತ ಪಾತ್ರಗಳು ಮತ್ತು ನಿರೀಕ್ಷೆಗಳಾಗಿದ್ದು, ಭೇದಭಾವ, ರೂಢಿಮಾತುಗಳು, ಹಿಂಸಾಚಾರ, ಶಿಕ್ಷಣದಲ್ಲಿ ಅಸಮಾನತೆ, ಸಾಮಾಜಿಕ ಅನ್ಯಾಯ ಮುಂತಾದ ಸಮಸ್ಯೆಗಳನ್ನು ಎದುರಿಸಲು ಲಿಂಗ ಸಂವೇದನೆ ಅಗತ್ಯವಾಗಿದೆ. ಮನೆ ಸಾಮಾಜಿಕ ಕಲಿಕೆಯ ಮೊದಲ ಸಂಸ್ಥೆಯಾಗಿದ್ದು, ಮಕ್ಕಳಲ್ಲಿ ಸಮಾನತೆ ಬೆಳೆಸುವ ಜವಾಬ್ದಾರಿ ಪೋಷಕರದ್ದಾಗಿದೆ ಎಂದರು. ಮಹಿಳಾ ಘಟಕದ ಸಂಯೋಜಕಿ ಡಾ.ಸಾರಿಕಾ ಪಾಟೀಲ ಮಾತನಾಡಿ, ಸಾಮಾಜಿಕೀಕರಣ ಪ್ರಕ್ರಿಯೆಯಲ್ಲಿ ಕುಟುಂಬ, ಸಂಸ್ಕೃತಿ, ಮಾಧ್ಯಮ ಮತ್ತು ಸಾಮಾಜಿಕ ನಿರೀಕ್ಷೆಗಳು ಲಿಂಗಪಾತ್ರಗಳನ್ನು ರೂಪಿಸುತ್ತಿದ್ದು, ಇಂದು ನಿಜವಾದ ಸಮಾನತೆ ಎಲ್ಲಿದೆ? ಪ್ರಶ್ನೆ ಮೂಲಕ ವಿದ್ಯಾರ್ಥಿಗಳನ್ನು ಚಿಂತನೆಗೆ ಪ್ರೇರೇಪಿಸಿದರು. ಐಕ್ಯುಎಸಿ ಸಂಯೋಜಕ ಡಾ.ಜಿತೇಂದ್ರ ಜಾಗೀರದಾರ, ಎನ್‌ಎಸ್‌ಎಸ್ ಘಟಕದ ಸಂಯೋಜಕ ಡಾ.ಅಪ್ಪಣ್ಣ ಹಂಜೆ, ಸಾಂಸ್ಕೃತಿಕ ಘಟಕದ ಸಂಯೋಜಕ ರಮೇಶ ಹುಲಕುಂದ, ಪ್ರಾಂಶುಪಾಲೆ ಪ್ರೊ.ಸುಧಾ ಕೌಜಗೇರಿ ಮಾತನಾಡಿದರು. ಪ್ರಾಧ್ಯಾಪಕಿ ಶ್ವೇತಾ ಪಾಲನಕರ, ಸಹ ಪ್ರಾಧ್ಯಾಪಕಿ ಮಹಾನಂದ ಹಿರೇಮಠ, ರಂಜಿತಾ ಕಡಿ, ರೋಹಿಣಿ ರಾಚಣ್ಣನವರ ಇತರರಿದ್ದರು.



ಗದಗ: ತಾಲೂಕಿನ ಹುಲಕೋಟಿಯ ಕೆ.ಎಚ್.ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ಘಟಕವು ಆಯೋಜಿಸಿದ್ದ ಲಿಂಗ ಸಂವೇದನೆ ಕಾರ್ಯಕ್ರಮವನ್ನು ನಿವೃತ್ತ ಪ್ರಾಚಾರ್ಯೆ ಡಾ.ನಳಿನಿ ಬೆಂಗೇರಿ ಉದ್ಘಾಟಿಸಿದರು.

ತಮಟೆ, ಹಲಗೆ ಸದ್ದು ಜೋರು

▸ ರುದ್ರಗೌಡ ಪಾಟೀಲ

ಗದಗ: ಹೋಳಿ ಹಬ್ಬ ಬಂತಂದರೆ ಸಾಕು ಅವಳಿ ನಗರ ಸೇರಿದಂತೆ ಜಿಲ್ಲೆಯ ಬೀದಿಗಳಲ್ಲಿ ತಮಟೆ ಹಾಗೂ ಹಲಗೆ ಸದ್ದು ರಿಂಗಣಿಸುತ್ತದೆ. ಹಬ್ಬದ ಸಂಭ್ರಮ ಇಮ್ಮಡಿಸುವ ಹಲಗೆಗಳ ಮಾರಾಟ ಶುರುವಾಗಿದೆ. ಮಾರುಕಟ್ಟೆಯಲ್ಲಿ ತರಹೇವಾರಿ ಹಲಗೆಗಳು ಮಾರಾಟಕ್ಕಿದ್ದು, ಮಕ್ಕಳು ಹಾಗೂ ಯುವಕರು ಪೈಪೋಟಿಗೆ ಬಿದ್ದು ಖರೀದಿಸುತ್ತಿದ್ದಾರೆ.

ರಂಗಿನಾಟದ ಹೋಳಿ ಹುಣ್ಣಿಮೆ ಪ್ರಮುಖ ಆಕರ್ಷಣೆಯೇ ಹಲಗೆ. ಶಿವರಾತ್ರಿ ಅಮವಾಸ್ಯೆ ಕಳೆಯುತ್ತಿದ್ದಂತೆಯೇ ಯುವಕರು, ಮಕ್ಕಳ ಕೈಯಲ್ಲಿ ಹಲಗೆ ಬಾರಿಸಲು ಆರಂಭಿಸಿದ್ದಾರೆ. ನಗರ, ಪಟ್ಟಣ, ಗ್ರಾಮೀಣ ಎಂಬ ಭೇದವಿಲ್ಲದೇ ಎಲ್ಲೆಲ್ಲೂ ಯುವಕರು ಹಲಗೆ ಬಾರಿಸಿ ಖುಷಿ ಪಡುತ್ತಾರೆ. ಹೋಳಿ ಹುಣ್ಣಿಮೆ ಕೆಲವೇ ದಿನಗಳು ಬಾಕಿ ಇರುವುದರಿಂದ ಎಲ್ಲೆಲ್ಲೂ ಹಲಗೆ ಸದ್ದು ಮಾರ್ದನಿಸುತ್ತಿದೆ.

ವರ್ಷಕ್ಕೊಮ್ಮೆ ಬರುವ ಹೋಳಿ ಹಬ್ಬಕ್ಕಾಗಿ ಕಾತರದಿಂದ ಕಾಯುವ ಯುವ ಸಮೂಹ, ಚಿಣ್ಣರ ತಂಡ ಇದೀಗ ಹೋಳಿ ಆಚರಣೆಗಾಗಿ ಅಂತಿಮ ಸಿದ್ಧತೆ ನಡೆಸಿದೆ. ಕಾಮ ದಹನಕ್ಕೆ ಬೀದಿ ಬೀದಿ ಸುತ್ತಿ ಕಟ್ಟಿಗೆ, ಕುಳ್ಳು ಸಂಗ್ರಹಿಸಿದ್ದು, ಚಂದಾ ವಸೂಲಿ ಮಾಡುವ ಮೂಲಕ ಹೋಳಿಗೆ ಅದ್ದೂರಿ ಮುನ್ನುಡಿ ಬರೆದಿದೆ.

ಆಧುನಿಕತೆಯ ಸ್ಪರ್ಶ ಹೋಳಿ ಹುಣ್ಣಿಮೆಯನ್ನು ಸಹ ಬಿಟ್ಟಿಲ್ಲ, ಅನಾದಿ ಕಾಲದ ಚರ್ಮದ ಹಲಗೆಗಳ ಬಳಕೆ ಕಡಿಮೆಯಾಗಿ, ಫೈಬರ್ ಹಲಗೆಗಳು ಲಗ್ಗೆ ಇಟ್ಟಿವೆ. ಚರ್ಮದ ಹಲಗೆ ತಯಾರಿಸುವ ಕುಟುಂಬಗಳು ಸಹ ಈಗ ಇಲ್ಲವಾಗಿವೆ. ಕಳೆದ ಹಲವು ವರ್ಷದಿಂದ ಮಾರುಕಟ್ಟೆಗೆ ಫೈಬರ್ ಹಲಗೆ ಲಗ್ಗೆ ಇಟ್ಟಿದ್ದು ಚರ್ಮದ ಹಲಗೆಗೆ ಬೇಡಿಕೆ ಕಡಿಮೆ ಆಗಿದೆ. ಪುಟ್ಟ ಮಕ್ಕಳಿಂದ ಹಿಡಿದು ದೊಡ್ಡವರೂ ಫೈಬರ್ ಹಲಗೆ ಖರೀದಿಸುತ್ತಿದ್ದಾರೆ. ಹಲಗೆಯ ಶಬ್ದ ಹೊರಡಿಸುವ ನಿನಾದ ಆಧರಿಸಿ ಖರೀದಿಗೆ ಮುಂದಾಗಿದ್ದಾರೆ. ಜೋರಾಗಿ ಶಬ್ದ ಮಾಡುವುದಕ್ಕೆ ಬೇಡಿಕೆ ಹೆಚ್ಚು, ಶಾಲೆ ಮುಗಿಸಿ ಬರುವ ಚಿಕ್ಕಮಕ್ಕಳು ದಂಡು ಕಟ್ಟಿಕೊಂಡು ಓಣಿಗಳಲ್ಲಿ ಹಲಗೆ ಬಾರಿಸುತ್ತ ಸಂಚರಿಸುತ್ತಿದ್ದಾರೆ.

ಈವರೆಗೆ ಚರ್ಮದ ಹಲಗೆಗಳಿಗೆ ಭಾರೀ ಬೇಡಿಕೆ ಇತ್ತು. ಇದೀಗ ಫೈಬರ್ ಹಲಗೆ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗುತ್ತಿವೆ. ಚರ್ಮದ ಹಲಗೆಗಳು 1,500 ರೂ. ನಿಂದ 5,000 ರೂ.ವರೆಗೆ ಬೆಲೆ ಬಾಳುತ್ತಿದ್ದರೆ, ಫೂಬರ್ ಹಲಗೆಗಳು 100 ರೂ.ನಿಂದ 1500 ರೂ.ವರೆಗೆ ದೊರೆಯುತ್ತಿವೆ. ಹೀಗಾಗಿ ಹಲಗೆ ಖರೀದಿಗೆ ಚಿಣ್ಣರ ತಂಡವೂ ಸೇರಿದಂತೆ ಯುವ ಸಮೂಹ ಮಗ್ನರಾಗಿದ್ದಾರೆ.

ನಗರದ ಪ್ರಮುಖ ಜಾಗದಲ್ಲಿ ರಾತ್ರಿ ಸಮಯದಲ್ಲಿ ಹಲಗೆ ಬಾರಿಸಲು ಪಡ್ಡೆ ಹೈಕಳ ದೊಡ್ಡ ಗುಂಪೇ ಜಮಾಯಿಸುತ್ತದೆ. ಹತ್ತಾರು ಯುವಕರು ವೃತ್ತಾಕಾರದಲ್ಲಿ ನಿಂತು ಹಲಗೆ ಬಾರಿಸಲು ಆರಂಭಿಸಿದರೆ ಸ್ವರಕ್ಕೆ ತಕ್ಕಂತೆ ಮತಷ್ಟು ಯುವಕರು ವೃತ್ತದ ಮಧ್ಯದಲ್ಲಿ ನರ್ತಿಸಲು ಆರಂಭಿಸುತ್ತಾರೆ. ಹಲಗೆ ಬಾರಿಸುವ ಮತ್ತು ನರ್ತನದಲ್ಲಿ ತೊಡಗಿದವರನ್ನು ಹುರಿದುಂಬಿಸಲು ಇನ್ನಷ್ಟು ಯುವಕರು ಸಿಳ್ಳೆ-ಕೇಕೆ ಹಾಕುತ್ತಾ ಅಲ್ಲಿ ಜಮಾಯಿಸಿರುತ್ತಾರೆ.



ಹಬ್ಬ ಮುಗಿಯುವರೆಗೂ ಹಲಗೆ ಸದ್ದು

ನಾವು ಪ್ರತಿ ವರ್ಷ ಸಣ್ಣ ಹಲಗೆ ಖರೀದಿ ಮಾಡಿಕೊಂಡು ಹೋಗುತ್ತವೆ. ಮಕ್ಕಳಿಗೆ ಸಣ್ಣ ಹಲಗೆ ಅಂದರೆ ತುಂಬಾ ಇಷ್ಟ. ಹೀಗಾಗಿ ಹಬ್ಬ ಮುಗಿಯುವರಿಗೆ ಬಾರಿಸುತ್ತಾರೆ. ಹೀಗಾಗಿ ಖರೀದಿ ಮಾಡಲಾಗುತ್ತಿದೆ ಎಂದು ಗ್ರಾಹಕ ಶೇಖರ ರಾಟಿ ಹೇಳಿದರು.

- ಫೈಬರ್ ಹಲಗೆಗಳಿಗೆ ಬೇಡಿಕೆ
- ಗಾತ್ರಕ್ಕೆ ತಕ್ಕ ದರ ನಿಗದಿ
- ತಾಳಬದ್ಧ ನಾದಕ್ಕೆ ನೃತ್ಯ



ವ್ಯಾಪಾರ ಜೋರು

ಕಳೆದ ಒಂದು ವಾರದಿಂದ ಹಲಗೆ ಮಾರಾಟ ಮಾಡಲಾಗುತ್ತಿದೆ. ಕಳೆದ ವರ್ಷಕ್ಕಿಂತ ವ್ಯಾಪಾರ ಜೋರಾಗಿದೆ. 100 ರಿಂದ 1500ರವರಿಗೆ ಹಲಗೆ ಮಾರಾಟ ಮಾಡಲಾಗುತ್ತಿದೆ. ಗ್ರಾಹಕರು ಸಹ ಹೆಚ್ಚಿನ ಪ್ರಮಾಣದಲ್ಲಿ ಸಣ್ಣ ಗಾತ್ರದ ಹಲಿಗೆ ಖರೀದಿ ಮಾಡಿಕೊಂಡು ಹೋಗುತ್ತಿದ್ದಾರೆ. ಇನ್ನೂ ಮುಂದಿನ ದಿನಗಳಲ್ಲಿ ವ್ಯಾಪಾರ ಜೋರು ಆಗುತ್ತಿದೆ ಎನ್ನುತ್ತಾರೆ ಹಲಗೆ ವ್ಯಾಪಾರಿ ರಾಮಪ್ಪ.

ಡಾ.ತೋಂಟದ ಸಿದ್ಧಲಿಂಗ ಶ್ರೀ ಜಯಂತಿ

ನರಗುಂದ: ಮಾತೃಹೃದಯ ಅಂತಃಕರಣದ ಕರುಣಾಮಯಿಗಳಾಗಿದ್ದ ಡಾ.ತೋಂಟದ ಸಿದ್ಧಲಿಂಗ ಶ್ರೀಗಳು ಭಕ್ತರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದವರು. ಸಮಾಜ ಸೇವೆಯೇ ಶಿವಪೂಜೆ ಎಂದರಿತಿದ್ದ ಪೂಜ್ಯರು ಧಾರ್ಮಿಕ ಆಚರಣೆ ಮತ್ತು ಸಾಮಾಜಿಕ ಸುಧಾರಣೆಗಳಲ್ಲಿ ಜನಸಾಮಾನ್ಯರ ಪರ ಧ್ವನಿ ಎತ್ತಿ ಸರ್ವ ಜನಾಂಗದವರನ್ನೂ ಅಪ್ಪಿ ಒಪ್ಪಿಕೊಂಡಿದ್ದರು. ಸಾಮಾಜಿಕ ಅಸಮಾನತೆಯ ವಿರುದ್ಧ ದಣಿವರಿಯದೆ ಹೋರಾಟವನ್ನು ಮಾಡುತ್ತಾ ಬಂದಿದ್ದಾರೆಂದು ನವಲಗುಂದ ಗವಿಮಠದ ಬಸವಲಿಂಗ ಸ್ವಾಮೀಜಿ ಹೇಳಿದರು.

ತಾಲೂಕಿನ ಬೈರನಹಟ್ಟಿ ಗ್ರಾಮದ ದೊರೆಸ್ವಾಮಿ ವಿರಕ್ತಮಠದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಹಾಗೂ ಶ್ರೀ ದೊರೆಸ್ವಾಮಿ ವಿವಿಧೋದ್ದೇಶ ಟ್ರಸ್ಟ್ ಇವರ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕೋಮು ಸೌಹಾರ್ದತೆಯ ಹರಿಕಾರ ಡಾ.ತೋಂಟದ ಸಿದ್ಧಲಿಂಗ ಶ್ರೀಗಳ 77ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಕನ್ನಡ ನಾಡು-ನುಡಿಗಾಗಿ ಅವರು ಮಾಡಿದ ಹೋರಾಟ ಕನ್ನಡ ಸಾರಸ್ವತ ಲೋಕದ ಚರಿತ್ರೆಯಲ್ಲಿ ಅಜರಾಮರವಾದುದು. ಲಿಂಗಾಯತ ಅಧ್ಯಯನ ಸಂಸ್ಥೆಯ ಮೂಲಕ 500 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿ ಒಂದು ವಿಶ್ವವಿದ್ಯಾಲಯ ಮಾಡಬಹುದಾದ ಕೆಲಸವನ್ನು ಪೂಜ್ಯರು ಸಾಧಿಸಿದ್ದು ಅವರ ಪುಸ್ತಕ ಪ್ರೀತಿಯನ್ನು ತೋರಿಸುತ್ತದೆ ಎಂದರು.

ವಿಶ್ರಾಂತ ಉಪನ್ಯಾಸಕ ಪ್ರೊ. ಎಸ್.ಬಿ. ಭಜಂತ್ರಿ ಮಾತನಾಡಿ, ದುಡಿಯುವವರ, ಶ್ರಮಿಕರ ಪರವಾದ ಉದಾರತೆಯನ್ನು ತೋರಿದ ಶ್ರೀಗಳು ಈ ಶತಮಾನದ ಬಸವಣ್ಣ, ಅರಣ್ಯ, ಪ್ರಾಣಿ, ರೈತ ಹಾಗೂ ಶ್ರಮಿಕರು ಹೀಗೆ ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ಅನ್ಯಾಯವಾದಾಗ ಹೋರಾಟದ ಮೂಲಕ ಅವರಿಗೆ ನ್ಯಾಯ ಕೊಡಿಸಲು ಪ್ರಯತ್ನಿಸಿದ ಪೂಜ್ಯರು ಸರ್ವರಿಗೂ ಆದರ್ಶಪ್ರಾಯರು. ಜಾತಿ ಬೇಧವರಿಯದೆ ಮನುಕುಲದ ಒಳಿತಿಗಾಗಿ ಶ್ರಮಿಸಿದ ಎಲ್ಲ ಜನಾಂಗದ ಮಹನೀಯರ ಜಯಂತಿಯನ್ನು ಶ್ರೀಮಠದಲ್ಲಿ ಆಚರಿಸಿ ಭಾವೈಕ್ಯತೆಯ ಸಂದೇಶವನ್ನು ಸಾರಿದವರು ಎಂದರು.

ಮುಖ್ಯಶಿಕ್ಷಕ ವಿ.ಜಿ. ಬೋಗಾರ ಅವರನ್ನು ಶ್ರೀಮಠದಿಂದ ಸತ್ಕರಿಸಲಾಯಿತು. ಬೈರನಹಟ್ಟಿ-ಶಿರೋಳ ಮಠದ ಪೀಠಾಧಿಪತಿ ಶಾಂತಲಿಂಗ ಶ್ರೀಗಳು, ಬಿ.ಎಂ. ಲಂಕೆನ್ನವರ, ಎಸ್.ಎಸ್. ಪಾಟೀಲ, ಆರ್.ಕೆ. ಐನಾಪುರ, ಆರ್.ಬಿ. ಚಿನಿವಾಲರ, ಮಹಾಂತೇಶ ಹಿರೇಮಠ ಉಪಸ್ಥಿತರಿದ್ದರು.



ಢಾಂಬಿಕ ಭಕ್ತರ ಟೀಕಿಸುತ್ತಿದ್ದ ಘಟ್ಟಿವಾಳಯ್ಯನವರು

ಮುಂಡರಗಿ: 12ನೇ ಶತಮಾನದಲ್ಲಿ ಕಲ್ಯಾಣದಲ್ಲಿ 770 ಅಮರ ಗಣಗಳಲ್ಲಿ ಒಬ್ಬರಾಗಿದ್ದ ಘಟ್ಟಿವಾಳಯ್ಯನವರು ಮದ್ದಲೆ ಬಾರಿಸುತ್ತಾ ನೃತ್ಯ ಮಾಡುತ್ತಾ ಶಿವಾನುಭವವನ್ನು ಸಾರುವ ಅಚಲ ನಿಷ್ಠೆ ಶ್ರದ್ಧೆಯುಳ್ಳ ಕಾಯಕ ಶರಣರಾಗಿದ್ದರು. ಶೂನ್ಯ ಸಂಪಾದನೆಯಲ್ಲಿ ಇವರ ಕುರಿತು ಒಂದು ಇಡೀ ಅಧ್ಯಾಯವೇ ಇದೆ ಎಂಬುದು ಅವರ ಹೆಗ್ಗಳಿಕೆಯಾಗಿದ್ದು, ಢಾಂಬಿಕ ಭಕ್ತರನ್ನು ಟೀಕಿಸುತ್ತಿದ್ದ ಘಟ್ಟಿವಾಳಯ್ಯನವರು 147ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ ಎಂದು ಶರಣ ಚಿಂತಕಿ ತನುಜಾ ಕೊಟ್ಟೂರ್‌ಶೆಟ್ಟರ್ ಹೇಳಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್, ಶರಣ ಸಾಹಿತ್ಯ ಪರಿಷತ್ ಹಾಗೂ ಚೈತನ್ಯ ಶಿಕ್ಷಣ ಸಂಸ್ಥೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಜಗದ್ಗುರು ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಶರಣ ಚಿಂತನ ಮಾಲೆಯಲ್ಲಿ ಅವರು ಉಪನ್ಯಾಸ ನೀಡುತ್ತಾ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಚೈತನ್ಯ ಶಿಕ್ಷಣ ಸಂಸ್ಥೆಯ ನಿರ್ದೇಶಕಿ ವೀಣಾ ಪಾಟೀಲ್ ಮಾತನಾಡಿ, ಶರಣರು ತಮ್ಮ ವೈಯಕ್ತಿಕ ಬದುಕನ್ನು ಹೆಚ್ಚು ಪ್ರಚುರಪಡಿಸದೆ ಬಸವಾದಿ ಶರಣರ ತತ್ವಗಳನ್ನು ಸಾರುವ ನಿಟ್ಟಿನಲ್ಲಿ ಬದುಕನ್ನು ನಡೆಸಿದರು. ಕಾಯಕ, ದಾಸೋಹ, ಲಿಂಗ ಪೂಜೆಗಳು ಅವರ ಬದುಕಿನ ಮುಖ್ಯ ಧ್ಯೇಯಗಳಾಗಿದ್ದು ಅವರವರ ಕಾಯಕಗಳನ್ನೇ ಅವರ ಅಡ್ಡ ಹೆಸರುಗಳನ್ನಾಗಿಸಿಕೊಂಡಿದ್ದರು ವಿಪರ್ಯಾಸವೆಂದರೆ ಅವರ ಅಡ್ಡ ಹೆಸರುಗಳೇ ಇದೀಗ ಅವರವರ ಜಾತಿ ಸೂಚಕಗಳಾಗಿ ಬದಲಾಗಿವೆ ಎಂದರು.

ಮುಂಡರಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಜಿ. ಗಚ್ಚಣ್ಣವರ ಪ್ರಾಸ್ತಾವಿಕವಾಗಿ ಮಾತನಾಡಿ, ಎಲೆ ಮರೆಯ ಕಾಯಿಯಂತಿರುವ

ಮುಂಡರಗಿ ತಾಲೂಕಿನ ಬರಹಗಾರರು, ಕವಿಗಳು ಹಾಗೂ ಅವರ ಕೃತಿಗಳನ್ನು ಇನ್ನು ಮುಂದೆ ಪಾಕ್ಷಿಕವಾಗಿ ಪರಿಚಯಿಸುವ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಆಶಯವನ್ನು ವ್ಯಕ್ತಪಡಿಸಿದರು.ಉದ್ಘಾಟನೆಯನ್ನು ರಾಜೇಶ್ವರಿ ಮೇಗಳಮನಿ ನೆರವೇರಿಸಿದರು. ಲಿಂಗರಾಜ್ ದಾವಣಗೆರೆ ಪ್ರಾರ್ಥಿಸಿದರು. ರಮೇಶ್‌ಗೌಡ ವೈ. ಪಾಟೀಲ್ ಸ್ವಾಗತಿಸಿದರು. ಅಕ್ಕಮಹಾದೇವಿ ಕೊಟ್ಟೂರ್‌ಶೆಟ್ಟರ್ ನಿರೂಪಿಸಿದರು. ಶಂಕರ ಕುಕನೂರ, ಯುವರಾಜ್ ಮುಂಡರಗಿ, ಆರ್. ಕೆ. ರಾಯನಗೌಡ್ರ, ಎನ್.ಎಸ್. ಅಲ್ಲಿಪುರ್, ಮಹೇಶ್ ಮೇಟಿ, ಹನುಮರೆಡ್ಡಿ ಇಟಗಿ, ಕೃಷ್ಣ ಸಾವಕಾರ್, ಗಿರಿಜಾ ಕಡ್ಡಿ, ಕಾವೇರಿ ಬೋಲ,ಅರುಣ ಗುಜ್ಜರಿ, ಹರ್ಷ ಕೊಟ್ಟೂರಶೆಟ್ಟರ, ಚೈತನ್ಯ ಇಳಕಲ್ ಮತ್ತಿತರರಿದ್ದರು.



ರಸಪ್ರಶ್ನೆ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳ ಜ್ಞಾನ ವೃದ್ಧಿ: ವನ್ನಾಲ

ಗಜೇಂದ್ರಗಡ: ರಸಪ್ರಶ್ನೆ ಕಾರ್ಯಕ್ರಮಗಳು ವಿದ್ಯಾರ್ಥಿಗಳನ್ನು ಜಾಣರನ್ನಾಗಿಸುತ್ತವೆ. ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡು ಈ ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು . ನಿರೀಕ್ಷೆಗೂ ಮೀರಿ ವಿದ್ಯಾರ್ಥಿಗಳು ಪಾಲ್ಗೊಳ್ಳುವ ಮೂಲಕ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದ್ದಾರೆ. ವಿದ್ಯಾರ್ಥಿಗಳು ಧೈರ್ಯದಿಂದ ಪರೀಕ್ಷೆಗಳನ್ನು ಎದುರಿಸಲು ಇಂದಿನ ಕಾರ್ಯಕ್ರಮ ನೆರವಾಗಲಿದೆ ಎಂದು ಕುರುಹಿನಶೆಟ್ಟಿ ಸಮಾಜದ ಮುಖಂಡ ಅಶೋಕ ವನ್ನಾಲ ಹೇಳಿದರು.

ಗಜೇಂದ್ರಗಡದ ಕುರುಹಿನಶೆಟ್ಟಿ ಸಮುದಾಯ ಭವನದಲ್ಲಿ 2025-26 ನೇ ಸಾಲಿನ ಎಸ್‌ಎಸ್ ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ರಸಪ್ರಶ್ನೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಿಕ್ಷಕ ಎಸ್.ಎಸ್. ಡೊಳ್ಳಿನ ಮಾತನಾಡಿ, ಪರೀಕ್ಷೆ ಎಂಬ ಭಯದಿಂದ ವಿದ್ಯಾರ್ಥಿಗಳು ಹೊರಬರಲು ರಸಪ್ರಶ್ನೆ ಕಾರ್ಯಕ್ರಮ ಸಹಕಾರಿಯಾಗಲಿದೆ. ಕೇವಲ ನೌಕರಿಗಾಗಿ ವಿದ್ಯಾಭ್ಯಾಸ ಮಾಡದೆ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳಲು ನಿಮ್ಮ ಕಲಿಕೆ ಇರಲಿ ಎಂದರು. ಪ್ರಥಮ ಬಹುಮಾನ ಗಜೇಂದ್ರಗಡದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ವೈಷ್ಣವಿ ಕುಲಕರ್ಣಿ ಮತ್ತು ಪದ್ಮಾವತಿ ಶಾಬಾದಿ, ದ್ವಿತೀಯ ಬಹುಮಾನವನ್ನು ಇಟಗಿಯ ಸರ್ಕಾರಿ ಆದರ್ಶ ಶಾಲೆಯ ವೀರೇಶ ಜೂಚನಿ ಮತ್ತು ರೋಹಾನ್ ಮುಜಾವರ್, ತೃತೀಯ ಬಹುಮಾನವನ್ನು ಗಜೇಂದ್ರಗಡದ ವಿ.ಟಿ.ರಾಯಬಾಗಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸೌಮ್ಯ ಸಾರಂಗಮಠ ಮತ್ತು ಸ್ಫೂರ್ತಿ ಇಂಜನಿ ಪಡೆದುಕೊಂಡರು. ಲಕ್ಷ್ಮಣ ಗಡಗಿ, ಶ್ರೀಕಂಠ ಕವಡಿಮಟ್ಟಿ, ಪ್ರಶಾಂತ ನೆಲ್ಲೂರ, ಕಾಲೇಶ ವನ್ನಾಲ, ಗೀತಾ ಬನಿಕಲ್, ಮೋಹನ್ ತಟ್ಟಿ, ಮಾರುತಿ ಬುಟ್ಟಾ, ಗಿರೀಶ ಮಾದಗುಂಡಿ, ಶಿವಾನಂದ ಕವಡಿಮಟ್ಟಿ, ಈರಣ್ಣ ಮಾಳಗಿ, ಬಸವರಾಜ ಅಣ್ಣಿಗೇರಿ,ಬಸವರಾಜ ಕೆಂಬಾವಿ,ಅರವಿಂದ ಕವಡಿಮಟ್ಟಿ, ದೇವಣ್ಣ ಬನಿಕಲ್, ಮುದಕಪ್ಪ ಬುಟ್ಟಾ, ಚಂದಾಲಿಂಗಪ್ಪ ಬೀಳಗಿ,ಬಸವರಾಜ ಮಾಳಗಿ,ಮಂಜುನಾಥ ಸಂಕನೂರ, ವಿರೂಪಾಕ್ಷ ಅಳವಂಡಿ, ಕಳಕೇಶ ಕುದರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ದಿ.ಎಚ್.ಸಿ ರಟಗೇರಿ ಕಂಚಿನ ಪುತ್ಥಳಿಗೆ ವಿದ್ಯಾರ್ಥಿಗಳಿಂದ ನುಡಿನಮನ

ಲಕ್ಷ್ಮೇಶ್ವರ: ಪಟ್ಟಣದ ಸಿಬಿಎಸ್‌ಇ ಸ್ಕೂಲ್ ಚಂದನದಲ್ಲಿ ಸುಮಾರು 22 ವರ್ಷಗಳವರೆಗೆ ಗೌರವ ನಿರ್ದೇಶಕರಾಗಿ ಅನುಪಮ ಸೇವೆ ಸಲ್ಲಿಸಿದ್ದ ತಮ್ಮ ಪಾಠದ ಮೂಲಕ ಅಂಖ್ಯಾತ ವಿದ್ಯಾರ್ಥಿಗಳ ಬದಕನ್ನು ಬದಲಿಸಿದ್ದ ದಿ.ಎಚ್.ಸಿ ರಟಗೇರಿ ಅವರ ಕಂಚಿನ ಪುತ್ಥಳಿಯನ್ನು ಕಳೆದ ಡಿಸೆಂಬರನಲ್ಲಿ ಮುಖ್ಯಮಂತ್ರಿ ಸಿ.ಎಂ.ಸಿದ್ದರಾಮಯ್ಯ ಅವರು ಉದ್ಘಾಟನೆ ನೆರವೇರಿಸಿದ್ದರು.

ಶಾಲೆಯ ಮಕ್ಕಳ ಪ್ರೀತಿ ಪಾತ್ರರಾಗಿದ್ದ, ಸದಾ ಮಕ್ಕಳ ಏಳಿಗೆಯನ್ನು ಬಯಸುತ್ತಿದ್ದ ದಿ.ಎಚ್.ಸಿ. ರಟಗೇರಿ ಅವರ ಪುತ್ಥಳಿಗೆ ಶಾಲೆಯ ನೂರಾರು ಮಕ್ಕಳು ವಿಶೇಷ ಪೂಜೆ ಸಲ್ಲಿಸಿ ನುಡಿ ನಮನವನ್ನು ಅರ್ಪಿಸಿದರು. ಅನೇಕ ಮುಖಂಡರು ಹಾಗೂ ಅವರ ಅಪಾರ ಶಿಷ್ಯವೃಂದ, ಶಿಕ್ಷಕರು ಮಕ್ಕಳು ಪಾಲ್ಗೊಂಡಿದ್ದ ಈ ಕಾರ್ಯಕ್ರಮ ಹೆಚ್ಚು ವಿಶೇಷವಾಗಿತ್ತು. ಕಾಯಕಯೋಗಿಯಾಗಿ ಜೀವನದ ಅಂತ್ಯದ ಕಾಲದ ವರೆಗೂ ಪಾಠ ಮಾಡುತ್ತಿದ್ದ ಅವರು ಚಂದನ ಸ್ಕೂಲ್‌ನಲ್ಲಿ ಯಾವುದೇ ರೀತಿಯ ಸಂಭಾವನೆ ಪಡೆಯದ ಸೇವೆ ಸಲ್ಲಿಸುತ್ತಿದ್ದರು ಎನ್ನುವದು ಗಮನಾರ್ಹವಾಗಿದೆ. ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಸ್ಥಾಪಕ ಟಿ.ಈಶ್ವರ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಡಿ.ವೈ. ಬಸಾಪುರ್, ಗಿರಿಜಾ ಈಶ್ವರ, ಸರಸ್ವತಿ ರಟಗೇರಿ,



ಕಿಮ್ಸ್‌ನ ಚಿಕ್ಕಮಕ್ಕಳ ತಜ್ಞ ಡಾ. ವಿನೋದ ರಟಗೇರಿ, ಡಾ.ರಮೇಶ ರಟಗೇರಿ, ಎಸ್.ಪಿ.ಬಳಿಗಾರ, ಯಲ್ಲಪ್ಪ ತಳವಾರ, ರಾಮಣ್ಣ ಲಮಾಣಿ, ಹಾಲಪ್ಪ, ಶಶಿ ಲೂಹರ, ರಾಜು ತಳವಾರ, ಶಾಲೆಯ ಪ್ರಾಂಶುಪಾಲರು, ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು, ರಟಗೇರಿ ಕುಟುಂಬಸ್ಥರು, ಅನೇಕ ಗಣ್ಯರು, ಸಾರ್ವಜನಿಕರು ಇದ್ದರು.

ರೋಗಿಗಳಿಗೆ ಅವಧಿ ಮುಗಿದ ಔಷಧಿ ವಿತರಣೆ: ಸಾರ್ವಜನಿಕರ ಆರೋಪ

ಶಿರಹಟ್ಟಿ: ಪಟ್ಟಣದ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಅವಧಿ ಮುಗಿದ ಔಷಧಿಗಳನ್ನು ರೋಗಿಗಳಿಗೆ ವಿತರಿಸುವ ಮೂಲಕ ಬಡಜನರ ಜೀವದ ಜತೆ ವೈದ್ಯರು ಚೆಲ್ಲಾಟ ಆಡುತ್ತಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದರು.

ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಖಾನಾಪುರ ಗ್ರಾಮದ ಆಶಾಬಿ ದೊಡ್ಡಮನಿ ಎಂಬ ಮಹಿಳಾ ಮಾನಸಿಕ ರೋಗಿಯು ಕಳೆದ ಫೆ.17ರಂದು ಆಸ್ಪತ್ರೆಗೆ ಬಂದು ನಿಯಮಿತ ಚಿಕಿತ್ಸೆ ಪಡೆದಿದ್ದಾರೆ. ಚಿಕಿತ್ಸೆ ನಂತರ ವೈದ್ಯ ಡಾ. ಗೋಪಾಲರಾಜ್ ಅವಧಿ ಮುಗಿದ ಮಾತ್ರೆ ನೀಡಿ, ರೋಗಿಗೆ ನೀಡಲಾದ ಕೈಪಿಡಿಯಲ್ಲಿ ಅದನ್ನು ತಮ್ಮ ಸಹಿಯೊಂದಿಗೆ ದಾಖಲಿಸಿ ಕಳುಹಿಸಿದ್ದಾರೆ. ಎರಡು ದಿನ ಮಾತ್ರೆ ತೆಗೆದುಕೊಂಡ ಮಹಿಳೆ ಅಸ್ವಸ್ಥಗೊಂಡಾಗ ಮನೆಯವರು ಈ ಔಷಧಿಯ ಅವಧಿ ನೋಡಿದ್ದು, ಕಳೆದ ಜ. 2026 ಹಾಗೂ 2025 ರಲ್ಲಿಯೇ ಅವಧಿ ಮುಗಿದ ಮಾತ್ರೆ ವಿತರಿಸಿದ್ದಾರೆ ಎಂದು ರೋಗಿಯ ಮನೆಯರು ಆರೋಪಿಸಿದರು.

ಸೋಮವಾರ ಕೆಲ ಮುಖಂಡರ ಜೊತೆ ಆಸ್ಪತ್ರೆಗೆ ಬಂದು ಅವಧಿ ಮುಗಿದ ಔಷಧಿ ವಿತರಣೆ ಯಾಕೆ ನೀಡಿದ್ದಿರಿ ಎಂದು ಕೇಳಿದ್ದಾರೆ. ಇದಕ್ಕೆ ಕೋಪಗೊಂಡ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಗೋಪಾಲ್ ರಾಜ್ ಅದನ್ನು ಕೇಳೊಕೆ ನೀವು ಯಾರು ಎಂದು ಪ್ರಕಾಶ ಬಡಣ್ಣವರ ಹಾಗೂ ಶಿಶಿರ ಪಾಟೀಲ ಎಂಬುವವರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೇ ಈ ಘಟನೆ ನಡೆಯುತ್ತಿದ್ದಂತೆ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಗೆ ಎಲ್ಲಾ ಸೇವೆಗಳನ್ನು ಬಂದ್ ಮಾಡುವಂತೆ ಮೌಖಿಕ ಆದೇಶ ನೀಡಿ ಪೊಲೀಸ್ ಠಾಣೆಗೆ ಹೋಗಿದ್ದಾರೆ. ಇದರಿಂದಾಗಿ ಸುಮಾರು 4 ಗಂಟೆಗಳ ಕಾಲ ರೋಗಿಗಳಿಗೆ ಚಿಕಿತ್ಸೆ ದೊರೆಯದೆ ವೃದ್ಧರು, ಬಾಣಂತಿಯರು ಹಾಗೂ ರೋಗಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ತುರ್ತು ಪರಿಸ್ಥಿತಿಯ ಕೆಲ ರೋಗಿಗಳು ಖಾಸಗಿ ಹಾಗೂ ಜಿಲ್ಲಾಸ್ಪತ್ರೆಗೆ ಹೋಗುವ ದೃಶ್ಯಗಳು ಕಂಡು ಬಂದವು.



ಮರು ಪ್ರಕರಣ ದಾಖಲು: ಯಾರೊಬ್ಬರೂ ಪ್ರಶ್ನಿಸಬಾರದೆಂಬ ಭ್ರಮೆಯಲ್ಲಿರುವ ಡಾ.ಗೋಪಾಲರಾಜ್ ವಿರುದ್ಧ ಮಾನಸಿಕ ರೋಗಿಯ ಮಗ ಅವರ ಮೇಲೆ ಪ್ರಕರಣ ದಾಖಲಿಸಲು ಮುಂದಾಗಿದ್ದಾರೆ. ಅಲ್ಲದೇ ಅವಧಿ ಮುಗಿದ ಔಷಧಿ ಬಗ್ಗೆ ಕೇಳಿದ ಪ್ರಕಾಶ ಬಡಣ್ಣವರ ಹಾಗೂ ಶಿಶಿರ ಪಾಟೀಲ ಸಹ ಆಡಳಿತಾಧಿಕಾರಿ ಡಾ.ಗೋಪಾಲರಾಜ್ ಮೇಲೆ ಮರು ಪ್ರಕರಣ ದಾಖಲಿಸುತ್ತಿದ್ದಾರೆ. ಈ ಕುರಿತು ತಾಲೂಕು ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಗೋಪಾಲರಾಜ್ ಅವರನ್ನು ಸಂರ್ಪಕಿಸಿದಾಗ ಯಾವುದೇ ಮಾಹಿತಿ ನೀಡಲು ನಿರಾಕರಿಸಿದರು. ಜಿಲ್ಲಾ ಆರೋಗ್ಯಾಧಿಕಾರಿಗಳಿಂದ ಪರವಾನಗಿ ಪಡೆದ ತಮ್ಮನ್ನು ಪ್ರಶ್ನಿಸುವಂತೆ ಹೇಳಿದ್ದಾರೆ.

> ಅವಧಿ ಮುಗಿದ ಔಷಧಿ ವಿತರಣೆಯ ಬಗ್ಗೆ ಸಾರ್ವಜನಿಕರು ಕೇಳಿದಾಗ ಆಸ್ಪತ್ರೆಯ ಆಡಳಿತಾಧಿಕಾಗಳ ವರ್ತನೆ ಖಂಡನೀಯ. ವೈದ್ಯರ ವಿರುದ್ಧ ರೋಗಿಯು ಪ್ರಕರಣ ದಾಖಲಿಸಲು ಮುಂದಾಗಿದ್ದು, ಸಾರ್ವಜನಿಕರು ಯಾವುದೇ ಭಯಪಡುವ ಅಗತ್ಯವಿಲ್ಲ ಅವರೊಂದಿಗೆ ಸದಾ ಇದ್ದೇನೆ.
>
> ■ ಸುಜಾತಾ ದೊಡ್ಡಮನಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ಬೆಂಗಳೂರು

ಆಳ್ವಾಸ್ ವಿರಾಸತ್ ನುಡಿಸಿರಿ ಕಾರ್ಯಕ್ರಮ ಉದ್ಘಾಟನೆ

ಗದಗ: ಉಸಿರು ಫೌಂಡೇಶನ್ ಮೂಲಕ ಆಳ್ವಾಸ್ ಶಿಕ್ಷಣ ಸಂಸ್ಥೆಯ ನೇತೃತ್ವದಲ್ಲಿ ಶರಣ್ ಪಾಟೀಲ್ ಗದಗದ ಜನರನ್ನು ಒಗ್ಗೂಡಿಸುವುದರ ಜೊತೆಗೆ ಹೊಸ ಸಂಸ್ಕೃತಿ ಮತ್ತು ಸಂಸ್ಕಾರ ಹುಟ್ಟು ಹಾಕುವ ಪ್ರಯತ್ನ ಮಾಡಿದ್ದಾರೆ. ಆ ಯುವಕನಿಗೆ ನಾವೆಲ್ಲ ಬೆಂಬಲ ಕೊಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸೋಮವಾರ ನಗರದ ವಿ.ಡಿ.ಎಸ್.ಟಿ.ಸಿ ಮೈದಾನದಲ್ಲಿ ಆಳ್ವಾಸ್ ಶಿಕ್ಷಣ ಸಂಸ್ಥೆ, ಮೂಡುಬಿದರೆ ಇವರ ವತಿಯಿಂದ ಉಸಿರು ಫೌಂಡೇಶನ್ 10 ನೇ ವರ್ಷದ ಸಂಭ್ರಮೋತ್ಸವ ಹಾಗೂ ಆಳ್ವಾಸ್ ವಿರಾಸತ್ ನುಡಿಸಿರಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗದಗಿನಲ್ಲಿ ಬಹಳ ಉತ್ತಮವಾಗಿರುವ ಉನ್ನತ ಮಟ್ಟದ ಸಾಂಸ್ಕೃತಿಕವಾಗಿರುವ ಸಮಾರಂಭ, ಉಸಿರು ಫೌಂಡೇಶನ್ 10ನೇ ವರ್ಷದ ಸಮ್ಮೇಳನ ನಡೆಯುತ್ತಿದೆ. ಒಬ್ಬ ಯುವಕ ಬೆಂಗಳೂರಿಗೆ ಹೋಗಿ ತನ್ನ ಬದುಕು ಕಟ್ಟಿಕೊಳ್ಳುವುದರ ಜೊತೆಗೆ ಇತರರ ಬದುಕು ಕಟ್ಟಿ ಕೊಡುವ ಛಲದಿಂದ ಹಲವಾರು ವ್ಯಾಪಾರ ವಹಿವಾಟು ಮಾಡಿ ತಮ್ಮ ದುಡಿಮೆಯಲ್ಲಿ ಬಂದ ಲಾಭವನ್ನು ನಮ್ಮ ಜನರಿಗೆ ಅನುಕೂಲ ಮಾಡಬೇಕೆಂದು ಬೇರಿಗೆ ನೀರೆರೆಯಬೇಕೆಂಬ ಮಹಾತ್ಮಕಾಂಕ್ಷೆಯಿಂದ ಬಂದಿದ್ದಾರೆ. ಅವರ ಪ್ರಯತ್ನಕ್ಕೆ ಹಾರ್ದಿಕ ಶುಭಾಶಯಗಳು ಎಂದರು.

ಜನರನ್ನು ಒಗ್ಗೂಡಿಸಬೇಕು, ಒಳ್ಳೆಯಲ್ಲಿ ರೀತಿಯಿಂದ ಸಕಾರಣದಿಂದ ಸನ್ಮಾರ್ಗದಿಂದ ಒಗ್ಗೂಡಿಸಬೇಕು. ಅದು ನಮ್ಮ ಸಂಸ್ಕಾರ ಮತ್ತು ಸಂಸ್ಕೃತಿಯಿಂದ ಸಾಧ್ಯ ಇದೆ ಎಂದು ಆಳ್ವಾಸ್ ಶಿಕ್ಷಣ ಸಂಸ್ಥೆಯ ಮಕ್ಕಳನ್ನು ಕರೆದುಕೊಂಡು ಬಂದು ಮೋಹನ್ ಆಳ್ವಾ ನೇತೃತ್ವದಲ್ಲಿ ಈ ಕಾರ್ಯಕ್ರಮ ಮಾಡುವ ಮೂಲಕ ಗದಗದ ಜನರನ್ನು ಒಗ್ಗೂಡಿಸುವುದರ ಜೊತೆಗೆ ಹೊಸ ಸಂಸ್ಕೃತಿ ಮತ್ತು ಸಂಸ್ಕಾರ ಹುಟ್ಟು ಹಾಕುವ ಪ್ರಯತ್ನವನ್ನು ಶರಣ ಪಾಟೀಲ್ ಮಾಡಿದ್ದಾನೆ. ಆ ಯುವಕನಿಗೆ ನಾವೆಲ್ಲ ಬೆಂಬಲ ಕೊಡಬೇಕು. ಇವತ್ತಿನ ಕಾರ್ಯಕ್ರಮದಿಂದ ಬಹಳಷ್ಟು ಜನರಿಗೆ ಸ್ಫೂರ್ತಿ ಸಿಕ್ಕು ಅವರೂ ಇದೇ ರೀತಿ ಕೆಲಸ ಮಾಡುವಂತಾಗಲಿ ಎಂದು ಶುಭ ಹಾರೈಸುವುದಾಗಿ ಹೇಳಿದರು.

ಈ ಸಂಧರ್ಭದಲ್ಲಿ ಜಗದ್ಗುರು ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಭಾರತೀಯ ಜನತಾ ಪಕ್ಷದ ಜಿಲ್ಲಾಧ್ಯಕ್ಷ ರಾಜು ಕುರಡಗಿ, ಆಳ್ವಾಸ್ ಶಿಕ್ಷಣ ಸಂಸ್ಥೆಯ ಚೇರಮನ್ ಡಾ.ಮೋಹನ ಆಳ್ವಾ, ಆಯೋಜಕ ಶರಣ ಪಾಟೀಲ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.



ಕಿರುಸುದ್ದಿ

ರಾಯಬಾಗನಲ್ಲಿ ಮಳೆ



ರಾಯಬಾಗ: ಪಟ್ಟಣದಲ್ಲಿ ಗುಡುಗು, ಸಿಡಿಲುಗಳ ಆರ್ಭಟದೊಂದಿಗೆ ಮುಂಗಾರು ಮಳೆ ಪ್ರಾರಂಭಗೊಂಡಿದ್ದು, 36 ನಿಮಿಷಗಳ ಕಾಲ ಮಳೆಯಾಗಿ ಪಟ್ಟಣವೆಲ್ಲ ನೀರಾಯಿತು. ಮಳೆ ರೈತರಲ್ಲಿ ಭರವಸೆಯ ಬೆಳಕು ಮೂಡಿಸಿದೆ. ಇನ್ನೂ ಕೆಲವು ಕಡೆಗಳಲ್ಲಿ ಕೊಯ್ಲಿಗೆ ಬಂದ ರೈತರ ಹಿಂಗಾರಿ ಬೆಳೆಗಳಾದ ಗೋಧಿ, ಕಡಲೆ, ಜವೆಗೋದಿ ಬೆಳೆಗಳಿಗೆ ಹಾನಿಯಾಗುವ ಸಂಭವವಿದೆ. ಸೋಮವಾರ ಸಂತೆಯ ದಿನವಾದ್ದರಿಂದ ಸಂಜೆ ಇದ್ದಕ್ಕಿದ್ದಂತೆ ಜೋರಾದ ಮಳೆಯಲ್ಲಿಯೇ ವ್ಯಾಪಾರಸ್ಥರು, ಗ್ರಾಹಕರು ವ್ಯವಹರಿಸಬೇಕಾಯಿತು. ಸಂತೆಗೆ ಬಂದ ಸುತ್ತಮುತ್ತಲಿನ ಗ್ರಾಮಗಳ ಜನರು ತೊಂದರೆ ಅನುಭವಿಸಿದರು.

ಸಚಿವ ಸಂತೋಷ ಲಾಡ್, ಜಕ್ಕಪ್ಪನವರ ವಾಗ್ವಾದ

ಧಾರವಾಡ: ನಗರದ ಜಿಲ್ಲಾ ಪಂಚಾಯತಿ ಭವನದಲ್ಲಿ ಸೋಮವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ವಿಧಾನ ಪರಿಷತ್ ಸದಸ್ಯ ಎಫ್.ಎಚ್.ಜಕ್ಕಪ್ಪನವರ ನಡುವೆ ಪರಸ್ಪರ ವಾಗ್ವಾದ ನಡೆಯಿತು. ಸಮಾಜ ಕಲ್ಯಾಣ ಇಲಾಖೆಯವರು ಮಾಹಿತಿ ನೀಡಿಲ್ಲ. ವಿಷಯ ಪ್ರಸ್ತಾಪಿಸಲು ಬಿಡುತ್ತಿಲ್ಲ. ಜಿಲ್ಲೆಯಲ್ಲಿ ಎಸ್ಸಿ–ಎಸ್ಟಿ ಅಲಕ್ಷ್ಯ ಎಂದು ಜಕ್ಕಪ್ಪನವರ ಏರುಧ್ವನಿಯಲ್ಲಿ ಮಾತನಾಡಿದಾಗ ಸಚಿವ ಲಾಡ್, ಅವಕಾಶ ನೀಡಿದ್ದೇವೆ ಸುಮ್ಮನಿ ಕಿರಿಚಾಡಬೇಡಿ ಎಂದರು. ನಾನು ಕಿರುಚಿತ್ತಿಲ್ಲ, ನನ್ನ ಧ್ವನಿಯೇ ಹಾಗೆ. ಸಚಿವರು ತಾಳ್ಮೆಯಿಂದ ಕೇಳಬೇಕು. ಇಲ್ಲವಾದರೆ, ಹೊರಗೆ ಹೋಗುವುದಾಗಿ ಜಕ್ಕಪನವರ ಪ್ರತಿಕ್ರಿಯೆಗೆ, ಹೊರಗಡೆ ಹೋಗಲು ನಾನು ಹೇಳಿಲ್ಲ, ಆದರೆ, ನೀವು ಹೋಗುವುದಾದರೆ ಹೋಗಿ ಎಂದರು ಲಾಡ್. ಇಬ್ಬರ ನಡುವಿನ ವಾಗ್ವಾದಲ್ಲಿ ಮಧ್ಯ ಪ್ರವೇಶ ಬಿಜೆಪಿ ಶಾಸಕ ಎಂ.ಆರ್.ಪಾಟೀಲ ಹಾಗೂ ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಅವರು ಜಕ್ಕಪ್ಪನವರ ಕೈಹಿಡಿದು ಕುಳ್ಳಿರಿಸಿದರು. ಸ್ವಲ್ಪ ಹೊತ್ತಿನ ನಂತರ ಇಬ್ಬರು ಜನಪ್ರತಿನಿಧಿಗಳು ಕೂಡ ಶಾಂತವಾದರು.

ಈಜಲು ತೆರಳಿದ್ದ ಬಾಲಕ ಸಾವು

ಮುಂಡಗೋಡ: ಸ್ನೇಹಿತರ ಜತೆ ಈಜಲು ತೆರಳಿದ್ದ ಬಾಲಕ ನೀರಿನಲ್ಲಿ ಮುಳಗಿ ಸಾವನ್ನಪ್ಪಿದ ಘಟನೆ ತಾಲೂಕಿನ ಸನವಳ್ಳಿ ಜಲಾಶಯದಲ್ಲಿ ನಡೆದಿದೆ. ತಾಲೂಕಿನ ಸನವಳ್ಳಿ ಗ್ರಾಮದ ಅಜಯ್ ರಮೇಶ ಕೆರಿಹೊಲದವರ (17) ಮೃತ ಬಾಲಕ. ಭಾನುವಾರ ಶಾಲೆ ರಜೆ ಇದ್ದ ಕಾರಣ ಸ್ನೇಹಿತರು ಸೇರಿ ಪಟ್ಟಣಕ್ಕೆ ಬಂದು ಮಧ್ಯಾಹ್ನದವರೆಗೂ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಕ್ರಿಕೆಟ ಪಂದ್ಯಾವಳಿ ನೋಡಿ ಸಂಜೆ ನಾಲ್ಕು ಗಂಟೆಗೆ ಸನವಳ್ಳಿ ಗ್ರಾಮಕ್ಕೆ ತೆರಳಿದ್ದಾರೆ ಎಂದು ತಿಳಿದು ಬಂದಿದೆ. ನಂತರ ಆರು ಜನ ಸ್ನೇಹಿತರು ಸನವಳ್ಳಿ ಜಲಾಶಯಕ್ಕೆ ಈಜಲು ತೆರಳಿದ್ದರು. ಈ ವೇಳೆ ಈಜಾಡುತ್ತಿದ್ದಾಗ ಆಕಸ್ಮಿಕವಾಗಿ ಮೃತ ಬಾಲಕ ಅಜಯ್ ನೀರಲ್ಲಿ ಕಾಣೆಯಾಗಿದ್ದ. ಇದರಿಂದ ಆತಂಕಗೊಂಡ ಉಳಿದ ಬಾಲಕರು, ಈ ವಿಷಯವನ್ನು ಗ್ರಾಮದಲ್ಲಿ ಯಾರಿಗೂ ಹೇಳಿರಲಿಲ್ಲ. ರಾತ್ರಿಯಾದರೂ ಮನೆಗೆ ಅಜಯ ವಾಪಸ್ ಬರದೇ ಇದ್ದಾಗ, ಕುಟುಂಬಸ್ಥರು ಉಳಿದ ಬಾಲಕರನ್ನು ವಿಚಾರಿಸಿದ್ದಾಗ ಘಟನೆ ಬೆಳಕಿಗೆ ಬಂದಿದೆ. ರಾತ್ರಿಯ ನಡೆದ ವಿಷಯವನ್ನು ತಿಳಿದು ಗ್ರಾಮಸ್ಥರು ಜಲಾಶಯ ಹತ್ತಿರ ಬಂದಾಗ ಆತ ತೊಟ್ಟ ಬಟ್ಟೆ ನೋಡಿ ಕುಟುಂಬಸ್ಥರಿಗೆ ಹಾಗೂ ಗ್ರಾಮಸ್ಥರಿಗೆ ಬಾಲಕ ನೀರಿನಲ್ಲಿ ಮುಳಗಿರುವುದು ಖಚಿತವಾಗಿದೆ. ತಕ್ಷಣವೇ ಮುಂಡಗೋಡ ಪೊಲೀಸರಿಗೆ ಮಾಹಿತಿ ನೀಡಿದ ಗ್ರಾಮಸ್ಥರು ರಾತ್ರಿಯೇ ನೀರಿಪಾಲಾದ ಬಾಲಕನಿಗಾಗಿ ಅಗ್ನಿಶಾಮಕದಳವರು ಜಲಾಶಯದಲ್ಲಿ ತಡರಾತ್ರಿಯವರೆಗೂ ಶೋಧ ಕಾರ್ಯ ನಡೆಸಿದ್ದರು ಬಾಲಕ ಪತ್ತೆಯಾಗಿರಲಿಲ್ಲ. ಮತ್ತೆ ಬೆಳಿಗ್ಗೆ ಅಗ್ನಿಶಾಮಕ ಸಿಬ್ಬಂದಿಗಳು, ಪೊಲೀಸರು, ಗ್ರಾಮಸ್ಥರ ಸಹಕಾರದೊಂದಿಗೆ ಬಾಲಕನ ಶವ ಪತ್ತೆ ಹಚ್ಚಿದ್ದಾರೆ. ಬಾಲಕನ ಶವ ಕಂಡು ಪೋಷಕರು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಈ ಕುರಿತು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿಬಿ–ಜಿ ರಾಮ್ ಜಿ ಜಾಗೃತಿ ಸಮಾವೇಶ | ಬೊಮ್ಮಾಯಿ ಆರೋಪ

ಹಿಂದುಳಿದವರ ಬಗ್ಗೆ ಕಾಳಜಿ ಇಲ್ಲದ ಸಿಎಂ ಸಿದ್ದರಾಮಯ್ಯ

ಹಾವೇರಿ: ಸಿಎಂ ಸಿದ್ದರಾಮಯ್ಯ ಅವರು ಬಾಯಿ ಮಾತಿನಲ್ಲಿಯೇ ಬಡವರು, ದಲಿತರು, ಹಿಂದುಳಿದವರು, ಮಹಿಳೆಯರು ಅಂತ ಹೇಳುತ್ತಾರೆ. ಆದರೆ, ಸಿದ್ದರಾಮಯ್ಯ ಹಿಂದುಳಿದ ವರ್ಗದ ಮುಂದುವರಿದ ನಾಯಕ ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಲೇವಡಿ ಮಾಡಿದರು.

ನಗರದ ಶಿವಬಸವ ಕಲ್ಯಾಣ ಮಂಟಪದಲ್ಲಿ ಸೋಮವಾರ ಜಿಲ್ಲಾ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ವಿಬಿ –ಜಿ ರಾಮ್ ಜಿ ಜನ ಜಾಗರಣ, ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ, ಸಿದ್ದರಾಮಯ್ಯ ಅವರು 40 ವರ್ಷದಿಂದ ರಾಜಕಾರಣ ಮಾಡುತ್ತಿದ್ದಾರೆ. ಹಿಂದುಳಿದವರ್ಗದನಾಯಕಅಂತಹೇಳುತ್ತಿದ್ದಾರೆ. ಆದರೆ, ರಾಜ್ಯದಲ್ಲಿ ಹಿಂದುಳಿದವರು ಮತ್ತು ದಲಿತರು ಹಿಂದುಳಿದಿದ್ದಾರೆ. ಸಿದ್ದರಾಮಯ್ಯ ಮಾತ್ರ ಮುಂದುವರಿದಿದ್ದಾರೆ. ದೇವರಾಜ್ ಅರಸು ಅವರಿಗಿಂತ ಅತಿ ಹೆಚ್ಚು ಅವಧಿ ಸಿಎಂ ಆಗಿ ದಾಖಲೆ ಮಾಡಿದ್ದಾರೆ. ಇನ್ನೊಬ್ಬರು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರಿಗೆ ನಮ್ಮೂರಿಗೆ ನೀರು ಕೊಡಿ ಎಂದು ಕೇಳಿದರೆ, ನಿಮ್ಮೂರಿಗೆ ಅಂಬೇಡ್ಕರ್ ರಚಿಸಿರುವ ಸಂವಿಧಾನ ಬದ್ಧವಾಗಿ ನೀರು ಕೊಡಲು ಯೋಚಿಸುತ್ತಿದ್ದೇವೆ ಎಂದು ಹೇಳುತ್ತಾರೆ. ದಲಿತರು 75 ವರ್ಷಗಳಿಂದ ಕಾಂಗ್ರೆಸ್‌ಗೆ ಬೆಂಬಲ ಕೊಡುತ್ತ ಬಂದಿದ್ದಾರೆ. ಅವರಿಗೆ ಸಿಎಂ ಆಗುವ ಹಕ್ಕಿದೆ, ಅದನ್ನು ಕೊಡಿ, ಅದು ಭಿಕ್ಷೆಯಲ್ಲ ಎಂದು ಚಾಟಿ ಬೀಸಿದರು.



ಸಾಲ ತೀರಿಸಿದ್ದೇವೆ

ಸಿದ್ದರಾಮಯ್ಯ ಮೊದಲ ಅವಧಿಯಲ್ಲಿ ಸಿಎಂ ಆಗಿ ಅಧಿಕಾರ ಬಿಟ್ಟು ಹೋದಾಗ 25ಸಾವಿರ ಕೋಟಿ ಸಾಲ ಮಾಡಿ ಬಿಟ್ಟು ಹೋಗಿದ್ದರು. ಅವರು ಮಾಡಿದ ಸಾಲವನ್ನು ನಾನು ತೀರಿಸಿದ್ದೇನೆ ಎಂದು ಬೊಮ್ಮಾಯಿ ಹೇಳಿದರು.

ಕಾಂಗ್ರೆಸ್‌ಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಪಿಡಬ್ಲುಡಿ, ಎಲೆಕ್ಟ್ರಿಕಲ್, ಬೆಸ್ಕಾಂ ಗುತ್ತಿಗೆದಾರರು ಎಲ್ಲರೂ ಕಮಿಷನ್ ಬಗ್ಗೆ ಆರೋಪ ಮಾಡುತ್ತಿದ್ದಾರೆ. ಎಸ್ಸಿ ಎಸ್ಟಿ ಮೀಸಲಾತಿ ಹೆಚ್ಚಳ ಮಾಡುವ ಸಂದರ್ಭ ಇವರು ಅಧಿಕಾರದಲ್ಲಿದ್ದರೂ ಮಾಡಲಿಲ್ಲ, ನಾವು ಅಧಿಕಾರಕ್ಕೆ ಬಂದು ಮಾಡಿದ್ದೇವೆ. ಕೋರ್ಟ್ ಆದೇಶಗಳು ಎಲ್ಲವೂ ಗೊತ್ತಿದೆ. ಆದರೆ, ಮುಂದೊಂದು ದಿನ ಎಸ್ಸಿ ಎಸ್ಟಿಗಳಿಗೆ ಮೀಸಲಾತಿ ಹೆಚ್ಚಳದ ನ್ಯಾಯ ಸಿಕ್ಕೇ ಸಿಗುತ್ತದೆ. ಇದು ಸಾಮಾಜಿಕ ನ್ಯಾಯಕ್ಕೆ ನಾವು ತೋರಿದ ಬದ್ಧತೆ ಎಂದರು.

ಈ ವೇಳೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ, ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಶೋಭಾ ನಿಸ್ಸೀಮಗೌಡ್ರ, ಎನ್.ಎಂ. ಈಟೇರ, ಮಾಜಿ ಸಚಿವ ಬಿ.ಸಿ. ಪಾಟೀಲ, ಮಾಜಿ ಶಾಸಕರಾದ ಅರುಣಕುಮಾರ ಪೂಜಾರ, ಶಿವರಾಜ ಸಜ್ಜನರ ಮತ್ತಿತರರು ಇದ್ದರು.

ಸುರಾಜ್ಯ ನಿರ್ಮಾಣ: ಸ್ವತಂತ್ರ್ಯ ಬಂದಾಗ ಗ್ರಾಮ ಸ್ವರಾಜ್ಯ ಎಂಬ ಕಲ್ಪನೆ ಇತ್ತು. ಈಗ ಗ್ರಾಮ ಸುರಾಜ್ಯ ಆಗಬೇಕು ಎನ್ನುವುದು ನರೇಂದ್ರ ಮೋದಿಯವರ ಕನಸು. ಗಾಂಧೀಜಿ ಬೇರೆಯಲ್ಲ, ಶ್ರೀರಾಮ ಬೇರೆಯಲ್ಲ. ಗಾಂಧೀಜಿಯ ಆತ್ಮದಲ್ಲಿ ರಾಮ ಇದ್ದಾರೆ. ಗ್ರಾಮ ರಾಜ್ಯ ರಾಮ ರಾಜ್ಯ ಎರಡೂ ಒಂದೇ ಎಂದು ಮಾಜಿ ಸಿಎಂ ಬೊಮ್ಮಾಯಿ ಹೇಳಿದರು.

ಶೀಘ್ರದಲ್ಲೇ ₹37 ಸಾವಿರ ಕೋಟಿ ಪಾವತಿ

ಕುಮಟಾ: ಲೋಕೋಪಯೋಗಿ ಇಲಾಖೆಯಲ್ಲಿ 37 ಸಾವಿರ ಕೋಟಿ ರೂ. ಬಾಕಿ ಬಿಲ್ ನ್ನು ಶೀಘ್ರ ಪಾವತಿ ಮಾಡಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕುರಿತು ಗುತ್ತಿಗೆದಾರರ ಒತ್ತಾಯದ ಬಗ್ಗೆ ಕೇಳಿದ್ದಕ್ಕೆ, ''ಇದು ರೂಟಿನ್ ಪ್ರೊಸೆಸ್. ಸಾಧ್ಯವಾದಷ್ಟು ಬೇಗ ಪಾವತಿ ಮಾಡುತ್ತೇವೆ. ಮತ್ತೆ ಬಾಕಿ ಆಗುತ್ತವೆ,'' ಎಂದು ಸ್ಪಷ್ಟಪಡಿಸಿದರು. ಕಮಿಷನ್ ಪ್ರಕರಣ ಕುರಿತು ಪ್ರತಿಕ್ರಿಯಿಸಿ, ''ಅವರ ಶಾಸಕರೇ ಸಾಕ್ಷಿ ಇದ್ದಾರೆ. ನಾನು ಮತ್ತೆ ಸಾಕ್ಷಿ ಕೊಡಬೇಕಾಗಿಲ್ಲ,'' ಎಂದು ಹೇಳಿದರು.

ಲೋಕೋಪಯೋಗಿ ಇಲಾಖೆಯ ರಸ್ತೆಗಳ ಪಕ್ಕದ ಅತಿಕ್ರಮಣ ಕುರಿತು ಈಗಾಗಲೇ ಸರ್ವೆ ಕಾರ್ಯಕ್ಕೆ ಆದೇಶ ನೀಡಿದ್ದು, ಗಡಿ ಗುರುತು ಮಾಡಿ ಪಿಲ್ಲರ್ ಅಳವಡಿಸಲಾಗುತ್ತದೆ ಎಂದು ತಿಳಿಸಿದರು.

ಹಳ್ಳಿಗಳಲ್ಲಿ ನಡೆಯುತ್ತಿರುವ ದಲಿತ ದೌರ್ಜನ್ಯ ಪ್ರಕರಣಗಳ ಕುರಿತು, ''ಜನರಲ್ಲಿ ಸಮಾನತೆ ಬಗ್ಗೆ ಜಾಗೃತಿ ಮೂಡಬೇಕು. ಸಂಬಂಧಿತ ಕಾನೂನುಗಳೂ ಇವೆ,'' ಎಂದು ಹೇಳಿದರು.

ಲೋಕೋಪಯೋಗಿ ಇಲಾಖೆಯ ರಸ್ತೆಗಳ ಪಕ್ಕದ ಅತಿಕ್ರಮಣ ಕುರಿತು ಈಗಾಗಲೇ ಸರ್ವೆ ಕಾರ್ಯಕ್ಕೆ ಆದೇಶ ನೀಡಿದ್ದು, ಗಡಿ ಗುರುತು ಮಾಡಿ ಪಿಲ್ಲರ್ ಅಳವಡಿಸಲಾಗುತ್ತದೆ ಎಂದು ತಿಳಿಸಿದರು.

ಹಳ್ಳಿಗಳಲ್ಲಿ ನಡೆಯುತ್ತಿರುವ ದಲಿತ ದೌರ್ಜನ್ಯ ಪ್ರಕರಣಗಳ ಕುರಿತು, ''ಜನರಲ್ಲಿ ಸಮಾನತೆ ಬಗ್ಗೆ ಜಾಗೃತಿ ಮೂಡಬೇಕು. ಸಂಬಂಧಿತ ಕಾನೂನುಗಳೂ ಇವೆ,'' ಎಂದು ಹೇಳಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಲುಸಂಕ ಮತ್ತು ಸೇತುವೆಗಳ ನಿರ್ಮಾಣ ಕುರಿತು ಮಾತನಾಡಿದ ಅವರು, ''ಈ ಹಿಂದೆ ಯಾವ ಸರ್ಕಾರವೂ ಕಾಲುಸಂಕಗಳಿಗೆ ಇಷ್ಟು ಅನುದಾನ ನೀಡಿಲ್ಲ. ಈ ಬಾರಿ ಸುಮಾರು 120 ಸೇತುವೆಗಳನ್ನು ಮಂಜೂರು ಮಾಡಿದ್ದೇವೆ. ಇನ್ನೂ ಅಗತ್ಯವಿದ್ದರೆ ನೀಡುತ್ತೇವೆ,'' ಎಂದು ಹೇಳಿದರು. ಜಿಲ್ಲೆಯಲ್ಲಿ ಕಾಲುಸಂಕ ನಿರ್ಮಾಣದಲ್ಲಿ ಉತ್ತರ ಕನ್ನಡವೇ ಅಗ್ರಸ್ಥಾನದಲ್ಲಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಾಯಿನಾಥ ಗಾಂವಕರ, ಕುಮಟಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಭುವನ್ ಭಾಗ್ವತ್ ಇದ್ದರು.



ಎಂಟು ಜನರ ಬಂಧನ: ಎಸ್ಪಿ ಗೋಯಲ್



ಬಾಗಲಕೋಟೆ: ಛತ್ರಪತಿ ಶಿವಾಜಿ ಮೆರಣಿಗೆ ಸಂದರ್ಭದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಎಂಟು ಜನರನ್ನು ಬಂಧನ ಮಾಡಲಾಗಿದ್ದು, ಇನ್ನೂ ಕೆಲವರ ಮೇಲೆ ತನಿಖೆ ನಡೆಯುತ್ತಿದೆ. ವಿಡಿಯೋ ಪರಿಶೀಲಿಸಿ ತಪ್ಪು ಮಾಡಿದವರ ಮೇಲೆ ಪಕ್ಕಾ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಹಿಂದೆ ಮುಂದೆ ನೋಡುವುದಿಲ್ಲ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸೋಮವಾರಸುದ್ದಿಗೋಷ್ಠಿಯಲ್ಲಿಮಾತನಾಡಿದ ಅವರು, 3 ಪ್ರಕರಣಗಳು ದಾಖಲಾಗಿವೆ. ಪ್ರಕರಣದಲ್ಲಿ ಕಿಡಿಗೇಡಿಗಳನ್ನು ಬಂಧಿಸಲಾಗಿದೆ. ಕಳೆದ 3 ದಿನಗಳಿಂದ ನಗರದಲ್ಲಿ ಸದ್ಯ ಪರಿಸ್ಥಿತಿಯು ತಿಳಿಯಾಗುತ್ತಿದ್ದು, ಜನ ಜೀವನ ಸಹಜ ಸ್ಥಿತಿಗೆ ಮರಳಿತಿದೆ ಎಂದರು.

ಕೆಲವು ಸಾಮಾಜಿಕ ಜಾಲತಾಣಗಳ ಮುಖಾಂತರ ಕೆಲವು ಸಂಘಟನೆಯವರು ಬಾಗಲಕೋಟಿ ಶಹರದಲ್ಲಿ ಫೆ.26 ರಂದು ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ತಿಳಿದು ಬಂದಿರುತ್ತದೆ. ಹಳೆ ಬಾಗಲಕೋಟೆಯಲ್ಲಿ 163 ಕಲಂ ಅಡಿ ನಿಷೇಧಾಜ್ಞೆಯನ್ನು ಮಾರ್ಚ್ 1ರವರೆಗೆ ವಿಸ್ತರಣೆ ಮಾಡಲಾಗಿದೆ.

ಈ ಸಂದರ್ಭದಲ್ಲಿ ಬಾಗಲಕೋಟೆಯಲ್ಲಿ ಯಾವುದೇ ಪ್ರತಿಭಟನೆ, ಬಂದ್‌ಗೆ ಅವಕಾಶ ಇರುವುದಿಲ್ಲ. ಇದನ್ನು ಮೀರಿ ನಡೆದರೆ ನಗರದಲ್ಲಿ ಅಶಾಂತಿ ಸೃಷ್ಟಿಯಾದಲ್ಲಿ ಅದಕ್ಕೆ ಸಂಬಂಧಿಸಿದ ಸಂಘಟಕರನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಿ ಕಾನೂನು ರೀತ್ಯ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ನವನಗರದ, ವಿದ್ಯಾಗಿರಿಯಲ್ಲಿ ಈ ನಿಷೇಧಾಜ್ಞೆ ಅನ್ವಯವಾಗುವುದಿಲ್ಲ ಎಂದು ಹೇಳಿದರು. ಮುಂಬರುವ ಹೋಳಿ ಹಾಗೂ ರಂಜಾನ್ ಹಬ್ಬ ಬರುತ್ತಿದ್ದು, ಶಾಂತಿ ಸುವ್ಯವಸ್ಥೆ ಕಾಪಾಡಲು ಜಿಲ್ಲಾ ಪೊಲೀಸ್ ಇಲಾಖೆ ರಾತ್ರಿ ಹಗಲು ಕೆಲಸ ಮಾಡುತ್ತಿದೆ ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿದರು. ಎಡಿಸಿ ತೇಲಿ, ಡಿವೈಎಸ್‌ಪಿ ಗಜಾನನ ಸುತಾರ ಪತ್ರಿಕಾಗೋಷ್ಠಿಯಲ್ಲಿದ್ದರು.

ಲೋಕಾ ದಾಳಿಗೂ ನನಗೂ ಸಂಬಂಧವಿಲ್ಲ: ಸ್ವಾಮೀಜಿ

ಶಿರಹಟ್ಟಿ: ಶಾಸಕ ಡಾ.ಚಂದ್ರು ಲಮಾಣಿ ಅವರು ನನ್ನ ವಿರುದ್ಧ ಷಡ್ಯಂತ್ರ ನಡೆಸಿ, ಗವಿಮಠ ಬಿಡಿಸುವ ಹುನ್ನಾರ ಮಾಡಿದ್ದರು. ಆ ಸಿಟ್ಟಿನಿಂದ ಶಾಸಕರ ವಿರುದ್ಧ ಮಾತನಾಡಿರುವುದು ನಿಜ. ಎರಡು ದಿನಗಳಿಂದ ಸಂಚಲನ ಮೂಡಿಸಿದ್ದ ವೈರಲ್ ಆಡಿಯೋ ನನ್ನದೆ. ಆದರೆ, ಈ ಲೋಕಾಯುಕ್ತ ಪೊಲೀಸರ ದಾಳಿಗೂ ನನಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಆದರಹಳ್ಳಿ ಗವಿಮಠದ ಕುಮಾರ ಮಹಾರಾಜ ಸ್ವಾಮೀಜಿ ಸ್ಪಷ್ಟನೆ ನೀಡಿದ್ದಾರೆ.



ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಶಾಸಕರಿಗೆ ಟಿಕೆಟ್ ತಪ್ಪಿಸಬೇಕು. ಬೆಂಗಳೂರಿನಲ್ಲಿ ಸೂತ್ರ ಹೆಣೆಯಲಾಗಿದೆ. ಶಾಸಕರು ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ.

ರಸ್ತೆ ಗುಂಡಿಗಳಾಗಿವೆ. ಒಂದು ಕಡೆ ಸೇರಿ ಯೋಜನೆ ರೂಪಿಸೋಣ ಎಂಬ ಕುರಿತು ಮಾತನಾಡಿರುವುದು ಸತ್ಯ. ಇದು 6 ತಿಂಗಳ ಹಿಂದೆ ಮಾತಾಡಿದ್ದು, ಅಂದು ಶಾಸಕರು ನನ್ನ ವಿರುದ್ಧ ಪಿತೂರಿ ಮಾಡಿ ಊರ ಗೌಡರಿಗೆ 20 ಲಕ್ಷ ಹಣ ಕೊಟ್ಟು ಮಠ ಬಿಡಿಸಲು ಷಡ್ಯಂತ್ರ ನಡೆಸಿದ್ದರು. ಹಾಗಾಗಿ ನಾನು ಅಂದು ಮಾತನಾಡಿದ್ದೇನೆ. ಆದರೆ, ಈ ಲೋಕಾಯುಕ್ತರ ದಾಳಿಗೂ ನನಗೂ ಯಾವುದೇ ರೀತಿ ಸಂಬಂಧವಿಲ್ಲ, ನಾನೇನು ಅವರಿಗೆ ಲಂಚ ಸ್ವೀಕರಿಸಿ ಅಂತ ಹೇಳಿಲ್ಲ ಎಂದು ಸ್ಪಷ್ಟಪಡಿಸಿದರು.

ಶಾಸಕರಿಗೆ ನಾನೇ ಸರ್ವಶ್ರೇಷ್ಠ ಎಂಬ ಅಹಂಕಾರ ಬಂದಿದೆ. ಸಮಾಜದ ಸ್ವಾಮೀಜಿ ಎನ್ನುವುದನ್ನು ಲೆಕ್ಕಿಸದೆ ನನ್ನ ವಿರುದ್ಧ ಅಪಪ್ರಚಾರ, ಧಮಕಿ, ಪುಡಾರಿಗಳಿಂದ ಹೊಡೆಸುವ ಬೆದರಿಕೆ ಹಾಕುವ ಕೆಲಸ ಮಾಡಿದರು. ಅದಕ್ಕೂ ಜಗ್ಗದಿದ್ದಾಗ ಮಠ ಬಿಟ್ಟು ಓಡಿಸುವ ವ್ಯರ್ಥ ಪ್ರಯತ್ನ ಮಾಡಿದರು. ಆದರೆ, ಶ್ರೀಮಠದ ಭಕ್ತರು ಸದಾ ನನ್ನೊಂದಿಗೆ ಇದ್ದಿದ್ದರಿಂದ ಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಶಾಸಕರು ಬದಲಾವಣೆ ಆಗಬೇಕು ಅಲ್ಲಿವರೆಗೆ ನಾನು ಹೋರಾಟ ಕೈಬಿಡುವುದಿಲ್ಲ. ಒಂದು ವೇಳೆ ನಾನು ಈ ಷಡ್ಯಂತ್ರದಲ್ಲಿ ಭಾಗಿಯಾಗಿದ್ದರೆ ನನ್ನ ಮೊಬೈಲ್ ಫೋನ್ ಅನ್ನು ತನಿಖಾ ಅಧಿಕಾರಿಗಳಿಗೆ ಕೊಡುತ್ತೇನೆ ಪರಿಶೀಲನೆ ಮಾಡಲಿ ಎಂದು ಹೇಳಿದರು.

ದಲಿತ ಶಾಸಕರ ವಿರುದ್ಧ ಷಡ್ಯಂತ್ರ: ಜಾರಕಿಹೊಳಿ

ಬೆಳಗಾವಿ: ರಾಜ್ಯದಲ್ಲಿ ದಲಿತ ಶಾಸಕರ ಮೇಲೆ ನಿರಂತರ ಷಡ್ಯಂತ್ರ ಮತ್ತು ಅನ್ಯಾಯ ನಡೆಯುತ್ತಿದ್ದು, ಪಕ್ಷಾತೀತವಾಗಿ ಇದರ ವಿರುದ್ಧ ಧ್ವನಿ ಎತ್ತಬೇಕಿದೆ. 2013–14 ರಲ್ಲಿದ್ದ ಸಿದ್ದರಾಮಯ್ಯ ಈಗಿಲ್ಲ. ಸಿಎಂ ಸ್ಥಾನ ನಡೆಸುವ ಶಕ್ತಿ ಅವರಲ್ಲಿ ಉಳಿದಿಲ್ಲ ಎಂದು ಮಾಜಿ ಸಚಿವ ರಮೇಶ ಜಾರಕಿಹೊಳಿ ಹೇಳಿದರು.



ಸೋಮವಾರ ನಗರದ ಸರ್ಕಿಟ್ ಹೌಸ್ ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ಪಕ್ಷಾತೀತವಾಗಿ ದಲಿತ ಶಾಸಕರು ಮತ್ತು ಜನಪ್ರತಿನಿಧಿಗಳ ಮೇಲೆ ಅನ್ಯಾಯ ಮಾಡಲಾಗುತ್ತಿದೆ. ಇದರ ವಿರುದ್ಧ ಧ್ವನಿ ಎತ್ತಬೇಕಾಗಿದೆ. ಅದೇ ಸಮಾಜದ ವ್ಯಕ್ತಿ ಮತ್ತು ಸ್ವಾಮೀಜಿ ಕೂಡಿಕೊಂಡು ಶಾಸಕ ಚಂದ್ರು ಲಮಾಣಿ ಅವರ ಅವರ ವಿರುದ್ಧ ಪಿತೂರಿ ನಡೆಸಿ ಷಡ್ಯಂತ್ರ ನಡೆಸಲಾಗಿದೆ. ಒಂದು ವೇಳೆ ಚಂದ್ರು ಲಮಾಣಿ ತಪ್ಪಿತಸ್ಥರಾಗಿದ್ದರೆ ಅವರ ವಿರುದ್ಧ ಕ್ರಮವಾಗಲಿ.

ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಪಾರದರ್ಶಕ ತನಿಖೆಗೆ ಆಗ್ರಹಿಸಲಾಗುವುದು ಎಂದರು.

ಇನ್ನು ಧಾರವಾಡ ಲೋಕೋಪಯೋಗಿ ಮುಖ್ಯ ಅಭಿಯಂತರ ಸುರೇಶ ಅವರ ಮೇಲೂ ನಿವೃತ್ತಿಯ ದಿನವೇ ಸಂಜೆ ದಾಳಿ ನಡೆಸಿರುವುದು ವಿಷಾದನೀಯ ಎಂದರು.

ನಮನ್ನು ಕೂಡ ತುಳಿಯಲಾಗಿದೆ. ಆದರೆ, ಹೋರಾಟದ ಮೂಲಕ ನಾವು ಹೊರ ಬಂದಿದ್ದೇವೆ. ರಾಜ್ಯ ಸರ್ಕಾರ ಲೂಟಿ ಮಾಡುತ್ತಿದೆ. ಸಿಎಂ ಸಿದ್ದರಾಮಯ್ಯ ಕೇವಲ ಕುರುಬರ ನಾಯಕರಲ್ಲ, ಹಿಂದುಳಿದ ನಾಯಕರು. ನಾನು ವಾಲ್ಮೀಕಿ ನಾಯಕಲ್ಲ, ಹಿಂದುಳಿದ ವರ್ಗದವರ ನಾಯಕ. 2013–14 ರಲ್ಲಿದ್ದ ಸಿದ್ಧರಾಮಯ್ಯ ಈಗಿಲ್ಲ. ಸಿಎಂ ಸ್ಥಾನ ನಡೆಸುವ ಶಕ್ತಿ ಅವರಲ್ಲಿ ಉಳಿದಿಲ್ಲ ಎಂಬುದು ಖೇದಕರ ಎಂದರು.

ಪ್ಯಾರಾ ಈಜುಗಾರ ಗೋಪಿಚಂದ್‌ಗೆ ಅಂತಾರಾಷ್ಟ್ರೀಯ ಬೆಳ್ಳಿ ಪದಕ

ಬಳ್ಳಾರಿ: ಬಳ್ಳಾರಿಯ ಪ್ಯಾರಾ ಈಜುಗಾರ ಗೋಪಿಚಂದ್ ಅವರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳ್ಳಿ ಪದಕ ಲಭಿಸಿದೆ. ಕಳೆದ 2026ರ ಫೆ.16 ರಿಂದ 21 ರವರೆಗೆ ಆಸ್ಟ್ರೇಲಿಯಾದಲ್ಲಿ ನಡೆದ ವರ್ಲ್ಡ್ ಪ್ಯಾರಾ ಈಜು ಸ್ಪರ್ಧೆ ಚಾಂಪಿಯನ್‌ಶಿಪ್ ನಲ್ಲಿ ರಾಜ್ಯ ಪ್ರತಿನಿಧಿಸಿ ಬಳ್ಳಾರಿಯ ಗೋಪಿಚಂದ್ ಅವರು ಭಾಗವಹಿಸಿದ್ದರು. ಅಲ್ಲಿ ಅವರು, 4★100 ಮೀಟರ್ ಮಿಡ್ ರಿಲೇ ಯಲ್ಲಿ ಎರಡನೇ ಸ್ಥಾನ ಅಲಂಕರಿಸುವ ಮೂಲಕ ಅಂತಾರಾಷ್ಟ್ರೀಯ ಬೆಳ್ಳಿ ಪದಕ ಪಡೆದು ಜಿಲ್ಲೆ, ರಾಜ್ಯ, ದೇಶದ ಕೀರ್ತಿ ಹೆಚ್ಚಿಸಿದ್ದಾರೆ. ಬಳ್ಳಾರಿಗೆ ಜಿಲ್ಲೆಯ ಪ್ಯಾರಾ ಸ್ವಿಮ್ಮರ್ ನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಮೊದಲನೇಯ ಪದಕವಾಗಿದೆ. ಪ್ಯಾರಾ ಈಜುಗಾರ ಗೋಪಿಚಂದ್ ಅವರಿಗೆ ಕೋಚ್ ಗಳಾದ ರಜನಿ ಲಕ್ಕಾ ಮತ್ತು ಶರತ್ ಗಾಯಕ್‌ವಾಡ್ ಅವರು ತರಬೇತಿ ನೀಡಿದ್ದರು. ಈ ಸಾಧನೆಗೆ ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಸೇರಿದಂತೆ ಜಿಲ್ಲಾಡಳಿತ ಅಭಿನಂದಿಸಿದೆ.

ಒಬ್ಬರೇ ಶಾಸಕರಾಗಿ ಹೊರಾಡುವ ಶಕ್ತಿ ಇದೆ

ಬಿಜೆಪಿ ಪಕ್ಷ ಬಿಟ್ಟು ಬರಲ್ಲ: ಶಾಸಕ ದಿನಕರ ಶೆಟ್ಟಿ

ಕುಮಟಾ: ಸಿ.ಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಅಂಕೋಲಾ ತಾಲೂಕಿನ ಮಂಜುಗುಣಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾದ ಘಟನೆಯೊಂದು ನಡೆದಿದ್ದು, ಕಾರ್ಯಕ್ರಮಕ್ಕೆ ಆಗಮಿಸಿದ್ದ ಕುಮಟಾ ಬಿಜೆಪಿ ಶಾಸಕ ದಿನಕರ ಶೆಟ್ಟಿಗೆ ಕಾಂಗ್ರೆಸ್ ಸೇರುವಂತೆ ಆಹ್ವಾನ ನೀಡಲಾಗಿದೆ ಎನ್ನಲಾಗಿದೆ. ಈ ಬಗ್ಗೆ ಶಾಸಕರು ಸ್ಪಷ್ಟನೆ ನೀಡಿದ್ದಾರೆ.

ಸಿಎಂ ಜಿಲ್ಲೆಗೆ ಬಂದಾಗ ನನ್ನನ್ನು ಪಕ್ಷಕ್ಕೆ ಆಹ್ವಾನಿಸಿದರು. ಸಿಎಂ ಮತ್ತು ಡಿಸಿಎಂ ಇಬ್ಬರೂ ಇದ್ದಾಗ ಚರ್ಚೆ ಆಯ್ತು. 'ಜಿಲ್ಲೆಯಲ್ಲಿ ಒಬ್ಬರೇ ಬಿಜೆಪಿ ಶಾಸಕ ಇದ್ದೀರಾ, ನೀವು ಕಾಂಗ್ರೆಸ್ ಪಕ್ಷಕ್ಕೆ ಬನ್ನಿ' ಎಂದು ಹೇಳಿದರು. ಆದರೆ ನಾನು ಒಬ್ಬರೇ



ಶಾಸಕರಾಗಿ ಹೊರಾಡುವ ಶಕ್ತಿ ಇದೆ, ಬಿಜೆಪಿ ಪಕ್ಷ ಬಿಟ್ಟು ಬರಲ್ಲ ಎಂದು ಸ್ಪಷ್ಟಪಡಿಸಿದೆ,'' ಎಂದು ಹೇಳಿದರು. ನಂತರ ಅವರು, ಹಾಗಾದ್ರೆ ನೀವು ಕಾಂಗ್ರೆಸ್‌ಗೆ ಬರಬೇಡಿ ಅಲ್ಲೇ ಇರಿ ಎಂದು ಹಾಸ್ಯಭರಿತವಾಗಿ ಹೇಳಿದ್ದರು ಎಂದರು.

ಇನ್ನು ಶಾಸಕ ದಿನಕರ ಶೆಟ್ಟಿ ಅವರು ಕಾಂಗ್ರೆಸ್ ಒಳರಾಜಕೀಯದ ಕುರಿತು ಹೇಳುತ್ತಾ, ''ಇವತ್ತಿಗೆ ಡಿ.ಕೆ.ಶಿವಕುಮಾರ ಮುಖ್ಯಮಂತ್ರಿಯಾಗಬೇಕಿತ್ತು. ನನ್ನ ಮಾಹಿತಿ ಪ್ರಕಾರ ಇಬ್ಬರ ನಡುವೆ ಅರ್ಧದಷ್ಟು ಮಾತುಕತೆ ನಡೆದಿತ್ತು. ಆದರೆ ಪಕ್ಷದಲ್ಲಿನ ರಾಜಕೀಯವೇ ಮುಖ್ಯಮಂತ್ರಿ ಸ್ಥಾನ ತಪ್ಪಿಸುತ್ತಿದೆ,'' ಎಂದು ಅವರು ಹೇಳಿದರು.

''ಏನಾದ್ರೂ ಮಾತಾಡಿದ್ರೆ ಕಾಂಗ್ರೆಸ್‌ನಲ್ಲಿ ಪುಡಾರಿಗಳು ಮಾತಾಡ್ತಾರೆ. ಮುಖ್ಯಮಂತ್ರಿ ಏನು ಸ್ವರ್ಗದಿಂದ ಬಂದವರಲ್ಲ, ಮುಖ್ಯಮಂತ್ರಿ ಕೂಡ ನನ್ನಂತೆಯೇ ಒಬ್ಬ ಶಾಸಕರು. ಈ ಹಿಂದೆ ಆರ್. ಗುಂಡುರಾವ್ ಸಣ್ಣ ವಯಸ್ಸಿನಲ್ಲೇ ಸಿಎಂ ಆಗಿದ್ರು. ಯಾರೂ ಬೇಕಾದ್ರೂ ಸಿಎಂ ಆಗಬಹುದು, ಸಮಯ ಸಂದರ್ಭ ಬರಬೇಕು ಅಷ್ಟೇ,'' ಎಂದು ಹೇಳಿದರು.


ಶಿರಸಿ ಜಾತ್ರೆಗೆ ಯಶವಂತಪುರ – ತಾಳಗುಪ್ಪ ನಡುವೆ ವಿಶೇಷ ರೈಲು

ಶಿರಸಿ: ಪ್ರಸಿದ್ಧ ಶಿರಸಿ ಶ್ರೀ ಮಾರಿಕಾಂಬಾ ದೇವಿಯ ಜಾತ್ರಾ ಮಹೋತ್ಸವದ ಪ್ರಯಾಣಿಕರ ಅತಿಯಾದ ದಟ್ಟಣೆಯನ್ನು ನಿಯಂತ್ರಿಸಲು ಮತ್ತು ಭಕ್ತಾದಿಗಳ ಸುಗಮ ಪ್ರಯಾಣಕ್ಕಾಗಿ ನೈರುತ್ಯ ರೈಲ್ವೆಯು ಬೆಂಗಳೂರಿನ ಯಶವಂತಪುರ ಮತ್ತು ಸಾಗರದ ತಾಳಗುಪ್ಪ ನಡುವೆ ವಿಶೇಷ ರೈಲನ್ನು ಓಡಿಸಲು ನಿರ್ಧರಿಸಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ.



ರೈಲ್ವೆ ಮಂಡಳಿಯ ಅನುಮೋದನೆಯ ಮೇರೆಗೆ ಫೆಬ್ರವರಿ 27 ಮತ್ತು 28ರಂದು ಈ ವಿಶೇಷ ಸೇವೆಯು ಲಭ್ಯವಿರಲಿದ್ದು, ರೈಲು ಸಂಖ್ಯೆ 06587: ಫೆಬ್ರವರಿ 27ರ ಶುಕ್ರವಾರ ರಾತ್ರಿ 10:45ಕ್ಕೆ ಯಶವಂತಪುರದಿಂದ ಹೊರಟು ಮರುದಿನ ಮುಂಜಾನೆ 05:05ಕ್ಕೆ ತಾಳಗುಪ್ಪ ತಲುಪಲಿದೆ. ರೈಲು ಸಂಖ್ಯೆ 06588: ಫೆಬ್ರವರಿ 28ರ ಶನಿವಾರ ಬೆಳಿಗ್ಗೆ 09:30ಕ್ಕೆ ತಾಳಗುಪ್ಪದಿಂದ ಹೊರಟು ಅದೇ ದಿನ ಸಂಜೆ 05:15ಕ್ಕೆ ಯಶವಂತಪುರವನ್ನು ತಲುಪಲಿದೆ. ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ಯಶವಂತಪುರ–ಶಿವಮೊಗ್ಗ ಟೌನ್ ನಡುವೆ ಸಂಚರಿಸುವ ಟ್ರೈ–ವೀಕ್ಲಿ ಎಕ್ಸ್‌ಪ್ರೆಸ್ ರೈಲನ್ನು (16581/16582) ಸಹ ತಾತ್ಕಾಲಿಕವಾಗಿ ತಾಳಗುಪ್ಪದವರೆಗೆ ವಿಸ್ತರಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ. ಇದರಂತೆ ಮಾರ್ಚ್ 1ರ ಭಾನುವಾರದಂದು ಯಶವಂತಪುರದಿಂದ ಮಧ್ಯರಾತ್ರಿ 12:15 ಕ್ಕೆ ಹೊರಡುವ ರೈಲು ಸಂಖ್ಯೆ 16581 ಶಿವಮೊಗ್ಗದ ಬದಲಾಗಿ ಬೆಳಿಗ್ಗೆ 9ಗಂಟೆಗೆ ತಾಳಗುಪ್ಪ ತಲುಪಲಿದ್ದು, ಅದೇ ದಿನ ರಾತ್ರಿ 10 ಗಂಟೆಗೆ ತಾಳಗುಪ್ಪದಿಂದಲೇ ತನ್ನ ಪ್ರಯಾಣ ಆರಂಭಿಸುವ ರೈಲು ಸಂಖ್ಯೆ 16582 ಮರುದಿನ ಬೆಳಿಗ್ಗೆ 4:45ಕ್ಕೆ ಯಶವಂತಪುರ ತಲುಪಲಿದೆ. ಶಿರಸಿ ಜಾತ್ರೆಗೆ ಆಗಮಿಸುವ ಸಾವಿರಾರು ಭಕ್ತರ ಹಿತದೃಷ್ಟಿಯಿಂದ ವಿಶೇಷ ರೈಲು ಸೌಲಭ್ಯ ಒದಗಿಸುವಂತೆ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಪತ್ರದ ಮೂಲಕ ಮನವಿ ಸಲ್ಲಿಸಲಾಗಿತ್ತು. ಈ ಮನವಿಗೆ ತಕ್ಷಣ ಸ್ಪಂದಿಸಿ ಭಕ್ತರಿಗೆ ಅನುಕೂಲ ಮಾಡಿಕೊಟ್ಟಿರುವ ಕೇಂದ್ರ ರೈಲ್ವೆ ಸಚಿವರಿಗೆ, ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಹಾಗೂ ರೈಲ್ವೆ ಅಧಿಕಾರಿಗಳಿಗೆ ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸುವುದಾಗಿ ಅವರು ತಿಳಿಸಿದ್ದಾರೆ.

ಶಾಸಕ ಚಂದ್ರು ರಾಜೀನಾಮೆಗೆ ಆಗ್ರಹ



ಲಕ್ಷ್ಮೇಶ್ವರ: ಶಾಸಕ ಡಾ.ಚಂದ್ರು ಲಮಾಣಿ ಭ್ರಷ್ಟಾಚಾರದ ಪ್ರಕರಣದಲ್ಲಿ ನ್ಯಾಯಾಂಗ ಬಂಧನಕ್ಕೊಳಗಾಗಿದ್ದು, ಈ ಕ್ಷೇತ್ರದ ಜನರ ನಂಬಿಕೆ, ವಿಶ್ವಾಸಕ್ಕೆ ದ್ರೋಹ ಮಾಡಿದ್ದಾರೆ. ಅವರಿಗೆ ಅಧಿಕಾರದ ಮುಂದುವರಿಯುವ ಯಾವುದೇ ನೈತಿಕ ಹಕ್ಕಿಲ್ಲದ ಕಾರಣ ಕೂಡಲೇ ರಾಜೀನಾಮೆ ಕೊಟ್ಟು ಪ್ರಾಮಾಣಿಕವಾಗಿ ವೈದ್ಯರ ವೃತ್ತಿ ಮುಂದುವರಿಸಬೇಕು ಎಂದು ಮಾಜಿ ಶಾಸಕರಾದ ರಾಮಣ್ಣ ಲಮಾಣಿ ಮತ್ತು ರಾಮಕೃಷ್ಣ ದೊಡ್ಡಮನಿ ಆಗ್ರಹಿಸಿದರು.

ಅವರು ಸೋಮವಾರ ಪಟ್ಟಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿರಹಟ್ಟಿ ಮತಕ್ಷೇತ್ರ ರಾಜಕೀಯ ಕ್ಷೇತ್ರದಲ್ಲಿ ಉತ್ತಮ ಹೆಸರು ಮಾಡಿದೆ. ದಿ. ಉಪನಾಳ ಗೂಳಪ್ಪನವರು, ಟಿ.ಬಿ ಬಾಳಿಕಾಯಿ, ಎಸ್.ಎಸ್ ಪಾಟೀಲ, ಜಿ.ಎಂ ಮಹಾಂತಶೆಟ್ಟರ, ಜಿ.ಎಸ್ ಗಡ್ಡದೇವರಮಠ ಮತ್ತು ನಾನು ಸೇರಿ ಕ್ಷೇತ್ರದ ಅಭಿವೃದ್ಧಿಯ ಜತೆಗೆ ಕ್ಷೇತ್ರಕ್ಕೆ ಹೆಸರು ತರುವ ಕೆಲಸ ಮಾಡಿದ್ದೇವೆ. ಆದರೆ ವಿದ್ಯಾವಂತನೆಂದು ಜನರು ಕೊಟ್ಟ ಅವಕಾಶವನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಮಾತನಾಡಿ, ಕ್ಷೇತ್ರಕ್ಕೆ ಕೋಟ್ಯಾಂತರ ರೂ ಹಣ ಹರಿದು ಬಂದಿದೆ. ಆದರೆ, ಡಾ.ಚಂದ್ರು ಲಮಾಣಿ ಕಾಂಗ್ರೆಸ್ ಪಕ್ಷದಿಂದ ನಯಾಪೈಸೆ ದುಡ್ಡು ಬಂದಿಲ್ಲ ಎಂದು ಹೇಳುವ ಮೂಲಕ ಜನರಿಗೆ ತಪ್ಪು ಮಾಹಿತಿ ನೀಡುತ್ತಾ ಭ್ರಷ್ಟಾಚಾರದಲ್ಲಿ ತೊಡಗಿದ್ದರು ಎಂದು ಆರೋಪಿಸಿದರು.

ಸಿಎಂ ಬದಲಾವಣೆ ಗೊಂದಲಕ್ಕೆ ಬ್ರೇಕ್ ಅಗತ್ಯ: ಸತೀಶ್ ಜಾರಕಿಹೊಳಿ

ಕುಮಟಾ: ರಾಜ್ಯದಲ್ಲಿ ಸದ್ಯ ಕೇಳಿಬರುತ್ತಿರುವ ಮುಖ್ಯಮಂತ್ರಿ ಬದಲಾವಣೆ ಚರ್ಚೆಗಳಿಗೆ ಬ್ರೇಕ್ ಹಾಕುವ ಅಗತ್ಯವಿದೆ. ಸಿಎಂ ಬದಲಾವಣೆ ಅಥವಾ ಮುಂದುವರಿಕೆ ಎಂಬುದು ಸಂಪೂರ್ಣವಾಗಿ ಹೈಕಮಾಂಡ್‌ಗೆ ಬಿಟ್ಟ ವಿಚಾರವಾಗಿದ್ದು, ಈ ಕುರಿತು ಅನಾವಶ್ಯಕ ಗೊಂದಲ ಸೃಷ್ಟಿಸುವುದು ಸರಿಯಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ''ದಲಿತ ಸಿ.ಎಂ ಬಗ್ಗೆ ಬಹಳ ಆಕಾಂಕ್ಷಿಗಳಿದ್ದಾರೆ. ಆದರೆ ಎಲ್ಲರಿಗೂ ಅವಕಾಶ ಸಿಗುವುದಿಲ್ಲ. ಈಗ ಮುಖ್ಯಮಂತ್ರಿ ಇದ್ದಾರೆ; ಮುಂದಿನ ನಿರ್ಧಾರ ಹೈಕಮಾಂಡ್ ಗೆ ಸೇರಿದ್ದು,'' ಎಂದು ಹೇಳಿದರು. ತಮ್ಮ ಹೆಸರು ಸಿ.ಎಂ ರೇಸಿನಲ್ಲಿ ಕೇಳಿಬರುತ್ತಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ''ಅಂತಹ ಯಾವುದೂ ಇಲ್ಲ, ನಾನು ಈಗ ಆರಾಮವಾಗಿದ್ದೇನೆ,'' ಎಂದು ನಗುತ್ತಲೇ ಉತ್ತರಿಸಿದರು.

ಸಿ.ಎಂ ಪಟ್ಟಭದ್ರ ಹಿತಾಸಕ್ತಿಯವರು 'ನನ್ನ ಸಿ.ಎಂ ಸಹಿಸಲಾರರು' ಎಂಬ ಟ್ವೀಟ್ ಕುರಿತು ಕೇಳಿದ ಪ್ರಶ್ನೆಗೆ, ''ಟ್ವೀಟ್ ಮಾಡಿದ್ದು ಯಾರಿಗೆ ಎಂಬುದೇ ಗೊತ್ತಿಲ್ಲ. ಅದು ಪಕ್ಷದವರಿಗೋ, ವಿರೋಧ ಪಕ್ಷದವರಿಗೋ ತಿಳಿದಿಲ್ಲ'' ಎಂದರು. ಪಕ್ಷ, ಸರ್ಕಾರ ಮತ್ತು ಕಾರ್ಯಕರ್ತರ ಮಟ್ಟದಲ್ಲಿ ಸಿ.ಎಂ ಬದಲಾವಣೆ ಕುರಿತು ಗೊಂದಲ ಇದೆ ಎಂಬ ಪ್ರಶ್ನೆಗೆ, ''ಅದಕ್ಕೆ ಬ್ರೇಕ್ ಹಾಕಬೇಕಾಗಿದೆ. ನಿರ್ಧಾರವನ್ನು ಹೈಕಮಾಂಡ್ ತೆಗೆದುಕೊಳ್ಳುತ್ತದೆ,'' ಎಂದು ಪುನರುಚ್ಚರಿಸಿದರು.

ತಮ್ಮ ಇಲಾಖೆಯಲ್ಲಿ 37 ಸಾವಿರ ಕೋಟಿ ರೂ. ಬಾಕಿ ಬಿಲ್ ಪಾವತಿ ಕುರಿತು ಗುತ್ತಿಗೆದಾರರ ಒತ್ತಾಯದ ಬಗ್ಗೆ ಕೇಳಿದ್ದಕ್ಕೆ, ''ಇದು ರೂಟಿನ್ ಪ್ರೊಸೆಸ್. ಸಾಧ್ಯವಾದಷ್ಟು ಬೇಗ ಪಾವತಿ ಮಾಡುತ್ತೇವೆ. ಮತ್ತೆ ಬಾಕಿ ಆಗುತ್ತವೆ,'' ಎಂದು ಸ್ಪಷ್ಟಪಡಿಸಿದರು. ಕಮಿಷನ್ ಪ್ರಕರಣ ಕುರಿತು ಪ್ರತಿಕ್ರಿಯಿಸಿ, ''ಅವರ ಶಾಸಕರೇ ಸಾಕ್ಷಿ ಇದ್ದಾರೆ. ನಾನು ಮತ್ತೆ ಸಾಕ್ಷಿ ಕೊಡಬೇಕಾಗಿಲ್ಲ,'' ಎಂದು ಹೇಳಿದರು. ಜಿಲ್ಲಾ ಮಂತ್ರಿ ಮಂಕಾಳ ವೈದ್ಯ ಇದ್ದರು

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮಾ.8ರಂದು ಯುವ ಪ್ರತಿಭಾ ಪುರಸ್ಕಾರ



ಅಂಕೋಲಾ: ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ ಗುರುತಿಸಿಕೊಂಡಿರುವ ತಾಲೂಕಿನ ಗಾಂವಕರ ಮೆಮೋರಿಯಲ್ ಫೌಂಡೇಶನ್ ವತಿಯಿಂದ ಸ್ವಾತಂತ್ರ್ಯ ಯೋಧ ಬಾಸಗೋಡ ಬೊಮ್ಮಯ್ಯ ರಾಕು ಗಾಂವಕರ ಹಾಗೂ ಆದರ್ಶ ಗೃಹಿಣಿ ಪಾರ್ವತಿ ಗಾಂವಕರ ಮತ್ತು ಗಾಂವಕರ ಕುಟುಂಬದ ಹಿರಿಯರ ನೆನಪಿನಲ್ಲಿ 13ನೇ ವರ್ಷದ ಯುವ ಪ್ರತಿಭಾ ಪುರಸ್ಕಾರ, ಉಪನ್ಯಾಸ ಮತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮ ಮಾ.8ರಂದು ಸಂಜೆ 4 ಗಂಟೆಗೆ ಸ್ವಾತಂತ್ರ್ಯ ಸಂಗ್ರಾಮ ಭವನದ ಸಾಧನಾ ವೇದಿಕೆಯಲ್ಲಿ ನಡೆಯಲಿದೆ.

ಚಲನಚಿತ್ರ ನಟಿ ಹರ್ಷಿತಾ ಪೂಣಚ್ಚ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕರಾವಳಿ ಮುಂಜಾವು ಸಂಪಾದಕ ಗಂಗಾಧರ ಹಿರೇಗುತ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಳಗಾವಿಯ ಕೆಎಲ್ಇ ಆಸ್ಪತ್ರೆ ವೈದ್ಯ ಡಾ.ರಣಜೀತ ನಾಯಕ ಕೆಂಚನ್ ಅವರಿಂದ ರಾಷ್ಟ್ರ ನಿರ್ಮಾಣದಲ್ಲಿ ಯುವ ಜನರ ಪಾತ್ರ ಎಂಬ ವಿಷಯದ ಮೇಲೆ ಉಪನ್ಯಾಸ ನಡೆಯಲಿದೆ.ಜಿಲ್ಲೆಯ ವಿವಿಧ ಕ್ಷೇತ್ರಗಳ 10 ಜನ ಯುವ ಸಾಧಕರಿಗೆ ಕಾರ್ಯಕ್ರಮದಲ್ಲಿ ಪುರಸ್ಕಾರ ನೀಡಲಾಗುವುದು.

ಚರಿತ್ರೆಯಲ್ಲಿ ಅಮರಳಾದ ವಾಸರೆಯ ಮಾಣುದೇವಿ ನಾಯಕ ನೆನಪಿನ ಕಾರ್ಯಕ್ರಮ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ನ್ಯಾಯಮೂರ್ತಿ ನಾಗಮೋಹನದಾಸ್ ಬರೆದ ಸಂವಿಧಾನದ ಓದು ಪುಸ್ತಕ ಕೊಡುಗೆ, ಯಕ್ಷನೃತ್ಯ, ಗಾಯನ ಮೊದಲಾದ ವಿಶೇಷತೆಗಳು ಕಾರ್ಯಕ್ರಮದಲ್ಲಿ ಇರಲಿದೆ ಎಂದು ಗಾಂವಕರ ಮೆಮೋರಿಯಲ್ ಟ್ರಸ್ಟಿನ ಅಧ್ಯಕ್ಷ ದೇವಾನಂದ ಗಾಂವಕರ ಮತ್ತು ಪದಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟ್ಟಣ ಪಂಚಾಯತಿಗೆ ಅವಿರೋಧವಾಗಿ ಆಯ್ಕೆ



ಹೊನ್ನಾವರ: ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ತಾಲೂಕಿನ ಮಂಕಿ ಪಟ್ಟಣ ಪಂಚಾಯತಿಗೆ ಪ್ರಥಮ ಅಧ್ಯಕ್ಷರಾಗಿ ಸವಿತಾ ಮಲ್ಲಯ್ಯ ನಾಯ್ಕ ಹಾಗೂ ಉಪಾಧ್ಯಕ್ಷರಾಗಿ ಜ್ಯೋತಿ ಸತೀಶ ಖಾರ್ವಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ 20ರಲ್ಲಿ ಬಿಜೆಪಿ 12 ಹಾಗೂ ಕಾಂಗ್ರೆಸ್ 8 ಸ್ಥಾನ ಪಡೆದುಕೊಂಡಿದ್ದು ಬಿಜೆಪಿ ಸ್ಪಷ್ಟ ಬಹುಮತ ಹೊಂದಿದೆ. ಅಧ್ಯಕ್ಷ ಸ್ಥಾನಕ್ಕೆ ಹಿಂದುಳಿದ ಅ ಮಹಿಳೆ, ಉಪಾಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ಮಹಿಳೆ ಮೀಸಲಾತಿ ಬಂದಿದೆ. ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸದಸ್ಯರು, ಬಿಜೆಪಿ ಮುಖಂಡರು ಅಭಿನಂದಿಸಿ ಹರ್ಷವ್ಯಕ್ತಪಡಿಸಿ ಸಂಭ್ರಮಿಸಿದರು.

ಗಿರಿಯಪ್ಪ ಭಜಂತ್ರಿ ನಿಧನ



ಹುಬ್ಬಳ್ಳಿ: ಅಳ್ನಾವರ ತಾಲೂಕಿನ ಪೂರ ಗ್ರಾಮದ ಕೃಷಿಕರಾಗಿದ್ದ ಗಿರಿಯಪ್ಪ ರಾಮಚಂದ್ರ ಭಜಂತ್ರಿ (90)ಸೋಮವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	64699	69399
ಬಿಳಿಗೋಟು	28161	42999
ಕೆಂಪುಗೋಟು	28158	38899
ಬೆಟ್ಟೆ	41508	53699
ರಾಶಿ	51108	56519
ಚಾಲಿ	38169	50111

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	63315	63795
ರಾಶಿ	50669	61009
ಬೆಟ್ಟೆ	37805	51519
ಕೆಂಪುಗೋಟು	22189	40619
ಬಿಳಿಗೋಟು	24312	41109
ಚಾಲಿ ಹೊಸದು	46399	49599
ಚಾಲಿ	40135	52311
ಕೋಕಾ	12609	32198
ಕಾಳುಮೆಣಸು	58005	69800



ಹೊನ್ನಾವರ: ತಾಲೂಕಿನ ಕರ್ಕಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ದುಸ್ಥಿತಿಯಲ್ಲಿರುವ ಪಾವಿನಕುರ್ವಾದ ತೂಗು ಸೇತುವೆಯನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸೋಮವಾರ ಭೇಟಿ ನೀಡಿ ವೀಕ್ಷಿಸಿ ಆದಷ್ಟು ಬೇಗ ಹೊಸ ಸೇತುವೆ ನಿರ್ಮಾಣ ಮಾಡುವ ಭರವಸೆ ನೀಡಿದರು.

ತೂಗು ಸೇತುವೆ ವೀಕ್ಷಿಸಿದ ಸಚಿವ ಜಾರಕಿಹೊಳಿ

ಹೊನ್ನಾವರ: ತಾಲೂಕಿನ ಕರ್ಕಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ದುಸ್ಥಿತಿಯಲ್ಲಿರುವ ಪಾವಿನಕುರ್ವಾದ ತೂಗು ಸೇತುವೆಯನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸೋಮವಾರ ಭೇಟಿ ನೀಡಿ ವೀಕ್ಷಿಸಿ ಆದಷ್ಟು ಬೇಗ ಹೊಸ ಸೇತುವೆ ನಿರ್ಮಾಣ ಮಾಡುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಇಲ್ಲಿಯ ಸೇತುವೆಯ ಪರಿಸ್ಥಿತಿ ನೋಡಿದ್ದೇನೆ. ಜಿಲ್ಲೆಯಲ್ಲಿ ಇಂತಹ ಹಲವಾರು ಬೇಡಿಕೆ ಇದೆ. ಕ್ರಿಯಾಯೋಜನೆ ಮಾಡುತ್ತಿದ್ದೇವೆ. ಯಾವುದು ಕ್ರಿಯಾಯೋಜನೆಗೆ ತೆಗೆದುಕೊಳ್ಳಬೇಕು.

ಎಂದು ಪರಿಶೀಲಿಸುತ್ತೇವೆ. ಹಣಕಾಸಿನ ಲಭ್ಯತೆಯನ್ನು ನೋಡಿಕೊಳ್ಳಬೇಕು. ಈ ಸೇತುವೆ ನಿರ್ಮಾಣ ಮಾಡಲು ಸಾಕಷ್ಟು ಅನುದಾನ ಬೇಕು, ಇದು ಒಂದೇ ಸೇತುವೆ ಅಲ್ಲ,ಇಂತದ್ದು ಬಹಳಷ್ಟು ಸಮಸ್ಯೆ ಇದೆ. ಒಂದೊಂದರಂತೆ ಮಾಡಬೇಕು. ಮುಂದಿನ ದಿನಗಳಲ್ಲಿ ಸೇತುವೆ ನಿರ್ಮಾಣದ ಬಗ್ಗೆ ನೋಡೋಣ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ್ ಎಸ್. ವೈದ್ಯ, ಶಾಸಕ ದಿನಕರ ಶೆಟ್ಟಿ, ಮಾಜಿ ಶಾಸಕಿ ಶಾರದಾ ಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಾಯಿ ಗಾಂವ್ಕರ, ಜಿಲ್ಲಾಧಿಕಾರಿ ಲಕ್ಷ್ಮೀ ಪ್ರಿಯಾ, ಬ್ಲಾಕ್ ಅಧ್ಯಕ್ಷ ಮಹೇಶ ನಾಯ್ಕ, ವಿನೋದ ನಾಯ್ಕ ಕರ್ಕಿ, ತುಕಾರಾಮ್ ನಾಯ್ಕ, ಶ್ರೀಕಾಂತ್ ಮೊಗೇರ, ಹರೀಶ ನಾಯ್ಕ, ಹರಿಶ್ಚಂದ್ರ ನಾಯ್ಕ ಇನ್ನಿತರ ಮುಖಂಡರು, ಅಧಿಕಾರಿಗಳು ಇದ್ದರು.



ಸಿದ್ದಾಪುರ: ತಾಲೂಕಿನ ಕೊಂಡ್ಲಿಯಲ್ಲಿ ಜರುಗುತ್ತಿರುವ ಶ್ರೀ ಮಾರಿಕಾಂಬಾ ಜಾತ್ರಾ ಮಹೋತ್ಸವಕ್ಕೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಭೇಟಿ ನೀಡಿ ಶ್ರೀದೇವಿಗೆ ಪೂಜೆ ಸಲ್ಲಿಸಿದರು. ಜಾತ್ರಾ ಕಮಿಟಿಯ ಅಧ್ಯಕ್ಷ ಕೆ.ಜಿ.ನಾಯ್ಕ ಹಣಜೀಬೈಲ, ಬಿಜೆಪಿ ಮಂಡಲ ಅಧ್ಯಕ್ಷ ತಿಮ್ಮಪ್ಪ ಹಿತ್ತಲಕೊಪ್ಪ, ಪ್ರಧಾನ ಕಾರ್ಯದರ್ಶಿ ತೋಟಪ್ಪ ನಾಯ್ಕ, ಪ್ರಮುಖರಾದ ಪ್ರಭಾಕರ ಕೊಂಡ್ಲಿ, ಗುರುರಾಜ ಶಾನಭಾಗ, ನಂದನ ಬೋರಕರ್, ಮಂಜುನಾಥ ಭಟ್ಟ, ಕೃಷ್ಣಮೂರ್ತಿ ಐಸೂರ, ಶ್ರೀನಿವಾಸ ಹೊಸೂರು, ವಿಜಯ ಹೆಗಡೆ, ಜಿ.ಕೆ.ನಾಯ್ಕ ಇತರರು ಉಪಸ್ಥಿತರಿದ್ದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಭರವಸೆ

120 ಸೇತುವೆ ನಿರ್ಮಾಣದ ಗುರಿ

ಕಾರವಾರ: ರಾಜ್ಯದಲ್ಲಿ ಈ ವರ್ಷ ಹೊಸದಾಗಿ 120 ಸೇತುವೆಗಳನ್ನು ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಅವರು ಸೋಮವಾರ ಕುಮಟಾ ತಾಲೂಕಿನ ಕಲಭಾಗದಲ್ಲಿ ಮೂವತ್ತು ಗುಂಡಿ ಸೇತುವೆ ಕಾಮಗಾರಿಗೆ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ದಾಪುರ, ಕುಮಟಾ ಹೊನ್ನಾವರ ಭಾಗದಲ್ಲಿ ಹೆಚ್ಚಿನ ಕಾಲು ಸಂಕಗಳನ್ನು ನಿರ್ಮಾಣ ಮಾಡಲಾಗಿದ್ದು, ಅವಶ್ಯವಿರುವ ಕಡೆ ಕಾಲು ಸಂಕ ನಿರ್ಮಾಣ ಮಾಡಲು ಕ್ರಮಕೈಗೊಳ್ಳಲಾಗುವುದು. ಶಿಥಿಲಾವಸ್ಥೆಯಲ್ಲಿರುವ ಹಳೆ ಸೇತುವೆಗಳಿಗೆ ತಕ್ಷಣವೇ ಸೇತುವೆ ಮರು ನಿರ್ಮಾಣ ಮಾಡಲು ಮಂಜೂರಾತಿ ನೀಡುತ್ತಿದ್ದು, ಈ ಭಾಗದ ಜನರಿಗೆ ಅನುಕೂಲ ಮಾಡಿಕೊಡಲಾಗುವುದು. ನದಿಯ ಹಿನ್ನಿರಿಗೆ ಸಮುದ್ರದ ಉಪ್ಪು ನೀರು ಮಿಶ್ರಣವಾಗುವುದರಿಂದ ರೈತರು ಸಂಕಷ್ಟಕ್ಕೆ ಒಳಗಾಗುತ್ತಿದ್ದು, ಸೇತುವೆ ನಿರ್ಮಾಣದ ಸಂದರ್ಭದಲ್ಲಿ ಬ್ಯಾರೇಜ್ ನಿರ್ಮಾಣ ಮಾಡುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ ಎಂದರು.

ಶಾಸಕ ದಿನಕರ ಶೆಟ್ಟಿ ಮಾತನಾಡಿ, ಬಹಳ ವರ್ಷದಿಂದ ಈ ಸೇತುವೆ ಆಗಬೇಕು ಎಂಬುದು ಈ ಭಾಗದ ಜನತೆಯ ಕನಸಾಗಿತ್ತು. ಈ ಸೇತುವೆ ಬಗ್ಗೆ ಸೇತುವೆ ಅಗಲೀಕರಣಕ್ಕೆ ಸಚಿವರಲ್ಲಿ ಮನವಿ ಸಲ್ಲಿಸಿದ ತಕ್ಷಣ ಸ್ಪಂದಿಸಿ ಸೇತುವೆ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿ ಸೇತುವೆ ಮಾಡಲು ಮಂಜೂರಾತಿ ನೀಡಿದರು. 3 ಮೀಟರ್ ಇದ್ದ ಸೇತುವೆಯನ್ನು 9 ಮೀಟರ್‌ಗೆ ಅಗಲೀಕರಣ ಮಾಡಲಾಗುತ್ತಿದೆ. ಇದರ ಜೊತೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡುವ ಮೂಲಕ ಉಪ್ಪು ನೀರು ರೈತರ ಗದ್ದೆಗೆ ಹೋಗದಂತೆ ತಡೆದು ರೈತರಿಗೆ ಅನುಕೂಲ ಮಾಡಲಾಗುತ್ತಿದೆ ಎಂದರು.



ಕರಾವಳಿ ಮತ್ತು ಮಲೆನಾಡು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮಳೆಗಾಲದ ಸಂದರ್ಭದಲ್ಲಿ ಒಂದು ಭಾಗದಿಂದ ಇನ್ನೊಂದು ಭಾಗದ ಸಂಪರ್ಕ ಕಡಿತವಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಸಮಸ್ಯೆಗೆ ಪರಿಹಾರ ಒದಗಿಸಲು ಈಗಾಗಲೇ 12 ಜಿಲ್ಲೆಗಳಲ್ಲಿ 400 ಕಾಲು ಸಂಕ ನಿರ್ಮಾಣ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಆದ್ಯತೆಯ ಮೇಲೆ ಹೆಚ್ಚಿನ ಸಂಖ್ಯೆಯ ಕಾಲ ಸಂಕಗಳನ್ನು ನಿರ್ಮಾಣ ಮಾಡಲಾಗುವುದು.

■ ಸತೀಶ ಜಾರಕಿಹೊಳಿ.ಸಚಿವ

» ಕುಮಟಾ ತಾಲೂಕಿನ ಕಲಭಾಗದಲ್ಲಿ ಮೂವತ್ತು ಗುಂಡಿ ಸೇತುವೆ ಕಾಮಗಾರಿಗೆ ಶಿಲಾನ್ಯಾಸ ಕಾರ್ಯಕ್ರಮ

ಕಾರ್ಯಕ್ರಮದಲ್ಲಿ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ, ಮಾಜಿ ಶಾಸಕಿ ಶಾರದ ಶೆಟ್ಟಿ, ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ. ದಿಲೀಪ್ ಶಶಿ, ಉಪ ವಿಭಾಗಾಧಿಕಾರಿ ಶ್ರವಣಕುಮಾರ್, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ಮಲ್ಲಿಕಾರ್ಜುನ್ ಮತ್ತಿತರರು ಇದ್ದರು.

ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಕೇಂದ್ರಕ್ಕೆ ಮತ್ತೊಮ್ಮೆ ಆಗ್ರಹ

» ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ


» ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರ ಸಮಾಜದ ಜನರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಹುಕಾಲದ ಬೇಡಿಕೆ

ಅಂಕೋಲಾ: ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರ ಸಮಾಜದ ಜನರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಹುಕಾಲದ ಬೇಡಿಕೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು ಕೇಂದ್ರ ಸರ್ಕಾರ ಅದನ್ನು ತಿರಸ್ಕರಿಸಿದ್ದು, ಹಾಲಕ್ಕಿ ಸಮಾಜದ ಜನರ ಮನವಿಯನ್ನು ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಆಗ್ರಹ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ತಾಲೂಕಿನ ಮಂಜಗುಣಿಯಲ್ಲಿ ಜಿಲ್ಲಾ ಹಾಲಕ್ಕಿ ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮಂತ ಗೌಡ ಅವರ ನೇತೃತ್ವದಲ್ಲಿ ಹಾಲಕ್ಕಿ ಸಮಾಜದ ಮಹಿಳೆಯರು ನೀಡಿರುವ ಮನವಿಯ ಕುರಿತಂತೆ ಮಾತನಾಡಿದ ಅವರು, ಯಾವುದೇ ಸಮಾಜವನ್ನು ಪರಿಶಿಷ್ಟ ಪಂಗಡ ಅಥವಾ ಪರಿಶಿಷ್ಟ ಜಾತಿಗೆ ಸೇರಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ ಅದು ಕೇಂದ್ರ ಸರ್ಕಾರದ ಕೆಲಸವಾಗಿದ್ದು, ಈ ಹಿಂದೆ ಕಳುಹಿಸಿದ ಬೇಡಿಕೆ ಕೇಂದ್ರ ಸರ್ಕಾರದಿಂದ ತಿರಸ್ಕರಿಸಿದೆ. ಇನ್ನೊಮ್ಮೆ ಆ ಕುರಿತಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವ ಕೆಲಸ ಮಾಡುತ್ತೇವೆ ಎಂದರು.

ಶಾಸಕ ಸತೀಶ ಸೈಲ್ ಮಾತನಾಡಿ, ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಸಮುದಾಯ ತೀವ್ರ ಹಿಂದುಳಿದವರಾಗಿದ್ದು ಜಾನಪದ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿದ್ದಾರೆ. ಹಾಲಕ್ಕಿಗಳು ಪರಿಶಿಷ್ಟ ಪಂಗಡಕ್ಕೆ ಸೇರಬೇಕು ಎನ್ನುವ ಬೇಡಿಕೆ ನ್ಯಾಯಯುತವಾದುದು, ಹಾಲಕ್ಕಿ ಸಮಾಜದಂತೆ ಇರುವ ಕುಣಬಿ ಸಮಾಜ ಗೋವಾ ರಾಜ್ಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ್ದು ಕರ್ನಾಟಕದಲ್ಲಿ ಮಾತ್ರ ಸೌಲಭ್ಯ ವಂಚಿತರಾಗಿದ್ದಾರೆ. ಗೋವಾದಿಂದ ಕರ್ನಾಟಕಕ್ಕೆಮದುವೆಯಾಗಿಬರುವಹುಡುಗಿ ಸೌಲಭ್ಯ ವಂಚಿತಳಾದರೆ ಕರ್ನಾಟಕದಿಂದ ಗೋವಾಕ್ಕೆ ಮದುವೆಯಾಗಿ ಹೋಗುವ ಹುಡುಗಿ ಪರಿಶಿಷ್ಟ ವರ್ಗಕ್ಕೆ ಸೇರುತ್ತಾಳೆ ಈ ರೀತಿಯ ತಾರತಮ್ಯ ಆಗಬಾರದು ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಇದ್ದರು.



ಹಿಂದೂ ಧರ್ಮ ಒಗ್ಗೂಡಿಸುವ ಹಿಂದೂ ಸಮ್ಮೇಳನ

ಭಟ್ಕಳ: ತಾಲೂಕಿನ ಮುಟ್ಟಳ್ಳಿ ಮಂಡಲದ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಮೂಡಭಟ್ಕಳದ ಶ್ರೀ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಹಿಂದೂ ಸಮ್ಮೇಳನವು ವಿಜೃಂಭಣೆಯಿಂದ ನಡೆಯಿತು.

ಮುಖ್ಯ ವಕ್ತಾರರಾಗಿ ಭಾಗವಹಿಸಿದ್ದ ಹಿಂದೂ ಜಾಗರಣಾ ವೇದಿಕೆಯ ಶಿವಾನಂದ ಬಡಿಗೇರ ಮಾತನಾಡಿ, ಹಿಂದೂ ಸಮ್ಮೇಳನ ಯಾವುದೇ ಜಾತಿ, ಮತ ವಿರೋಧಿಯಲ್ಲ, ಇದೊಂದು ಹಿಂದೂ ಧರ್ಮದ ಒಗ್ಗಟ್ಟು ಮೂಡಿಸುವ ವೇದಿಕೆಯಾಗಿದೆ. ಯುವಪೀಳಿಗೆ ಸಂಸ್ಕೃತಿಯಿಂದ ದೂರವಾಗದಂತೆ ಪಾಲಕರು ಎಚ್ಚರಿಕೆಯಿಂದಿರಬೇಕು. ಇತಿಹಾಸದ ಮಹನೀಯರ ಕಥೆಗಳನ್ನು ಮಕ್ಕಳಿಗೆ ತಿಳಿಸಬೇಕು. ದೇಶದಲ್ಲಿ ಎಲ್ಲಾ ಧರ್ಮದವರು ಸೌಹಾರ್ದದಿಂದ ಬದುಕಬೇಕು. ರಾಮಾಯಣ, ಮಹಾಭಾರತದ ಮಹತ್ವವನ್ನು ವಿಶ್ವವೇ ಅರಿಯುತ್ತಿರುವುದು ಹೆಮ್ಮೆಯ ಸಂಗತಿ ಎಂದ ಅವರು, ರಾಷ್ಟ್ರ ನಿರ್ಮಾಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪಾತ್ರ ಮಹತ್ವದ್ದಾಗಿದೆ. ಪಂಚ ಪರಿವರ್ತನೆ ಉದ್ದೇಶದೊಂದಿಗೆ ಧರ್ಮ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕುಟುಂಬ ವ್ಯವಸ್ಥೆ ಕುಸಿಯುತ್ತಿರುವ ಈ ಸಂದರ್ಭದಲ್ಲಿ ಕುಟುಂಬ ಪ್ರಬೋಧನೆ ಅಗತ್ಯ. ಸ್ವದೇಶಿ ಜೀವನ ಶೈಲಿ ಅಳವಡಿಸಿಕೊಂಡು ಭಾರತೀಯ ಉತ್ಪನ್ನಗಳ ಬಳಕೆ ಹೆಚ್ಚಿಸಬೇಕು ಎಂದು ಹೇಳಿದರು.

ಸಮ್ಮೇಳನ ಸಮಿತಿ ಅಧ್ಯಕ್ಷ ವೆಂಕಟೇಶ ನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿ, ನೂರು ವರ್ಷಗಳ ಪರಂಪರೆಯ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸೇವೆಯನ್ನು ಸ್ಮರಿಸಿದರು. 1970ರಲ್ಲಿ ಇದೇ ಸ್ಥಳದಲ್ಲಿ ಶಾಖೆ ಆರಂಭಗೊಂಡಿದ್ದು, ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮದ ಪೂರ್ವದಲ್ಲಿ ಭಟ್ಕಳ ರೈಲ್ವೆ ನಿಲ್ದಾಣ ಸಮೀಪದ ಶ್ರೀ ನಾಗಮಾಸ್ತಿ ದೇವಸ್ಥಾನದಿಂದ ಭವ್ಯ ಶೋಭಾಯಾತ್ರೆ ಹೊರಟು, ಮುಟ್ಟಳ್ಳಿ ಗ್ರಾಮ ಪಂಚಾಯತ್ ಮಾರ್ಗವಾಗಿ ಮೂಡಭಟ್ಕಳ ಬೈಪಾಸ್ ಮೂಲಕ ಸಭಾ ಸ್ಥಳಕ್ಕೆ ತಲುಪಿತು. ಮೆರವಣಿಗೆಯಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು. ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕೃಷ್ಣ ನಾಯ್ಕ ಸ್ವಾಗತಿಸಿದರು. ಪತ್ರಕರ್ತ ಈಶ್ವರ ನಾಯ್ಕ ನಿರೂಪಿಸಿದರು. ವಿನೋದ ಶೆಟ್ಟಿ ವಂದಿಸಿದರು.



ಸಾಹಿತ್ಯದಲ್ಲಿ ವಾಸ್ತವಾಂಶಕ್ಕೆ ಪ್ರಾಶಸ್ತ್ಯ ನೀಡಿದ ವಿಷ್ಣು ನಾಯ್ಕ: ನಾಯಕ

ಅಂಕೋಲಾ: ನಾಮಾಂಕಿತ ಸಾಹಿತಿ ದಿವಂಗತ ವಿಷ್ಣು ನಾಯ್ಕ ಅವರ ಎರಡನೇ ಪುಣ್ಯತಿಥಿಯ ಪ್ರಯುಕ್ತ ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನದ ವತಿಯಿಂದ ಉಪನ್ಯಾಸ, ಕವನ ವಾಚನ, ಗಾಯನ ಕಾರ್ಯಕ್ರಮವನ್ನು ಅಂಬಾರಕೊಡ್ಲದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಉಪನ್ಯಾಸ ನೀಡಿದ ನಿವೃತ್ತ ಪ್ರಾಧ್ಯಾಪಕ ರಾಮಾ ನಾಯಕ ಮಾತನಾಡಿ, ವಿಷ್ಣು ನಾಯ್ಕ ಅವರ ಸಾಹಿತ್ಯದಲ್ಲಿ ವೈಭವೀಕರಣಕ್ಕಿಂತ ವಾಸ್ತವಾಂಶಕ್ಕೆ ಪ್ರಾಶಸ್ತ್ಯ ಇರುವುದನ್ನು ಕಾಣಬಹುದಾಗಿದ್ದು ಜೀವನದಲ್ಲಿ ಅನುಭವಿಸಿದ ನೋವು, ಅಪಮಾನ, ಘಟನೆಗಳು ವಿಷ್ಣು ನಾಯ್ಕ ಅವರು ಸಾಹಿತ್ಯದ ರೂಪದಲ್ಲಿ ಹೊರ ತಂದಿದ್ದಾರೆ ಎಂದರು.

ಸಾಹಿತಿ ಮೋಹನ ಹಬ್ಬು ಮಾತನಾಡಿ, ವಿಷ್ಣು ನಾಯ್ಕ ಅವರ ಚಿಂತನೆಗಳನ್ನು ಯುವ ಸಾಹಿತಿಗಳು ಅರಿಯಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷ ರಾಮಕೃಷ್ಣ ಗುಂದಿ ಮಾತನಾಡಿ, ಬದುಕಿನ ತಲ್ಲಣಗಳ ಚಿತ್ರಣಗಳನ್ನು ವಿಷ್ಣು ನಾಯ್ಕ ಅವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ ಎಂದರು. ಹಿರಿಯ ಚಿಂತಕ ಗೌತಮ ಗಾಂವಕರ, ಸಾಹಿತಿ ಗೋಪಾಲಕೃಷ್ಣ ನಾಯಕ, ವಿದ್ಯಾ ರಾಮಾ ನಾಯ್ಕ ಉಪಸ್ಥಿತರಿದ್ದರು. ಜಗದೀಶ ನಾಯಕ ಹೊಸ್ಕೇರಿ ಸ್ವಾಗತಿಸಿದರು. ಮಹಾಂತೇಶ ರೇವಡಿ ಕಾರ್ಯಕ್ರಮ ನಿರ್ವಹಿಸಿದರು, ಜಯಶೀಲ ಆಗೇರ ವಂದಿಸಿದರು.



ಉಮಾ ಮಧುಕೇಶ್ವರ ರಥೋತ್ಸವಕ್ಕೆ ಸಕಲ ಸಿದ್ಧತೆ

ಬನವಾಸಿ: ಇಲ್ಲಿಯ ಐತಿಹಾಸಿಕ ಶ್ರೀ ಉಮಾ ಮಧುಕೇಶ್ವರ ದೇವಸ್ಥಾನದಲ್ಲಿ ಮಾ.29ರಿಂದ ಮಾ. 30ರವರೆಗೆ ನಡೆಯಲಿರುವ ವಾರ್ಷಿಕ ಮಹಾ ರಥೋತ್ಸವದ ಸಕಲ ಸಿದ್ದತೆಗಳು ಭರದಿಂದ ಸಾಗುತ್ತಿವೆ. ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಮಹಾರಥ ಮತ್ತು ಹೂವಿನ ರಥವನ್ನು ರಥದ ಕೋಣೆಯಿಂದ ಭಕ್ತರ ಸಮ್ಮುಖದಲ್ಲಿ ಸೋಮವಾರ ಹೊರತರಲಾಯಿತು.

ಮಾ. 22ರಿಂದ ಜಾತ್ರೆಯ ಧಾರ್ಮಿಕ ವಿಧಿವಿಧಾನಗಳು ಆರಂಭವಾಗಲಿದ್ದು, ಮಾ. 29ರಂದು ಹೂವಿನ ರಥೋತ್ಸವ ನಡೆಯಲಿದೆ. ಮಾ. 30ರಂದು ದೊಡ್ಡ ತೇರು ಎಂದೇ ಪ್ರಸಿದ್ಧಿಯಾದ ''ಮಹಾಸ್ಯಂದನ ಮಹಾ ರಥ''ದಲ್ಲಿ ಶ್ರೀ ಉಮಾ ಮಧುಕೇಶ್ವರ ದೇವರ ಮಹಾ ರಥೋತ್ಸವ ನಡೆಯಲಿದೆ. ಸೋಮವಾರ ಮುಂಜಾನೆ ಶುಭ ಮುಹೂರ್ತದಲ್ಲಿ ಸಂಪ್ರದಾಯದಂತೆ ರಥಗಳನ್ನು ಹೊರತೆಗೆದು ಪ್ರಧಾನ ಅರ್ಚಕರು ವಿಶೇಷ ಪೂಜೆ ಸಲ್ಲಿಸಿ, ಪೂರ್ವಸಿದ್ಧತಾ ವಿಧಿವಿಧಾನಗಳನ್ನು ನೆರವೇರಿಸಿದರು. ರಥಗಳ ಸ್ವಚ್ಛತೆ, ಹಾಗೂ ದುರಸ್ತಿ ಕಾರ್ಯಗಳು ಹಾಗೂ ಹಂತ ಹಂತವಾಗಿ ರಥದ ನೆಲೆ ಕಟ್ಟುವ ಕಾರ್ಯ ಕೈಗೊಳ್ಳಲಾಗುವುದು. ಕರ್ನಾಟಕದ ಅತಿ ಎತ್ತರದ ರಥವೆಂಬ ವಿಶೇಷತೆ ಹೊಂದಿರುವ ಈ ರಥ ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದೆ.

ಈ ಸಮಯದಲ್ಲಿ ಆಡಳಿತ ಮಂಡಳಿ ಅಧ್ಯಕ್ಷ ಸುಧಾಕರ ಹೆಮಾದ್ರಿ, ಉಪಾಧ್ಯಕ್ಷ ಪ್ರಕಾಶ ಬಂಗ್ಲೆ, ಕಾರ್ಯದರ್ಶಿ ಲತಾ ಜಿ. ಶೆಟ್ಟಿ, ಸದಸ್ಯರಾದ ಮೇಘರಾಜ ನರೆಗಲ್ ವಿನಾಯಕ ಮಂಗಳೂರು, ಗಣಪತಿ ಹೆಗಡೆ , ಶಿವಾಜಿ ಚನ್ನಯ್ಯ, ಗೀತಾ ಯಜಮಾನ, ಪರಶುರಾಮ ಉಪ್ಪಾರ, ನಿಕಟ ಪೂರ್ವ ಅಧ್ಯಕ್ಷ ರಾಜಶೇಖರ ಒಡೆಯರ್, ಪ್ರಮುಖರು ಹಾಗೂ ಬಾಬುದಾರರು ಉಪಸ್ಥಿತರಿದ್ದರು.



ಜನರ ಆರೋಗ್ಯದೊಂದಿಗೆ ಚೆಲ್ಲಾಟ ಆಡಿದ ಕಾಂಗ್ರೆಸ್ ಸರ್ಕಾರ

ಮೂರು ವರ್ಷಗಳ ಕಾಲ ವಿಳಂಬ | ಬಿಜೆಪಿ ಆರೋಪ

ಕಾರವಾರ: ಹಿಂದಿನ ಬಿಜೆಪಿ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದ್ದನ್ನು ಹಳ್ಳ ಹಿಡಿಸಿ, ಆದಾದ ಮೂರು ವರ್ಷಗಳ ಮೇಲೆ ಅಂತೂ ಇಂತೂ ಮುಂದಿನ ಬಜೆಟ್‌ನಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ವಿಳಂಬವಾಗಿ ಯಾದರೂ ಈ ಹೇಳಿಕೆ ಬಂದಿದ್ದು ಸ್ವಾಗತಾರ್ಹ. ಆದರೆ, ಜಿಲ್ಲೆಗೆ ಎರಡು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನೀಡುವ ಕಾಂಗ್ರೆಸ್ ಮುಖಂಡರ ಭರವಸೆ ಏನಾಯ್ತು ಎಂದು ಬಿಜೆಪಿ ಪ್ರಮುಖರು ಪ್ರಶ್ನಿಸಿದ್ದಾರೆ.

ಹಿಂದಿನ ಬಿಜೆಪಿ ಸರ್ಕಾರ ಕಾರವಾರದಲ್ಲಿ ಸೂಪರ್ ಸ್ಪೆಷಾಲಿಟಿ ಸೌಲಭ್ಯ ಹಾಗೂ ಜಿಲ್ಲೆಯ ಕುಮಟಾದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸುವುದಾಗಿ ಘೋಷಣೆ ಮಾಡಿತ್ತು. ಆದರೆ, ನಂತರ ಬಂದ ಕಾಂಗ್ರೆಸ್ ಸರ್ಕಾರ ಈ ಬಗ್ಗೆ ದಿವ್ಯ ಮೌನ ವಹಿಸಿ ಮೂರು ವರ್ಷಗಳ ಕಾಲ ಜಿಲ್ಲೆಯ ಜನರ ಜೀವದೊಂದಿಗೆ ಚೆಲ್ಲಾಟ ಆಡಿತು. ಕಳೆದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಜನಪ್ರತಿನಿಧಿಗಳು ಕಾರವಾರ ಹಾಗೂ ಜಿಲ್ಲೆಯ ಮಧ್ಯವರ್ತಿ ಸ್ಥಳದಲ್ಲಿ ಹೀಗೆ ಎರಡು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾಡುವುದಾಗಿ ಭರವಸೆ ನೀಡಿದ್ದರು. ಈಗ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರಾಗಿ ನಿರ್ಮಾಣ ಕಾಮಗಾರಿಯೂ ನಡೆದಿದ್ದ ಆಸ್ಪತ್ರೆ ಕಟ್ಟಡವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಮೂರು ವರ್ಷಗಳ ಕಾಲ ವಿಳಂಬ ಮಾಡಿದ್ದಕ್ಕೆ ಕಿಂಚಿತ್ತೂ ಪಶ್ಚಾತ್ತಾಪ ವ್ಯಕ್ತಪಡಿಸದೆ ಕೇವಲ ಕಾರವಾರದಲ್ಲಿ ಮಾತ್ರ ಅದು ಮುಂದಿನ ಬಜೆಟ್‌ನಲ್ಲಿ ಘೋಷಣೆ ಮಾಡುವುದಾಗಿ ಹೇಳಿದ್ದಾರೆ. ಹಾಗಿದ್ದರೆ ಜಿಲ್ಲೆಯ ಮಧ್ಯವರ್ತಿ ಸ್ಥಳದಲ್ಲಿ ಮತ್ತೊಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಾಗಿ ಇನ್ನೆಷ್ಟು ವರ್ಷ ಹೋರಾಡಬೇಕು ಎಂದು ಅವರು ಪ್ರಶ್ನಿಸಿದ್ದಾರೆ. ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಮೆಡಿಕಲ್ ಕಾಲೇಜಿನ ಈಗಿರುವ ಆಸ್ಪತ್ರೆ ಸುಧಾರಣೆ ಬಗ್ಗೆ ಯಾವುದೇ ಮಾತುಗಳನ್ನಾಡದೆ ಇರುವುದು ನಿರಾಶೆಗೆ ಕಾರಣವಾಗಿದೆ. ಆಸ್ಪತ್ರೆ ಕಾರ್ಡಿಯಾಲಾಜಿಸ್ಟ್, ನ್ಯುರೋ ಸರ್ಜನ್ ಸೇರಿದಂತೆ 7 ತಜ್ಞ ವೈದ್ಯ ಹುದ್ದೆಗಳು ಬಿಜೆಪಿ ಸರ್ಕಾರದ ಅವಧಿಯಲ್ಲೇ ಮಂಜೂರಾದರೂ ಅದನ್ನು ಭರ್ತಿ ಮಾಡಲು ಯಾವುದೇ ಕ್ರಮ ಇಲ್ಲ. ಸರ್ಕಾರವೇ ಕಾರವಾರಕ್ಕೆ ಬಂದರೂ ಇಲ್ಲಿನ ಆಸ್ಪತ್ರೆಗೆ ತಜ್ಞ ವೈದ್ಯರು, ಆಧುನಿಕ ಉಪಕರಣಗಳನ್ನು ನೀಡುವ ಬಗ್ಗೆ ಏನೂ ಹೇಳದೆ ಬರಿಗೈಯಲ್ಲಿ ಬಂದು ಹೋಗಿದ್ದಾರೆ. ಹಾಗಿರುವಾಗ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯೂ ಕೇವಲ ಘೋಷಣೆಗೆ ಸೀಮಿತವಾಗಲಿದೆಯೇ ಎಂಬ ಸಂದೇಹ ಮಾಡತೊಡಗಿದೆ ಎಂದು ಬಿಜೆಪಿ ಕಾರವಾರ ನಗರ ಮಂಡಲ ಅಧ್ಯಕ್ಷ ನಾಗೇಶ ಕುರ್ಡೇಕರ, ಗ್ರಾಮೀಣ ಮಂಡಲ ಅಧ್ಯಕ್ಷ ಸುಭಾಷ್ ಗುನಗಿ, ಅಂಕೋಲಾ ಮಂಡಲ ಅಧ್ಯಕ್ಷ ಸಂಜಯ ನಾಯ್ಕ, ಜಿಲ್ಲಾ ಉಪಾಧ್ಯಕ್ಷ ಸಂಜಯ ಸಾಳುಂಕೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಸೇತುವೆ ಕಾಮಗಾರಿ ನನೆಗುದಿಗೆ

ಅಂಕೋಲಾದ ಮಂಜಗುಣಿ ಸೇತುವೆ ವಿಳಂಬಕ್ಕೆ ಬಿಜೆಪಿಯ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಈ ಸೇತುವೆ ಕಾಮಗಾರಿ ನನೆಗುದಿಗೆ ಬಿದ್ದಿತ್ತು. ಪ್ರವಾಹ ಬಂದು ಸ್ಥಳೀಯರು, ಮೀನುಗಾರರು ಸಂಕಷ್ಟ ಅನುಭವಿಸಿದರು. ಈ ಸೇತುವೆಗೆ ಕೇವಲ ಕಾಂಗ್ರೆಸ್ ಇರುವಾಗಷ್ಟೇ ಅಲ್ಲ, ಬಿಜೆಪಿ ಸರ್ಕಾರ ಇರುವಾಗಲೂ ಹಣ ಬಿಡುಗಡೆಯಾಗಿತ್ತು. ಹಾಗಿದ್ದರೆ ಕಾಂಗ್ರೆಸ್ ಈಗ ಅಧಿಕಾರಕ್ಕೆ ಬಂದ ಮೇಲೂ 3 ವರ್ಷ ಏಕೆ ಬೇಕಾಯಿತು. 6 ತಿಂಗಳಲ್ಲಿ ಕಾಮಗಾರಿ ಮುಗಿಸಲು ಏಕೆ ಆಗಲಿಲ್ಲ. ಇನ್ನು ಉಳಗಾ ಕೇರವಡಿ ಸೇತುವೆ ಸಹ ಆಗಲೇ ಆಗಿದ್ದು, ಆ ಸೇತುವೆ ಪೂರ್ಣಗೊಳಿಸಲು ಇದುವರೆಗೆ ಏಕೆ ಆಗಿಲ್ಲ ಎಂದು ಬಿಜೆಪಿ ಪ್ರಮುಖರು ಪ್ರಶ್ನಿಸಿದ್ದಾರೆ.

ಶಿಸ್ತು-ಆತ್ಮವಿಶ್ವಾಸದ ಗಣಿ ಭರತನಾಟ್ಯ: ರಾಘು ಕಾಕರಮಠ

ಅಂಕೋಲಾ: ಭರತನಾಟ್ಯ ಎನ್ನುವದು ಕೇವಲ ನಮ್ಮ ಸಂಸ್ಕೃತಿ ಪರಂಪರೆಯನ್ನು ಸಾದರಪಡಿಸುವ ಕಲಾ ಅಭ್ಯಾಸವಲ್ಲ, ಅದು ಶಿಸ್ತು, ಏಕಾಗ್ರತೆ ಮತ್ತು ಆತ್ಮವಿಶ್ವಾಸವನ್ನು ಬೆಳೆಸುವ ಸಶಕ್ತ ಸಾಧನ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಘು ಕಾಕರಮಠ ಹೇಳಿದರು.

ಅವರು ಶಿರಸಿಯ ನಾಟ್ಯಾಂಜಲಿ ನೃತ್ಯ ಕಲಾ ಕೇಂದ್ರ (ರಿ) ನ ಕಲ್ಲೇಶ್ವರ ಶಾಖೆಯ ಆಶ್ರಯದಲ್ಲಿ ನಡೆದ ನೂಪುರೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಭರತನಾಟ್ಯವು ದೇಹದ ಚಲನೆಗಳೊಂದಿಗೆ ಮನಸ್ಸಿನ ನಿಯಂತ್ರಣವನ್ನು ಕೂಡ ಒಟ್ಟುಗೂಡಿಸುವ ವಿಶಿಷ್ಟ ಕಲೆಯಾಗಿದೆ. ಈ ಕಲೆಯ ಅಭ್ಯಾಸವು ವಿದ್ಯಾರ್ಥಿಗಳಲ್ಲಿ ಆತ್ಮಶಿಸ್ತು ಮತ್ತು ಆತ್ಮವಿಶ್ವಾಸವನ್ನು ವೃದ್ಧಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾರ್ಧಯಕ್ಷ ಗೋಪಾಲಕೃಷ್ಣ ನಾಯಕ ಮಾತನಾಡಿ ಗುರು-ಶಿಷ್ಯ ಪರಂಪರೆ ನಮ್ಮ ಸಂಸ್ಕೃತಿಯ ಜೀವನಾಡಿ. ಒಬ್ಬ ಗುರು ತನ್ನ ಅನುಭವ ಮತ್ತು ಜ್ಞಾನವನ್ನು ಶಿಷ್ಯನಿಗೆ ಹಂಚಿದಾಗ ಮಾತ್ರ ಕಲೆ ಜೀವಂತವಾಗಿರುತ್ತದೆ. ಈ ನಿಟಿನಲ್ಲಿ ಡಾ. ಸಹನಾ ಭಟ್ಟ ಹಾಗೂ ವಿದುಷಿ ವಿನುತಾ ಹೆಗಡೆ ಅಂಕೋಲಾದ ವಿದ್ಯಾರ್ಥಿಗಳನ್ನು ನಿಷ್ಠೆಯಿಂದ ತರಬೇತುಗೊಳಿಸಿ ಮಾದರಿಯಾಗಿದ್ದಾರೆ ಎಂದರು.

ನಾಟ್ಯಾಂಜಲಿ ನೃತ್ಯ ಕಲಾ ಕೇಂದ್ರದ ಅಧ್ಯಕ್ಷ ಪ್ರದೀಪ ಭಟ್ಟ ಅಧ್ಯಕ್ಷತೆವಹಿಸಿ ಮಾತನಾಡಿಕಲೆ ಎಂದರೆ ಕೇವಲ ಮನರಂಜನೆ ಅಲ್ಲ, ಅದು ಮನಸ್ಸಿನ ಶುದ್ಧೀಕರಣ. ಒಳ್ಳೆಯ ನೃತ್ಯವನ್ನು ನೋಡಿದಾಗ ನಮ್ಮೊಳಗಿನ ಒತ್ತಡ ಕಡಿಮೆಯಾಗುತ್ತದೆ. ಮನಸ್ಸಿಗೆ ಶಾಂತಿ ದೊರಕುತ್ತದೆ. ಆದಕ್ಕಾಗಿಯೇ ದೇವಾಲಯಗಳಲ್ಲಿ ನೃತ್ಯ ಮತ್ತು ಸಂಗೀತಕ್ಕೆ ವಿಶೇಷ ಸ್ಥಾನ ನೀಡಲಾಗುತ್ತಿತ್ತು ಎಂದರು.

ಈ ಸಂದರ್ಭದಲ್ಲಿ ನಾಟ್ಯಾಂಜಲಿ ನೃತ್ಯ ಕಲಾ ಕೇಂದ್ರದ ನಿರ್ದೇಶಕಿ ಡಾ. ಸಹನಾ ಪ್ರದೀಪ್ ಭಟ್ಟ ಹಾಗೂ ವಿದುಷಿ ವಿನುತಾ ಹೆಗಡೆ ಅವರಿಗೆ ವಿದ್ಯಾರ್ಥಿಗಳು ಮತ್ತು ಪಾಲಕರು ಗುರು ಗೌರವ ಸಲ್ಲಿಸಿ ಸನ್ಮಾನಿಸಿದರು. ರಾಘವೇಂದ್ರ ಹೆಗಡೆ ಸ್ವಾಗತಿಸಿದರು.

ಕಲಾಕೇಂದ್ರದ ಶಿಷ್ಯ ವೃಂದದವರಿಂದ ಭರತನಾಟ್ಯ ಚೌಕಟ್ಟಿನ ನೃತ್ಯ ಬಂಧಗಳಾದ ಪುಷ್ಪಾಂಜಲಿ, ಅಲರಿಪು, ಜತಿಸ್ವರ, ಕೌತುಕ, ದೇವರನಾಮ, ವರ್ಣಂ ಮುಂತಾದವುಗಳ ಪ್ರದರ್ಶನ ನಡೆಯಿತು.



ಕಿರುಸುದ್ದಿ

ಫೆ.28ರಿಂದ ಜಿಲ್ಲಾಮಟ್ಟದ ಕೈಗಾರಿಕಾ ವಸ್ತುಪ್ರದರ್ಶನ

ಹಾವೇರಿ: ಜಿಲ್ಲಾ ಪಂಚಾಯತ ಗ್ರಾಮೀಣ ಕೈಗಾರಿಕೆ ವಿಭಾಗದ ವತಿಯಿಂದ ಫೆ.28ರಿಂದ ಮಾರ್ಚ್4ರವರೆಗೆ ಐದು ದಿನಗಳ ಜಿಲ್ಲಾಮಟ್ಟದ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ ಹಾವೇರಿ ನಗರದ ಜಿಲ್ಲಾ ಗುರುಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಗ್ರಾಮೀಣ ಕುಶಲಕರ್ಮಿಗಳು, ಅತೀ ಸಣ್ಣ, ಸಣ್ಣ ಕೈಗಾರಿಕೆಗಳು, ಖಾದಿ ಗ್ರಾಮೋದ್ಯೋಗ, ಕೈಮಗ್ಗ ಮತ್ತು ಜವಳಿ ಸಂಘಗಳು ಮತ್ತು ಸ್ವ-ಸಹಾಯ ಗುಂಪುಗಳು ತಯಾರಿಸುವ ಕರಕುಶಲ ವಸ್ತುಗಳು, ಬಿದರಿನ ಅಲಂಕಾರಿಕ ವಸ್ತುಗಳು, ಟೇರಾಕೋಟ, ಆಹಾರ ಉತ್ಪನ್ನಗಳು, ಖಾದಿ, ಕೈಮಗ್ಗ, ಜವಳಿ ಉತ್ಪನ್ನಗಳು, ಅಗರಬತ್ತಿ, ಕಸೂತಿ ಸೀರೆಗಳು, ಬ್ಯಾಗ್, ಗೊಂಬೆಗಳು, ಕೃತಕ ಆಭರಣಗಳು ಹಾಗೂ ಇತರೆ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಕಲ್ಪಿಸಲಾಗಿದೆ. ಸಾರ್ವಜನಿಕರು ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳು ಈ ವಸ್ತು ಪ್ರದರ್ಶನಕ್ಕೆ ತಪ್ಪದೇ ಭೇಟಿ ನೀಡಿ ಉತ್ಕೃಷ್ಟವಾದ ಕರಕುಶಲ ಮತ್ತು ಗೃಹ ಉತ್ಪನ್ನಗಳನ್ನು ಖರೀದಿಸುವ ಮೂಲಕ ಸ್ವದೇಶಿ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಹಾಗೂ ವಸ್ತು ಪ್ರದರ್ಶನದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಗ್ರಾಮೀಣ ಕೈಗಾರಿಕೆ ವಿಭಾಗದ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08375-249065ನ್ನು ಸಂಪರ್ಕಿಸಲು ಕೋರಲಾಗಿದೆ.

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತ ಸಾರಿಗೆ ಸೌಲಭ್ಯ

ಹಾವೇರಿ: ಇದೇ ಫೆ.28ರಿಂದ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅವರ ವಿದ್ಯಾಸಂಸ್ಥೆಯ ಹೊರತಾಗಿ ಇತರೆ ವಿದ್ಯಾ ಸಂಸ್ಥೆಗಳಿಗೆ ಪರೀಕ್ಷಾ ಕೇಂದ್ರಗಳ ನಿಯೋಜನೆ ಆಗಿರುವುದರಿಂದ, ವಿದ್ಯಾರ್ಥಿಗಳ ವಾಸಸ್ಥಳದಿಂದ ಪರೀಕ್ಷಾ ಕೇಂದ್ರಗಳವರೆಗೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಹುಬ್ಬಳ್ಳಿಯ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.ದ್ವಿತೀಯ ಪಿಯುಸಿ ಪರೀಕ್ಷೆ ನಡೆಯುವ ದಿನಾಂಕಗಳಂದು, ಅಂದರೆ ಫೆ.28ರಿಂದ ಮಾ.17ರವರೆಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯ ಪ್ರವೇಶ ಪತ್ರ ತೋರಿಸಿ ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಹಾಗೂ ಪರೀಕ್ಷೆ ಮುಗಿಸಿ ವಾಸಸ್ಥಳಕ್ಕೆ ಹಿಂದಿರುಗಲು ಸಂಸ್ಥೆಯ ನಗರ, ಉಪನಗರ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಖ್ಯಾನ ದಕ್ಷಯಜ್ಞ ಪ್ರದರ್ಶನ



ಸಿದ್ದಾಪುರ: ಮಹಾಶಿವರಾತ್ರಿ ಉತ್ಸವದ ಅಂಗವಾಗಿ ಕಾರ್ಗಲ್‌ನ ಈಶ್ವರ ದೇವಾಲಯದಲ್ಲಿ ಇಡುವಾಣಿಯ ಭೈರವೇಶ್ವರ ಯಕ್ಷಗಾನ ಕಲಾತಂಡದಿಂದ ಪ್ರದರ್ಶಿಸಲ್ಪಟ್ಟ ಯಕ್ಷಗಾನ ಆಖ್ಯಾನ ದಕ್ಷಯಜ್ಞ ಪ್ರೇಕ್ಷಕರ ಗಮನಸೆಳೆಯಿತು. ನಾಟ್ಯಾಚಾರ್ಯ ಶಂಕರಭಟ್ಟರ ಈಶ್ವರ ಪಾತ್ರ ವಿಶೇಷ ಮೆಚ್ಚುಗೆ ಪಡೆದರೆ ರಾಮು ಆಡುಕಟ್ಟಾ ಅವರು ದಕ್ಷನ ಪಾತ್ರದಲ್ಲಿ ಗಮನ ಸೆಳೆದರು. ರಾಮಚಂದ್ರ ಕಾರ್ಗಲ್ ದಾಕ್ಷಾಯಣಿ ಪಾತ್ರದಲ್ಲಿ ಮಿಂಚಿದರು.ರಮೇಶ ಆಡುಕಟ್ಟಾ ಬ್ರಾಹ್ಮಣ ಪಾತ್ರದಲ್ಲಿ ಹಾಸ್ಯ ಭರಿತ ಮಾತು, ನೃತ್ಯದ ಮೂಲಕ ನಗೆಗಡಲಲ್ಲಿ ತೇಲಿಸಿದರು. ವೀರಭದ್ರನಾಗಿ ಉದಯ ಜೈನ್ ಪಾತ್ರದ ಕೋಪಾಟೋಪ ಮೆರೆದರು. ದೇವೇಂದ್ರನಾಗಿ ಶಿವು ಶಿರಳಗಿ ಪಾತ್ರಕ್ಕೆ ನ್ಯಾಯ ಒದಗಿಸಿದರು. ಬಾಲಗೋಪಾಲರಾಗಿ ಕುಶಾಲ ಶಿರಳಗಿ, ಶಶಾಂಕ ಶಿರಳಗಿ ಉತ್ತಮವಾಗಿ ಅಭಿನಯಿಸಿದರು. ಹಿಮ್ಮೇಳದಲ್ಲಿ ಭಾಗವತರಾದ ನಾಗರಾಜ ಮಗೋಳ್ಳಿಯವರು ಒಳ್ಳೆಯ ರಾಗ ಮಟ್ಟಗಳಿಂದ ಹಾಡಿ ರಂಜಿಸಿದರು. ಮದ್ದಲೆ ವಾದಕರಾದ ನಾರಾಯಣ ಗುಡ್ಡೆಕಣ ಕೌಶಲ್ಯ ತೋರಿದರೆ ಚೆಂಡೆವಾದಕರಾದ ಗಣೇಶ ಭಟ್ಟ ಕೆರೆಕೈ ಅಬ್ಬರದ ತಾಳಲಯಗಳ ಮೂಲಕ ಕಾರ್ಯಕ್ರಮಕ್ಕೆ ಕಳೆಯೇರಿಸಿದರು. ಸಂಘಟಕರು ಇದೊಂದು ಯಶಸ್ವೀ ಪ್ರದರ್ಶನ ಎಂದು ಹೇಳಿ ಕಲಾವಿದರನ್ನು ಗೌರವಿಸಿದರು.



ಹಾವೇರಿ : ನಗರದ ಕಾಳಿದಾಸ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಸರಸ್ವತಿ ಪೂಜಾ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು. ಈ ವೇಳೆ ತಹಶೀಲ್ದಾರ್ ಶರಣಮ್ಮ, ಹುಡಾಅಧ್ಯಕ್ಷ ಎಸ್‌ಎಫ್‌ಎನ್ ಗಾಜಿಗೌಡ್ರ, ಮುಖ್ಯೋಪಾಧ್ಯಾಯ ಕೆಂಚನಗೌಡ್ರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಿಸಿ ರಸ್ತೆ ಕಾಮಗಾರಿಗೆ ಭೂಮಿಪೂಜೆ

ಗುತ್ತಲ: ಸಮೀಪದ ನೆಗಳೂರ ಗ್ರಾಮದ ಸಂಸ್ಥಾನ ಹಿರೇಮಠದ ಪೂರ್ವ ಮಾರ್ಗದ ಸಿ.ಸಿ.ರಸ್ತೆ ನಿರ್ಮಾಣಕ್ಕೆ ಉಪಸಭಾಪತಿ ರುದ್ರಪ್ಪ ಲಮಾಣಿ ಸೋಮವಾರ ಭೂಮಿ ಪೂಜೆ ನೇರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಅವರು ಶ್ರೀ ಮಠದ ಜಾತ್ರಾ ಮಹೊತ್ಸವ ಹಾಗೂ ಮಹಾ ರಥೋತ್ಸವ ಕಾರ್ಯಕ್ರಮಗಳ ಪೂರ್ವ ತಯಾರಿ ಶ್ರೀಮಠದ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾರ್ಗದರ್ಶನದಲ್ಲಿ ಭರದಿಂದ ಸಾಗುತ್ತಿದೆ. ಈ ಹಿನ್ನೆಲೆಯಲ್ಲಿ ಶ್ರೀಮಠದ ಪೂರ್ವ ಮುಂಭಾಗದಲ್ಲಿರುವ ರಸ್ತೆಯನ್ನು ಸಿ.ಸಿ. ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲಾಗುವುದು. ಈಗಾಗಲೇ ಸಿ.ಸಿ.ರಸ್ತೆ ನಿರ್ಮಾಣಕ್ಕೆ ಅನುಮೋದನೆ ದೊರಕಿದ್ದು ಶೀಘ್ರವಾಗಿ ರಸ್ತೆ ನಿರ್ಮಾಣ ಕಾರ್ಯ ಮುಗಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ತಾಲೂಕು ಅಧ್ಯಕ್ಷ ಎಂ.ಎಂ. ಮೈದೂರ, ಕೆ.ಎಂ. ಮೈದೂರ, ಕಾಂತೇಶರೆಡ್ಡಿ ಶೆಟ್ಟೆಪ್ಪನವರ, ಗುರನಾಥ ಕಮತರ, ಸಿದ್ದಮಲ್ಲಪ್ಪ ಬಾಲಣ್ಣನವರ, ಭರಮಣ್ಣ ದೊಡ್ಡೀರಪ್ಪನವರ, ನಿಂಗಪ್ಪ ಹಳ್ಳಾಕಾರ, ರೇವಣೆಪ್ಪ ಕಿವುಡಿ, ದೊಡ್ಡಬಸನಗೌಡ ಸುಕುಳಿ, ನಿಸಾರಅಹ್ಮದ್ ಮುಲ್ಲಾ, ನಾಗಪ್ಪ ಸನದಿ, ಚಂದ್ರಪ್ಪ ಸಪ್ಪೀನ್, ಮಾಲತೇಶ ಬಾಲಣ್ಣನವರ, ಬಸವರಾಜ ದೊಡ್ಡೀರಪ್ಪನವರ, ಮಲ್ಲರೆಡ್ಡಿ ಅನ್ವೇರಿ ಸೇರಿದಂತೆ ಗ್ರಾಮಸ್ಥರಿದ್ದರು.



ಗುತ್ತಲ: ಸಮೀಪದ ನೆಗಳೂರ ಗ್ರಾಮದ ಸಂಸ್ಥಾನ ಹಿರೇಮಠದ ಪೂರ್ವ ಮಾರ್ಗದ ಸಿ.ಸಿ.ರಸ್ತೆ ನಿರ್ಮಾಣಕ್ಕೆ ಉಪಸಭಾಪತಿ ರುದ್ರಪ್ಪ ಲಮಾಣಿ ಸೋಮವಾರ ಭೂಮಿ ಪೂಜೆ ನೇರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ತಾಲೂಕು ಅಧ್ಯಕ್ಷ ಎಂ.ಎಂ. ಮೈದೂರ, ಕೆ.ಎಂ. ಮೈದೂರ, ಕಾಂತೇಶರೆಡ್ಡಿ ಶಟ್ಟೆಪ್ಪನವರ ಇತರರು ಇದ್ದರು.

ಸಂಸದ ಬಸವರಾಜ ಬೊಮ್ಮಾಯಿ ಸಲಹೆ

ಜನರಲ್ಲಿ ರಾಮ್ ಜಿ ಜಾಗೃತಿ ಮೂಡಿಸಿ

ಹಾವೇರಿ: ಮನರೇಗಾ ಹೆಸರಲ್ಲಿ ಗ್ರಾಮೀಣ ಭಾಗದಲ್ಲಿ ಆಗುತ್ತಿರುವ ಭ್ರಷ್ಟಾಚಾರ ತಡೆಗೆ ವಿಬಿಜಿ ರಾಮ್ ಜಿ ಯೋಜನೆ ಪೂರಕವಾಗಿದೆ. ಈ ಬಗ್ಗೆ ಜನರಿಗೆ ಜಾಗೃತಿ ಮೂಡಿಸಿ ಗ್ರಾಮಗಳನ್ನು ಸುರಾಜ್ಯ ಮಾಡಲು ಎಲ್ಲರೂ ಶ್ರಮಿಸಬೇಕೆಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಶಿವಬಸವ ಕಲ್ಯಾಣ ಮಂಟಪದಲ್ಲಿ ಸೋಮವಾರ ಜಿಲ್ಲಾ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ವಿಬಿ -ಜಿ ರಾಮ್ ಜಿ ಜನ ಜಾಗರಣ, ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ, ಈ ಕಾರ್ಯಕ್ರಮ ಮೊದಲು ಕೂಲಿಗಾಗಿ ಕಾಳು ಯೋಜನೆ ಇತ್ತು. ಆಗ ಕೂಲಿ ಮಾಡದೇನೆ ಕೂಲಿ ಪಡೆಯಲಾಗುತ್ತಿತ್ತು. ಗುಲ್ಬಗಾ ಜಿಲ್ಲೆಯಲ್ಲಿ ಹಿಂದಿನ ಸಿಎಂ ವಿರೇಂದ್ರ ಪಾಟೀಲ ಅವರ ಹೆಸರಿನಲ್ಲಿ ಲಾಭ ತೆಗೆದುಕೊಂಡಿದ್ದರು. ಆಮೇಲೆ ರೋಜಗಾರ, ಜವಾಹರ ರೋಜಗಾರ ಆಯಿತು. 2004ರಲ್ಲಿ ಚುನಾವಣೆ ವೇಳೆ ಮಹಾತ್ಮಾ ಗಾಂಧಿ ಹೆಸರಿಟ್ಟು ಈಗ 25 ವರ್ಷ ಆಗಿದೆ. ಆದಾಗ್ಯೂ ಗಾಮೀಣ ಪ್ರದೇಶದ ಅಭಿವೃದ್ಧಿ ಏಕೆ ಆಗಿಲ್ಲ, ನಿರುದ್ಯೋಗವೂ ಕಡಿಮೆಯಾಗಿಲ್ಲ, ಹೀಗಾಗಿ ಇದನ್ನು ಆಮೂಲಾಗ್ರ ಬದಲಾವಣೆ ಮಾಡಬೇಕಿದೆ. ಮನರೇಗಾ ಹೆಸರಲ್ಲಿ ಬಡವರ ಹೊಟ್ಟೆಯ ಮೇಲೆ ಹೊಡೆಯಲಾಗುತ್ತಿದೆ. ಕೂಲಿಕಾರರಿಗೆ ಅನ್ಯಾಯ ಮಾಡಲಾಗುತ್ತಿದೆ ಎಂಬುದನ್ನರಿತು ಪ್ರಧಾನಿ ಮೋದಿ ಅಮೂಲಾಗ್ರ ಬದಲಾವಣೆ ತಂದಿದ್ದಾರೆ ಎಂದರು.

ಭ್ರಷ್ಟಾಚಾರ ನಿಯಂತ್ರಣ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಇದನ್ನು ಜಾರಿಗೆ ತಂದಾಗ ದೇಶದ ಬಜೆಟ್ 30ಸಾವಿರ ಕೋಟಿ ಇತ್ತು. ಈಗ 1.30ಲಕ್ಷ ಕೋಟಿ ಆಗಿದೆ. ನರೇಂದ್ರ ಮೋದಿ ಬಂದ ಮೇಲೆ ಈ ಯೋಜನೆಗೆ ಸರಾಸರಿ ಪ್ರತಿ ವರ್ಷ 1ಲಕ್ಷ ಕೋಟಿ ರೂ. ಕೊಡುತ್ತಿದ್ದಾರೆ. ಊರಿನ ಆಸ್ತಿ ನಿರ್ಮಾಣ ಆಗಬೇಕು.



ಬೆಂಗಳೂರಿನಲ್ಲಿ ಸರ್ಕಾರದ ಸಂಜಯಗಾಂಧಿ ಆಸ್ಪತ್ರೆ ಇದೆ. ಆದರೆ ಈ ದೇಶಕ್ಕೆ, ಸಮಾಜಕ್ಕೆ ಸಂಜಯಗಾಂಧಿ ಕೊಡುಗೆ ಏನು? ಈ ಸರ್ಕಾರದಲ್ಲಿ ಅಭಿವೃದ್ಧಿಗೆ ಹಣವಿಲ್ಲ. ನರೇಗಾ ಅಡಿ ರಾಜ್ಯದ ಪಾಲು ಶೇ.10ಇತ್ತು. ಅದನ್ನು ಜಿರಾಮ್‌ಜಿ ಅಡಿ ಶೇ.40ಕ್ಕೆ ಹೆಚ್ಚಿಸಲಾಗಿದೆ. ಇದು ಹೆಚ್ಚಿನ ಹೊಣೆಗಾರಿಕೆ ಅಲ್ಲವೇ? ರಾಜ್ಯ ಸರ್ಕಾರದ ಬಳಿ ಹಣವಿಲ್ಲ ಎಂಬ ಕಾರಣಕ್ಕೆ ಯೋಜನೆಯನ್ನೇ ಕಾಂಗ್ರೆಸ್ ವಿರೋಧಿಸುತ್ತಿದೆ. ಈ ಬಗ್ಗೆ ಜನರಲ್ಲಿ ಸರಿಯಾದ ಜಾಗೃತಿ ಮೂಡಿಸುವ ಹೊಣೆ ಬಿಜೆಪಿ ಕಾರ್ಯಕರ್ತರ ಮೇಲಿದೆ.

■ ಬಿ.ಸಿ. ಪಾಟೀಲ, ಮಾಜಿ ಸಚಿವರು

ಜನರಿಗೆ ಉದ್ಯೋಗ ಸಿಗಬೇಕು ಎನ್ನುವ ಗುರಿ ಇತ್ತು. ಆ ಗುರಿ ಮುಟ್ಟಲಾಗುತ್ತಿಲ್ಲ, ಭ್ರಷ್ಟಾಚಾರ ಎಗ್ಗಿಲ್ಲದೇ ನಡೆಯುತ್ತಿದೆ. ಇದಕ್ಕೆಲ್ಲಾ ಏಜೆಂಟರಾಗಿದ್ದಾರೆ. ನರೇಗಾ ಹೆಚ್ಚಿನ ಮಾನವ ದಿನಗಳ ಸೃಜನೆಗೆ ಪ್ರಶಸ್ತಿ ಪಡೆದ ಬೆಳಗಾವಿ, ಗುಲ್ಬರ್ಗಾದಲ್ಲಿ ನರೇಗಾ ಅಕ್ರಮ ಪತ್ತೆ ಹಚ್ಚಿ ಸಿಬಿಐ ತನಿಖೆ ನಡೆಸಲಾಯಿತು. ಕಾಂಗ್ರೆಸ್ ಅಧಿಕಾರದಲ್ಲಿ ಪಿಡಿಒ, ತಾಲೂಕಾ ಅಧಿಕಾರಿ, ಏಜೆಂಟ್ ಎಲ್ಲರಿಗೂ ಪಾಲು ಸಿಗುತ್ತಿತ್ತು ಹೀಗಾಗಿ ಅದನ್ನು ಆಮೂಲಾಗ್ರ ಬದಲಾವಣೆ ಮಾಡಲು ಕೂಲಿಕಾರರ ಫೋಟೊ, ಬಯೊಮೆಟ್ರಿಕ್ ಸಿಂಕ್ ಮಾಡಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಪಿಎಂ ಆಯುಷ್ಮಾನ್ ಕೈಬಿಟ್ಟು ಸಿಎಂ ಆರೋಗ್ಯ ಯೋಜನೆ ತಂದರು. ಎನ್‌ಇಪಿ ವಿರೋಧಿಸಿ ಎಸ್‌ಇಪಿ ಎಂದರು, ಆದರೆ ಎರಡನ್ನೂ ಜಾರಿಗೆ ತರಲಿಲ್ಲ. ಪಿಎಂ ಪೋಷಣ್ ಅಡಿ ವರ್ಷ 500 ಕೋಟಿ ರೂ. ಬರುತ್ತದೆ. ಅದನ್ನು ಸಿಎಂ ಪೋಷಣ್ ಅಂತ ಹೇಳಿ ಖಾಸಗಿಯವರ ಮೂಲಕ ದುಡ್ಡು ತಿನ್ನುವ ಕೆಲಸ ಮಾಡುತ್ತಿದ್ದಾರೆ. ಜನೌಷಧಿ ಕೇಂದ್ರಗಳನ್ನು ಮುಚ್ಚುವ ಕೆಲಸ ಮಾಡಿದ್ದರು. ಅದಕ್ಕೆ ಹೈಕೋರ್ಟ್ ಛೀಮಾರಿ ಹಾಕಿತು, ಈಗ ವಿಜಿ ಜಿ ರಾಮ್ ಜಿ ಯೋಜನೆ ವಿರೋಧ ಮಾಡುತ್ತಿದ್ದಾರೆ ಎಂದರು.

ಈ ಜಿಲ್ಲಾ ಬಿಜೆಪಿ ಅಧ್ಯಕ್ಷ ವಿರುಪಾಕ್ಷಪ್ಪ ಬಳ್ಳಾರಿ, ವಿಪ ಸದಸ್ಯ ಎಸ್.ವಿ. ಸಂಕನೂರ, ಮಾಜಿ ಶಾಸಕರಾದ ಶಿವರಾಜ ಸಜ್ಜನರ, ಅರುಣಕುಮಾರ ಪೂಜಾರ, ಮುಖಂಡ ಗವಿಸಿದ್ದಪ್ಪ ದ್ಯಾಮಣ್ಣವರ ಮಾತನಾಡಿದರು. ಭರತ ಬೊಮ್ಮಾಯಿ, ಭೋಜರಾಜ ಕರೂದಿ, ಕಿರಣ ಕೊಳ್ಳಿ, ಮಾರುತಿ ಗೊರವರ, ಬಸವರಾಜ ಕೋಳಿವಾಡ ಮತ್ತಿತರರು ಇದ್ದರು.

ಮಕ್ಕಳ ಕನಸಿಗೆ ಪೋಷಕರು ಆಸರೆಯಾಗಲಿ

ಹಾವೇರಿ: ಕನಸುಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಮಕ್ಕಳಿಗೆ ಬಿಡಬೇಕು. ಮುಂದೆ ಮಕ್ಕಳೇ ತಮ್ಮ ಗುರಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಪೋಷಕರೇ ಮಕ್ಕಳ ನಿರ್ಧಾರ ತೆಗೆದುಕೊಳ್ಳುವುದು ತಪ್ಪು. ಪೋಷಕರು ಮಕ್ಕಳ ಕನಸುಗಳನ್ನು ಸಾಕಾರಗೊಳಿಸುವಲ್ಲಿ ಆಸರೆಯಾಗಬೇಕೆ ಹೊರತು ಹೊರೆಯಾಗಬಾರದು ಎಂದು ಶೇಗುಣಿಸಿ ವಿರಕ್ತಮಠದ ಡಾ.ಮಹಾಂತಪ್ರಭು ಸ್ವಾಮೀಜಿ ಹೇಳಿದರು.

ನಗರದ ಸಿ.ಡಿ. ಹಾವೇರಿ ವಿದ್ಯಾಸಂಸ್ಥೆಯ ಅನನ್ಯ ಇಂಟರ್‌ನ್ಯಾಷನಲ್ ಸ್ಕೂಲ್ ನಲ್ಲಿ ಹಮ್ಮಿಕೊಂಡಿದ್ದ ಸಂತರೊಂದಿಗೆ ಸಂವಾದ-2026 ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳು ಮೊಬೈಲ್‌ಗೀಳಿಗೆ ಹೊಂದಿಕೊಂಡು ಬಿಟ್ಟಿದ್ದಾರೆ. ಮಕ್ಕಳೆದುರು ಪೋಷಕರು ಮೊಬೈಲ್ ಹಿಡಿದುಕೊಂಡು ಕುಳಿತರೆ ಅವರು ಮೊಬೈಲ್‌ಗಳಿಗೆ ಅವಲಂಬಿತರಾಗುತ್ತಾರೆ. ಮಕ್ಕಳು ಪೋಷಕರನ್ನು ನೋಡಿ ಅನುಸರಿಸುತ್ತಾರೆ. ತಂದೆ ತಾಯಿಗಳು ಮಾಡುವ ಕೆಲಸವನ್ನು ನೋಡಿ ಕಲಿಯುತ್ತಾರೆ. ಹಾಗಾಗಿ ಪೋಷಕರಾಗಲಿ ಮಕ್ಕಳಾಗಲಿ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಮಕ್ಕಳ ಜತೆಗೆ ಹೆಚ್ಚು ಸಮಯವನ್ನು ಕಳೆಯಬೇಕು ಎಂದರು.

ಆರೋಗ್ಯ ಮುಖ್ಯ: ಮಕ್ಕಳು ಬೆಳಗ್ಗೆ ಸೂರ್ಯೋದಯಕ್ಕಿಂತ ಮೊದಲು ಎದ್ದೇಳುವುದನ್ನು ರೂಢಿಸಿಕೊಳ್ಳಬೇಕು. ಮಕ್ಕಳು ಸೇವಿಸುವ ಆಹಾರ ಪದ್ಧತಿ ಚೆನ್ನಾಗಿದ್ದರೆ ಶರೀರದ ಆರೋಗ್ಯವೂ ಚೆನ್ನಾಗಿರುತ್ತದೆ. ಬೆಟ್ಟದ ನೆಲ್ಲಿಕಾಯಿ ಜ್ಯೂಸ್‌ನ್ನು 21 ದಿನ ಸೇವಿಸಬೇಕು. ಮಕ್ಕಳ ಚಿಂತನೆಗಳು ಉತ್ತಮವಾಗಿರಬೇಕು. ಹಾಗಿದ್ದಾಗ ಒಳ್ಳೆಯ ಮಕ್ಕಳಾಗಲು ಮತ್ತು ಉಜ್ವಲ ಭವಿಷ್ಯವನ್ನು ರೂಢಿಸಿಕೊಳ್ಳಲು ಸಾಧ್ಯ. ಶಿಸ್ತು, ಸಂಯಮ, ನಿರಂತರ ಅಧ್ಯಯನ, ನಿರಂತರ ಕಲಿಕೆ, ಪುನರ್‌ಮನನದ ಪ್ರಕ್ರಿಯೆ ಶ್ರದ್ಧೆಯಿಂದ ಕೂಡಿದಾಗ ಓದಿರುವ ವಿಷಯ ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಬರವಣಿಗೆ ನಿರಂತರವಾಗಿದ್ದರೆ ವೇಗವಾಗಿ ಬರೆಯಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಸಿ.ಡಿ. ಹಾವೇರಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಮಲ್ಲಿಕಾರ್ಜುನ ಹಾವೇರಿ, ಸಂಸ್ಥೆಯ ಕಾರ್ಯದರ್ಶಿ ಸೌಮ್ಯಾ ಹಾವೇರಿ, ಮುಖ್ಯೋಪಾಧ್ಯಾಯ ಶಿವಶಂಕರ ಮೊಟಗಿ, ಕುರುಬಗೊಂಡ ಸಿಆರ್‌ಪಿ ಶಿವಲೀಲಾ ಪಾಟೀಲ, ಉಪ ಪ್ರಾಚಾರ್ಯ ಅಲ್ತಾಫ ಯತ್ನಳ್ಳಿ, ಬಿ.ಶಂಕರ, ಮಲ್ಲಿಕಾರ್ಜುನ ಅಗಡಿ, ಬಸವರಾಜ ಬಿಂಕದಕಟ್ಟಿ ಸೇರಿದಂತೆ ಶಾಲೆಯ ಸಿಬ್ಬಂದಿಗಳು ಇದ್ದರು.



ಅಭಿವೃದ್ಧಿ ಕಾಮಗಾರಿಗೆ ಶಾಸಕ ಮಾನೆ ಚಾಲನೆ

ಹಾನಗಲ್: ತಾಲೂಕಿನ ಶಾಡಗುಪ್ಪಿ ಗ್ರಾಪಂ ವ್ಯಾಪ್ತಿಯಲ್ಲಿ ಒಟ್ಟು 1.88 ಕೋಟಿ ರೂ. ವೆಚ್ಚದಲ್ಲಿ ಕೆರೆ ಸುಧಾರಣೆ, ಸಿಸಿ ರಸ್ತೆ, ಸಿಡಿ, ಗಟಾರ ನಿರ್ಮಾಣ, ರಸ್ತೆ ಅಭಿವೃದ್ಧಿ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಶಾಡಗುಪ್ಪಿ ಗ್ರಾಮದಲ್ಲಿ 1.10 ಕೋಟಿ ರೂ., ಅರಿಷಿಣಗುಪ್ಪಿ ಗ್ರಾಮದಲ್ಲಿ 39.50 ಲಕ್ಷ ರೂ., ಕೊಂಡೋಜಿ ಗ್ರಾಮದಲ್ಲಿ 20 ಲಕ್ಷ ರೂ. ಹಾಗೂ ವಡಗೇರಿ ಗ್ರಾಮದಲ್ಲಿ 19.39 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಮಳೆಗಾಲದ ಆರಂಭದ ಹೊತ್ತಿಗೆ ತಾಲೂಕಿನ ಪ್ರತಿಯೊಂದು ಗ್ರಾಮಗಳಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಮಂಜೂರಾದ 50 ಕೋಟಿ ರೂ. ವೆಚ್ಚದ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ತಾಲೂಕಿನ ಗುಡ್ಡಗಾಡು ಭಾಗಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕು ಎನ್ನುವ ಕೂಗು ಹತ್ತಾರು ವರ್ಷಗಳಿಂದ ಕೇಳಿ ಬರುತ್ತಿತ್ತು. ನರೇಗಲ್, ಕೂಸನೂರು ಏತ ನೀರಾವರಿ ಯೋಜನೆಗೆ 220 ಕೋಟಿ ರೂ. ಅನುದಾನ ಒದಗಿಸುವ ಮೂಲಕ ಗುಡ್ಡಗಾಡು ಭಾಗದ ಗ್ರಾಮಗಳನ್ನು ನೀರಾವರಿ ವ್ಯಾಪ್ತಿಗೆ ಒಳಪಡಿಸಲಾಗುತ್ತಿದೆ ಎಂದು ಈ ಸಂದರ್ಭದಲ್ಲಿ ಶಾಸಕ ಮಾನೆ ತಿಳಿಸಿದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ,

ಪಂಚ ಗ್ಯಾರಂಟಿ ಯೋಜನೆಗಳ ಯಶಸ್ವಿ ಅನುಷ್ಠಾನದ ಜೊತೆಗೆ ಹಾನಗಲ್ ತಾಲೂಕಿನ 7747 ಕುಟುಂಬಗಳಿಗೆ 6 ನೇ ಗ್ಯಾರಂಟಿಯಾಗಿ ಹಕ್ಕುಪತ್ರ ವಿತರಿಸಲಾಗುತ್ತಿದೆ. ಇನ್ನೂ ಮೂರ್ನಾಲ್ಕು ಸಾವಿರ ಕುಟುಂಬಗಳಿಗೂ ಹಕ್ಕುಪತ್ರ ದೊರಕಿಸುವ ಪ್ರಯತ್ನ ನಡೆಸಲಾಗಿದೆ. ಕಳೆದ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ನೀಡಿದ ಭರವಸೆ ಈಡೇರಿಸಲಾಗಿದೆ.

■ ಶ್ರೀನಿವಾಸ ಮಾನೆ, ಶಾಸಕ

ಮುಖಂಡರಾದ ಜಗದೀಶ ಪಡೆಪ್ಪನವರ, ನಾರಾಯಣ ಜಾಲಗಾರ, ಇಂದ್ರಪ್ಪ ಮಕರವಳ್ಳಿ, ರೇಖಾ ಹುಲ್ಮನಿ, ರಾಮಣ್ಣ ಬಾರ್ಕಿ, ಗುಡ್ಡಪ್ಪ ಹರಿಜನ, ಮಂಜು ಮೇಕಾರ್ತಿ, ಚಂದ್ರಪ್ಪ ಸುಂಕದ, ರಮೇಶ ಮೂಡೇರ, ಮೂಕಪ್ಪ ಪೂಜಾರ, ನಿಂಗಪ್ಪ ಗಿರಿಮಲ್ಲಣ್ಣನವರ, ರಾಮಣ್ಣ ಬುಡ್ಡನವರ, ಶೈಲಜಾ ವಡ್ಡರ, ಯಲ್ಲಪ್ಪ ಕುದರಿಸಿದ್ದನವರ, ಶಿವು ತಳವಾರ, ಶಿವಾನಂದ ಶಿಗ್ಗಾಂವಿ, ನಾಗಪ್ಪ ಕಾಡನವರ, ಶಿವು ಭದ್ರಾವತಿ, ರವಿ ದೇಶಪಾಂಡೆ, ನಾಗರಾಜ್ ಕೇಸರಿ, ವಿರುಪಾಕ್ಷಪ್ಪ ಗೆಜ್ಜಿಹಳ್ಳಿ, ನಿಂಗಪ್ಪ ಕೊಂಡೋಜಿ, ಎನ್.ಬಿ.ಗೆಜ್ಜಿಹಳ್ಳಿ ಇದ್ದರು.



ಮಕ್ಕಳ ಸಂತೆಯಲ್ಲಿ ವ್ಯವಹಾರ ಜ್ಞಾನ ಕಲಿತ ವಿದ್ಯಾರ್ಥಿಗಳು

ತಡಸ: ಇಲ್ಲಿನ ಶ್ರೀ ದುಂಡಿ ಬಸವೇಶ್ವರ ಶಾಲೆ ಹಾಗೂ ಶ್ರೀ ಸದ್ಗುರು ಸಿದ್ಧಾರೂಢ ವಿದ್ಯಾಪೀಠದ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ 'ಮಕ್ಕಳ ಸಂತೆ'ಯು ವಿಶೇಷ ಗಮನ ಸೆಳೆಯಿತು. ವಿದ್ಯಾರ್ಥಿಗಳಲ್ಲಿ ಬಾಲ್ಯದಿಂದಲೇ ವ್ಯವಹಾರ ಜ್ಞಾನ, ಲೆಕ್ಕಾಚಾರ ಹಾಗೂ ಸಾಮಾಜಿಕ ಸಂವಹನ ಕೌಶಲಗಳನ್ನು ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ವೈವಿಧ್ಯಮಯ ಮಳಿಗೆಗಳು: ಶಾಲಾ ಆವರಣವು ಅಕ್ಷರಶಃ ಸಂತೆಯಾಗಿ ಮಾರ್ಪಟ್ಟಿತ್ತು. ವಿದ್ಯಾರ್ಥಿಗಳು ತರಕಾರಿ, ಹಣ್ಣುಗಳು, ಸೊಪ್ಪು, ಮನೆಯಲ್ಲಿ ತಯಾರಿಸಿದ ತಿಂಡಿ-ತಿನಿಸುಗಳು ಹಾಗೂ ಶಾಲಾ ಪರಿಕರಗಳ ಮಳಿಗೆಗಳನ್ನು ತೆರೆದಿದ್ದರು.



ವ್ಯವಹಾರ ಚಾತುರ್ಯ: ಕೇವಲ ಪುಸ್ತಕದ ಬದನೆಕಾಯಿಗೆ ಸೀಮಿತವಾಗದೆ, ಗ್ರಾಹಕರನ್ನು ಹೇಗೆ ಸೆಳೆಯಬೇಕು, ಲಾಭ-ನಷ್ಟದ ಲೆಕ್ಕಾಚಾರ ಹಾಗೂ ಹಣದ ನಿರ್ವಹಣೆಯನ್ನು ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕಲಿತರು.

ಗ್ರಾಹಕರ ಮನಗೆದ್ದ ಮಕ್ಕಳು: ಪೋಷಕರು ಹಾಗೂ ಶಿಕ್ಷಕರು ಗ್ರಾಹಕರಾಗಿ ಆಗಮಿಸಿ ಮಕ್ಕಳಿಂದ ವಸ್ತುಗಳನ್ನು ಖರೀದಿಸಿ ಪ್ರೋತ್ಸಾಹಿಸಿದರು. ಮಕ್ಕಳ ಚೌಕಾಸಿ ವ್ಯಾಪಾರ ಮತ್ತು ಉತ್ಸಾಹ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಈಸಮಯದಲ್ಲಿ ಬಂದ ಶಿವಬಸವ ಸ್ವಾಮೀಜಿಗಳು ಹನುಮನಹಳ್ಳಿ ಮಕ್ಕಳನ್ನು ಪ್ರೋತ್ಸಾಹಿಸಿ ಮಕ್ಕಳಿಗೆ ಯುಗದಲ್ಲಿ ಕೇವಲ ಅಂಕ ಗಳಿಕೆಯಷ್ಟೇ ಮುಖ್ಯವಲ್ಲ, ಜೀವನ ನಿರ್ವಹಣೆಗೆ ಬೇಕಾದ ಕೌಶಲಗಳು ಅತಿ ಅಗತ್ಯ. ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ವ್ಯವಹಾರಿಕ ಜ್ಞಾನ ಮೂಡಿಸಲು ಈ 'ಮಕ್ಕಳ ಸಂತೆ' ಒಂದು ಉತ್ತಮ ವೇದಿಕೆಯಾಗಿದೆ ಎಂದು ನುಡಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ರೂಪಾ ಅವರಾದಿ, ಶಿಕ್ಷಕರಾದ ಪ್ರೇಮಾ ಬೆಂಡಿಗೇರಿ, ನಾಗವೇಣಿ, ಪೂಜಾ, ರಾಜೇಶ್ವರಿ, ಲಕ್ಷ್ಮೀ, ಸ್ನೇಹಾ ಹಾಗೂ ವೃಂದ, ಪೋಷಕರು ಹಾಗೂ ಗ್ರಾಮದ ಪ್ರಮುಖರು ಉಪಸ್ಥಿತರಿದ್ದು, ಪುಟ್ಟ ವ್ಯಾಪಾರಿಗಳ ಸಾಹಸಕ್ಕೆ ಬೆನ್ನುತಟ್ಟಿದರು.

ಕೊಂಚ ಇಳಿಕೆ ಕಂಡ ಮೆಣಸಿನ ಕಾಯಿ ದರ

ಬ್ಯಾಡಗಿ: ಪಟ್ಟಣದ ಒಣ ಮೆಣಸಿನಕಾಯಿ ಕೃಷಿ ಉತ್ಪನ್ನ ಮಾರುಕಟ್ಟೆಗೆ ಒಂದುವರೆ ಲಕ್ಷಕ್ಕೂ ಹೆಚ್ಚು ಮೆಣಸಿನಕಾಯಿ ಚೀಲಗಳು ಬಂದಿದ್ದು, ದರದಲ್ಲಿ ಸ್ವಲ್ಪಮಟ್ಟಿಗೆ ಇಳಿಕೆ ಕಂಡಿದೆ.

ಕಳೆದ ವಾರಕ್ಕೆ ಹೋಲಿಸಿದರೆ ಸ್ವಲ್ಪ ಸಾಧಾರಣ ಇಳಿಕೆ ಕಂಡಿದ್ದು, ಗ್ರಾಹಕರು ಸ್ವಲ್ಪ ಮಟ್ಟಿಗೆ ನಿಟ್ಟುಉಸಿರು ಬಿಟ್ಟಿದ್ದಾರೆ . ಕಳೆದ ವಾರಕ್ಕೆ ಹೋಲಿಸಿದರೆ ಕಡ್ಡಿ ಹಾಗೂ ಡಬ್ಬಿ ತಳಿಗಳಲ್ಲಿ ಸಾಕಷ್ಟು ದರದಲ್ಲಿ ಕಡಿಮೆಯಾಗಿದೆ.

ಮಾರುಕಟ್ಟೆಗೆ 1, 54.942 ಮೆಣಸಿನಕಾಯಿ ಚೀಲಗಳು ಬಂದಿದ್ದು, ಬ್ಯಾಡಗಿ ಕಡ್ಡಿ ಮೆಣಸಿನಕಾಯಿ. ಕಳೆದ ವಾರಕ್ಕೆ ಹೋಲಿಸಿದರೆ ದರದಲ್ಲಿ ಏರಿಕೆ, ಕಡಿಮೆ 4.259. ರೂಗಳು 100ಕೆ.ಜಿ. ಸರಾಸರಿ ದರ 100 ಕೆ ಜಿ ಗೆ 47.569 ರೂ ಗಳು. ಅತಿ ಹೆಚ್ಚು,100 ಕೆ ಜಿ ಗೆ 61.869.ರೂ ಗಳು.

ಬ್ಯಾಡಗಿ ಡಬ್ಬಿ: ಕಳೆದ ವಾರಕ್ಕೆ ಹೋಲಿಸಿದರೆ ಈ ವಾರ ಅತಿ ಹೆಚ್ಚು ದರ ಬಂದಿದೆ ಕಡಿಮೆ ಪ್ರತಿ 100 ಕೆಜಿಗೆ 5.329ರೂ ಗಳು. ಸರಾಸರಿ ದರ ಪ್ರತಿ



100 ಕೆಜಿಗೆ 51.009.ರೂ ಗಳು. ಹೆಚ್ಚು ದರ ಪ್ರತಿ 100 ಕೆಜಿಗೆ. 75.189. ರೂ ಗಳು.

ಗುಂಟೂರು ಒಣಮೆಣಸಿಕಾಯಿ ಕಡಿಮೆ ಬಿಳಿಕಾಯಿ ದರ ಪ್ರತಿ 100 ಕೆಜಿಗೆ 1789 ರೂ ಗಳು. ಸರಾಸರಿ ದರ ಪ್ರತಿ 100 ಕೆಜಿಗೆ.14.229. ರೂ ಗಳು. ಅತಿ ಹೆಚ್ಚು ದರ ಪ್ರತಿ 100 ಕೆಜಿಗೆ 18.239. ರೂ ಗಳು.

ಮಹಿಳೆ ನಿಶ್ಚಿಂತೆ ಬದುಕು ಕಟ್ಟಿಕೊಳ್ಳಲು ಲೋಕ ಜ್ಞಾನ ಅವಶ್ಯ

ಬ್ಯಾಡಗಿ: ಮಹಿಳೆಯರ ಸ್ವಾವಲಂಬಿ ಜೀವನ ನಿರ್ವಹಣೆಗೆ ಮಹಿಳಾ ಸಬಲೀಕರಣದಂತಹ ಕಾರ್ಯಕ್ರಮ ಅವಶ್ಯಕ. ಈ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಜ್ಞಾನ ವಿಕಾಸ ಕೇಂದ್ರದ ಕಾರ್ಯಕ್ರಮ ಮಹಿಳೆಯರ ಸ್ವಾವಲಂಬಿ ಮತ್ತು ಸ್ವಾಭಿಮಾನಿ ಬದುಕಿಗೆ ಸಹಕಾರಿ ಎಂದು ಪ್ರಾದೇಶಿಕ ನಿರ್ದೇಶಕರು ಪ್ರಾದೇಶಿಕ ಕಚೇರಿ ಧಾರವಾಡ ದಯಾಶೀಲ ಹೇಳಿದ್ದಾರೆ.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್(ರಿ) ವತಿಯಿಂದ ಪಟ್ಟಣದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಭವನ ಶಿವಪುರ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಮಹಿಳೆ ನಿಶ್ಚಿಂತೆಯಿಂದ ತನ್ನ ಬದುಕು ಕಟ್ಟಿಕೊಳ್ಳಲು ಲೋಕ ಜ್ಞಾನ ಹೊಂದಿರಬೇಕು. ಈ ಕಾರಣದಿಂದ ಮಹಿಳಾ ಜ್ಞಾನ ವಿಕಾಸ ಕೇಂದ್ರ ಮಹಿಳೆಯರಿಗೆ ಶಿಕ್ಷಣ, ಆರೋಗ್ಯ, ನೈರ್ಮಲ್ಯ,



ಸ್ವಯಂ ಉದ್ಯೋಗ ಸೇರಿದಂತೆ ವಿವಿಧ ಸಾಮಾಜಿಕ ಜ್ಞಾನದ ಮಾಹಿತಿ ನೀಡಿ ಜಾಗೃತಿಗೊಳಿಸುವ, ನಿರ್ಗತಿಕರರಿಗೆ ಮನೆ ರಚನೆಯ ವಾತ್ಸಲ್ಯ ಕಾರ್ಯಕ್ರಮ, ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ನಮ್ಮ ಸಮಾಜಕ್ಕೆ ಮಾದರಿ ಎಂದರು.

ಬ್ಯಾಡಗಿ ಪೊಲೀಸ್ ಠಾಣೆ ಉಪನಿರೀಕ್ಷಕರಾದ ಭಾರತಿ ಕುರಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಪೋಕ್ಸೋ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿದ್ದು, ಮಹಿಳೆಯರು ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾಗಿದೆ. ಹೆಣ್ಣು ಮಕ್ಕಳು ವಯಸ್ಸಿಗೆ ಬಾರದೆ ವಿವಾಹ ಮಾಡುವುದರಿಂದ ದೈಹಿಕವಾಗಿ ಸೊರಗುವರು. ಇದರಿಂದ ಅನೇಕ ಕಾಯಿಲೆಗೆ ತುತ್ತಾಗುತ್ತಾರೆ, ಸರ್ಕಾರ 18 ವಯಸ್ಸಿನೊಳಗಿನ ಹೆಣ್ಣು ಮಕ್ಕಳಿಗೆ ವಿವಾಹ ಮಾಡದಂತೆ ಕಾನೂನು ರೂಪಿಸಿದೆ. 18 ವರ್ಷದೊಳಗಿನ ಮಕ್ಕಳಿಗೆ ದ್ವಿಚಕ್ರ ವಾಹನ ನೀಡುವುದು ಅಪರಾಧ. ಆಕಸ್ಮಿಕ ಘಟನೆಗಳು ಸಂಭವಿಸಿದಾಗ ಪೋಷಕರ ಮೇಲೆ ಪ್ರಕರಣ ದಾಖಲು ಹಾಗೂ ದಂಡ ವಿಧಿಸಲಾಗುವುದು. ಇಂದಿನ ಮಕ್ಕಳು ಮೊಬೈಲ್ ಗಳ ಬಳಕೆ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆ ಬಗ್ಗೆ ಮಹಿಳೆಯರು ಮತ್ತು ಪೋಷಕರು ಈ ಸಂಬಂಧ ಗಂಭೀರವಾಗಿ ಆಲೋಚಿಸಬೇಕು ಎಂದು ತಿಳಿಸಿದರು.

ಬಿ.ಕೆ. ಸುರೇಖಾ ಜಿ. ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ ಬ್ಯಾಡಗಿ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಬಸವರಾಜ ಜಗಪುರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕುಟುಂಬದಲ್ಲಿ ನಿರ್ವಹಣೆ ಮತ್ತು ಸ್ವಾಸ್ಥ್ಯ ಸಮಾಜದಲ್ಲಿ ಮಹಿಳೆಯರ ಪಾತ್ರದ ಕುರಿತು ಮಾಹಿತಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಭಿವೃದ್ಧಿ ಇಲಾಖೆಯ ಸುಮಂಗಲ ಈಬುಕ್ಕನವರ್ ನೀಡಿದರು.

ಕಾರ್ಯಕ್ರಮದಲ್ಲಿ ನ್ಯಾಯವಾದಿ ಭಾರತಿ ಕುಲಕರ್ಣಿ, ಹಾವೇರಿ ಜಿಲ್ಲೆಯ ಗೌರವಾನ್ವಿತ ನಿರ್ದೇಶಕರಾದ ಶಿವರಾಯ ಪ್ರಭು. ಜ್ಞಾನ ವಿಕಾಸ ಯೋಜನಾಧಿಕಾರಿ ಸುಧಾ, ಬ್ಯಾಡಗಿ ತಾಲೂಕಿನ ಯೋಜನಾಧಿಕಾರಿ ರಘುಪತಿ ಜಿ, ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಶೋಭಾ, ಮೇಲ್ವಿಚಾರಕರು ಗಣೇಶ್ ನಾಯಕ್, ನೇತ್ರಾವತಿ ಗೌಡ ಕೇಂದ್ರದ ಸೇವಾ ಪ್ರತಿನಿಧಿ ಮತ್ತು ಸದಸ್ಯರು ಉಪಸ್ಥಿತರಿದ್ದರು.

ಕೇಂದ್ರದ ಸದಸ್ಯರಿಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು. ಭಾಗವಹಿಸಿದವರಿಗೆ ಬಹುಮಾನ ವಿತರಣೆಯು ಮಾಡಲಾಯಿತು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತ ಸಂಘದಿಂದ ಪ್ರತಿಭಟನೆ

ಹಾನಗಲ್ಲ: ಪಂಪಸೆಟ್‌ಗೆ ವಿದ್ಯುತ್ ನೀಡುವುದು ಸರ್ಕಾರದ ಕೆಲಸ, ಆರ್ ಆರ್ ನಂಬರ್ ಕೊಟ್ಟು ನಮ್ಮ ಪಂಪಸೆಟ್ಟಿಗೆ ವಿದ್ಯುತ್ ಕೊಡ್ರಿ, ಇಲ್ಲವೇ ಕೆಲಸ ಮಾಡಲಾಗದ ಅಧಿಕಾರಿ, ಜನಪ್ರತಿನಿಧಿಗಳು ಜಾಗಾ ಖಾಲಿ ಮಾಡಿ ಎಂದು ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಗುಡುಗಿದರು.

ಸೋಮವಾರ ಹಾನಗಲ್ಲಿನ ಮಹಾತ್ಮಾಗಾಂಧಿ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಹಾನಗಲ್ಲ ತಾಲೂಕು ಘಟಕ ಆಯೋಜಿಸಿದ ಪ್ರತಿಭಟನಾ ಮೆರವಣಿಗೆ ಉದ್ದೇಶಿಸಿ ಸರ್ಕಾರ ಹಾಗೂ ಹೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದರು.

ರೈತರ ಸಂಕಷ್ಟಕ್ಕೆ ಸ್ಪಂದಿಸದ ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ನಮ್ಮ ಮನವಿಗಳು ಲೆಕ್ಕಕ್ಕೆ ಬರುತ್ತಿಲ್ಲ, ನಾವು ದುರ್ಬಲರಲ್ಲ ಕಾದು ನೋಡುತ್ತಿದ್ದೇವೆ. ಈಗ ನಮ್ಮ ಸಹನೆ



ಮೀರಿದೆ. ಹತ್ತು ಹಲವು ಬಾರಿ ವಿದ್ಯುತ್ ಸಮಸ್ಯೆಗಳ ಬಗ್ಗೆ ಗಮನ ಸೆಳೆದರೂ ಕೂಡ ರೈತರ ಸಹಾಯಕ್ಕೆ ಬಾರದ ಈ ಸರ್ಕಾರ ಹಾಗೂ ಅಧಿಕಾರಿಗಳ ನಡುವಳಿಕೆಯ ಅರ್ಥವೇನು? ವಿದ್ಯುತ್ ಕೊರತೆಯಿಂದ ನೀರಿಲ್ಲದೆ ಬೆಳೆ ಒಣಗುತ್ತಿವೆ. ಒಣಗಿದ ಬೆಳೆಗೆ ಪರಿಹಾರ ಕೊಡಿ. ಕೇಂದ್ರ ಸರ್ಕಾರದ ಖಾಸಗೀಕರಣ, ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಯಿಂದ ರೈತ ಹೈರಾಣಾಗಿದ್ದಾನೆ. ಇದನ್ನು ಕಣ್ತೆರೆದು ನೋಡದ ಜನಪ್ರತಿನಿಧಿಗಳು ನಮಗೆ ಬೇಕಾಗಿಲ್ಲ ಎಂದು ಆಕ್ರೋಶ ಹೊರಹಾಕಿದರು.

ಜಿಲ್ಲಾಧ್ಯಕ್ಷ ರಾಮಣ್ಣ ಕೆಂಚೆಳ್ಳರ, ತಾಲೂಕು ಅಧ್ಯಕ್ಷ ಮರಿಗೌಡ ಪಾಟೀಲ ಮಾತನಾಡಿದರು. ತಹಶೀಲ್ದಾರ್ ಎಸ್.ರೇಣುಕಾ ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು.

ಹೆಸ್ಕಾಂ ಜಿಲ್ಲಾ ಅಧೀಕ್ಷಕ ನಾರಾಯಣ ಕಳ್ಳೀಮನಿ, ಇ.ಇ. ಸಿ.ಬಿ.ಹೊಸಮನಿ, ಎಇಇ ವಾಗೀಶ ಕಡತಿ, ಹಾನಗಲ್ಲ ಎಇಇ ವಿ.ಎಸ್. ಮರಿಗೌಡರ, ಕೆಪಿಟಿಸಿಎಲ್ ಅಧಿಕಾರಿ ವಿಜಯ ಜೋಶಿ ಸಭೆಯಲ್ಲಿದ್ದು ರೈತರ ಪ್ರಶ್ನೆಗಳಿಗೆ ಉತ್ತರಿಸಲಾಗದೇ ಅಸಹಾಯಕತೆ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷ ಅಡಿವೆಪ್ಪ ಆಲದಕಟ್ಟಿ, ಎಚ್.ಎಚ್.ಮುಲ್ಲಾ, ಗೌರವಾಧ್ಯಕ್ಷ ಮಲ್ಲೇಶಪ್ಪ ಪರಪ್ಪನವರ, ವಾಸುದೇವ ಕಮಾಟಿ, ರುದ್ರಪ್ಪ ಹಣ್ಣಿ, ಮಹೇಶ ವಿರುಪಣ್ಣನವರ, ಸೋಮಪ್ಪ ಜಡೆಗೊಂಡರ್, ಶ್ರೀಕಾಂತ ದುಂಡಣ್ಣನವರ, ಉಮೇಶ ಮೂಡಿ, ಶ್ರೀಧರ ಮಲಗುಂದ, ಎಂ.ಎಂ.ಬಡಗಿ, ಶಂಕರಗೌಡ ಪಾಟೀಲ, ಮಹಲಿಂಗಪ್ಪ ಅಕ್ಕಿವಳ್ಳಿ ಮೊದಲಾದವರು ಇದ್ದರು.

ಕೆಡಿಪಿ ಮುಂದಕ್ಕೆ

ರೈತರ ಪ್ರತಿಭಟನೆ ಕಾರಣವಾಗಿ ಹಾನಗಲ್ಲ ಶಾಸಕರ ನೇತೃತ್ವದಲ್ಲಿ ನಡೆಯಬೇಕಾಗಿದ್ದ ಫೆ.23 ರ ಕೆಡಿಪಿ ಸಭೆ ಮುಂದೂಡಿಕೆಯಾಯಿತು. ಇದರ ಬೆನ್ನಲ್ಲೆ ರೈತ ಪ್ರತಿನಿಧಿಗಳೇ ಸಂಘಟನೆಯ ಶಕ್ತಿಯನ್ನು ಅರ್ಥ ಮಾಡಿಕೊಳ್ಳಿ. ಹೋರಾಟಕ್ಕೆ ಇರುವ ಪರಿಣಾಮದ ಅರಿವು ನಿಮಗಿರಲಿ ರೈತ ನಾಯಕರು ತಮ್ಮ ಹೋರಾಟದ ಪರಿಣಾಮಗಳನ್ನು ವಿವರಿಸುತ್ತಿದ್ದರು.

ಕಿರುಸುದ್ದಿ

ಜಿಲ್ಲಾ ಕ್ರಿಡಾಂಗಣದಲ್ಲಿ ಕನ್ನಡ ಹಬ್ಬ ಇಂದು

ಬೆಳಗಾವಿ: ಜಿಲ್ಲಾಡಳಿತ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಫೆ. 24 ರಂದು ಸಂಜೆ 6 ಗಂಟೆಗೆ ಜಿಲ್ಲಾ ಕೀಡಾಂಗಣದಲ್ಲಿ 70 ನೇ ಕನ್ನಡ ರಾಜ್ಯೋತ್ಸವ ಕನ್ನಡ ಹಬ್ಬ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮಕ್ಕೆ ಖ್ಯಾತ ಹಿನ್ನೆಲೆ ಗಾಯಕ ವಿಜಯ ಪ್ರಕಾಶ ಹಾಗೂ ಖ್ಯಾತ ಹಿನ್ನೆಲೆ ಗಾಯಕಿ ಅನುರಾಧಾ ಭಟ್ ಆಗಮಿಸಲಿದ್ದಾರೆ. ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆಯ ಸಚಿವ ಹೆಚ್.ಕೆ.ಪಾಟೀಲ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸರಕಾರಿ ಮುಖ್ಯ ಸಚೇತಕ ಅಶೋಕ ಪಟ್ಟಣ, ಕರ್ನಾಟಕ ಸರಕಾರದ ವಿಶೇಷ ಪ್ರತಿನಿಧಿ ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷರಾದ ಭರಮಗೌಡ ಕಾಗೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಉಪ್ಪಾರ ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ. ರಾಜ್ಯ ಸಭೆ ಸಂಸದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕ ಸಭಾ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕ ಸಭಾ ಸಂಸದರಾದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕ ಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ. ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ವಿವಿಧ ಕಾಮಗಾರಿಗೆ ಭೂಮಿಪೂಜೆ ಇಂದು


ಕುಡಚಿ: ರಾಯಬಾಗ ತಾಲೂಕಿನ ಕುಡಚಿ ಮತಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಫೆ.24 ಮಂಗಳವಾರ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಚಾಲನೆ ನೀಡಲಿದ್ದಾರೆ. ಮತಕ್ಷೇತ್ರದ ಅಳಗವಾಡಿ ಗ್ರಾಮದಲ್ಲಿ 1 ಕೋಟಿ ಅನುದಾನದಲ್ಲಿ ಅಳಗವಾಡಿ-ಬಸ್ತವಾಡ ರಸ್ತೆ ಸುಧಾರಣೆ, ಮೊರಬ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಐವತ್ತು ಲಕ್ಷ ಅನುದಾನದಡಿ ಸಿ.ಸಿ.ರಸ್ತೆ ಹಾಗೂ ಚರಂಡಿ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿ, ಸುಟ್ಟಟ್ಟಿ ಗ್ರಾಮದ ಕೆಎಚ್‌ಪಿಎಸ್ ಶಾಲೆಯ 13ಲಕ್ಷ ಅನುದಾನದಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿ, ಕುಡಚಿ ಪಟ್ಟಣದ ಪರಿಶಿಷ್ಟ ಪಂಗಡಗಳ ಜನವಸತಿ ಕಾಲೋನಿಗಳಲ್ಲಿ ಐವತ್ತು ಲಕ್ಷ ಅನುದಾನದಲ್ಲಿ ಮೂಲಭೂತ ಸೌಕರ್ಯ ಸಿಸಿ ರಸ್ತೆ, ಡಾಂಬರೀಕರಣ ರಸ್ತೆ ಕಾಮಗಾರಿ, ಹಾಲಶಿರಗೂರದಿಂದ ವ್ಹಾಯಾ ಪಾಟೀಲ ವಸತಿಯಿಂದ ಚಿಂಚಲಿ ವರೆಗೆ 2 ಕೋಟಿ ಅನುದಾನದಲ್ಲಿ ರಸ್ತೆ ಸುಧಾರಣೆ ಹಾಗೂ ಖೇಮಲಾಪೂರ ಗ್ರಾಮದ ಚಿಂಚಲಿ ರಸ್ತೆಯಿಂದ ಸಂಜು ಮಾಂಗ ಮನೆಯ ವರೆಗೆ ಹತ್ತು ಲಕ್ಷ ಅನುದಾನದಲ್ಲಿ ಸಿ.ಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಿದ್ದಾರೆ.

ಜಿಲ್ಲಾ ಯೋಜನಾ ಸಮಿತಿ ಸಭೆ ಮುಂದೂಡಿಕೆ

ಬೆಳಗಾವಿ: ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಇವರ ಅಧ್ಯಕ್ಷತೆಯಲ್ಲಿ ಫೆ. 24 ರಂದು ಬೆಳಿಗ್ಗೆ 10.30 ಗಂಟೆಗೆ ಸುವರ್ಣ ವಿಧಾನ ಸೌಧದ ಕೊಠಡಿ ಸಂಖ್ಯೆ 354 ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಯೋಜನಾ ಸಮಿತಿ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಗಿರಿಯಪ್ಪ ಭಜಂತ್ರಿ



ಹುಬ್ಬಳ್ಳಿ: ಅಳ್ನಾವರ ತಾಲೂಕಿನ ಪೂರ ಗ್ರಾಮದ ಕೃಷಿಕರಾಗಿದ್ದ ಗಿರಿಯಪ್ಪ ರಾಮಚಂದ್ರ ಭಜಂತ್ರಿ (90) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಯರಗಟ್ಟಿ: ಗ್ರಾಮದ ರಾಯನಗೌಡ್ರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಶಾಸಕ ವಿಶ್ವಾಸ ವೈದ್ಯ ಅವರನ್ನು ಸನ್ಮಾನಿಸಿದರು. ಮುರಘೇಂದ್ರ ಸ್ವಾಮೀಜಿ, ದೀಪಕ್ ಸ್ವಾಮಿ, ಶಂಕರಗೌಡ ಪಾಟೀಲ, ಈರಣ್ಣ ಹುದ್ದಾರ ಇದ್ದರು.

ಇಂದು ಪುತ್ಥಳಿ, ಸಭಾಂಗಣ ಉದ್ಘಾಟನೆ

ಯರಗಟ್ಟಿ: ಸ್ವಾತಂತ್ರ್ಯ ಹೋರಾಟಗಾರ ತಲ್ಲೂರ ರಾಯನಗೌಡ್ರ ಸಾಮಾಜಿಕ ಕೊಡುಗೆ ಅಪಾರ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು. ಸಮೀಪದ ತಲ್ಲೂರ ಗ್ರಾಮದಲ್ಲಿ ರಾಯನಗೌಡರ ವಂಶಸ್ಥರು 2ಲಕ್ಷ ವೆಚ್ಚದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪುತ್ಥಳಿ ಹಾಗೂ ಸಭಾಂಗಣವನ್ನು ಉದ್ಘಾಟಿಸಿ ಮಾತನಾಡಿ, ಕಿತ್ತೂರಿನ ಇತಿಹಾಸವನ್ನು ಸಂರಕ್ಷಿಸಲು ಇಂಗ್ಲೆಂಡವರೆಗೆ ತೆರಳಿ ದಾಖಲೆಗಳನ್ನು ಸಂಗ್ರಹಿಸಿದ ಅವರ ಕಾರ್ಯ ದೇಶ ಭಕ್ತಿಯ ಅಪೂರ್ವ ಉದಾರಣೆಯಾಗಿದೆ ಎಂದು ಹೇಳಿದರು. ಮುರಗೋಡ ಮಹಾಂತ ದುರದುಂಡೇಶ್ವರ ಮಠದ ನೀಲಕಂಠ ಸ್ವಾಮೀಜಿ, ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದ ಅವರು, ಜಗತ್ತಿನಲ್ಲಿ ಧರ್ಮವಿಲ್ಲದ ಜಾಗವಿಲ್ಲ ಧರ್ಮಾಜನೆಯಿಲ್ಲದ ದೇಶಗಳಿಲ್ಲ ಮನುಷ್ಯನ ಅಂತರಂಗದ ವಿಕಾಸಕ್ಕೆ ಧಾರ್ಮಿಕ ಸಂಸ್ಕಾರ ಅಗತ್ಯವಾಗಿದೆ ಎಂದರು. ಮಮದಾಪೂರದ ಮೌನ ಮಲ್ಲಿಕಾರ್ಜುನ ಸ್ವಾಮೀಜಿ, ತೊರಗಲ್ಲಮಠದ ದೀಪಕ್ ಸ್ವಾಮಿ ಸಾನಿಧ್ಯ ವಹಿಸಿದ್ದರು. ವೇ.ಮೂ ಪ್ರಸನ್ ಶಾಸ್ತ್ರೀ, ತಹಶೀಲ್ದಾರ ಎಮ್.ವ್ಹಿ. ಗುಂಡಪ್ಪಗೋಳ, ಗ್ರಾಪಂ ಮಾಜಿ ಉಪಾಧ್ಯಕ್ಷ ಬಾಬುಗೌಡ ಅಣ್ಣಿಗೇರಿ, ಪಿಡಿಒ ವಿಜಯಕುಮಾರ ಅಂಗಡಿ, ಮುಖಂಡ ಶಂಕರಗೌಡ ಪಾಟೀಲ, ಈರಣ್ಣ ಹುದ್ದಾರ, ಬಸವರಾಜ ಬಡಿಗೇರ, ಬಸವರಾಜ ಪೂಜೇರ, ಶಂಕರ ಬಡಿಗೇರ, ಯು.ಡಿ.ತಲ್ಲೂರ, ಮುತ್ತನಗೌಡ ನಾಯ್ಕರ, ಎಂ.ವಿ.ಉಪ್ಪಿನ, ರವಿ ಜೋಲಾಪೂರಿ, ಶಶಿದರ ತಳವಾರ, ಸುಭಾನಿ ಕುದರಿ ಮತ್ತಿತರಿದ್ದರು.



ಗೋಕಾಕ: ತಾಲೂಕಿನ ಅಂಕಲಗಿ ಪಟ್ಟಣದ ಶ್ರೀ ಅಡವಿಸಿದ್ದೇಶ್ವರ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದಲ್ಲಿ 1994-95ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಂದ ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಜರುಗಿತು.

ಮನುಷ್ಯತ್ವ ಬೆಳೆಸಿಕೊಂಡಾಗ ಸಮಾಜ ಸುಂದರ: ಸಚಿವೆ

- ಮಹಿಳಾ, ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅಭಿಮತ
- ಬಸ್ತವಾಡದಲ್ಲಿ ರಸ್ತೆ ಕಾಮಗಾರಿ ಹಾಗೂ ದೇವಸ್ಥಾನ ಜೀರ್ಣೋದ್ಧಾರಕ್ಕೆ ಪೂಜೆ

ಬೆಳಗಾವಿ: ಹಿಂದೂ ಧರ್ಮದ ಸಾರವೇ ಮಾನವೀಯತೆ. ನಮ್ಮ ಧರ್ಮವನ್ನು ಅನುಸರಿಸುವುದರ ಜೊತೆಗೆ ಇತರ ಧರ್ಮಗಳನ್ನೂ ಗೌರವಿಸುವುದು ನಮ್ಮ ಸಂಸ್ಕೃತಿ. ಕೇವಲ ದ್ವೇಷದಿಂದ ದೇವರು ಮೆಚ್ಚುವುದಿಲ್ಲ. ಮನುಷ್ಯತ್ವ ಬೆಳೆಸಿಕೊಂಡಾಗಲೇ ಸಮಾಜ ಸುಂದರವಾಗುತ್ತದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಬಸ್ತವಾಡ ಗ್ರಾಮದಲ್ಲಿ 2.80 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿ ಹಾಗೂ 1.18 ಕೋಟಿ ರೂ. ವೆಚ್ಚದಲ್ಲಿ ಕಲ್ಮೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಗ್ರಾಮದ ಎಲ್ಲ ಜಾತಿಯವರೂ ಒಂದಾಗಿ ಉತ್ತಮ ಕಾರ್ಯಗಳಲ್ಲಿ ಭಾಗವಹಿಸುತ್ತಿರುವುದು ಮಾದರಿಯಾಗಿದೆ ಎಂದರು.

ದೊರೆತ ಅವಕಾಶವನ್ನು ಸದುಪಯೋಗ ಮಾಡಿಕೊಂಡು ಕೆಲಸ ಮಾಡುತ್ತಿರುವುದಾಗಿ ಹೇಳಿದ ಸಚಿವೆ, ರಾಜ್ಯದ ಮಂತ್ರಿಯಾಗಿದ್ದರೂ ನಿಮ್ಮ ಪಾಲಿಗೆ ನಾನು ಸಹೋದರಿಯೇ. ಕ್ಷೇತ್ರ ಅಭಿವೃದ್ಧಿಯ ದಾರಿಯಲ್ಲಿ ವೇಗವಾಗಿ ಮುನ್ನಡೆಯುತ್ತಿದೆ. ಸೋಲಿನಲ್ಲಿಯೂ ಕೆಲಸ ಮಾಡಿದ್ದರಿಂದಲೇ ಜನರ ವಿಶ್ವಾಸ ಪಡೆದು ಭಾರೀ ಅಂತರದಿಂದ ಗೆಲುವು ಸಾಧಿಸಿದೆ ಎಂದು ಹೇಳಿದರು.

ಗೃಹ ಲಕ್ಷ್ಮೀ ಯೋಜನೆಯಿಂದ ಮಹಿಳೆಯರಲ್ಲಿ ಸ್ವಾಭಿಮಾನ ಹೆಚ್ಚುತ್ತಿರುವುದನ್ನು ನೋಡುತ್ತಿರುವುದಾಗಿ ಸಂತಸ ವ್ಯಕ್ತಪಡಿಸಿದ ಅವರು, ನಿಮ್ಮ ಸೇವೆ ಮಾಡುವ ಅವಕಾಶ ದೊರೆತಿರುವುದು ನನ್ನ ಭಾಗ್ಯ. ಕ್ಷೇತ್ರದ ಸೇವೆಯನ್ನೇ ದೇವರ ಸೇವೆಯೆಂದು ಭಾವಿಸಿ ಕೆಲಸ ಮಾಡುತ್ತಿದ್ದೇನೆ ಎಂದರು.



ವಿಧಾನ ಪರಿಷತ್ ಸದಸ್ಯ ಚನ್ನರಾಜ್ ಹಟ್ಟಿಹೊಳಿ ಮಾತನಾಡಿ, ನಾವು ಮಾತಿನಲ್ಲಿ ಅಲ್ಲ, ಕೆಲಸದಲ್ಲಿ ನಂಬಿಕೆ ಇಟ್ಟವರು. ಜನರ ಸಮಸ್ಯೆಗಳಿಗೆ ಪರಿಹಾರ ಕೊಡುತ್ತೇವೆ ಯಾರಿಗೂ ಅನ್ಯಾಯವಾಗಲು ಬಿಡಲ್ಲ. ಜಗಳ ಹುಟ್ಟುಹಾಕುವ ರಾಜಕಾರಣ ನಮ್ಮದು ಅಲ್ಲ, ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಧೋರಣೆ ನಮ್ಮದು ಎಂದರು.

ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ, ಸಮಾಜವನ್ನು ಏಕತೆಯಿಂದ ಕಟ್ಟೋಣ. ಲಕ್ಷ್ಮೀ ಹೆಬ್ಬಾಳ್ಕರ್ ದೂರದೃಷ್ಟಿಯ ನಾಯಕಿ, ಕ್ಷೇತ್ರದ ಅಭಿವೃದ್ಧಿಗೆ ಮುಂದಿನ 25 ವರ್ಷದ ಯೋಜನೆ ರೂಪಿಸಿದ್ದಾರೆ. ಕೆರೆಗಳಿಗೆ ನೀರು ತುಂಬಿಸುವಂತಹ ಮೂಲಭೂತ ಕಾಮಗಾರಿಗಳೂ ನಡೆಯುತ್ತಿವೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಚಂದ್ರಕಾಂತ ಪಾಟೀಲ, ಮನೋಹರ ಬಾಂಡಗಿ, ಶಿಲ್ಪಾ ಪಾಟೀಲ, ಮಾಣಿಕ್ ಸಂಕೇಶ್ವರಿ, ಪಿಡಿಒ ಆಶಾ, ನೇಮು ಪಾಟೀಲ, ಗೋಪಾಲ ಕಾಮಾಜ, ಶಿವಾಜಿ ಕಾಕತ್ಕರ್, ಈರಪ್ಪ ಚೌಗುಲೆ, ಬರ್ಮಾ ಗೌಡಕೆಚ್ಚಪ್ಪಗೋಳ, ಬಸೀರ್ ಕಿಲ್ಲೇವಾಲೆ, ವಿಠ್ಠಲ ಪಾಟೀಲ, ಗುಂಡು ಚೌಗುಲೆ, ಕೇಶವ್ ಚೌಗುಲೆ, ಸಮಿರ್ ಸನದಿ, ಅಪ್ಪಯ್ಯ ಅಣ್ಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಚನ್ನಮ್ಮ ಐಕ್ಯಸ್ಥಳ ಸಮಗ್ರ ಅಭಿವೃದ್ಧಿಗೆ ಒತ್ತಾಯ

200 ಕೋಟಿ ರೂ.ಗಳ ಅನುದಾನ ಇಲ್ಲದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

ಬೈಲಹೊಂಗಲ: ವೀರರಾಣಿ ಕಿತ್ತೂರು ಚನ್ನಮ್ಮನ ಐಕ್ಯಸ್ಥಳ, ಜನ್ಮಸ್ಥಳ ಹಾಗೂ ಸಂಸ್ಥಾನ ಪ್ರದೇಶಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಗ್ರವಾಗಿ ಅಭಿವೃದ್ಧಿಪಡಿಸಿ ರಾಷ್ಟ್ರೀಯ ಸ್ಮಾರಕವನ್ನಾಗಿಸಬೇಕು ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಮಹಾಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದರು.

ನಗರದ ವೀರರಾಣಿ ಕಿತ್ತೂರು ಚನ್ನಮ್ಮನ ನವೀಕೃತ ಸಮಾಧಿ ಸ್ಥಳ ಹಾಗೂ ಉದ್ಯಾನವನಕ್ಕೆ ಸೋಮವಾರ ಭೇಟಿ ನೀಡಿ, ಸಮಾಧಿಗೆ ಹೂಮಾಲೆ ಅರ್ಪಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಐತಿಹಾಸಿಕ ಮಹತ್ವದ ಸ್ಥಳದ ಉದ್ಘಾಟನೆ ತರಾತುರಿಯಲ್ಲಿ ನಡೆದಿರುವುದು ನಿರಾಸೆ ಉಂಟುಮಾಡಿದೆ ಎಂದರು.

ಬರುವ ಅಧಿವೇಶನದಲ್ಲಿ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕನಿಷ್ಠ 200 ಕೋಟಿ ರೂ. ಅನುದಾನ ಮೀಸಲಿಡಬೇಕು. ಚನ್ನಮ್ಮನ ಜನ್ಮಸ್ಥಳ ಕಾಕತಿ, ಕಾರ್ಯಕ್ಷೇತ್ರ ಕಿತ್ತೂರು ಹಾಗೂ ಐಕ್ಯಸ್ಥಳ ಬೈಲಹೊಂಗಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು. ಜೊತೆಗೆ ಚನ್ನಮ್ಮನ ಹೆಸರಿನಲ್ಲಿ ಸೈನಿಕ ಶಾಲೆ ಆರಂಭಿಸಿ ರಾಷ್ಟ್ರಮಟ್ಟದ ಗಣ್ಯರ ಸಮ್ಮುಖದಲ್ಲಿ ಲೋಕಾರ್ಪಣೆಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರಾಧಿಕಾರಕ್ಕೆ ಇದುವರೆಗೆ ಕೇವಲ 40-45 ಕೋಟಿ ರೂ. ಮಾತ್ರ ಬಿಡುಗಡೆಯಾಗಿದ್ದು, ಇತರ ಪ್ರಾಧಿಕಾರಗಳಿಗೆ ಹೆಚ್ಚಿನ ಅನುದಾನ ನೀಡಿರುವುದು ಮಲತಾಯಿ ಧೋರಣೆಯಂತೆ ಕಾಣುತ್ತದೆ ಎಂದು ಟೀಕಿಸಿದರು.

ಅಗತ್ಯ ಅನುದಾನ ನೀಡದಿದ್ದರೆ ಬೈಲ ಹೊಂಗಲ, ಕಿತ್ತೂರು ಹಾಗೂ ಕಾಕತಿ ಭಾಗದ ಜನತೆ, ಮಠಾಧೀಶರು ಮತ್ತು ಚನ್ನಮ್ಮ ಅಭಿಮಾನಿಗಳು ಉಗ್ರ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ, ಎಂ.ವೈ. ಸೋಮಣ್ಣವರ, ಮಹೇಶ ಹರಕುಣಿ, ಎಫ್.ಎಸ್. ಸಿದ್ದನಗೌಡರ, ಈರಣ್ಣಾ ಕರೀಕಟ್ಟಿ, ಶಿವಾನಂದ ಬೆಳಗಾವಿ, ಸಿದ್ದನಗೌಡ ಮೊದಗಿ, ಪ್ರಕಾಶ ಬಳಿಗಾರ, ಅಶೋಕ ಗುಂಡ್ಲೂರ, ಗೌಡಪ್ಪ ಪಾಟೀಲ, ಸಂಗನಗೌಡ ಸಂಗನಗೌಡರ, ಸಂತೋಷ ಕೋಳವಿ, ಮಲ್ಲಿಕಾರ್ಜುನ ಹುಂಬಿ, ಬಿ.ಎಂ. ಚಿಕ್ಕನಗೌಡರ, ಮಹಾಂತೇಶ ಅಕ್ಕಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಫೆ.26ರಂದು ಖಾನಾಪುರ ಬಂದ್‌ಗೆ ನಿರ್ಧಾರ

ಖಾನಾಪುರ: ಪಟ್ಟಣದಲ್ಲಿ ಸದ್ಯ ಗೋವಾ ಕ್ರಾಸ್‌ನಿಂದ ಮರಾಠಾ ಮಂಡಳ ಡಿಗ್ರಿ ಕಾಲೇಜ್ ವರೆಗಿನ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಆದರೆ ಈ ಕಾಮಗಾರಿ ಕುಂಟುತ್ತ ಸಾಗುತ್ತಿರುವ ಕಾರಣ ಮತ್ತು ಅಲ್ಲಲ್ಲಿ ಈ ಕಾಮಗಾರಿಗಾಗಿ ರಸ್ತೆಯನ್ನು ಅಗೆದು ಸುಗಮ ಸಂಚಾರಕ್ಕೆ ಅಡಚಣೆ ಉಂಟು ಮಾಡಿರುವ ಕಾರಣ ಸಾರ್ವಜನಿಕರಿಗೆ, ವಾಹನ ಸವಾರರಿಗೆ ಸಮಸ್ಯೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗುರುವಾರ ಫೆ.26ರಂದು ಖಾನಾಪುರ ಬಂದ್ ಮಾಡಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಮಹಾಂತೇಶ ರಾಹೂತ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಈ ಕುರಿತು ತಹಶೀಲ್ದಾರ್ ಕಚೇರಿ ಮತ್ತು ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿ ಮಾತನಾಡಿ, ಪಟ್ಟಣದ ಹೊರವಲಯದ ಮೀನು ಮಾರುಕಟ್ಟೆ ಬಳಿ ಹಲವು ತಿಂಗಳಿಂದ ಮುಖ್ಯ ರಸ್ತೆ ಅಗೆದು ವಾಹನ ಸಂಚಾರ ಬಂದ್ ಮಾಡಲಾಗಿದೆ. ಇದರಿಂದ ನಾಲ್ಕು ಚಕ್ರದ ವಾಹನಗಳು, ಬಸ್‌ಗಳು ಈ ಮಾರ್ಗದಲ್ಲಿ ಸಂಚರಿಸುತ್ತಿಲ್ಲ. ಪರಿಣಾಮ ನಾಗರಿಕರು ಅನಿವಾರ್ಯವಾಗಿ ಸುತ್ತೀ ಬಳಸಿ ಹೋಗುವಂತಾಗಿದೆ ಎಂದರು.

ಖಾನಾಪುರ ಪಟ್ಟಣದ ಹಲವು ಕಡೆಗ ಒಂದು ಬದಿಯಲ್ಲಿ ಕಾಮಗಾರಿ ನಡೆದಿದ್ದರೂ ಅದನ್ನು ಅರ್ಧಂಬರ್ಧ ಕೈಗೊಂಡು ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲ. ಮೀನು ಮಾರುಕಟ್ಟೆ ಬಳಿ ಸೇತುವೆ ಕಾಮಗಾರಿಯು ಅಪೂರ್ಣವಾಗಿದೆ. ಇದರಿಂದ ಡಿಗ್ರಿ ಕಾಲೇಜ್, ಕೋರ್ಟ್, ಹಲಕರ್ಣಿ ಮಾರ್ಗವಾಗಿ ಖಾನಾಪುರಕ್ಕೆ ಬರುವ ಮತ್ತು ಹೋಗುವ ಬಸ್ ಸಂಚಾರ ಸ್ಥಗಿತವಾಗಿ ಈ ಭಾಗದ ಪ್ರಯಾಣಿಕರಿಗೆ ತೀವ್ರ ಸಮಸ್ಯೆ ಉಂಟಾಗುತ್ತಿದೆ ಎಂದರು.

ಈ ಎಲ್ಲಾ ಕಾರಣಗಳಿಂದಾಗಿ ಖಾನಾಪುರ ಪಟ್ಟಣ ಹಾಗೂ ಅಕ್ಕಪಕ್ಕದ ಪ್ರದೇಶದಲ್ಲಿ ವಾಸಿಸುತ್ತಿರುವ ನಾಗರಿಕರು, ವ್ಯಾಪಾರಸ್ಥರು, ಸಂಘಸಂಸ್ಥೆಗಳ ಪದಾಧಿಕಾರಿಗಳು ಸೇರಿ ಈ ಕಾಮಗಾರಿಯಲ್ಲಿ ಉಂಟಾಗಿರುವ ವಿಳಂಬ ಧೋರಣೆಯನ್ನು ಖಂಡಿಸಿ ಫೆ26ರಂದು ಗುರುವಾರ ಖಾನಾಪುರ ಬಂದ್ ಮಾಡಿ ತಹಶೀಲ್ದಾರ್ ಕಚೇರಿ ಎದುರು ಅನಿರ್ದಿಷ್ಟಾವಧಿಯ ಧರಣಿ ಆರಂಭಿಸಲು ತೀರ್ಮಾನಿಸಿರುತ್ತೇವೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಶಿವಶಂಕರ ಕಟ್ಟೀಮನಿ, ಬಸವರಾಜ ಹೊಂಡದಕಟ್ಟಿ, ರಾಜೇಶ ಪೂಜಾರಿ, ಆದರ್ಶ ರಾಹೂತ, ಪ್ರದೀಪ ಶೆಟ್ಟಿ, ರಮೇಶ ಜೈನ್, ಆದಿತ್ಯ ಕಲಾಲ, ಶಿವಾ ಸುಳಕರ, ಲೋಕೇಶ ಕಲಬುರ್ಗಿ ಇತರರಿದ್ದರು.



ಮನೆ ಮನೆಗೆ ತಲುಪಿದ ಪಂಚ ಗ್ಯಾರಂಟಿ: ದಳವಾಯಿ

ಮೂಡಲಗಿ: ಇತ್ತೀಚೆಗೆ ಮೂಡಲಗಿ ಪಟ್ಟಣದ ಲಕ್ಷ್ಮೀ ನಗರದಲ್ಲಿ ಪಂಚ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಹಾಗೂ ತಾಲೂಕು ಪಂಚಾಯಿತ, ಮೂಡಲಗಿ ಇವರ ಅಡಿಯಲ್ಲಿ ಮನೆ ಮನೆಗೆ ಗ್ಯಾರಂಟಿ-ಮನೆ ಮುಂದೆ ರಂಗೋಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮಕ್ಕೆ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ಅನಿಲಕುಮಾರ ದಳವಾಯಿ ಚಾಲನೆ ನೀಡಿದರು.



ಈ ವೇಳೆ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ಅನಿಲಕುಮಾರ ದಳವಾಯಿ ಮಾತನಾಡಿ, ಇಂದು ಸರಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಗೃಹಲಕ್ಷ್ಮೀ ಯೋಜನೆ, ಶಕ್ತಿ ಯೋಜನೆ, ಗೃಹ ಜ್ಯೋತಿ ಯೋಜನೆ, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಗಳು ಪ್ರತಿ ಮನೆ ಮನೆಗೂ ತಲುಪಿರುವುದು ಎಲ್ಲರಿಗೂ ಸಂತಸ ತಂದಿದೆ. ಸರ್ಕಾರ ಕೇವಲ ಯೋಜನೆಗಳನ್ನು ಜಾರಿ ಮಾಡದೇ ಸಮರ್ಪಕ ಅನುಷ್ಠಾನಕ್ಕಾಗಿ ತಾಲೂಕಾ ಹಂತದಿಂದ ರಾಜ್ಯ ಹಂತದ ವರೆಗೂ ಅನು?ಠಾನ ಸಮಿತಿಗಳನ್ನು ರಚಿಸಿ ರಾಜ್ಯದ ಎಲ್ಲ ಅರ್ಹ ಫಲಾನುಭವಿಗಳಿಗೆ ಯೋಜನೆಗಳ ಸೌಲಭ್ಯ ಮುಟ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರು.

ಗೃಹಲಕ್ಷ್ಮೀ, ಅನ್ನಭಾಗ್ಯ ಹಾಗೂ ಶಕ್ತಿ ಯೋಜನೆಗಳಿಂದಾಗಿ ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಗಳ ಪ್ರಚಾರಾರ್ಥವಾಗಿ ಮೂಡಲಗಿ ಪಟ್ಟಣದ ಲಕ್ಷ್ಮೀ ನಗರದಲ್ಲಿ ಫಲಾನುಭವಿ ಮಹಿಳೆಯರು ಅತೀ ಉತ್ಸಾಹದಿಂದ ತಮ್ಮ ತಮ್ಮ ಮನೆಗಳ ಮುಂದೆ ಗ್ಯಾರಂಟಿ ಯೋಜನೆಗಳ ಮಾಹಿತಿಹೊತ್ತ ವಿವಿದ ರಂಗೋಲಿಗಳನ್ನು ಬಿಡಿಸಿದ್ದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿಯ ಸದಸ್ಯ ಕಾರ್ಯದರ್ಶಿಗಳು, ಸದಸ್ಯರಾದ ವಿ ಪಿ ನಾಯ್ಕ, ಸೂರ್ಯ ಕಾಂತ ಮಗದುಮ್, ಪ್ರಕಾಶ ಅರಳಿ, ರಿಯಾಜ ಮುಧೋಳ, ಲಕ್ಕಪ್ಪ ಕಂಬಳಿ, ಅನಿತಾ ನಾಯಿಂಗ್ಲಜ ಸೇರಿದಂತೆ ಹಲವಾರು ಕಾಂಗ್ರೆಸ್ ಮುಖಂಡರುಗಳು ಭಾಗವಹಿಸಿದ್ದರು.

ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯ: ಡಾ.ಜಯಪ್ರಕಾಶ

ನೇಸರಗಿ: ಪ್ರತಿಯೊಬ್ಬ ವಿದ್ಯಾರ್ಥಿಗಳು ವ್ಯಾಸಂಗ ಸಮಯದಲ್ಲಿ ಕಠಿಣ ಪರಿಶ್ರಮದಿಂದ ಪ್ರಾಥಮಿಕ ಹಂತದಿಂದ ಶ್ರದ್ದೆಯಿಂದ ವ್ಯಾಸಂಗ ಮಾಡಿ ಉತ್ತಮ ಅಂಕಗಳನ್ನು ಪಡೆದು ಜೀವನದಲ್ಲಿ ಮುಂದೆ ಬರಬೇಕು ಎಂದು ಇಂಟರ್ ನ್ಯಾಷನಲ್ ಜನರಲ್ ಮೆಡಿಸನ್ ಖ್ಯಾತ, ಬೆಳಗಾವಿಯ ಪ್ರಮುಖ ವೈದ್ಯ ಡಾ. ಜಯಪ್ರಕಾಶ ಅಪ್ಪಾಜಿಗೋಳ ಹೇಳಿದರು.



ಇಲ್ಲಿನ ಸರ್ಕಾರಿ ಕುವೆಂಪು ಶತಮಾನೋತ್ಸವ ಮಾದರಿ ಶಾಲೆಯಲ್ಲಿ ಆಯೋಜಿಸಲಾಗಿದ್ದ ಸಾಧಕರಿಗೆ ಸತ್ಕಾರ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನ, 7ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ನಾವು ಕಲಿಕೆಗೆ ಸರ್ಕಾರಿ, ಖಾಸಗಿ ಶಾಲೆ ಎಂಬ ಭೇದವಿಲ್ಲದೆ, ಅಭ್ಯಾಸ ಮಾಡಿ. ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಕಲಿತು ಈ ಶಾಲೆಯಿಂದಲೇ ಅನೇಕರು ಉನ್ನತ ಮಟ್ಟದ ಅಧಿಕಾರಿಗಳಾಗಿದ್ದಾರೆ. ಜೀವನದಲ್ಲಿ ಮುಂದೆ ಬಂದಿದ್ದಾರೆ ಎಂದರು.

ನಂತರ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿದವು.

ಈ ಸಂದರ್ಭದಲ್ಲಿ ನೇಸರಗಿ ಅರ್ಬನ್ ಬ್ಯಾಂಕ್ ಅಧ್ಯಕ್ಷ ರಾಜೇಶ್ವರಿ ದೊಡ್ಡಗೌಡರ, ಡಾ. ಮಂಜುನಾಥ ಸೋಮಣ್ಣವರ, ಮಾಜಿ ಗ್ರಾಪಂ ಅಧ್ಯಕ್ಷ ವೀರಭದ್ರ ಚೋಭಾರಿ, ನಿಂಗಪ್ಪ ತಳವಾರ, ಶ್ರೀ ವೀರಭದ್ರೇಶ್ವರ ಪಿಕೆಪಿಎಸ್ ಅಧ್ಯಕ್ಷ ಸೋಮನಗೌಡ ಪಾಟೀಲ, ಮುರಳಿ ಹಮ್ಮಣ್ಣವರ, ಯಮನಪ್ಪ ಪೂಜೇರಿ, ಪ್ರಕಾಶ ತೋಟಗಿ, ವಿಷ್ಣು ಮೂಲಿಮನಿ, ರಾಘವೇಂದ್ರ ಮದೇನ್ನವರ, ಬಸವರಾಜ ಕಾರಜೋಳ, ಮಹಾದೇವ ಕರಾಳೆ, ವಿಶ್ವನಾಥ ಸೋಮಣ್ಣವರ, ಮುಖ್ಯ ಶಿಕ್ಷಕರು, ಶಿಕ್ಷಕರು, ಪಾಲಕರು, ಶಾಲಾ ಸಲಹಾ ಸಮಿತಿ ಉಪಾಧ್ಯಕ್ಷರು, ಸದಸ್ಯರು, ಗ್ರಾಮದ ಎಲ್ಲ ಸಮಾಜದ ಮುಖಂಡರು, ಗ್ರಾಮಸ್ಥರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಿರಂತರ ಪರಿಶ್ರಮದಿಂದ ಗೆಲುವು ಸಾಧ್ಯ

ಸವದತ್ತಿ: ನಿಗದಿತ ಸಮಯದೊಳಗೆ ಸಾಧಿಸುವ ಗುರಿಯಿಟ್ಟುಕೊಂಡು ಶ್ರಮವಹಿಸಿದಲ್ಲಿ ಗೆಲುವು ಪಡೆಯಬಹುದು. ಪ್ರತಿಯೊಬ್ಬ ಸ್ಪರ್ಧಾಳು ನಿರಂತರ ಶ್ರಮವಹಿಸಿ ಪೂರ್ವಸಿದ್ಧತೆ ಮಾಡಿಕೊಳ್ಳಬೇಕೆಂದು ಸವದತ್ತಿಯ ಹಿರಿಯ ವಕೀಲ, ಮಹಾವಿದ್ಯಾಲಯದ ಸ್ಥಾನಿಕ ಆಡಳಿತ ಮಂಡಳಿಯ ಹಿರಿಯ ಸದಸ್ಯ ಬಿ.ವಿ.ಮಲಗೌಡರ ನುಡಿದರು.

ಇಲ್ಲಿನ ಕೆಎಲ್‌ಇ ಸಂಸ್ಥೆಯ ಎಸ್‌ವ್ಹಿಎಸ್ ಬೆಳ್ಳುಬ್ಬಿ ಮಹಾವಿದ್ಯಾಲಯ ಮತ್ತು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಏಕ ವಲಯ ಅಂತರ್ ಕಾಲೇಜುಗಳ ಎರಡು ದಿನಗಳ ಮಹಿಳೆಯರ ಖೋ ಖೋ ಆಯ್ಕೆ ಪ್ರಕ್ರಿಯೆಯ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕ್ರೀಡೆಯು ಆರೋಗ್ಯದ ಜೊತೆಗೆ ಮಾನಸಿಕ ಗಟ್ಟಿತನ ನೀಡುತ್ತದೆ. ವಿದ್ಯಾರ್ಥಿಯು ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆಯಾಗದಿದ್ದರೆ ನಿರಾಶರಾಗಬಾರದು. ಪುನಃ ಪ್ರಯತ್ನಶೀಲನಾಗಿ ಶ್ರಮವಹಿಸಿ ಗೆಲುವು ಪಡೆಯಬೇಕೆಂದು ಹೇಳಿದರು.

ಇಂದು ಜಗತ್ತಿನ ಎಲ್ಲ ರಂಗದಲ್ಲಿ ಮಹಿಳೆಯು ತನ್ನ ಪ್ರತಿಭೆಯನ್ನು ವ್ಯಕ್ತಪಡಿಸುತ್ತಿದ್ದಾಳೆ. ತೊಟ್ಟಿಲು ತೂಗುವ ಕೈ ದೇಶವನ್ನಾಳುತ್ತದೆ ಎಂಬ ಮಾತು ಸಮಕಾಲೀನ ಸಂದರ್ಭದಲ್ಲಿ ನಿಜವಾಗಿದೆ. ಸಮಾಜದಲ್ಲಿ ಬದುಕಲು ಸಾಕಷ್ಟು ಅವಕಾಶಗಳಿವೆ. ಅವುಗಳನ್ನು ಪಡೆಯುವಲ್ಲಿ ವಿದ್ಯಾರ್ಥಿನಿಯರು ಸದೃಢರಾಗಿ ಮುನ್ನುಗ್ಗಬೇಕು ಎಂದರು.



ಕರ್ನಾಟಕ ರಾಜ್ಯ ಖೋಖೋ ಸಮಿತಿಯ ಅಧ್ಯಕ್ಷ, ಆಯ್ಕೆ ಪ್ರಕ್ರಿಯೆಯ ಸದಸ್ಯ ಡಾ.ಎಚ್.ಎನ್. ಲೋಕೇಶ್ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಕ್ರೀಡೆಯಲ್ಲಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಆಯ್ಕೆಯಾಗಿದ್ದವರಿಗೆ ಶೇಕಡಾ ಮೂರರಷ್ಟು ಕೇಂದ್ರ, ರಾಜ್ಯ ಸರಕಾರಿ ಇಲಾಖೆಗಳಲ್ಲಿ ಉದ್ಯೋಗ ಮೀಸಲಾತಿಯನ್ನು ಸರಕಾರವು ನೀಡುತ್ತಿದೆ. ಜೊತೆಗೆ ವಿದ್ಯಾರ್ಥಿ ವೇತನವನ್ನು ಸರಕಾರವು ನೀಡುತ್ತಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬೇಕೆಂದು ತಿಳಿಸಿದರು.

ಪ್ರಾಚಾರ್ಯ ಡಾ. ಎನ್.ಆರ್.ಸವತಿಕರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಐಶ್ವರ್ಯ ಗುಡೆನವರ ಪ್ರಾರ್ಥಿಸಿ, ಪ್ರೊ. ಕೆ. ರಾಮರೆಡ್ಡಿ ಸ್ವಾಗತಿಸಿದರು. ಐಕ್ಯೂಎಸಿ ಸಂಯೋಜಕ ವಿ.ಎಸ್.ಮೀಶಿ ಇದ್ದರು. ಎಂ.ಎನ್.ಸಂಗೊಳ್ಳಿ ನಿರೂಪಿಸಿ, ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ.ಶಿವಾನಂದ ಹೊಳಿ ವಂದಿಸಿದರು. ಕಾರ್ಯಕ್ರಮದಲ್ಲಿ ಬೆಳಗಾವಿ, ವಿಜಯಪುರ ಜಿಲ್ಲೆಗಳ 26 ಕಾಲೇಜಿನಿಂದ ಆಗಮಿಸಿದ 74 ಸ್ಪರ್ಧಿಗಳು, ದೈಹಿಕ ಶಿಕ್ಷಣ ನಿರ್ದೇಶಕರು, ಮಹಾವಿದ್ಯಾಲಯದ ಅಧ್ಯಾಪಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ಅಭಿವೃದ್ಧಿಗೆ ಆಗ್ರಹಿಸಿ ಅಹೋರಾತ್ರಿ ಧರಣಿ

ಬೆಳಗಾವಿ: ಜಿಲ್ಲೆಯ ಎಂ.ಕೆ. ಹುಬ್ಬಳ್ಳಿಯ ಪಟ್ಟಣ ಪಂಚಾಯತಿ ಆವರಣದಲ್ಲಿ ವಿವಿಧ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ಅಹೋರಾತ್ರಿ ಧರಣಿ ಮಾಡಲಾಯಿತು. ಪಟ್ಟಣದ ಪ್ರಮುಖ ಸಮಸ್ಯೆಗಳ ಕುರಿತು ಅಧಿಕಾರಿಗಳ ಗಮನ ಸೆಳೆಯಲು ವಿವಿಧ ಸಂಘಟನೆಗಳು ಹಾಗೂ ನಾಗರಿಕರು ಬೀದಿಗಿಳಿದು ಪ್ರತಿಭಟನೆ ನಡೆಸಲಾಯಿತು. ಎಂ.ಕೆ. ಹುಬ್ಬಳ್ಳಿ ಪಟ್ಟಣದಲ್ಲಿರುವ ಡಾ. ಬಾಬು ಜಗಜೀವನರಾಮ ಭವನದ ಜಾಗ ಅತಿಕ್ರಮಣವಾಗಿರುವುದನ್ನು ಖಂಡಿಸಿ ಹಾಗೂ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ಭಾನುವಾರ ಪಟ್ಟಣ ಪಂಚಾಯತಿ ಆವರಣದಲ್ಲಿ ಅಹೋರಾತ್ರಿ ಧರಣಿ ಪ್ರತಿಭಟನೆ ನಡೆಸಲಾಗಿಯಿತು. ಕೆರೆ ಪಕ್ಕದಲ್ಲಿರುವ ಸರಕಾರಿ ಹೆಣ್ಣು ಮಕ್ಕಳ ಶಾಲೆಗೆ ಮಳೆಗಾಲದಲ್ಲಿ ಕೆರೆ ನೀರು ನುಗ್ಗಿ ಹಾವುಗಳು ಶಾಲೆಯೊಳಗೆ ಬರುತ್ತಿವೆ ಇದರಿಂದಾಗಿ ಶಾಲಾ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಕೂಡಲೇ ಶಾಲೆಗೆ ರಕ್ಷಣಾತ್ಮಕ ತಡೆ ಗೋಡೆ ನಿರ್ಮಿಸಬೇಕು. ಪಟ್ಟಣದ ಸರಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕು ಎಂದು ಒತ್ತಾಯಿಸಿದ್ದರು. ಎಂ ಕೆ ಹುಬ್ಬಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒಂದು ವೇಳೆ ಒದಗಿಸದೇ ಇದಲ್ಲಿ ಜಿಲ್ಲಾಡಳಿತದ ವಿರುದ್ಧ ಉಗ್ರವಾಗಿ ಹೋರಾಟ ಮಾಡುವುದಾಗಿ ಎಚ್ಚರಿಸಿದ್ದಾರೆ. ಈ ವೇಳೆ ಜೈ ಭೀಮ ಯುವಕ ಮಂಡಳ ಕಾರ್ಯಕರ್ತರು ಸೇರಿದಂತೆ ವಿವಿಧ ದಲಿತ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.



ಬಸವಣ್ಣನವರ ಕಾಯಕ ಸಮಾನತೆ ಸಮಾಜಕ್ಕೆ ದಾರಿದೀಪ



ತೇಲಸಂಗ: ಇಂದಿನ ಬದಲಾದ ಕಾಲಘಟ್ಟದಲ್ಲಿ ಮಕ್ಕಳ ಭವಿಷ್ಯ ನರ್ಸರಿಯಿಂದಲೇ ಆರಂಭವಾಗುತ್ತಿದೆ ಎಂದು ಸಾಹಿತಿ ಡಾ. ವಿ.ಎಸ್. ಮಾಳಿ ಹೇಳಿದರು.

ಸೋಮವಾರ ಗ್ರಾಮಕ್ಕೆ ಭೇಡಿ ನೀಡಿದ ಸಂದರ್ಭದಲ್ಲಿ ಸ್ಥಳೀಯ ಬಸವ ಬಳಗದಿಂದ ಸತ್ಕಾರ ಸ್ವೀಕರಿಸಿ ಮಾತನಾಡಿ, ಬದಲಾದ ಇಂದಿನ ದಿನಗಳಲ್ಲಿ ಭವಿಷ್ಯದ ನಿರ್ಮಾಣವು ಎಸ್‌ಎಸ್‌ಎಲ್‌ಸಿ ನಂತರ ಆರಂಭವಾಗುತ್ತಿಲ್ಲ; ಅದು ಮಗುವಿನ ನರ್ಸರಿ ಹಂತದಿಂದಲೇ ಪ್ರಾರಂಭವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಮಾಜದ ಜವಾಬ್ದಾರಿ ದೊಡ್ಡದಿದೆ. ಒಬ್ಬ ಸ್ವಚ್ಛ ಮನಸ್ಸಿನ, ಶುದ್ಧ ಕಾಯಕ ಶ್ರೇಷ್ಠತೆಯುಳ್ಳ ಶಿಕ್ಷಕ ಮನಸ್ಸು ಮಾಡಿದರೆ ಇಡೀ ಸಮಾಜದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡಬಹುದು. ಸಂಸ್ಕಾರಯುತ ಶಿಕ್ಷಣವೇ ನಾಳಿನ ಸದೃಢ ಭಾರತಕ್ಕೆ ಅಡಿಪಾಯ ಎಂದರು.

ಮಾಡುವ ಕಾಯಕದಲ್ಲಿ ಮೇಲು-ಕೀಳಿಲ್ಲ ಎನ್ನುವ ಬಸವಣ್ಣ ಅವರ ಸಿದ್ಧಾಂತ ಅದ್ಭುತವಾದುದು. ನಾನು ಹೆಮ್ಮೆಯಿಂದ ಹೇಳುತ್ತೇನೆ, ಮಹಾಮಾನವತಾವಾದಿ ಬಸವಣ್ಣ ಮತ್ತು ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಿದ್ಧಾಂತಗಳು ಬೇರೆ ಬೇರೆಯಲ್ಲ. ಇಬ್ಬರ ಗುರಿಯೂ ಒಂದೇ; ಅದು ಶೋಷಣೆ ಮುಕ್ತ, ಸಮಾನತೆಯ ಸಮಾಜ ನಿರ್ಮಾಣ. ಬಸವಣ್ಣನವರ ಹೆಜ್ಜೆಯಲ್ಲಿ ನಡೆಯುವುದು. ಅವರ ಕ್ರಾಂತಿಕಾರಿ ವಿಚಾರಗಳನ್ನು ನಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ನ್ಯಾಯವಾದಿ ಅಮೋಘಸಿದ್ದ ಖೊಬ್ರಿ, ಗುರುರಾಜ ಕುಂಬಾರ್, ಡಾ. ಬಿ. ಎಸ್. ಕಾಮನ್, ಸಂಗಮೇಶ ಉಂಡೋಡಿ, ಅಶೋಕ ಪರುಶೆಟ್ಟಿ, ಜಗದೀಶ ಮಠದ, ಸುರೇಶ ಸಂಗಗೊಂಡ, ಶ್ರೀಶೈಲ್ ಶೆಲ್ಲೆಪ್ಪಗೋಳ, ಪ್ರಕಾಶ ಮೋರೆ, ಪಂಡಿತಯ್ಯ ಮಠಪತಿ, ಸಿದ್ದಲಿಂಗ ಮಾದರ, ಸಂಗಮೇಶ ಕುಮಟಳ್ಳಿ, ರಘು ಉಂಡೋಡಿ, ಮುಂಜಿ ಸರ್, ಸುನಿಲ ಉಂಡಿಡಿ ಉಪಸ್ಥಿತರಿದ್ದರು.

ಕಿರುಸುದ್ದಿ

ರಾಷ್ಟ್ರೀಯ ಏಕೀಕರಣ ಶಿಬಿರ ಇಂದು

ಬೆಳಗಾವಿ: ಇಲ್ಲಿನ ಕೆಎಲ್‌ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಬೆಳಗಾವಿಯ ಎನ್‌ಎಸ್‌ಎಸ್ ಕೋಶವು ಕರ್ನಾಟಕ ಸರ್ಕಾರದ ಎನ್‌ಎಸ್‌ಎಸ್ ರಾಜ್ಯ ಕೋಶದ ಸಹಯೋಗದೊಂದಿಗೆ ಫೆಬ್ರವರಿ 24 ರಿಂದ ಮಾರ್ಚ್ 2 ರವರೆಗೆ ಬೆಳಗಾವಿಯ ಜೆ.ಎನ್. ವೈದ್ಯಕೀಯ ಕಾಲೇಜು ಕ್ಯಾಂಪಸ್‌ನಲ್ಲಿ ರಾಷ್ಟ್ರೀಯ ಏಕೀಕರಣ ಶಿಬಿರ ಆಯೋಜಿಸುತ್ತಿದೆ. ಈ ಶಿಬಿರದಲ್ಲಿ ಆರು ರಾಜ್ಯಗಳ ವಿವಿಧ ವಿಶ್ವವಿದ್ಯಾಲಯಗಳ 150 ಎನ್‌ಎಸ್‌ಎಸ್ ವಿದ್ಯಾರ್ಥಿ ಸ್ವಯಂಸೇವಕರು, ಕಾರ್ಯಕ್ರಮ ಅಧಿಕಾರಿಗಳು ಭಾಗವಹಿಸುತ್ತಿದ್ದಾರೆ. ಕ್ರಮವಾಗಿ ಫೆ. 24 ಮತ್ತು ಮಾ.2 ರಂದು ಔಪಚಾರಿಕ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರಕಾರದ ಯುವ ಸಬಲೀಕರಣ ಇಲಾಖೆಯ ಆಯುಕ್ತ ಚೇತನ್ ಆರ್. ಐಪಿಎಸ್, ಬೆಂಗಳೂರು, ಕೇಂದ್ರ ಸರಕಾರದ ಪ್ರಾದೇಶಿಕ ನಿರ್ದೇಶನಾಲಯದ ಪ್ರಾದೇಶಿಕ ನಿರ್ದೇಶಕ ಗಿರಿಧರ್ ಉಪಾಧ್ಯಾಯ, ಯುವ ಸಬಲೀಕರಣ ಮತ್ತು ಕ್ರೀಡಾ ವ್ಯವಹಾರಗಳ ಇಲಾಖೆಯ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ಕಹೇರ್ ಆಸ್ಪತ್ರೆ ಅಭಿವೃದ್ಧಿ ಮತ್ತು ಹೊಸ ಯೋಜನೆಗಳ ನಿರ್ದೇಶಕ ಡಾ. ವಿ. ಡಿ. ಪಾಟೀಲ್ ಭಾಗವಹಿಸಲಿದ್ದಾರೆ. ಈ ಶಿಬಿರದಲ್ಲಿ ರಂಗೋಲಿ, ಭಾಷಣ, ಚರ್ಚಾಸ್ಪರ್ಧೆ, ರಸಪ್ರಶ್ನೆ, ನೃತ್ಯ ಇತ್ಯಾದಿ ಸ್ಪರ್ಧೆಗಳನ್ನು ಪ್ರತಿದಿನ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ನಡೆಸಲಾಗುವುದು ಎಂದು ಕೆಎಲ್‌ಇ ಸಂಸ್ಥೆ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಉದ್ಯೋಗ ಮೇಳ ನಾಳೆ

ಮುರಗೋಡ: ಮಹಾಂತ ಶಿವಯೋಗಿಗಳ 54ನೇ ಪುಣ್ಯಸ್ಮರಣೋತ್ಸವ ನಿಮಿತ್ಯವಾಗಿ ಕಾರ್ಮಿಕ ಸಂಘಟನೆ ಹಾಗೂ ಗೆಳೆಯರ ಬಳಗದ ಸಹಯೋಗದೊಂದಿಗೆ ಉದ್ಯೋಗ ಮೇಳವನ್ನು ಫೆ.25ರಂದು ಬೆಳಿಗ್ಗೆ 10.30ಕ್ಕೆ ಶ್ರೀ ಮಹಾಂತೇಶ್ವರ ಕಲ್ಯಾಣ ಮಂಟಪ ಮುರಗೋಡದಲ್ಲಿ ನಡೆಯಲಿದೆ. ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಡಿಪ್ಲೋಮಾ, ಬಿಇ ಸೇರಿದಂತೆ ಯಾವುದೇ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ವಯೋಮಿತಿ 18 ರಿಂದ 40 ವರ್ಷದೊಳಗಿನ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಹಾಗೂ ವಿಕಲಚೇತನ ಅಭ್ಯರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಾರ್ಮಿಕ ಸಂಘಟನೆ ಹಾಗೂ ಗೆಳೆಯರ ಬಳಗ ವಿನಂತಿ ಮಾಡಿಕೊಂಡಿದೆ.

ಪ್ರವಚನ, ಪುಸ್ತಕ ಬಿಡುಗಡೆ



ಯಮಕನಮರಡಿ: ಸ್ಥಳೀಯ ಸುಕ್ಷೇತ್ರ ಹುನಿಸಿಕೊಳ್ಳ ಮಠದ ಪೂಜ್ಯರಾಗಿದ್ದ ಲಿಂಗೈಕ್ಯ ಗುರುಸಿದ್ಧ ಮಹಾಸ್ವಾಮಿಗಳ 32ನೇ ಪುಣ್ಯಸ್ಮರಣೋತ್ಸವ ಸಮಾರಂಭ ಅಂಗವಾಗಿ ಏಳು ದಿನಗಳ ಕಾಲ ಶ್ರೀಮಠದಲ್ಲಿ ಪ್ರವಚನ ಕಾರ್ಯಕ್ರಮ ಆಯೋಜಿಸಲಾಗಿದ್ದು ಐದನೇ ದಿನದ ಪ್ರವಚನಕ್ಕೆ ಶ್ರೀಮಠದ ರಾಚೋಟೇಶ್ವರ ಶ್ರೀಗಳು ಮುನಿಸಿಕೊಳ್ಳ ಮಠ ಇವರು ಆಶೀರ್ವಚನ ನೀಡಿದರು. ಸಾನಿಧ್ಯವನ್ನು ಅನುಭವ ಮಂಟಪ ಆಳಂದ್ ವಿಶ್ವನಾಥ್ ಸ್ವಾಮೀಜಿ ವಹಿಸಿ ಆಶೀರ್ವಚನ ನೀಡಿದರು. ನೇತೃತ್ವವನ್ನು ಸಿದ್ದ ಬಸವ ದೇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ.ಜೆ.ಎಸ್. ಪಾಟೀಲ್ ಬಸವ ತತ್ವ ಚಿಂತಕರು ವಿಜಯಪುರ ಅವರು ರಚಿಸಿದ ವಚನಗಳ ಸರಮಾಲೆ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಂಕರ್ ಗುಡಿಸಿ ಅಧ್ಯಕ್ಷರು ಲಿಂಗಾಯತ ಸಂಘಟನೆ ಬೆಳಗಾವಿ ಲಕ್ಷ್ಮಣ್ ರಾವ್ ಮುನ್ನೋಳಿ ಉಪಾಧ್ಯಕ್ಷರು ಹುಕ್ಕೇರಿ ಗ್ರಾಮೀಣ ವಿದ್ಯುತ್ ಶಕ್ತಿ ಸಂಘ ಶರಣರಾದ ಚನ್ನಬಸವ ಕೋತ ಬಸವರಾಜ್ ನಿಲಜಿ ಸುರೇಶ್ ತಳವಾರ್ ಮಂಜು ಪಾಟೀಲ್ ಮುಂತಾದವರು ಶ್ರೀಮಠದ ಆಡಳಿತ ಮಂಡಳಿ ಸದಸ್ಯರು ಗ್ರಾಮಸ್ಥರು ಅಕ್ಕನ ಬಳಗ ಉಪಸ್ಥಿತರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು.

ಸಿಸಿಆರ್‌ಎಸ್‌ಗೆ ಆಯ್ಕೆ



ಚಿಕ್ಕೋಡಿ: ತಾಲೂಕಿನ ಅಂಕಲಿ ಗ್ರಾಮದ ಡಾ. ಎನ್.ಎ. ಮಗದುಮ್ಮ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಾದ ಐಶ್ವರ್ಯ ಹೆಚ್., ವೈದೇಹಿ ಜಯರಾಜ್ ಬರ್ಗೆ, ಉಷಾರಾಣಿ ನಾಯಕ್ ಆಯ್ಕೆಯಾಗಿದ್ದಾರೆ. ಭಾರತ ಸರ್ಕಾರದ ಆಯುಷ್ ಸಚಿವಾಲಯದ ಅಧೀನದಲ್ಲಿ ನಡೆಯುವ ರಾಷ್ಟ್ರಮಟ್ಟದ ಸಂಶೋಧನಾ ಕಾರ್ಯಕ್ರಮವಾದ 2025-26ನೇ ಸಾಲಿನ ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ್ ಇನ್ ಆಯುರ್ವೇದಿಕ್ ಸೈನ್ಸ್ (ಸಿಸಿಆರ್‌ಎಸ್) ಗೆ ಆಯ್ಕೆಯಾಗಿದ್ದು, ಈ ವಿದ್ಯಾರ್ಥಿನಿಯರಿಗೆ ಡಾ.ಅಶ್ವಿನಿ ಸ್ವಾಮಿ, ಡಾ.ಅರ್ಚನಾ ಸುರೇಶ ಶುಕ್ಲಾ, ಡಾ.ಅಶ್ವಿನಿ ಅವಟೆ ಮಾರ್ಗದರ್ಶನ ನೀಡಿದ್ದಾರೆ ಎಂದು ಮಹಾವಿದ್ಯಾಲಯದ ಪ್ರಕಟಣೆ ತಿಳಿಸಿದೆ.



ಕೋ.ಶಿವಾಪೂರ: ಯರಗಟ್ಟಿ ತಾಲೂಕಿನ ಮಾಡಮಗೇರಿ ಗ್ರಾಮದ ಶ್ರೀ ಪರಮಾನಂದ ದೇವರಥೋತ್ಸವ ಸೋಮವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರಗಿತು. ಮಾಡಮಗೇರಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹಗ್ಗ ಇಲ್ಲದೆ ಭವ್ಯ ರಥವನ್ನು ಎಳೆದರು. ಡೊಳ್ಳು ಕುಣಿತ, ಭಜನೆ, ಬಾಜಾ ಭಜಂತ್ರಿ ಮುಂತಾದ ವಾದ್ಯಮೇಳ ಮೆರಗು ತಂದವು. ರಥಕ್ಕೆ ಹೂ.ಹಣ್ಣು, ಖಾರಿಕ ಹಾರಿಸಿ ತಮ್ಮ ಭಕ್ತಿ ಸಮರ್ಪಿಸಿದರು. ಭವ್ಯವಾದ ರಥಕ್ಕೆ ಬಾಳೆ ಕಬ್ಬು, ಹೂ ಮಾಲೆ, ವಿವಿಧ ತರಹದ ಬಣ್ಣದ ಬಟ್ಟೆಗಳಿಂದ ಅಲಂಕಾರ ಮಾಡಲಾಗಿತ್ತು.

ಗ್ಯಾರಂಟಿ ಯೋಜನೆಗಳ ಜನಜಾಗೃತಿ

ಯರಗಟ್ಟಿ: ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳ ಬಗ್ಗೆ ಮನೆ ಮನೆಗೆ ಮಾಹಿತಿ ತಲುಪಿಸುವ ಉದ್ದೇಶದಿಂದ ಮನೆ ಮನೆಗೆ ಗ್ಯಾರಂಟಿ ಮನೆ ಮುಂದೆ ರಂಗೋಲಿ ಎಂಬ ವಿಶೇಷ ಕಾರ್ಯಕ್ರಮ ತಾಲೂಕಿನ ದಾಸನಾಳ ಗ್ರಾಮದಲ್ಲಿ ಅದ್ದೂರಿಯಾಗಿ ನಡೆಯಿತು. ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಗೋಪಾಲ ದಳವಾಯಿ ಮಾತನಾಡಿ, ಹಲವಾರು ಕಡೆಗಳಲ್ಲಿ ಹಬ್ಬದಂತ ವಾತಾವರಣ ನಿರ್ಮಾಣವಾಗಿದ್ದು, ಜನರಲ್ಲೂ ಉತ್ಸಾಹ ಕಂಡುಬಂದಿತು. ರಾಜ್ಯ ಸರ್ಕಾರ ಜಾರಿಗೊಳಿಸಿದ ಶಕ್ತಿ, ಗೃಹಜ್ಯೋತಿ, ಗೃಹಲಕ್ಷ್ಮೀ, ಅನ್ನಭಾಗ್ಯ, ಯುವನಿಧಿ ಸೇರಿದಂತೆ ಹಲವು ಯೋಜನೆಗಳು ಸಾಮಾನ್ಯ ಜನರ ಬದುಕಿಗೆ ನೆರವಾಗುತ್ತಿವೆ ಎಂದರು. ಇವು ಆರ್ಥಿಕ ಭದ್ರತೆ ನೀಡುವ ಯೋಜನೆಗಳಾಗಿದ್ದು ಸಮಾಜದ ಬಡ ಹಾಗೂ ಮಧ್ಯಮ ವರ್ಗಕ್ಕೆ ಸಹಾಯವಾಗುತ್ತಿವೆ. ಗ್ಯಾರಂಟಿ ಯೋಜನೆಗಳು ದುರ್ಬಲ ವರ್ಗದ ಜನರ ನಾಡಿಮಿಡಿತವಾಗಿದೆ ಎಂದರು. ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯಿಂದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಮನೆಗೆ ಐದು ಗ್ಯಾರಂಟಿ ಮನೆ ಮುಂದೆ ರಂಗೋಲಿ ಕಾರ್ಯಕ್ರಮ ಆಯೋಜಿಸಿದ್ದು ಎಲ್ಲ ಗ್ರಾಪಂ ಮಟ್ಟದ ಫಲಾನುಭವಿಗಳ ಅಹವಾಲು ಸ್ವೀಕಾರ ಮಾಡಲಾಯಿತು. ಸಮೀಪದ ದಾಸನಾಳ ಗ್ರಾಮದಲ್ಲಿ ಫಲಾನುಭವಿಯಾದ ವಿದ್ಯಾ ಬಸವರಾಜ ಅಂಗಡಿ ಬಿಡಿಸಿದ ಸಿದ್ದರಾಮಯ್ಯ ಆಡಳಿತ ರಂಗೋಲಿ ಗಮನ ಸೆಳೆಯಿತು. ಗ್ಯಾರಂಟಿ ಯೋಜನೆಯ ಉಸ್ತುವಾರಿ ಸದಸ್ಯ ಮಂಜುನಾಥ ಹಾದಿಮನಿ ಈರಣ್ಣಾ ಬಳಿಗಾರ, ವಿಠ್ಠಲ ಶೀಂತ್ರಿ, ಗ್ರಾಮಸ್ಥರು ಇದ್ದರು. ಅಂಗನವಾಡಿ ಕಾರ್ಯಕರ್ತೆ ಮಹಾನಂದಾ ಕೌಜಲಗಿ ಆಶಾ ಕಾರ್ಯಕರ್ತೆ ಬಿಬಿಜಾನ್ ಇದ್ದರು.



ಯರಗಟ್ಟಿ: ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳ ಬಗ್ಗೆ ಮನೆ ಮನೆಗೆ ಮಾಹಿತಿ ತಲುಪಿಸುವ ಉದ್ದೇಶದಿಂದ ಮನೆ ಮನೆಗೆ ಗ್ಯಾರಂಟಿ ಮನೆ ಮುಂದೆ ರಂಗೋಲಿ ಎಂಬ ವಿಶೇಷ ಕಾರ್ಯಕ್ರಮ ತಾಲೂಕಿನ ದಾಸನಾಳ ಗ್ರಾಮದಲ್ಲಿ ಅದ್ದೂರಿಯಾಗಿ ನಡೆಯಿತು.

ವಿವಿಧ ಕಾಮಗಾರಿಗೆ ಭೂಮಿಪೂಜೆ| ಶಾಸಕ ರಾಜು ಕಾಗೆ ಹೇಳಿಕೆ

ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ

ಕಾಗವಾಡ: ಈಗ ಕ್ಷೇತ್ರದ ಅಭಿವೃದ್ದಿಯೇ ನನ್ನ ಮೊದಲ ಗುರಿ ಎಂದು ಕಾಗವಾಡ ಶಾಸಕ ರಾಜು ಕಾಗೆ ಹೇಳಿದರು.

ಸೋಮವಾರ ಕಾಗವಾಡ ಮತಕ್ಷೇತ್ರದ ವಿವಿಧ ಗ್ರಾಮಗಳ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿ, ಮುಖ್ಯಮಂತ್ರಿಗಳ ವಿಶೇಷ 50 ಕೋಟಿ ವಿಶೇಷ ಅನುದಾನದಲ್ಲಿ 37.5 ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಪಂಚಾಯಿತಿ 25.5 ಕೋಟಿ ರೂ ಅನುದಾನ ರಸ್ತೆ ಕಾಮಗಾರಿ ಹಾಗೂ ಇನ್ನುಳಿದ ಕಾಮಗಾರಿಗಳಿಗೆ ವೆಚ್ಚ ಮಾಡಲಾಗುವುದು ಎಂದು ತಿಳಿಸಿದರು.

ಬೇಸಿಗೆಕಾಲದಲ್ಲಿ ಕೃಷ್ಣಾ ನದಿ ಸಂಪೂರ್ಣ ಬತ್ತುವ ಸಂಭವವಿದೆ. ಕಾರಣ ಈಗಾಗಲೇ ಅಧಿವೇಶನದಲ್ಲಿ ಮಹಾರಾಷ್ಟದಿಂದ2ಟಿಎಂಸಿ ನೀರನ್ನು ಬಿಡಿಸಬೇಕೆಂದು ಸರಕಾರಕ್ಕೆ ಒತ್ತಾಯಿಸಲಾಗಿದೆ. ಈಗಲೂ ಕೂಡ ಮುಖ್ಯಮಂತ್ರಿಗಳಿಗೆ ಒತ್ತಾಯಿಸಿ ಬರುವ ಕೆಲವೇ ದಿನಗಳಲ್ಲಿ 2ಟಿಎಂಸಿ ನೀರನ್ನು ಬಿಡುಗಡೆಗೊಳಿಸಲು ಪ್ರಯತ್ನಿಸುತ್ತೇನೆ ಎಂದರು.

ಬೆಳಿಗ್ಗೆ ಕಾಗವಾಡ ಮತಕ್ಷೇತ್ರದ ಶಿರಗುಪ್ಪಿಯಲ್ಲಿ ರಸ್ತೆ ಕಾಮಗಾರಿಗೆ 5 ಕೋಟಿ ರೂ., ಉಗಾರ್ ಬುದ್ರುಕದಲ್ಲಿ 2 ಕೋಟಿ ರೂ., ಐನಾಪುರದಲ್ಲಿ 6 ಕೋಟಿ ರೂ., ಮೊಳೆ ಗ್ರಾಮದಲ್ಲಿ 5 ಕೋಟಿ ರೂ. ಗಳ ಅನುದಾನದಲ್ಲಿ ರಸ್ತೆಯ ವಿವಿಧ ಕಾಮಗಾರಿಗೆ ಗುದ್ದಲಿ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾಜಿ ಜಿ.ಪಂ ಸದಸ್ಯೆ ಪ್ರೇಮಲತಾ ರೆಡ್ಡಿ, ಸುಭಾಷ ಪಾಟೀಲ, ಪ್ರವೀಣ ಗಾಣಿಗೇರ, ಅರುಣ ಗಾಣಿಗೇರ, ಸಂಜೀವ ಭಿರಡಿ, ಗುಂಡು ಖವಟಕೊಪ್ಪ, ಸತೀಶ ಅಪರಾಜ, ವಿಜಯ ಅಕಿವಾಟೆ, ವಿಪುಲ ಪಾಟೀಲ, ಅಣ್ಣಾಸಾಬ ಖೋತ, ಡಾ.ಅಮೂಲ ಸರಡೆ,ಅರವಿಂದ ಕಾರ್ಚಿ, ಪ್ರಕಾಶ



▸▸ ಮುಖ್ಯಮಂತ್ರಿಗಳ ವಿಶೇಷ 50 ಕೋಟಿ ವಿಶೇಷ ಅನುದಾನದಲ್ಲಿ 37.5 ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಪಂಚಾಯಿತಿ 25.5 ಕೋಟಿ ರೂ ಅನುದಾನ ರಸ್ತೆ ಕಾಮಗಾರಿಗೆ ಭೂಮಿಪೂಜೆ

▸▸ ಶಿರಗುಪ್ಪಿಯಲ್ಲಿ ರಸ್ತೆ ಕಾಮಗಾರಿಗೆ 5 ಕೋಟಿ ರೂ., ಉಗಾರ್ ಬುದ್ರುಕದಲ್ಲಿ 2 ಕೋಟಿ ರೂ., ಐನಾಪುರದಲ್ಲಿ 6 ಕೋಟಿ ರೂ., ಮೊಳೆ ಗ್ರಾಮದಲ್ಲಿ 5 ಕೋಟಿ ರೂ.ಗಳ ಅನುದಾನದಲ್ಲಿ ರಸ್ತೆಯ ವಿವಿಧ ಕಾಮಗಾರಿಗೆ ಗುದ್ದಲಿ ಪೂಜೆ

ಕೋಬುರ್ಜ, ವಿನೋದ ಕೋಳೆಕರ, ಸಿದ್ದಪ್ಪ ಕನಾಳೆ, ಧರ್ಮಾ ಕೋಳೆಕರ, ವಿಶ್ವನಾಥ ನಾಮದಾರ, ಅಭಿಯಂತರಾದ ಮಲ್ಲಿಕಾರ್ಜುನ ಮಗದುಮ, ಮಲ್ಲಿಕಾರ್ಜುನ ಇಸರಗೊಂಡ, ರವಿ ಮಾಳಿ, ಅಕ್ಷಯ ಮಾಳಿ, ಬಸವಪ್ರಸಾದ ಪಾಟೀಲ, ಶಿವರುದ್ರ ಗುಳಪ್ಪನ್ನವರ, ಅರ್ಜುನ ನಾಯಿಕ, ಶಿವಪುತ್ರ ನಾಯಿಕ, ಶಿವು ಸಂಕ್ರಟ್ಟಿ, ಶೇರಅಲಿ ಬಾರಗೀರ, ಸಮಿಹುಲ್ಲಾ ಬಾರಗೀರ ಇತರರು ಇದ್ದರು.

ರೋಟರಿ ಸಂಸ್ಥೆ ಸಮಾಜಮುಖಿ ಸೇವೆ ಅನನ್ಯ

ಅಥಣಿ: ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಬಡ ಮಕ್ಕಳಿಗೆ ಅಗತ್ಯ ಸೌಲಭ್ಯಗಳನ್ನು ನೀಡಿ ಕಲಿಕೆಗೆ ಪ್ರೋತ್ಸಾಹಿಸಿದಾಗ ಮಕ್ಕಳು ಪ್ರತಿಭಾವಂತರಾಗಿ ಬೆಳೆಯಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ರೋಟರಿ ಸಂಸ್ಥೆಯಿಂದ ಶಾಲಾ ಮಕ್ಕಳಿಗೆ ಸಮವಸ್ತ್ರ ಕಿಟ್ ವಿತರಿಸಲಾಗುತ್ತಿದೆ ಎಂದು ರೋಟರಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಗಜಾನನ ಮಂಗಸೂಳಿ ಹೇಳಿದರು.

ಇಲ್ಲಿನ ಡಾ. ಆರ್. ಎಚ್. ಕುಲಕರ್ಣಿ ಸಭಾಂಗಣದಲ್ಲಿ ರೋಟರಿ ಸಂಸ್ಥೆಯಿಂದ ತಾಲೂಕಿನ ವಿವಿಧ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ಕಲಿಕಾ ಸಾಮಗ್ರಿಗಳ ಕಿಟ್ ವಿತರಿಸಿ ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಾಲಾ ಮಕ್ಕಳು ತಮ್ಮ ಪ್ರತಿಭೆಯನ್ನು ಗುರುತಿಸಿಕೊಳ್ಳ ಬೇಕಾದರೆ ಅವರಿಗೆ ಮೂಲಭೂತ ಸೌಕರ್ಯ ಒದಗಿಸಬೇಕಾದ ಅಗತ್ಯವಿದೆ. ಅಥಣಿ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ರೋಟರಿ ಕ್ಲಬ್‌ಯಿಂದ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಕಳೆದ 27 ವರ್ಷಗಳಿಂದ ಸಮಾಜಮುಖಿ ಸೇವೆ ಮಾಡುತ್ತಾ ಬಂದಿದೆ. ಈಗ ಸುಮಾರು 40 ಲಕ್ಷ ರೂ.ಗಳು ಅಥಣಿ, ಕಾಗವಾಡ ತಾಲೂಕಿನ 600 ಶಾಲಾ ಮಕ್ಕಳಿಗೆ ಅಗತ್ಯವಿರುವ ಸಮವಸ್ತ್ರ, ಹಾಸಿಗೆ ಹೊದಿಕೆ, ಪಾದರಕ್ಷೆ, ರೈನ್ ಕೋಟ್, ಸ್ವೆಟರ್, ಸ್ಕೂಲ್ ಬ್ಯಾಗ್ ಹಾಗೂ ಇನ್ನಿತರ ಕಲಿಕಾ ಸಾಮಗ್ರಿಗಳು ಸೇರಿದಂತೆ 17 ವಸ್ತುಗಳನ್ನು ವಿತರಿಸಲಾಗಿದೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ಶೈಕ್ಷಣಿಕ ಸೇವೆಗಳನ್ನು ಮಾಡಲಾಗುವುದು ಎಂದರು.

ಮುಖ್ಯ ಅತಿಥಿಗಳಾಗಿ ಬೆಳಗಾವಿ ರೋಟರಿ ಕ್ಲಬ್ ಮಾಜಿ ಅಧ್ಯಕ್ಷ ದಿಲೀಪ ಚಿಟ್ನಿಸ್ ತಂಡ ಭಾಗವಹಿಸಿದ್ದರು. ಅಥಣಿ ರೋಟರಿ ಕ್ಲಬ್ ಅಧ್ಯಕ್ಷ ಸಚಿನ್ ದೇಸಾಯಿ, ಕಾರ್ಯದರ್ಶಿ ಶೇಖರ್ ಕೋಲಾರ, ಖಜಾಂಚಿ ಸಂತೋಷ ಬೊಮ್ಮಣ್ಣವರ, ಮೇಘರಾಜ್ ಪರಮಾರ್, ಸುರೇಶ್ ಬಳ್ಳೊಳ್ಳಿ, ಶ್ರೀಕಾಂತ್ ಅಥಣಿ, ಡಾ. ಆನಂದ್ ಕುಲಕರ್ಣಿ, ಡಾ. ಚಿದಾನಂದ ಮೇತ್ರಿ, ಡಾ. ಆನಂದ್ ಗುಂಜಿಗಾವಿ, ಅನಿಲರಾವ್ ದೇಶಪಾಂಡೆ, ಡಾ.ಪಿ.ಪಿ. ಮಿರಜ್, ಡಾ. ಸಂಕ್ರಟ್ಟಿ, ಅಶೋಕ ಹೊಸೂರ, ಶಶಿಕಾಂತ ಹುಲಕುಂದ, ಅರುಣ ಸೌದಾಗರ ಇದ್ದರು.



ಬಾಳೆ ಬೆಳೆಯಿಂದ ಅಧಿಕ ಲಾಭ: ಗೋಪಾಲಿ

ಮೂಡಲಗಿ: ರೈತರು ಬಾಳೆ ಬೆಳೆಯುವುದರ ಜೊತೆಗೆ ಮೌಲ್ಯವರ್ಧಿತ ಉತ್ಪನ್ನಗಳ ಮಾರುಕಟ್ಟೆಯಿಂದ ಅಧಿಕ ಲಾಭ ಪಡೆಯಬಹುದೆಂದು ಬಾಗಲಕೋಟದ ತೋ.ವಿ.ವಿ. ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕರು, ಪ್ರಾ.ತೋ.ಸಂ.ವಿ. ಡಾ. ಗೋಪಾಲಿ ಜೆ. ಬಿ. ಹೇಳಿದರು.

ಸಮೀಪದ ಅರಭಾಂವಿಯ ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ ಬಾಗಲಕೋಟದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಭಾಕೃಅಪ-ಅಖಿಲ ಭಾರತೀಯ ಸಮನ್ವಯ ಸಂಶೋಧನಾ ಯೋಜನೆ ತೋಟಗಾರಿಕೆ ವಿಸ್ತರಣಾ ಶಿಕ್ಷಣ ಕೇಂದ್ರ, ಭಾಕೃಅಪ-ಕೃಷಿ ವಿಜ್ಞಾನ ಕೇಂದ್ರ, ಬೆಳಗಾವಿ ತುಕ್ಕಾನಟ್ಟಿ ಸಂಯುಕ್ತಾಶ್ರಯದಲ್ಲಿ ಪೊಪೌಲು ಬಾಳೆ ತಳಿಯ ಮಹತ್ವ ಮತ್ತು ಮೌಲ್ಯವರ್ಧನೆ ಕುರಿತು ತರಬೇತಿ, ಪ್ರಾತ್ಯಕ್ಷಿಕೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತುಕ್ಕಾನಟ್ಟಿ ಬೆಳಗಾವಿಯ ಭಾಕೃಅಪ - ಬರ್ಡ್ಸ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಮೇತ್ರೆ, ಡಿ.ಎ., ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಮಲ್ಲಿಕಾರ್ಜುನ ಜನಮಟ್ಟಿ ಮಾತನಾಡಿ, ರೈತ ಮಹಿಳೆಯರು ಬಾಳೆ ಬೆಳೆದು ಮೌಲ್ಯವರ್ಧನೆಯನ್ನು ಮಾಡುವುದರೊಂದಿಗೆ ಸಣ್ಣ ಪ್ರಮಾಣದ ಕೈಗಾರಿಕೆ ಮಾಡಿಕೊಂಡು ಸ್ವಾವಲಂಬಿಗಳಾಗಿ ಇರಬಹುದು ಎಂದರು.

ಮಹಾವಿದ್ಯಾಲಯದ ಡೀನ್ ಡಾ. ಎ ಬಿ ಮಾಸ್ತಿಹೊಳಿ ಮಾತನಾಡಿ, ಬೆಳಗಾವಿ ಜಿಲ್ಲೆಯಲ್ಲಿ ಬಾಳೆಯನ್ನು ಬೆಳೆಯಲು ಸೂಕ್ತವಾದ ಮಣ್ಣು, ನೀರು ಮತ್ತು ವಾತಾವರಣ ಇರುವುದರಿಂದ ರೈತರು ಪೋಪೆಲೋ ಚಿಪ್ಸ್ ತಳಿಯನ್ನು ಬೆಳೆದು ಕುಟುಂಬ ವರ್ಗದವರೆ, ಮೌಲ್ಯವರ್ಧನೆ ಮಾಡಬಹುದು ಇದರಿಂದ ಕಡಿಮೆ ಖರ್ಚು, ಅಧಿಕ ಆದಾಯ ಪಡೆಯಬಹುದು ಎಂದರು.

ಡಾ.ಯಲ್ಲೇಶಕುಮಾರ, ಮುಖ್ಯಸ್ಥರು, ಅಭಾಸಂಯೋಜನೆ (ಹಣ್ಣುಗಳು), ಹಾಗೂ ಡಾ. ಪ್ರಶಾಂತ ಎ, ಸಹಾಯಕ ಪ್ರಾಧ್ಯಾಪಕರು, ಅಭಾಸಂಯೋಜನೆ (ಹಣ್ಣುಗಳು), ಇವರು ಪೋಪೆಲೋ ಚಿಪ್ಸ್ ಬಾಳೆ ತಳಿಯಲ್ಲಿ ಅಭಿವೃದ್ಧಿ ಪಡಿಸಿದ ಆಧುನಿಕ ಉತ್ಪಾದನಾ ತಾಂತ್ರಿಕತೆಗಳ ಮಾಹಿತಿ ಮಾಡಿಕೊಟ್ಟರು.

ಸಹಾಯಕ ಪ್ರಾಧ್ಯಾಪಕ ಡಾ. ಸುಮಂಗಲಾ ಕೌಲಗಿ, ಡಾ. ಸಚಿನಕುಮಾರ ನಂದಿಮಠ. ಡಾ. ನೇತ್ರಾವತಿ, ಡಾ. ಪ್ರತೀಕ್ಷಾ, ಡಾ. ರೇಖಾ ಕಾರಭಾರಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಗೋಕಾಕ, ಮೂಡಲಗಿ ತಾಲೂಕಿನಿಂದ ಬಾಳೆಯ ಪ್ರಗತಿಪರ ರೈತರು ಭಾಗವಹಿಸಿದ್ದರು. ನಂದಿತಾ ಜೆ.ಸಿ., ಕಾರ್ಯಕ್ರಮ ನಿರೂಪಿಸಿ, ಡಾ. ಪ್ರಶಾಂತ ಎ, ವಂದಿಸಿದರು.



ಅಭಿವೃದ್ಧಿ ಕಾಮಗಾರಿಗಳಿಗೆ 1.75 ಕೋಟಿ ರೂ. ಅನುದಾನ ಮಂಜೂರು

ಚಿಕ್ಕೋಡಿ: ತಾಲೂಕಿನ ಯಕ್ಸಂಬಾ, ನೇಜ, ವಡಗೋಲ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 1.75 ಕೋಟಿ ರೂ. ಅನುದಾನ ಶಾಸಕ ಗಣೇಶ ಹುಕ್ಕೇರಿ ಹಾಗೂ ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಮಂಜೂರಾಗಿದ್ದು, ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ 2 ಪ್ರಕಾಶ ಹುಕ್ಕೇರಿ ಅವರು ಯಕ್ಸಂಬಾ ಪಟ್ಟಣದಲ್ಲಿ ಸೋಮವಾರ ಆದೇಶ ಪ್ರತಿಗಳನ್ನು ಫಲಾನುಭವಿಗಳಿಗೆ ವಿತರಿಸಿದರು.



ಯಕ್ಸಂಬಾ ಪಟ್ಟಣದಲ್ಲಿ ವಾರ್ಡ್ ಸಂಖ್ಯೆ 15 ಮತ್ತು 16ರಲ್ಲಿ ಪ್ರತ್ಯೇಕವಾಗಿ 48.90 ಲಕ್ಷ ರೂ. ಹಾಗೂ 51.80 ಲಕ್ಷ ರೂ. ಮೊತ್ತದಲ್ಲಿ ವಿವಿಧ ಬಡಾವಣೆಗಳಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಅನುದಾನ ಮಂಜೂರಾಗಿದೆ. ವಡಗೋಲ ಗ್ರಾಮದ ಮುತ್ತಲಕೋಡಿ ಬೀರಸಿದ್ದೇಶ್ವರ ದೇವಸ್ಥಾನದ ಬಳಿ ಸಮುದಾಯ ಭವನಕ್ಕೆ 50 ಲಕ್ಷ ರೂ. ನೇಜ ಗ್ರಾಮದ ಹಾಲಸಿದ್ದನಾಥ ದೇವಸ್ಥಾನ ಕಟ್ಟಡ ನಿರ್ಮಾಣಕ್ಕೆ 15 ಲಕ್ಷ ರೂ, ವಿಠ್ಠಲ-ರುಕ್ಮಿಣಿ ದೇವಸ್ಥಾನ ಕಟ್ಟಡ ನಿರ್ಮಾಣಕ್ಕೆ 10 ಲಕ್ಷ ರೂ. ಬಿಡುಗಡೆಯಾಗಿರುವ ಮಂಜೂರಾತಿ ಪತ್ರಗಳನ್ನು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಯಕ್ಸಂಬಾ ಪಟ್ಟಣ ಪಂಚಾಯತಿ ಅಧ್ಯಕ್ಷ ಸುನೀಲ ಸಪ್ತಸಾಗರ, ಪಿಕೆಪಿಎಸ್ ಅಧ್ಯಕ್ಷ ಮಾರುತಿ ಮಾನೆ, ಶಿವಗೌಡ ಬಾವಚೆ, ದಸ್ತಗೀರ ಅವಟಿ, ಹಮಜಾ ದಾಡಿವಾಲೆ, ನಂದು ಹಿರೇಮಠ, ಸದಾಶಿವ ಕಾಗವಾಡೆ, ಮಲ್ಲಪ್ಪ ವಾಳಕೆ, ರಾಮು ಮಾರಾಪೂರೆ, ಅಶೋಕ ಭೀವಸೆ, ಪುರಸಭೆ ಮಾಜಿ ಅಧ್ಯಕ್ಷ ರಾಜು ಗುಂಡಕಲ್ಲೆ, ಅರುಣ ದೇಸಾಯಿ, ನೇಜ ಗ್ರಾಮದ ಪಿಕೆಪಿಎಸ್ ಅಧ್ಯಕ್ಷ ರಾಜು ಪಾಟೀಲ, ಅಪ್ಪಾಸಾಹೇಬ ಸುಟ್ಟಟ್ಟಿ, ಬಾಬಾಸಾಹೇಬ ಖಿಲಾರೆ, ಚಂದು ಖಿಲಾರೆ, ಶಿತೋಳೆ ಮುಂತಾದವರು ಇದ್ದರು.

ಮಕ್ಕಳ ಭವಿಷ್ಯಕ್ಕೆ ಅಂಗನವಾಡಿಗಳು ಆಶಾಕಿರಣ: ಮಹಾಂತೇಶ ಕೌಜಲಗಿ

ಬೈಲಹೊಂಗಲ: ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅಂಗನವಾಡಿಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಮಕ್ಕಳಿಗೆ ಪೌಷ್ಟಿಕ ಆಹಾರದ ಜೊತೆಗೆ ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸುವುದು ಸರ್ಕಾರದ ಆಶಯವಾಗಿದೆ ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ನಗರದ ಎಂ.ಜಿ.ಹೌಸಿಂಗ್ ಕಾಲೋನಿಯ ಬೇಂದ್ರೆ ನಗರದಲ್ಲಿ ನೂತನ ಅಂಗನವಾಡಿ ಕೇಂದ್ರ ಹಾಗೂ ವಿನಾಯಕ ನಗರದ ಹರಳಯ್ಯಾ ಕಾಲೋನಿ ಕೇಂದ್ರದ ನೂತನ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಸೋಮವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಬೈಲಹೊಂಗಲ ನಗರವನ್ನು ಸಂಪೂರ್ಣ ಅಭಿವೃದ್ಧಿ ಪಡಿಸಿ, ಮಾದರಿಯಾಗಿಸುವ ಗುರಿ ಇದೆ. ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಸರ್ಕಾರ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಪಾಲಕರು, ಸಾರ್ವಜನಿಕರು ಸರ್ಕಾರದ ಯೋಜನೆಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಎರಡು ಅಂಗನವಾಡಿ ಕೇಂದ್ರಗಳಿಗೆ ಒಟ್ಟು 40 ಲಕ್ಷ ರೂ.ಅನುದಾನ ಬಿಡುಗಡೆಯಾಗಿದ್ದು, ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಗುಣಮಟ್ಟದ



ಕಾಮಗಾರಿ ಕೈಗೊಂಡು ಪೂರ್ಣಗೊಳಿಸಬೇಕೆಂದು ಸೂಚಿಸಿದರು. ಒಳ್ಳೆಯ ಕಟ್ಟಡ ನಿರ್ಮಾಣಕ್ಕೆ ಸಾರ್ವಜನಿಕರು ಸಹಕಾರ ಅಗತ್ಯವಾಗಿದೆ ಎಂದರು.

ಸಿಡಿಪಿಒ ಅರುಣಕುಮಾರ ಎಸ್.ಬಿ., ನಗರಸಭೆ ಇಂಜಿನೀಯರ ಬಸನಗೌಡ ಪಾಟೀಲ, ಅಂಬಿಕಾ ಪ್ರಕಾಶ ಕೊಟಬಾಗಿ, ನಿವೃತ್ತ ದೈಹಿಕ ಶಿಕ್ಷಕ ಎಂ.ಎನ್. ಆನಿಕಿವಿ, ಮಾಜಿ ಸೈನಿಕ ಮುಶೆಪ್ಪ ಉಪ್ಪಾರ, ಮೇಲ್ವಿಚಾರಕಿ ಗಂಗಮ್ಮ ಮಡಿವಾಳರ, ಅಂಗನವಾಡಿ ಶಿಕ್ಷಕಿ ಚನ್ನಮ್ಮ ಈಟಿ, ಗಂಗಮ್ಮ ಇಜಾರದಾರ, ಸಾರ್ವಜನಿಕರು, ಅಂಗನವಾಡಿ ಮೇಲ್ವಿಚಾರಕರು, ಕಾರ್ಯಕರ್ತೆಯರು, ಪಾಲಕರು ಇದ್ದರು.

ವಿವಿಧ ಕನ್ನಡಪರ ಸಂಘಟನೆಗಳಿಂದ ಪ್ರತಿಭಟನೆ

ಬೆಳಗಾವಿ: ಜಿಲ್ಲಾಡಳಿತ, ಮಹಾನಗರ ಪಾಲಿಕೆ ಬೆಳಗಾವಿ, ಪ್ರವಾಸೋದ್ಯಮ ಇಲಾಖೆ ವತಿಯಿಂದ ಫೆ.24 ರಂದು ನಡೆಯಲಿರುವ ಕನ್ನಡ ಹಬ್ಬ ಕಾರ್ಯಕ್ರಮವನ್ನು ಬೆಳಗಾವಿ ವಿವಿಧ ಕನ್ನಡಪರ ಸಂಘಟನೆಗಳು ಬಹಿಷ್ಕಾರ ಹಾಕಿ ಆಕ್ರೋಶ ವ್ಯಕ್ತಪಡಿಸಿ ಜಿಲ್ಲಾಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಸೋಮವಾರ ನಗರದ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಸಭೆಯಲ್ಲಿ ಕರವೇ ಮುಖಂಡರು ಒಮ್ಮತದ ನಿರ್ಣಯ ಕೈಗೊಂಡರು. ಕನ್ನಡ ಹಬ್ಬ ಆಚರಣೆಗೆ ಸರಕಾರದಿಂದ ಅನುದಾನ ತರಲು ಕನ್ನಡಪರ ಸಂಘಟನೆಗಳು ಹೋರಾಟ ನಡೆಸಿ, ಅನುದಾನ ತಂದಿವೆ. ಆದರೆ ಜಿಲ್ಲಾಡಳಿತವು ಕನ್ನಡ ಹಬ್ಬದ ಕುರಿತು ಯಾರಿಗೂ ಮಾಹಿತಿ ನೀಡದೇ ಏಕಪಕ್ಷೀಯವಾಗಿ ನಿರ್ಧಾರಿಸಲಾಗಿದೆ ಕನ್ನಡಿಗರಿಗೆ ಅಪಮಾನ ಮಾಡುವಂತಾ ಕೆಲಸ ಕೈ ಹಾಕಿದೆ ಎಂದು ಜಿಲ್ಲಾಡಳಿತದ ವಿರುದ್ಧ ಅಸಮಾಧಾನ ಹೊರ ಹಾಕಿದರು.

ಸರಕಾರದಿಂದ ಕನ್ನಡ ರಾಜ್ಯೋತ್ಸವ ಆಚರಣೆಗಾಗಿ ಸರಕಾರ 50 ಲಕ್ಷ ರೂ. ಅನುದಾನ ನೀಡಿತು. ಅದರಲ್ಲಿ 11 ಲಕ್ಷ ರೂ. ವೆಚ್ಚದಲ್ಲಿ ರಾಜ್ಯೋತ್ಸವ ಆಚರಿಸಲಾಗಿತ್ತು. ಉಳಿದ 39 ಲಕ್ಷ ರೂ. ಗಳಲ್ಲಿ ಕನ್ನಡ ಹಬ್ಬ ಆಚರಣೆಗೆ ಜಿಲ್ಲಾಡಳಿತ ವ್ಯವಸ್ಥೆ ಮಾಡಿಕೊಂಡಿದೆ. ಆದರೆ ಪೂರ್ವಭಾವಿ ಸಭೆ ನಡೆಸದೇ ಕನ್ನಡಪರ ಸಂಘಟನೆಗಳ, ಕನಿಷ್ಠ ಪಕ್ಷ ಮಾಧ್ಯಮದವರ ಗಮನಕ್ಕೂ ತರದೇ ಏಕಪಕ್ಷೀಯವಾಗಿ ಕಾರ್ಯಕ್ರಮ ಆಯೋಜಿಸಿರುವುದು ಕನ್ನಡಪರ ಸಂಘಟನೆಗಳ ಮುಖಂಡರ ಆಕ್ರೋಶಕ್ಕೆ ಕಾರಣವಾಗಿದೆ.

ಕನ್ನಡಪರ ಸಂಘಟನೆಗಳ ಸಭೆಯಲ್ಲಿ, ಕರವೇ ಮುಖಂಡ ಮಹಾದೇವ ತಳವಾರ ಮಾತನಾಡಿ, ಕನ್ನಡ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿದಿಲ್ಲ, ಕನ್ನಡ ಹಬ್ಬದ ಕಾರ್ಯಕ್ರಮದ ವಿರೋಧವಿಲ್ಲ



ಜಿಲ್ಲಾಧಿಕಾರಿ ನಡೆ ವಿರೋಧಿಸಲಾಗುತ್ತಿದೆ. ಗಡಿ ಪ್ರಾಧಿಕಾರಿದ ವತಿಯಿಂದ ನೀಡಿದ 50 ಲಕ್ಷ ರೂ. ಅನುದಾನವನ್ನು ನೀಡಲಾಗಿದೆ ಆದರೆ ಜಿಲ್ಲಾಡಳಿತ ಯಾರಿಗೂ ಹೇಳದೆ ಏಕಾಏಕಿಯಾಗಿ ಕನ್ನಡ ಹಬ್ಬವನ್ನು ಮಾಡುವುದಕ್ಕೆ ಮುಂದಾಗಿರುವುದು ಯಾವ ಉದ್ದೇಶಕ್ಕೆ ಇಷ್ಟು ತರಾತೂರಿಯಲ್ಲಿ ಕನ್ನಡ ಹಬ್ಬವನ್ನು ಮಾಡುತ್ತಿರುವುದು ಯಾವ ಉದ್ದೇಶಕ್ಕಾಗಿ ಎಂದು ಜಿಲ್ಲಾಡಳಿತದ ಮೇಲೆ ಅನುಮಾನ ಬರುತ್ತಿದೆ ಎಂದು ಆರೋಪಿಸಿದರು.

ರಾಜ್ಯ ಸರಕಾರವು ಕನ್ನಡ ಹಬ್ಬಕ್ಕೆ 50 ಲಕ್ಷ ರೂ ಅನುದಾನ ನೀಡಿದೆ ಅದನ್ನು ಉತ್ತಮವಾಗಿ ರಾಜ್ಯೋತ್ಸವಕ್ಕೆ ಬಳಸಬೇಕಾಗಿದೆ, ಆದರೆ ಜಿಲ್ಲಾಡಲಿತ ಆ ಹಣವನ್ನು ವ್ಯರ್ಥ ಮಾಡುವುದಕ್ಕೆ ಹೋರಟಿದೆ. ಒಂದು ವೇಳೆ ಕನ್ನಡಪರ ಸಂಘಟನೆಗಳ ಒಪ್ಪಿಗೆ ಇಲ್ಲದೆ ಇಂದು ಫೆ.24 ರಂದು ಜಿಲ್ಲಾ ಕ್ರಿಡಾಂಗಣದಲ್ಲಿ ಕನ್ನಡ ಹಬ್ಬವನ್ನು ಆಚರಿಸಿದರೆ ಜಿಲ್ಲಾಡಳಿತದ ವಿರುದ್ಧ ಉಗ್ರವಾಗಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಕನ್ನಡಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ, ಮಹಾದೇಶ ತಳವಾರ, ವಾಜೀದ್ ಹಿರೇಕುಂಡಿ, ಶ್ರೀನಿವಾಸ್ ತಾಳೂರುಕರ್, ಯೂನಿಸ್, ಸೇರಿದಂತೆ ಹಲವು ಕನ್ನಡಪರ ಕಾರ್ಯಕರ್ತರು ಇದ್ದರು.

ಪ್ರವಾಸದ ಸದುಪಯೋಗ ಪಡೆದುಕೊಳ್ಳಿ

ಸವದತ್ತಿ: ಎಸ್‌ಸಿ, ಎಸ್‌ಟಿ ವರ್ಗದ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದ ಉಚಿತ ಪ್ರವಾಸ ಯೋಜನೆಯನ್ನು ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದು ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ಶಾಸಕ ವಿಶ್ವಾಸ್ ವಸಂತ ವೈದ್ಯ ಹೇಳಿದರು.

ತಾಲೂಕಾ ಕ್ರೀಡಾಂಗಣದಲ್ಲಿ ಹಸಿರು ನಿಶಾನೆ ತೋರಿಸಿ ಕರ್ನಾಟಕ ದರ್ಶನ ಪ್ರವಾಸಕ್ಕೆ ಚಾಲನೆ ನೀಡಿ ಮಾತನಾಡಿ, ಕರ್ನಾಟಕ ದರ್ಶನಕ್ಕೆ ಶುಭ ಕೋರಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ ಖಾಜಿ ಮಾತನಾಡಿ, ಪ್ರವಾಸದ ಅವಧಿಯಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸುರಕ್ಷಿತವಾಗಿ ಶೈಕ್ಷಣಿಕ ಪ್ರವಾಸ ಮಾಡಲು ವಿದ್ಯಾರ್ಥಿಗಳಿಗೆ ಸೂಚನೆ ನೀಡಿ ಶೈಕ್ಷಣಿಕ ಸ್ಥಳಗಳ ಮಹತ್ವ ಟಿಪ್ಪಣಿ ಮಾಡಿಕೊಳ್ಳಲು ಸೂಚಿಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕಿರಣ್ ಕುರಿ ಪ್ರಶಾಂತ ಹಂಪ್ಪನ್ನವರ ಪ್ರಕಾಶ, ಹೆಮ್ಮರಡಿ, ಸುನಿಲ ಏಗನಗೌಡರ, ಜಗದೀಶ ಶಿರಸಂಗಿ ಶಿವಾನಂದ ಪಟ್ಟಣಶೆಟ್ಟಿ ಗಿರೀಶ್ ಮುನವಳ್ಳಿ, ಎನ್‌ಜಿಒ ಸಂಘದ ಸದಸ್ಯರಾದ ಮಹಾಂತೇಶ ಬ್ಯಾಹಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಶಿಕ್ಷಣ ಸಂಯೋಜಕ ಅರ್ಜುನ ಕಾಮಣ್ಣವರ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಎಂ. ಎನ್. ಕರಡಿಗುಡ್ಡ ಶಿಕ್ಷಕರಾದ ರುದ್ರಪ್ಪ ನಿಲೂಗಲ್ಲ ಹಾಗೂ ಮಹಿಳಾ ಶಿಕ್ಷಕಿಯರಾದ ಯಲಿಗಾರ, ಜಯಶ್ರೀ ಬಡಕಪ್ಪನವರ ಉಪಸ್ಥಿತರಿದ್ದರು.



ಸಂಘಕ್ಕೆ ಸಹಕಾರ ನೀಡುವೆ: ಸರ್ವೋತ್ತಮ



ಗೋಕಾಕ: ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಸಂಘ ಕಾರ್ಯ ಶ್ಲಾಘನೀಯವಾಗಿದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಕಾರ್ಯ ಮಾಡುವ ಮೂಲಕ ಸಮಾಜದ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಸೇವೆಯನ್ನು ಸಂಘವು ನೀಡಲಿ. ಮುಂಬರುವ ದಿನಗಳಲ್ಲಿ ಈ ಸಂಘಕ್ಕೆ ಸಹಾಯ ಸಹಕಾರ ಸದಾ ನೀಡುತ್ತೇವೆ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ಗೌರವಾಧ್ಯಕ್ಷ ಸರ್ವೋತ್ತಮ ಜಾರಕಿಹೊಳಿ ಹೇಳಿದರು.

ಬೆಳಗಾವಿಯ ಕನ್ನಡ ಭವನದಲ್ಲಿ ಜರುಗಿದ ನಾಡಿನ ಸಮಾಚಾರ ಸೇವಾ ಸಂಘದ ದಶಮಾನೋತ್ಸವ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ಶಿಂದಿಕುರಬೇಟ ಗ್ರಾಮದ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲಿಕ್ಕೆ ಗ್ರಾಮಸ್ಥರ ಹಾಗೂ ಶಿಕ್ಷಕರ ಮತ್ತು ಎಸ್‌ಡಿಎಂಸಿ ಯವರ ಸಹಕಾರ ಮುಖ್ಯವಾಗಿದೆ. ಶಿಕ್ಷಕರು ಮತ್ತು ಗ್ರಾಮಸ್ಥರು ಒಗ್ಗಟ್ಟಾಗಿ ಸೇವೆ ಮಾಡುವುದರ ಮೂಲಕ ಇನ್ನೂ ಸಮಾಜಕ್ಕೆ ಉತ್ತಮ ಕೊಡುಗೆಯನ್ನು ನೀಡಬೇಕು ಎಂದರು.

ತಾಲೂಕಿನ ಶಿಂದಿಕುರಬೇಟ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಗೆ ರಾಜ್ಯ ಮಟ್ಟದ ಅತ್ಯುತ್ತಮ ಶಾಲೆಯ ಪ್ರಶಸ್ತಿಯನ್ನು ಕಾರ್ಯನಿರತ ಪತ್ರಕರ್ತರ ಸಂಘದ ಗೌರವಾಧ್ಯಕ್ಷ ಸರ್ವೋತ್ತಮ ಜಾರಕಿಹೊಳಿ ನೀಡಿ ಗೌರವಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ವಿಜಯಾ ವಿಷ್ಣುಭಟ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವೀಣಾ ಪಾಟೀಲ, ಎಬೆನೇಜರ್ ಕರಬನ್ನವರ, ಸಾವಿತ್ರಿ ಕಮಲಾಪೂರ, ದೇವಿಕಾ ಶೆಟ್ಟಿ, ಎಸ್.ಡಿ.ಹಂಚಿನಾಳ, ಮಧುಮತಿ ಪಾಟೀಲ, ಶ್ವೇತಾ ಸಾಲಿಮಠ, ಸಂಸ್ಥೆಯ ಅಧ್ಯಕ್ಷ ಬಸವರಾಜ ಉಪ್ಪಾರಹಟ್ಟಿ, ಸಿಆರ್‌ಪಿ ಎಸ್.ಬಿ.ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರುತಿ ಜಾಧವ ನಿರೂಪಿಸಿ, ವಂದಿಸಿದರು.

ಕಿರುಸುದ್ದಿ

ಕಲ್ಲು ತೂರಾಟ ಖಂಡನೀಯ



ಹುನಗುಂದ: ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಮೆರವಣಿಗೆ ವೇಳೆಯಲ್ಲಿ ಕಿಡಿಗೇಡಿಗಳು ಕಲ್ಲು ತೂರಾಟ ಹಾಗೂ ಚಪ್ಪಲಿ ಎಸೆತ ಕೃತ್ಯ ತೀವ್ರವಾಗಿ ಖಂಡಿಸುತ್ತೇನೆ ಎಂದು ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು. ಪಟ್ಟಣದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಒಂದು ಕೃತ್ಯದಲ್ಲಿ ಯಾವ ಸಮಾಜಘಾತಕ ಶಕ್ತಿಗಳು ಭಾಗಿಯಾಗಿದೆಯೋ ಆ ಎಲ್ಲರನ್ನು ಗುರುತಿಸಿ ತಕ್ಷಣವೇ ಬಂಧಿಸಬೇಕು. ಈ ಘಟನೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಪೊಲೀಸ್ ಸಿಬ್ಬಂದಿಗಳಿಗೆ ಗಾಯವಾಗಿದೆ. ಇಂತಹ ಕೃತ್ಯಗಳಿಂದ ಹಿಂದೂ ಸಮಾಜ ಎದುರಿಸಲು ಸಾಧ್ಯವಿಲ್ಲ, ಅದು ನಡೆಯೋದು ಇಲ್ಲ, ಹಿಂದೂ ಸಮಾಜ ಒಂದಾಗಿ ಒಗ್ಗಟ್ಟಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲ್ಯಾ ಈ ರೀತಿ ಘಟನೆಗಳು ನಡೆಯುತ್ತಿವೆ ಎಂದು ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಮಾ.3ರಂದು ಕಾಮಣ್ಣನ ಪ್ರತಿಷ್ಠಾಪನೆ

ಗುಳೇದಗುಡ್ಡ: ಪಟ್ಟಣದಲ್ಲಿ ಹೋಳಿಹುಣ್ಣಿಮೆಯ ಅಂಗವಾಗಿ ಮಾ. 3 ರಂದು ಕಾಮಣ್ಣನ ಪ್ರತಿಷ್ಠಾಪನೆ ಹಾಗೂ 4ರಂದು ಬಣ್ಣದ ಓಕಳಿ ಆಚರಿಸಲು ರವಿವಾರ ಸಂಜೆ ಪಟ್ಟಣದ ದೇವಾಂಗ ಕಲ್ಯಾಣಮಂಟಪದಲ್ಲಿ ಎಲ್ಲ ಸಮಾಜದ ಮುಖಂಡರು, ಪ್ರಮುಖರ ಸಭೆಯಲ್ಲಿ ನಿರ್ಣಯಿಸಲಾಯಿತು. ಮಾ.3ರಂದು ಹೋಳಿಹುಣ್ಣಿಮೆಯಂದು ಸೂರ್ಯಗ್ರಹಣ ಇರುವುದರಿಂದ ಅಂದು ಬೆಳಿಗ್ಗೆ 9 ಗಂಟೆಯ ಒಳಗೆ ಕಾಮಣ್ಣನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಬೇಕು. ರಾತ್ರಿ 8 ಗಂಟೆಯ ನಂತರ ಕಾಮದಹನ ಮಾಡಬೇಕು. ಮರುದಿನ ಅಂದರೆ ಮಾ. 4ರಂದು ಬಣ್ಣದ ಓಕಳಿ ಆಚರಿಸಲು ಸಾರ್ವಜನಿಕ ಸಭೆಯಲ್ಲಿ ನಿರ್ಣಯಿಸಲಾಯಿತು. ಹೋಳಿ ಹಬ್ಬ ನಮ್ಮ ಸಾಂಪ್ರದಾಯಿಕ ಹಬ್ಬವಾಗಿದ್ದು, ಪಟ್ಟಣದ ವಿವಿಧ ಮ್ಯಾಳಗಳಿಂದ, ಸಂಘಟನೆಗಳಿಂದ ವಿಶೇಷ ಕಾರ್ಯಕ್ರಮ, ಹಣದಾಡಗಿನ ಮೆರವಣಿಗೆ ಹಮ್ಮಿಕೊಳ್ಳಲಾಗುತ್ತಿದ್ದು ಎಲ್ಲ ಸಾರ್ವಜನಿಕರು ಊರಲ್ಲಿಯೇ ಇದ್ದು ಸಂಭ್ರಮದಿಂದ ಹೋಳಿ ಹಬ್ಬ ಆಚರಿಸುವಂತೆ ಎಲ್ಲರನ್ನು ಕೋರಲಾಯಿತು. ಸಭೆಯಲ್ಲಿ ಪಟ್ಟಣದ ಎಲ್ಲಾ ಸಮಾಜದ ಹಿರಿಯರು, ಮುಖಂಡರು, ಸಾರ್ವಜನಿಕರು ಭಾಗವಹಿಸಿದ್ದರು.

ಇಂದು ಪ್ರತಿಭಟನೆ

ಕಲಾದಗಿ: ಸಮೀಪದ ತುಳಸಿಗೇರಿಯಲ್ಲಿರುವ ಸರ್ಕಾರಿ ಕುವೆಂಪು ಶತಮಾನೋತ್ಸವ ಮಾದರಿ ಪ್ರಾಥಮಿಕ ಶಾಲೆಯ ಗಣಕೀಕೃತ ಉತಾರನ್ನು ನೀಡಬೇಕೆಂದು ಆಗ್ರಹಿಸಿ ಫೆ.24ರಂದು ಮಂಗಳವಾರ ದೇವನಾಳ ಗ್ರಾಮಪಂಚಾಯತಿಗೆ ಬೀಗ ಹಾಕಿ ಪ್ರತಿಭಟನೆ ಮಾಡಲಾಗುವುದು ಎಂದು ಶಾಲಾ ಸುಧಾರಣಾ ಸಮಿತಿಯವರು ಹೇಳಿದ್ದಾರೆ. ಈ ಬಗ್ಗೆ ಪತ್ರಿಕಾ ಪ್ರಕಟಣೆಯೊಂದನ್ನು ನೀಡಿರುವ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಗೋಪಾಲ ದೊಡಮನಿ ಮತ್ತು ಸದಸ್ಯರು ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ದೇವನಾಳ ಮನರ್ವಸತಿ ಕೇಂದ್ರದಲ್ಲಿ ಶಾಲಾ ಕಟ್ಟಡಕ್ಕೆ 2017 ರಲ್ಲಿಯೇ ನೀಡಿರುವ 22 ನಿವೇಶನಗಳಲ್ಲಿಯೇ ಸದ್ಯದ ಕಟ್ಟಡವಿದ್ದು ಅದೇಷ್ಟೇ ಮನವಿ ಮಾಡಿದರು ಈವರೆಗೂ ದೇವನಾಳ ಗ್ರಾಮ ಅಧಿಕಾರಿಗಳು ಶಾಲೆಯ ಗಣಕೀಕೃತ ಉತಾರನ್ನು ನೀಡದೆ ಸತಾಯಿಸುತ್ತಿದ್ದಾರೆ ಕಳೆದ 2020ರ ಡಿಸೆಂಬರ್‌ನಿಂದಲೂ ಈವರೆಗೆ ಅನೇಕ ಬಾರಿ ಮನರ್ವಸತಿ ಅಧಿಕಾರಿಗಳಿಗೆ, ಸಂಬಂಧಿಸಿದ ತಾಪಂ, ಗ್ರಾಪಂ ಅಧಿಕಾರಿಗಳಿಗೆ ಈ ಬಗ್ಗೆ ಮನವಿ ಮಾಡಿದರು, ಮುಖತಃ ಭೇಟಿಯಾಗಿ ಕೋರಿದರು ಈವರೆಗೂ ಶಾಲೆಯ ಗಣಕೀಕೃತ ಉತಾರನ್ನು ನೀಡಲು ಗ್ರಾಪಂನವರು ಹಿಂದೇಟು ಹಾಕುತ್ತಿದ್ದಾರೆ ಎಂದು ಆಪಾದಿಸಿದ್ದಾರೆ. ಗಣಕೀಕೃತ ಉತಾರನ್ನು ನೀಡಲು ಆಗ್ರಹಿಸಿ ದಿ:24 ರಂದು ಮುಂಜಾನೆಯಿಂದ ದೇವನಾಳ ಗ್ರಾಪಂಗೆ ಬೀಗ ಹಾಕಿ ಅನಿರ್ದಿಷ್ಟಾವಧಿವರೆಗೆ ಶಾಂತಿಯುತ ಪ್ರತಿಭಟನೆ ನಡೆಯಲಾಗುವುದು ಎಂದು ತಿಳಿಸಿದ್ದಾರೆ.

ನಿಧನ ಸುದ್ದಿ

ಅಂಬುತಾಯಿ ರಾಮತೀರ್ಥ



ಗಲಗಲಿ: ಗ್ರಾಮದವರಾದ ಬ್ರಾಹ್ಮಣ ಸಮಾಜದ ಹಿರಿಯ ಜೀವಿ ಅಂಬುತಾಯಿ (ಅಂಬಕ್ಕ) ರಾಮತೀರ್ಥ(88 ಧಾರವಾಡದಲ್ಲಿ ಶುಕ್ರವಾರ ನಿಧನರಾದರು. ಮೃತರು ಸಹೋದರಿ ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.



ಬಾಗಲಕೋಟೆ: ನಗರದ ಸೋನಾರ್ ಲೇಔಟ್‌ದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸ್ಥಾಪನೆಗೆ ನಿಯೋಜಿಸಿರುವ ಸ್ಥಳಕ್ಕೆ ಮತ್ತು ಶಿವಾಜಿ ಮಹಾರಾಜರ ಹಾಗೂ ವಿಶ್ವಗುರು ಬಸವಣ್ಣನವರ ಪುತ್ಥಳಿ ಗಳಿಗೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಲಾಯಿತು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ರವರು ಸೇರಿದಂತೆ ಹಿಂದೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಅಗ್ನಿಶಾಮಕ ನೂತನ ವಾಹನ ಲೋಕಾರ್ಪಣೆ

ಜಮಖಂಡಿ: ಸಮೀಪದ ಹುಲ್ಯಾಳ ಕ್ರಾಸ್ ಹತ್ತಿರ ಇನಾಮಹಂಚಿನಾಳ ಪುನರ್ ವಸತಿ ಕೇಂದ್ರದಲ್ಲಿದ್ದ ಅಗ್ನಿಶಾಮಕ ಠಾಣೆಯ ಆವರಣದಲ್ಲಿ ಅಗ್ನಿಶಾಮಕ ನೂತನ ವಾಹನ ಲೋಕಾರ್ಪಣೆಯನ್ನು ಶಾಸಕ ಜಗದೀಶ ನೆರವೇರಿಸಿದರು. ನಂತರ ಮಾತನಾಡಿದ ಅವರು, ಅಗ್ನಿಶಾಮಕ ದಳದ ಸಿಬ್ಬಂದಿಗಳು ಜಲ ಬೆಂಕಿ ಸಂದಿಗ್ಧ ಸ್ಥಿತಿಯಲ್ಲಿ ಜೀವನ ಹಂಗು ತೊರೆದು ಮಾಡುತ್ತಾರೆ. ಇಂದು ಈ ನೂತನ ವಾಹನ ಪರೀಕ್ಷೆ ಮಾಡಿದ್ದಾರೆ. ಯಾವುದೇ ಉದ್ಯಮದಲ್ಲಿ ಬೆಂಕಿ ಅವಘಡ ಆಗಿದರೆ ವಿಮೆ ಇದೆ. ಅದರ ಜೊತೆಗೆ ಅಗ್ನಿಶಾಮಕ ಇಲಾಖೆ ಸಹಜ ಸಹಕಾರ ನೀಡಿ ಬೆಂಕಿ ನಂದಿಸುವಲ್ಲಿ ಶ್ರಮಿಸುತ್ತಾರೆ. ಪ್ರಕೃತಿ ವಿಕೋಪದಲ್ಲಿಯೂ ಕೈಜೋಡಿಸುತ್ತಾರೆ. ರಕ್ಷಣಾ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದಾರೆ. ನಿಮಗೆ ಸಹಾಯ ಸಹಕಾರ ಸದಾ ಕಾಲವಿದೆ ಎಂದರು. ಬಾಗಲಕೋಟೆ ಘಟನೆ ಖಂಡನೀಯವಾಗಿದೆ. ಅಪರಾಧವೆಸಗಿದವರನ್ನು ಬಂಧಿಸಿ ಶಿಕ್ಷೆಗೊಳಿಸಬೇಕು. ಹಿಂದುಗಳ ವಿರುದ್ಧ ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ಹಿಂದೂ ದೇಶದಲ್ಲದ್ದು ಇಂತಹ ಕೃತ್ಯ ಮಾಡಿದ್ದು ಅಪರಾಧವಾಗಿದೆ. ಇವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಅಲಿದ್ದ ಎಲ್ಲರನ್ನೂ ಬಂಧಿಸಿದಾಗ ಮಾತ್ರ ಶಂತಿ ನೆಲೆಯೂರತ್ತದೆ. ಮತ್ತೊಮ್ಮೆ ಇಂತಹ ಘಟನೆಗಳು ಜರುಗದಂತೆ ಇಲಾಖೆಯು ನಿಗಾವಹಿಸಬೇಕು. ಮಸೀದಿಗಳಲ್ಲಿ ಕಲ್ಲು ಚಪ್ಪಲಿ ಇಡುವ ಸ್ಥಳವಾಗದೇ ಶ್ರದ್ಧಾ ಕೇಂದ್ರಗಳಾಗಬೇಕು ಎಂದು ಹೇಳಿದರು. ಅಗ್ನಿಶಾಮಕ ದಳದ ಅಧಿಕಾರಿ ನಿಂಗಪ್ಪ ಹೂಗಾರ, ನಾಗಪ್ಪ ಸನದಿ, ಸುರೇಶಗೌಡ ಪಾಟೀಲ, ಈಶ್ವರ ಕರಬಸನವರ, ಅಜೇಯ ಕಡಪಟ್ಟಿ, ಮಲ್ಲು ದಾನಗೌಡ, ಶ್ರೀಧರ ಕಂಬಿ, ನವೀನ ಚನಾಳ, ಅಗ್ನಿಶಾಮಕ ದಳದ ಸಿಬ್ಬಂದಿ ಇದ್ದರು.



ಜಮಖಂಡಿ: ಸಮೀಪದ ಹುಲ್ಯಾಳ ಕ್ರಾಸ್ ಹತ್ತಿರ ಇನಾಮಹಂಚಿನಾಳ ಪುನರ್ ವಸತಿ ಕೇಂದ್ರದಲ್ಲಿದ್ದ ಅಗ್ನಿಶಾಮಕ ಠಾಣೆಯ ಆವರಣದಲ್ಲಿ ಅಗ್ನಿಶಾಮಕ ನೂತನ ವಾಹನ ಲೋಕಾರ್ಪಣೆಯನ್ನು ಶಾಸಕ ಜಗದೀಶ ನೆರವೇರಿಸಿದರು. ಅಗ್ನಿಶಾಮಕ ದಳದ ಅಧಿಕಾರಿ ನಿಂಗಪ್ಪ ಹೂಗಾರ, ನಾಗಪ್ಪ ಸನದಿ, ಸುರೇಶಗೌಡ ಪಾಟೀಲ, ಈಶ್ವರ ಕರಬಸನವರ, ಅಜೇಯ ಕಡಪಟ್ಟಿ, ಮಲ್ಲು ದಾನಗೌಡ, ಶ್ರೀಧರ ಕಂಬಿ, ನವೀನ ಚನಾಳ, ಅಗ್ನಿ ಶಾಮಕ ದಳದ ಸಿಬ್ಬಂದಿ ಇದ್ದರು.

ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೆ ಯಾವಾಗ?

ವೈದ್ಯಾಧಿಕಾರಿ, ಸಿಬ್ಬಂದಿ ಭರ್ತಿಗೆ ಆಗ್ರಹ

▸ ನಿತೀಶ ಪಾಟೀಲ

ಕಲಾದಗಿ: ಬಾಗಲಕೋಟೆ ಜಿಲ್ಲೆಯಲ್ಲಿ ಅತೀ ವೇಗವಾಗಿ ಬೆಳೆಯುತ್ತಿರುವ ಹಾಗೂ ಅತಿಹೆಚ್ಚು ಜನದಟ್ಟನೆ ಹೆಚ್ಚುತ್ತಿರುವ ಗ್ರಾಮಗಳ ಪೈಕಿ ಕಲಾದಗಿ ಮುಂಚೂಣಿಯಲ್ಲಿದ್ದು, ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬರುತ್ತಿರುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು ಈ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಬೇಕು ಎನ್ನುವ ಬೇಡಿಕೆ ಹಲವು ವರ್ಷಗಳಿಂದ ಸಾರ್ವಜನಿಕ ವಲಯದಿಂದ ಕೇಳಿ ಬರುತ್ತಿದೆ.

ಬ್ರಿಟಿಷರ ಕಾಲದಲ್ಲಿ ಜಿಲ್ಲಾ ಕೇಂದ್ರವಾಗಿದ್ದ ಕಲಾದಗಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಕಟ್ಟಡಗಳು, ವಸತಿ ಸಮುಚ್ಚಯಗಳು ಹಳೆಯದಾಗಿದ್ದು ಮೇಲಿಂದ ಮೇಲೆ ದುರಸ್ತಿ ಕಾರ್ಯವಾಗುತ್ತಿದೆ. ಮಂಜೂರಾದ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳ ಹುದ್ದೆಗಳ ಪೈಕಿ ಬಹುತೇಕ ಖಾಲಿಯಿದ್ದು ಸದ್ಯ ಇಬ್ಬರು ವೈದ್ಯರ ಪೈಕಿ ಒಬ್ಬರು ಮಾತ್ರ ಲಭ್ಯವಿದ್ದು ಅವರೂ ಕೂಡಾ ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಭಾರಿಯಾಗಿ ಸೇವೆ ಸಲ್ಲಿಸುತ್ತಿದ್ದು ಇದರ ಭರ್ತಿಗೂ ಕ್ರಮವಾಗದಿರುವುದು ವಿಪರ್ಯಾಸ. ಬೈಯೋಕಾನ ಫೌಂಡೇಶನ ಸಹಕಾರದಿಂದ ಸದ್ಯ 3 ಜನ ಹೆಚ್ಚುವರಿ ಸಿಬ್ಬಂದಿ ಲಭ್ಯರಿದು ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯ ಗ್ರಾಮಗಳ ಜನಸಂಖ್ಯೆ ಹೆಚ್ಚಾಗಿರುವುದರಿಂದ ಪ್ರತಿದಿನ 150ಕ್ಕೂ ಹೆಚ್ಚು ಹೋರ ರೋಗಿಗಳ ತಪಾಸಣೆ 8-10 ಒಳ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದ್ದು ಅಗತ್ಯ



ದಿಗಂತ ವಿಶೇಷ

ಮೂಲ ಸೌಕರ್ಯ, ಸಿಬ್ಬಂದಿ ಹಾಗೂ ವೈದ್ಯರ ಕೊರತೆಯಿಂದ ಸಮರ್ಪಕ ಆರೋಗ್ಯ ಸೇವೆ ದೊರಕುತ್ತಿಲ್ಲ ಎನ್ನುವುದು ಗ್ರಾಮಸ್ಥರ ಅಸಮಾದಾನಕ್ಕೆ ಕಾರಣವಾಗಿದೆ.

ದಿನದ 24ಗಂಟೆಯೂ ಉತ್ಕೃಷ್ಟ ಆರೋಗ್ಯ ಸೇವೆಯ ಜೊತೆಗೆ ತುರ್ತು ಚಿಕಿತ್ಸೆ, ಹೆರಿಗೆ, ದಂತ ಚಿಕಿತ್ಸೆ, ಮಕ್ಕಳ ಮತ್ತು ಹಾವು ಕಡಿತ ಸೇರಿದಂತೆ ತೀವ್ರ ಅನಾರೋಗ್ಯದ ಸಂದರ್ಭದಲ್ಲಿ ತಕ್ಷಣದ ಪ್ರಥಮ ಚಿಕಿತ್ಸೆ, ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆ, ಎಕ್ಷ ರೇ, ಸ್ಕ್ಯಾನಿಂಗ, ಪ್ರತಿ ಕೇಂದ್ರಕ್ಕೆ ಒಬ್ಬ ಆಯುಷ ವೈದ್ಯಾಧಿಕಾರಿ ಸಹಿತ 4ಜನ ವೈದ್ಯಾಧಿಕಾರಿಗಳು ಮತ್ತು ವಿಶೇಷ ತಜ್ಞರ ಆಪರೇಷನ ಥೀಯೇಟರ್, ಹೆಚ್ಚಿನ ಔಷದಗಳು, 30 ಹಾಸಿಗೆಗಳ ಬೆಡ್, 108 ಆ್ಯಂಬ್ಯುಲೆನ್ಸ್, ಸುಸಜ್ಜಿತ ಪ್ರಯೋಗಾಲಯದ ಜೊತೆಗೆ ಕಿರಿಯ ಆರೋಗ್ಯ ಸಹಾಯಕರು ಮತ್ತು ಸಿಬ್ಬಂದಿಗಳ ಸಂಖ್ಯೆ ಹೆಚ್ಚಾಗುವುದರಿಂದ ಸಮುದಾಯದ ಜನರ ಆರೋಗ್ಯ ಉಪಕ್ರಮ ಸುಧಾರಿಸುವಲ್ಲಿ ಸಹಕಾರಿಯಾಗಲಿದೆ ಎಂದು ಪ್ರಭಾರಿ ವೈದ್ಯಾಧಿಕಾರಿ ಡಾ.ಅನೀಲ ಬದ್ನೂರ ಹೇಳುತ್ತಾರೆ.

ತುರ್ತು ಚಿಕಿತ್ಸೆಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋದಾಗ ತಜ್ಞ ವೈದ್ಯರು ಮತ್ತು ಸರಿಯಾದ ಸೌಲಭ್ಯಗಳು ಸಿಗದೇ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಕಳಿಸುವುದರಿಂದ ಸಮಯ ವ್ಯರ್ಥವಾಗಿ ಜೀವ ಕಳೆದುಕೊಳ್ಳುವ ಸಂಭನೀಯವೇ ಹೆಚ್ಚು, ಹಾಗಾಗಿ ನಮ್ಮೂರಿನ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿದರೆ ಬಡ ಮತ್ತು ಮಧ್ಯಮ ವರ್ಗದ ಜನರ ಆರೋಗ್ಯ ಕಾಪಾಡಿದಂತಾಗುತ್ತದೆ ಎಂದು ಸಾಮಾಜಿಕ ಕಾರ್ಯಕರ್ತ ಶ್ರೀಧರ ಮಾದರ ಆಗ್ರಹಿಸಿದರು.

> **ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಆರೋಗ್ಯ ಸಚಿವರ ಗಮನದಲ್ಲಿದ್ದು ಅವರಿಂದ ಉತ್ತಮ ಸ್ಪಂದನೆ ಸಿಕಿದೆ. ಖಾಯಂ ಆಗಿ ಇರುವಂತೆ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳ ನೇಮಕ ಮಾಡುವ ಬಗ್ಗೆ ಅಧಿಕಾರಿಗಳಿಗೆ ಸೂಚಿಸುತ್ತೇನೆ.**
> ■ **ಜೆ.ಟಿ.ಪಾಟೀಲ, ಶಾಸಕರು ಬೀಳಗಿ**

> **ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೇರಿಸುವ ಬಗ್ಗೆ ಈಗಾಗಲೇ ಸರ್ಕಾರದ ಮಟ್ಟದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದೇವೆ. ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆ ಮಾಡುವ ವೈದ್ಯರ ಕೊರತೆ ಇದೆ. ಮುಂದಿನ 2-3ತಿಂಗಳಲ್ಲಿ ಖಾಯಂ ಆಗಿರುವಂತೆ ವೈದ್ಯರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳುತ್ತೇವೆ.**
> ■ **ಡಾ.ಮಂಜುನಾಥ. ಡಿಎಚ್‌ಒ ಬಾಗಲಕೋಟೆ**

ಪ್ರಪಂಚ, ಪಾರಮಾರ್ಥ ಎರಡು ಒಂದೇ

ಜಮಖಂಡಿ: ಸತ್ಸಂಗದಲ್ಲಿ ತೊಡಗಿ ಸಜ್ಜನರ ಮಧ್ಯೆಯಿದ್ದು, ಕಾಯಕದಲ್ಲಿ ನಿರತರಾಗಿ ಸತ್ಯದ ಕಡೆಗೆ ಅಪೇಕ್ಷೆ ಹೊಂದಿದರೆ ಪ್ರಪಂಚ ಅಥವಾ ಪಾರಮಾರ್ಥದಲ್ಲಿದ್ದರೂ ಒಂದೇ. ಪ್ರಪಂಚ ಮತ್ತು ಪಾರಮಾರ್ಥ ಒಂದೇ ನಾಣ್ಯದ ಎರಡು ಮುಖಗಳು ಎಂದು ಮುಧೋಳ ತಾಲೂಕಿನ ರೂಗಿ ಗ್ರಾಮದ ಅಡವಿ ಆಶ್ರಮದ ನಿತ್ಯಾನಂದ ಸ್ವಾಮಿಗಳು ಹೇಳಿದರು.

ತಾಲೂಕಿನ ಹುಲ್ಯಾಳ ಗ್ರಾಮದ ಗುರುದೇವಾಶ್ರಮದ ಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳ ನಾಲ್ಕನೇ ಭಾನುವಾರ ಹಮ್ಮಿಕೊಳ್ಳುವ ಮಾಸಿಕ ಕಾರ್ಯಕ್ರಮ ಗುರುದೇವ ಸತ್ಸಂಗದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಮೊದಲು ನಿನ್ನನ್ನು ನೀನು ತಿಳಿದುಕೊಳ್ಳಬೇಕು. ಮೊದಲು ನಿನ್ನನ್ನು ನೀನು ತಿದ್ದಿಕೊಂಡರೆ ಜಗತ್ತಿನ ಒಬ್ಬ ಮೂರ್ಖನನ್ನು ತಿದ್ದಿದ ಪುಣ್ಯ ಬರುತ್ತದೆ. ಅದಕ್ಕಾಗಿ ಬೆಳಿಗ್ಗೆ ಏಳುವಾಗ ಭಗವಂತನನ್ನು ಸ್ಮರಿಸಬೇಕು. ಅಧ್ಯಾತ್ಮದ ಮಾರ್ಗ ತೋರಿದ ಗುರುವಿಗೆ ರಾತ್ರಿ ಮಲಗುವಾಗ ನಮಸ್ಕಾರ ಹೇಳಬೇಕು ಎಂದರು.

ಹುಲ್ಯಾಳ ಗುರುದೇವಾಶ್ರಮದ ಹರ್ಷಾನಂದ ಸ್ವಾಮಿಗಳು ನೇತೃತ್ವ ವಹಿಸಿ ಮಾತನಾಡಿ, ಅಧ್ಯಾತ್ಮದ ಕೊರತೆಯಿಂದಾಗಿ ಕುಟುಂಬಗಳು ಛಿದ್ರವಾಗುತ್ತಿವೆ. ವಿವಾಹ ವಿಚ್ಛೇದನಗಳು ಹೆಚ್ಚುತ್ತಿವೆ. ಆದ್ದರಿಂದ ಪ್ರಪಂಚದಲ್ಲಿರುವ ಪ್ರತಿ ಸತಿ-ಪತಿಗಳಲ್ಲಿ ಒಬ್ಬರಿಗಾದರೂ ಅಧ್ಯಾತ್ಮದ ಜ್ಞಾನವಿರಬೇಕು ಎಂದು ಆಶೀರ್ವಚನ ನೀಡಿದರು. ನಿಂಬಾಳ ಗುರುದೇವಾಶ್ರಮದ ಗಣೇಶಲಿಂಗ ಶ್ರೀಗಳು, ಹುಲ್ಯಾಳ ನಿಜಗುಣಶಾಸ್ತ್ರೀ ಮಮದಾಪುರ ಆಶೀರ್ವಚನ ನೀಡಿದರು. ಯಲ್ಲಪ್ಪ ಶಿವಾಪುರ ಮಾತನಾಡಿದರು. ಋಷಿಕೇಶದ ಸ್ವರ್ಗಾಶ್ರಮದ ಗಂಗಾನಂದ ಮಹಾರಾಜರು, ಸಿದ್ದಾಪುರ ಅಡವಿಸಿದ್ದೇಶ್ವರ ಮಠದ ಮಾತೋಶ್ರೀ ಅಕ್ಕಮಹಾದೇವಿ ಸಾನ್ನಿಧ್ಯ ವಹಿಸಿದ್ದರು. ನಿರ್ಮಾಣ ಹಂತದಲ್ಲಿರುವ ವೇದಾಂತಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳ ಮಂದಿರಕ್ಕೆ ರೂ.1 ಲಕ್ಷ ಹಾಗೂ ಸತ್ಸಂಗದ ಮಹಾಪ್ರಸಾದದ ದಾಸೋಹ ಸೇವೆಗೈದ ವಿಮಲಾ ಕುಬಕಡ್ಡಿ, ಸಂಗಮೇಶ ಕುಬಕಡ್ಡಿ ದಂಪತಿಯನ್ನು ಗುರುದೇವಾಶ್ರಮದ ಪರವಾಗಿ ಸನ್ಮಾನಿಸಲಾಯಿತು. ಗುರುಬಸಗೌಡ ಪಾಟೀಲ, ಶಿವಾಜಿ ಜಾಧವ, ಪರಮೇಶ್ವರ ತೇಲಿ, ಸಿದ್ದು ಉಪ್ಪಲದಿನ್ನಿ ಸಂಗೀತ ಸೇವೆ ಸಲ್ಲಿಸಿದರು. ಸಂಗಮೇಶ ತೆಲಸಂಗ ನಿರೂಪಿಸಿದರು.



ವಿವಿಧ ಕಾಮಗಾರಿಗೆ ಚಿಮ್ಮನಕಟ್ಟಿ ಭೂಮಿಪೂಜೆ

ಬಾದಾಮಿ: ಮತಕ್ಷೇತ್ರದ ಎಲ್ಲ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮೊದಲ ಆದ್ಯತೆ ನೀಡಲಾಗುತ್ತಿದೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಸೋಮವಾರ ತಾಲೂಕಿನ ತಾಲೂಕಿನ ಮಲ್ಲಾಪುರ ಎಸ್ ಎಲ್ ಗ್ರಾಮದಲ್ಲಿ ರೂ.10 ಲಕ್ಷ ಅನುದಾನದ ವೆಚ್ಚದಲ್ಲಿ ಬೀರಲಿಂಗಶ್ವರ ಸಮುದಾಯ ಭವನ ಹಾಗೂ ರೂ.5.00 ವೆಚ್ಚದಲ್ಲಿ ವೀರಭದ್ರೇಶ್ವರ ದೇವಸ್ಥಾನದ ಸಮುದಾಯ ಭವನ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ; ಬಾದಾಮಿ ತಾಲೂಕಿನ ಲಖಮಾಪೂರ ಗ್ರಾಮದಲ್ಲಿ ರೂ.14.50 ಲಕ್ಷ ವೆಚ್ಚದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಕೊಠಡಿಯ ಉದ್ಘಾಟನೆ, ತಾಲೂಕಿನ ಕಾಕನೂರ ಗ್ರಾಮದಲ್ಲಿ ರೂ.20 ಲಕ್ಷ ವೆಚ್ಚದಲ್ಲಿ ಮುಖ್ಯರಸ್ತೆಯಿಂದ ಕಾಕಮ್ಮದೇವಿ ದೇವಸ್ಥಾನ ಮತ್ತು ಸಿದ್ಧಾರೂಢ ಮಠದ ಹತ್ತಿರ ಸಿಸಿ ರಸ್ತೆ ನಿರ್ಮಾಣ ಭೂಮಿ ಪೂಜೆ, ಚಿಮ್ಮನಕಟ್ಟಿ ಗ್ರಾಮದಲ್ಲಿ ರೂ.10 ಲಕ್ಷ ವೆಚ್ಚದಲ್ಲಿ ಮುಖ್ಯರಸ್ತೆಯಿಂದ ಮಸೀದಿಯವರೆಗೆ ಸಿಸಿ ರಸ್ತೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದರು. ಗ್ರಾಮದ ಹಿರಿಯರಾದ ವಿರೂಪಾಕ್ಷಪ್ಪ ಕೈನಕಟ್ಟಿ, ದೂರಸಂಗಪ್ಪ ಕೊಡ್ಲಿ, ಹುಚ್ಚಪ್ಪ ಭಜಂತ್ರಿ, ಟಿಕಪ್ಪ ಭಜಂತ್ರಿ, ಈರಪ್ಪ ಮಾದರ, ಕರಿಯಪ್ಪ ಕುರಿ, ಸಿದ್ದಪ್ಪ ಕೊಡ್ಲಿ, ಹೇಮಂತಗೌಡ ಗೌಡ್ರ, ಈರಣ್ಣ ಮಣ್ಣೇರಿ ಸೇರಿದಂತೆ ಊರಿನ ಗುರು-ಹಿರಿಯರು, ಯುವಕಮಿತ್ರರು, ಮುಖಂಡರು ಹಾಜರಿದ್ದರು.



ಉಪನೋಂದಣಿ ಕಚೇರಿ ಉದ್ಘಾಟನೆ

ಕೆರೂರ: ಪಟ್ಟಣದ ಹುಲಮನಿ ಪೆಟ್ರೋಲ್ ಬಂಕ್ ಎದುರಿಗೆ ಸ್ಥಳಾಂತರಗೊಂಡ ನೂತನ ಉಪನೋಂದಣಿ ಕಚೇರಿಯನ್ನು ಶನಿವಾರ ಶಾಸಕ ಭೀಮಸೇನ ಚಿಮ್ಮನಕಟ್ಟಿ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಹಲವಾರು ವರ್ಷಗಳಿಂದ ಒಂದು ಸುಸಜ್ಜಿತವಾದ ಕಟ್ಟಡದ ಬೇಡಿಕೆ ಇತ್ತು, ಮೊದಲಿದ್ದ ಸ್ಥಳವು ಬಹಳ ಚಿಕ್ಕದಾಗಿತ್ತು, ಕಚೇರಿಗೆ ಬಂದ ಸಾರ್ವಜನಿಕರಿಗೆ ಕುಡಲು ಹಾಗೂ ಇಲಾಖೆಯ ದಾಖಲೆಗಳನ್ನು ಭದ್ರವಾಗಿಡಲು ಜಾಗದ ಕೊರತೆ ಇತ್ತು, ನೂತನ ಕಟ್ಟಡವು ಎಲ್ಲ ಮೂಲಭೂತ ಸೌಲಭ್ಯಗಳನ್ನು ಹೊಂದಿದೆ ಎಂದರು. ಈಗಾಗಲೇ ಎಲ್ಲ ಸರ್ಕಾರಿ ಕಚೇರಿಗಳು ಹುಲಮನಿ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣಗೊಳ್ಳಲಿದ್ದು, ಬಸ್ ನಿಲ್ದಾಣದಿಂದ ಇಲ್ಲಿನ ಸರ್ಕಾರಿ ಕಚೇರಿಗಳು ದೂರದಲ್ಲಿರುವದರಿಂದ ಇಲ್ಲಿ ಬಸ್ ನಿಲ್ದಾಣದ ವ್ಯವಸ್ಥೆ ಮಾಡಲು ಬದಾಮಿ ಘಟಕ ವ್ಯವಸ್ಥಾಪಕರಿಗೆ ಸೂಚಿಸುತ್ತೇನೆ ಎಂದು ತಿಳಿಸಿದರು. ಬೆಳಗ್ಗೆ ಕಚೇರಿಯಲ್ಲಿ ಲಕ್ಷ್ಮೀ ಪೂಜೆ ಹಾಗೂ ವಿವಿಧ ಪೂಜಾ ಕಾರ್ಯಗಳು ದೇವಾಂಗಮಠದ ರುದ್ರಮುನಿ ಸ್ವಾಮೀಜಿ ಅವರ ನೇತೃತ್ವದಲ್ಲಿ ನೆರವೇರಿದವು. ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಡಾ.ಎಂ.ಜಿ.ಕಿತ್ತಲಿ, ಜಿಲ್ಲಾ ನೋಂದಣಾಧಿಕಾರಿ ಎಸ್.ಜಿ.ನ್ಯಾಮಗೌಡ, ಉಪನೋಂದಣಾಧಿಕಾರಿಗಳಾದ ಸಂಗಮೇಶ ಮುಂಡರಗಿ, ರಾಜುಕುಮಾರ ಗೌಡಪ್ಪಗೊಳ, ಎಸ್.ಬಿ.ಮದರಖಂಡಿ, ಮಾರುತಿ ಗದ್ದಾಡಿ, ವಿಠ್ಠಲಗೌಡ ಗೌಡರ, ಸುರೇಶ ಪೂಜೇರಿ, ಪರಸಪ್ಪಜ್ಜ ಚೂರಿ, ಅಂಜುಮನ್ ಕಮೀಟಿ ಅಧ್ಯಕ್ಷ ಮೋದಿನಸಾಬ ದೊಡಕಟ್ಟಿ ಹಾಗೂ ಕೆರೂರಿನ ಎಲ್ಲ ದಸ್ತು ಬರಹಗಾರರು ಭಾಗವಹಿಸಿದ್ದರು.



ಗಮನಸೆಳೆದ ಶಿವಾಜಿ, ದಶಾವತಾರ ನೃತ್ಯ

ಮಹಾಲಿಂಗಪುರ: ಜೆಸಿ ಆಂಗ್ಲ ಮಾಧ್ಯಮ ಶಾಲೆಯ ಉತ್ಸವದಲ್ಲಿ ಮುಸ್ಲಿಂ ವಿದ್ಯಾರ್ಥಿಗಳ ಶಿವಾಜಿ, ದಶಾವತಾರ ನೃತ್ಯ ಎಲ್ಲರ ಗಮನ ಸೆಳೆಯಿತು. ಶಿಕ್ಷಕಿ ತೃಪ್ತಿ ಕುಳ್ಳೊಳ್ಳಿ ಮಾರ್ಗದರ್ಶನದಲ್ಲಿ ಶಿವಾಜಿ ನೃತ್ಯ ಹಾಗೂ ಶಿಕ್ಷಕಿ ಪ್ರೀತಿ ಕಲ್ಯಾಣಿ ಮಾರ್ಗದರ್ಶನದಲ್ಲಿ ದಶಾವತಾರ ನೃತ್ಯ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಪ್ರೊ.ಶಿವಲಿಂಗ ಸಿದ್ನಾಳ , ಶಿಕ್ಷಣ ಸಂಯೋಜಕ ಸಂಜು ಸಾವಳಗಿ, ಸಿಆರ್ ಪಿ ಎ.ಐ.ಮಂಚದ, ಪತ್ರಕರ್ತರಾದ ಚಂದ್ರಶೇಖರ ಮೋರೆ, ಮಹೇಶ ಮಣ್ಣಯ್ಯನವರಮಠ, ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ ಮಾತನಾಡಿದರು. ನಾರನಗೌಡ ಉತ್ತಂಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿರ್ದೇಶಕರಾದ ಈಶ್ವರ ಮರುಗೋಡ, ರಾಜು ಘಟ್ಟೆಪ್ಪನವರ, ರಮೇಶ ಮುಳವಾಡ, ಸುನಿಲ ಪಟೇಲ, ಮುಖ್ಯೋಪಾಧ್ಯಾಯ ಎಸ್.ಜಿ.ಕೌಜಲಗಿ ಇದ್ದರು.





ಬಾದಾಮಿ: ಮಾ.2ರಂದು ನಡೆಯಲಿರುವ ತಾಲೂಕು 10ನೇ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ನಿವೃತ್ತ ಪ್ರಾಚಾರ್ಯ ಪ್ರೊ.ಜಿ.ಬಿ.ಶೀಲವಂತರ ಅವರಿಗೆ ಕಸಾಪ ವತಿಯಿಂದ ಅಧಿಕೃತ ಆಮಂತ್ರಣ ನೀಡಿ ಆಹ್ವಾನಿಸಿ ದಂಪತಿಗೆ ಸನ್ಮಾನಿಸಲಾಯಿತು. ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ತಾಲೂಕು ಕಸಾಪ ಅಧ್ಯಕ್ಷ ಬಿ.ಎಫ್. ಹೊರಕೇರಿ, ಕಸಾಪ ಪದಾಧಿಕಾರಿಗಳಾದ ಮಹಾಂತೇಶ ಈಳಗೇರ, ವಿ.ಎಸ್.ಶೆಟ್ಟರ, ಎಸ್.ಎಂ.ಹಿರೇಮಠ, ಲಿಂಗರಾಜ ಚಿನಿವಾಲರ, ಎಸ್.ಕೆ.ಜವಳಗದ್ದಿ, ಅಶೋಕ ನಾಗಠಾಣ ಆರ್.ಬಿ.ಸಂಕದಾಳ, ಶಿವಾನಂದ ಪರಸನ್ನವರ ಎನ್.ಬಿ.ಶೀಲವಂತರ, ಡಿ.ಬಿ.ಹಡಗಲಿ ಉಪಸ್ಥಿತರಿದ್ದರು.

ಫೆ.28ರಂದು ಉಪನ್ಯಾಸ

ಬಾದಾಮಿ: ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆಯ ಶಾಖಾಮಠ ಸೇವಾ ಬಳಗ ಬಾದಾಮಿ ಬಳಗದಿಂದ ಫೆ.28ರಂದು ಶನಿವಾರ ಸಂಜೆ 7 ಗಂಟೆಗೆ ರನ್ನನ ಗದಾಯುದ್ಧ ಉಪನ್ಯಾಸ ಕಾರ್ಯಕ್ರಮವನ್ನು ಪಟ್ಟಣದ ಶಿವಯೋಗಮಂದಿರ ಶಾಖಾಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಸದಾಶಿವ ಸ್ವಾಮಿಗಳು ಸಾನಿಧ್ಯ ವಹಿಸುವರು. ಪ್ರೊ. ಚಂದ್ರಶೇಖರ ವಸ್ತದ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿಗಳಿಗೆ ಹಣ ನಿರ್ವಹಣೆ ಜ್ಞಾನ ಅಗತ್ಯ

ಹುನಗುಂದ: ವಿದ್ಯಾರ್ಥಿಗಳು ಹಣ ಉಳಿತಾಯ, ಹೂಡಿಕೆ ಹಾಗೂ ನಿರ್ವಹಣೆಯ ಬಗ್ಗೆ ಸಮರ್ಪಕ ಜ್ಞಾನ ಗಳಿಸಿಕೊಂಡಾಗ ಮಾತ್ರ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ವಿ.ಮ.ವಿ.ವ ಸಂಘದ ಗೌರವ ಕಾರ್ಯದರ್ಶಿ ಡಾ.ಮಹಾಂತೇಶ ಎಸ್.ಕಡಪಟ್ಟಿಯವರು ಹೇಳಿದರು.

ಪಟ್ಟಣದ ವಿಎಂಕೆಎಸ್‌ಆರ್ ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದ ಐಕ್ಯೂಎಸಿ, ವಾಣಿಜ್ಯ ವೇದಿಕೆ, ಎನ್‌ಎಸ್‌ಎಸ್, ಎನ್‌ಸಿಸಿ ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್ ಸಹಯೋಗದಲ್ಲಿ ಹಣದ ಉಳಿತಾಯ, ಹೂಡಿಕೆ ಹಾಗೂ ನಿರ್ವಹಣೆ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಜೊತೆಗೆ ಆಧುನಿಕ ಹಣಕಾಸು ನಿರ್ವಹಣೆಯ ತಂತ್ರಜ್ಞಾನದ ತಿಳುವಳಿಕೆ ಮೂಡಿಸುವದು ಅತೀ ಅವಶ್ಯ ಎಂದರು.

ಎಸ್.ಬಿ.ಐ ಹುನಗುಂದ ಶಾಖಾ ವ್ಯವಸ್ಥಾಪಕ ಮೋಹನ ಮಾತನಾಡಿ, ಈಗಿನಂದಲೇ ಉಳಿತಾಯದ ಕಲ್ಪನೆ ಬೆಳೆಸಿಕೊಂಡರೇ ಆ ಹಣ ಮುಂದಿನ ತಮ್ಮ ಭಾವಿ ಜೀವನದಲ್ಲಿ ಅನುಕೂಲವಾಗಲಿದೆ ಎಂದರು. ಎಸ್.ಬಿ.ಐನ ಹಿರಿಯ ಅಧಿಕಾರಿ ರವಿ ಜೋಶಿ, ಬ್ಯಾಂಕಿನ ಸಿಬ್ಬಂದಿ ವಿಶ್ವಚೇತ ಹಾಗೂ ವೀರಣ್ಣ, ಪ್ರಾಚಾರ್ಯ ಡಾ. ಎಸ್.ಆರ್. ಗೋಲಗೊಂಡ ಮಾತನಾಡಿದರು. ಸಂಸ್ಥೆಯ ನಿರ್ದೇಶಕರಾದ ಬಿ.ಎಸ್. ಕೆಂದೂರ, ಎಂ.ಎಸ್.ಮಠ, ದೇಸಾಯಪ್ಪ ಹವಾಲ್ದಾರ, ರಾಚಪ್ಪ ರಾಜಮನಿ, ಐ.ಕ್ಯೂ.ಎ.ಸಿ ಸಂಯೋಜಕ ಡಾ.ಎಲ್.ಎನ್.ಕುಲಕರ್ಣಿ, ಕಾಲೇಜು ಒಕ್ಕೂಟದ ಕಾರ್ಯಾಧ್ಯಕ್ಷ ಡಾ.ಭೀಮಾಶಂಕರ ಹಲಸಂಗಿ, ವಾಣಿಜ್ಯ ವಿಭಾಗದ ಮುಖ್ಯಸ್ಥ ಬಿ.ಎ.ಕಂಠಿ, ಪದವಿ ಪೂರ್ವ ಪ್ರಾಚಾರ್ಯ ಎಚ್.ಎಸ್.ಬೋಳಿಶೆಟ್ಟರ ಹಾಗೂ ವಿದ್ಯಾರ್ಥಿ ಪ್ರತಿನಿಧಿ ಸುರೇಖಾ ಪಿ.ಹೂಗಾರ ದೈಹಿಕ ನಿರ್ದೇಶಕ ಎಸ್.ಬಿ.ಚಳಗೇರಿ, ಡಾ.ಎಸ್.ಆರ್. ನಾಗಣ್ಣವರ, ಪ್ರೊ.ಬಿ.ಎ.ಕಂಠಿ, ದೀಪಾ ದಾದ್ಮಿ, ರೇಷ್ಮಾ ಮನ್ನಾಪೂರ ಇದ್ದರು.



ಶಿವಾಜಿ ಜಯಂತಿ ಆಚರಣೆ

ಮುಧೋಳ: ದೇಶದಲ್ಲಿ ಹಿಂದೂ ಸಮಾಜದ ಸಂಘಟನೆಗೆ ಹಾಗೂ ಅದರ ಏಳ್ಗೆಗೆ ಹಗಲಿರುಳು ಶ್ರಮಿಸಿದ ಛತ್ರಪತಿ ಶಿವಾಜಿ ಮಹಾರಾಜರ ಹೋರಾಟದ ಬದುಕು ನಮ್ಮೆಲ್ಲರಿಗೂ ಅನುಕರಣೆಯವಾಗಿದೆಂದು ಮರಾಠಾ ಸಮಾಜಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಾ.ಸಂಜಯಘಾರಗೆ ಹೇಳಿದರು. ನಗರದ ಶಿವಾಜಿ ವೃತ್ತದಲ್ಲಿ ಮಹಾರಾಜರ ಜಯಂತ್ಯುತ್ಸವದಲ್ಲಿ ಪಾಲ್ಗೊಂಡು ಶಿವಾಜಿ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಅವರ ಧೈರ್ಯ ಸಾಹಸ ಹಾಗೂ ಸ್ವಾಭಿಮಾನಿ ಬದುಕು ನಮ್ಮೆಲ್ಲರಿಗೆ ದಾರಿದೀಪವಾಗಿದೆಂದು ತಿಳಿಸಿದರು. ನಂತರ ವೀರ ಸಾವರಕರ ಪ್ರತಿಷ್ಠಾನದಿಂದ ಯುವಕರು ಬೈಕ್ ರ್‍ಯಾಲಿ ನಡೆಸಿದರು. ಉದ್ಯಮಿ ಸಂಗಮೇಶ ನಿರಾಣಿ, ತಹಶೀಲ್ದಾರ್ ಡಾ.ಚಿಕ್ಕಪ್ಪ ನಾಯಿಕ, ಪ್ರಮುಖರಾದ ಬಸವಂತಕಾಟೆ, ಉದಯ ಪಡತರೆ, ಡಾ.ಸಿದ್ದು ದಿವಾಣ, ಕಲ್ಮೇಶಗೋಸಾರ, ಸಂತೋಷ ಘೋರ್ಪಡೆ, ಮುಕುಂದ ನಿಂಬಾಳ್ಕರ ಭೀಮ ಕುಮಕಾಲೆ, ಸಂತೋಷ ಪಾಲೋಜಿ, ಪ್ರಶಾಂತ ಕಾಳೆ, ಪ್ರತಾಪ ಚಂದನಶಿವ, ಎ.ಬಿ.ಘೋರ್ಪಡೆ, ಶೇಖರ ಘೋರ್ಪಡೆ, ಪರಸು ನಿಗಡೆ, ಬಂಡು ಘಾಟಗೆ, ಸದಾ ಜಾಧವ, ಪ್ರದೀಪ ನಿಂಬಾಳಕರ, ಮಹಾದೇವ ಶಿಂಧೆ, ರಾಮಜಿ ಘೋರ್ಪಡೆ, ನಾರಾಯಣ ಹವಾಲದಾರ, ಇನ್ನಿತರರು ಉಪಸ್ಥಿತರಿದ್ದರು.



ರಾಷ್ಟ್ರ ಹೆಮ್ಮೆಪಡುವ ಶ್ರೇಷ್ಠ ಸೇನಾನಿ ಶಿವಾಜಿ

ಬೀಳಗಿ: ಛತ್ರಪತಿ ಶಿವಾಜಿ ಮಹಾರಾಜರು ಕೇವಲ ಒಂದು ಸಮುದಾಯಕ್ಕೆ ಸೀಮಿತರಾದವರಲ್ಲ, ಅವರು ಇಡೀ ರಾಷ್ಟ್ರ ಹೆಮ್ಮೆಪಡುವ ಶ್ರೇಷ್ಠ ಸೇನಾನಿ. ಇಂದು ನಾವು ಮಹಾತ್ಮರನ್ನು ಜಾತಿ, ಧರ್ಮ ಮತ್ತು ಪಂಗಡಗಳ ಆಧಾರದ ಮೇಲೆ ಹಂಚಿಕೊಳ್ಳುತ್ತಿರುವುದು ದುರದುಷ್ಟಕರ ಎಂದು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ, ಶಾಸಕ ಜೆ.ಟಿ.ಪಾಟೀಲ ಹೇಳಿದರು.

ಪಟ್ಟಣದ ಶಿವಾಜಿ ವೃತ್ತದಲ್ಲಿ ಭಾನುವಾರ ತಾಲೂಕು ಆಡಳಿತ, ತಾಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಾಗಲಕೋಟೆಯಲ್ಲಿ ಶಿವಾಜಿ ಮಹಾರಾಜರ ಜಯಂತಿ ವೇಳೆ ನಡೆದ ಅಹಿತಕರ ಘಟನೆಯನ್ನು ತೀವ್ರವಾಗಿ ಖಂಡಿಸಿದರು. ಸಮಾಜದ ಮುಖಂಡರು ಶಿವಾಜಿ ಮಹಾರಾಜರ ಸಮುದಾಯ ಭವನ ಹಾಗೂ ಅಂಬಾ ಭವಾನಿ ದೇವಸ್ಥಾನ ನಿರ್ಮಾಣಕ್ಕೆ 25 ಲಕ್ಷ ರೂ. ಅನುದಾನ ನೀಡುವಂತೆ ಮನವಿ ಸಲ್ಲಿಸಿದ ಹಿನ್ನೆಲೆ, ಸೂಕ್ತ ಸಮಯದಲ್ಲಿ ಬೇಡಿಕೆ ಈಡೇರಿಸುವ ಭರವಸೆ ನೀಡಿದರು. ಬೀಳಗಿ ಪಟ್ಟಣದ ಶೌಚಾಲಯಗಳ ದುರಸ್ತಿ ನಿರ್ಮಾಣಕ್ಕೆ 3.68 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಕಳಪೆ ಕಾಮಗಾರಿ ನಡೆಸುವ ಗುತ್ತಿಗೆದಾರರಬಿಲ್‌ಗಳನ್ನು ಪೆಂಡಿಂಗ್ ಇಡಲಾಗುವುದು ಹೇಳಿದರು. ಉಪನ್ಯಾಸಕಿ ಮಂಜುಳಾ ಯ ಬೋರ್ಜಿ ಮಾತನಾಡಿ, ಜಯಂತಿಗಳ ಉದ್ದೇಶ ಮಹಾತ್ಮರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡು ಭಾರತವನ್ನು ವಿಶ್ವಗುರು ರಾಷ್ಟ್ರವನ್ನಾಗಿಸುವುದು. ಶಿವಾಜಿ ಮಹಾರಾಜರು ಸ್ವಾಭಿಮಾನ ಹಾಗೂ ಸಾಹಸ ಜೀವನದ ಸಂದೇಶ ಸಾರಿದವರು ಎಂದು ಹೇಳಿದರು. ತಹಶೀಲ್ದಾರ್ ವಿನೋದ ಹತ್ತಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿಇಒ ಆರ್. ಎಸ್.ಆದಾಪುರ, ತಾಪಂ ಇಒ ಶ್ರೀನಿವಾಸ ಪಾಟೀಲ, ಸಿಪಿಐ ಹಣಮಂತ ಸಣಮನಿ, ಪಪಂ ಮುಖ್ಯಾಧಿಕಾರಿ ದೇವೇಂದ್ರ ಧನಪಾಲ, ಜೋತಿಬಾ ಅವತಾಡೆ, ಗಣಪತಿ ಮಾರಾಠೆ, ರಾಜು ಬೋರ್ಜಿ, ಮುತ್ತು ಬೋರ್ಜಿ, ಸಿದ್ದು ಸಾರಾವರಿ, ಬಸವರಾಜ ಹಳ್ಳದಮನಿ ಸೇರಿದಂತೆ ವಿವಿಧ ಮುಖಂಡರು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದಿನಿಂದ ಪುರಾಣ ಆರಂಭ

ಬಸವನಬಾಗೇವಾಡಿ: ನಾಗೂರಿನ ಯಮನೂರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಫೆ. 24ರಿಂದ ಮಾ.6ರ ವರೆಗೆ 11ದಿನ ಪ್ರಥಮ ಬಾರಿಗೆ ಯೋಗಿ ಚಕ್ರವರ್ತಿ ಚಾಂಘದೇವರ ಜೀವನ ಚರಿತ್ರೆ ಕುರಿತು ಪುರಾಣ ಕಾರ್ಯಕ್ರಮ ನಡೆಯಲಿದೆ ಎಂದು ಶರಣು ಮರೋಳ, ಅಮರಯ್ಯ ಹಿರೇಮಠ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನಾಗೂರ ಗ್ರಾಮದ ಆರಾಧ್ಯ ದೇವರಾದ ಯಮನೂರೇಶ್ವರ ಪ್ರತಿ ವರ್ಷ ಜಾತ್ರೆ ಅದ್ದೂರಿಯಿಂದ ಜರುಗಲಿದ್ದು ಈ ಬಾರಿ ಗ್ರಾಮದ ಜನರ ಕೋರಿಕೆಯಂತೆ ಹಾಗೂ ಜಾತ್ರೆ ಮುಂಚೆ ಪುರಾಣ ಪ್ರವಚನಗಳು ಕೇಳುವ ಸಂಪ್ರದಾಯ ಉಳಿಯಬೇಕು ಎನ್ನುವ ಉದ್ದೇಶ ಪುರಾಣ ಕಾರ್ಯಕ್ರಮ ಆಯೋಜಿಸಲಾಗಿದ್ದು ಪುರಾಣವನ್ನು ದೇವರಹಿಪ್ಪರಗಿ ಜಡಿಮಠದ ಜಡೆಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಶ್ರೀ ಯೋಗಿ ಚಕ್ರವರ್ತಿ ಚಾಂಘದೇವರ ಜೀವನ ಚರಿತ್ರೆ ಕುರಿತು ಪುರಾಣ ಹೇಳಲಿದ್ದಾರೆ, ಪುರಾಣ ಪ್ರಾರಂಭೋತ್ಸವದಲ್ಲಿ ಬಸವನಬಾಗೇವಾಡಿ ಹಿರೇಮಠದ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಚಿಮ್ಮಲಗಿ ಹಿರೇಮಠದ ಸಿದ್ಧರೇಣುಕಾ ಶಿವಾಚಾರ್ಯರು, ಕೂಕಟನೂರ ಮಡಿವಾಳೇಶ್ವರ ಸ್ವಾಮೀಜಿ ಸಾನಿಧ್ಯವಹಿಸಲಿದ್ದಾರೆ ಎಂದು ಹೇಳಿದರು. ಶಿವಾನಂದ ಬೆಲ್ಲದ, ಚಂದ್ರಶೇಖರ ಮರೋಳ, ಬಸಲಿಂಗಪ್ಪ ಮುಳವಾಡ, ಸಂತೋಷ ಗೌರಾ, ವಿರೇಶ ಮರೋಳ, ಮಹಾದೇವಪ್ಪ ಮುಳವಾಡ, ರಾಮನಗೌಡ ಪಾಟೀಲ, ಮುತ್ತು ಪಾಟೀಲ, ಗಿರೀಶ ಹೆಬ್ಬಾಳ,ಯಮನೂರಿ ಪೂಜಾರಿ, ಶಂಕರ ಮುಳವಾಡ, ಯಮನೂರಿ ಕ್ವಾಟಿ ಸೇರಿ ಇತರರು ಇದ್ದರು.

ಜೆಡಿಎಸ್ ಸಮಾವೇಶದಲ್ಲಿ ಪಾಲ್ಗೊಳ್ಳಲು ಮನವಿ

ನಾಲತವಾಡ: ವಿಜಯಪುರ ನಗರದ ಸಿಂದಗಿ ನಾಕಾ ಬಳಿ ಫೆ.27ರಂದು ಶುಕ್ರವಾರ ನಡೆಯುವ ಜೆಡಿಎಸ್ ಬೆಳ್ಳಿ ಮಹೋತ್ಸವದ ಬೃಹತ್ ಜನತಾ ಸಮಾವೇಶ ಆಯೋಜಿಸಿದ್ದು, ಮುದ್ದೇಬಿಹಾಳ ಮತಕ್ಷೇತ್ರ ದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಬೇಕು ಎಂದು ಜೆಡಿಎಸ್ ತಾಲೂಕಾಧ್ಯಕ್ಷ ಪವಾಡೆಪ್ಪ ಹವಾಲ್ದಾರ(ವೀರೇಶನಗರ) ಮನವಿ ಮಾಡಿದ್ದಾರೆ. ಪಕ್ಷದ ಗಣ್ಯರೊಂದಿಗೆ ಪತ್ರಿಕಾ ಹೇಳಿಕೆ ನೀಡಿದ ಅವರು ಪಕ್ಷವು ಸುಮಾರು 25 ವರ್ಷಗಳನ್ನು ಪೂರೈಸಿದೆ. ಸಮಾವೇಶಕ್ಕೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವರಾದ ಕುಮಾರಸ್ವಾಮಿ, ಪಕ್ಷದ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಶಾಸಕರು, ಮಾಜಿ ಶಾಸಕರು, ಮಂತ್ರಿಗಳು, ಗಣ್ಯರು ಆಗಮಿಸುತ್ತಿದ್ದಾರೆ ಎಂದ ಅವರು, ಜೆಡಿಎಸ್ ಪಕ್ಷ ಇಂದಿಗೂ ತನ್ನ ಗಟ್ಟಿತನ ಉಳಿಸಿಕೊಂಡಿದೆ. ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ. ಪಕ್ಷದ ಜಿಲ್ಲಾ ಉಪಾಧ್ಯಕ್ಷ ಬಸವಂತ್ರಾಯ ಕುಸ್ತಿ, ಜಲಾಲಸಾಬ ಮುದ್ನಾಳ, ಮಹಿಳಾ ಘಟಕದ ವೀರಮ್ಮ ಚೆನ್ನಗಾಂವಿಶೆಟ್ಟರ್, ಶರಣಗೌಡ ಪಾಟೀಲ(ತಾಳಿಕೋಟಿ), ಶಿವಣ್ಣ ವಾಲೀಕಾರ, ಸುಲೇಮಾನ ಸಾತಿಹಾಳ, ಎಂ.ಎಂ. ಮ್ಯಾಗೇರಿ, ಸತ್ಯಮ್ಮ ಕೆಸಾಪೂರ ಇದ್ದರು.

ಉತ್ತಮ ಫಲಿತಾಂಶ




ವಿಜಯಪುರ: ಇತ್ತೀಚೆಗೆ ನಡೆದ 2026ನೇ ಸಾಲಿನ ಬಾಲಕಿಯರ ಕಿತ್ತೂರು ಸೈನಿಕ ಶಾಲೆ ಪ್ರವೇಶ ಪರೀಕ್ಷೆಯಲ್ಲಿ ವಿಜಯಪುರದ ವೇದ ಕೋಚಿಂಗ್ ಅಕಾಡೆಮಿಯ ವಿದ್ಯಾರ್ಥಿನಿಯರು ಉತ್ತಮ ಫಲಿತಾಂಶ ಪಡೆಯುವ ಮೂಲಕ ಅಮೋಘ ಸಾಧನೆ ಮಾಡಿದ್ದಾರೆ. ಪರೀಕ್ಷೆಗೆ ಹಾಜರಾದ 104 ವಿದ್ಯಾರ್ಥಿನಿಯರಲ್ಲಿ 54 ವಿದ್ಯಾರ್ಥಿನಿಯರು ಆಯ್ಕೆಯಾಗುವ ಮೂಲಕ ಸಾಧನೆ ತೋರಿದ್ದಾರೆ. ವಿದ್ಯಾರ್ಥಿನಿಯರಾದ ಗಾಯತ್ರಿ, ದೃತಿ, ಆರದ್ಯಾ, ಶ್ರೀಕಾ, ಕೃತಿಕಾ, ಶ್ರೀನಿಧಿ, ಖುಷಿ, ಅನುಷಾ, ಪ್ರೀತಿಲತಾ, ಅನಮ್‌ನಾಜ ಹೀಗೆ ಒಟ್ಟು 54 ವಿದ್ಯಾರ್ಥಿನಿಯರು ಆಯ್ಕೆಯಾಗಿದ್ದಾರೆ. ಪ್ರಾರಂಭವಾದ ಕೆಲವೇ ವರ್ಷಗಳಲ್ಲಿ ನಮ್ಮ ಸಂಸ್ಥೆಯು ವರ್ಷದಿಂದ ವರ್ಷಕ್ಕೆ ತನ್ನ ಫಲಿತಾಂಶವನ್ನು ದ್ವಿಗುಣಗೊಳಿಸುತ್ತ ಸಾಗಿರುವುದು ಸಂತೋಷ ತರಿಸಿದೆ ಎಂದು ಎಂದು ಸಂಸ್ಥೆಯ ಅಧ್ಯಕ್ಷ ಡಾ.ಶಿವಾನಂದ ಕೆಲೂರ ಹಾಗೂ ಉಪಾಧ್ಯಕ್ಷ ದಯಾನಂದ ಕೆಲೂರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಂಸ್ಥೆಯಲ್ಲಿ ನೀಡಲಾಗುವ ಸೈನಿಕ ಶಾಲೆ, ನವೋದಯ, ಕಿತ್ತೂರು, ರಾಷ್ಟ್ರೀಯ ಮಿಲಿಟರಿ ಶಾಲೆಗಳ ಪ್ರವೇಶ ಪರೀಕ್ಷೆಗಳಿಗೆ ನೀಡಲಾಗುವ ವಿಶಿಷ್ಠ ತರಬೇತಿಯೇ ಇಂತಹ ಉತ್ತಮ ಫಲಿತಾವಂಶವನ್ನು ಪಡೆಯುವುದರ ಜೊತೆಗೆ ಪಾಲಕರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.



ದೇವರಹಿಪ್ಪರಗಿ: ವಿಜಯಪುರ ಜಿಲ್ಲಾ ಕೆಡಿಪಿ ನೂತನ ಸದಸ್ಯರಾಗಿ ಸತೀಶ ಅಡವಿ ಅವರನ್ನು ತಾಲೂಕು ಕುರುಬರ ಸಂಘದ ಅಧ್ಯಕ್ಷ ಗುರುನಾಥ ಮಾಸ್ತರ ಮುರಡಿ ಸನ್ಮಾನಿಸಿ ಗೌರವಿಸಿದರು. ಮಾಜಿ ಯೋಧ ಚಂದ್ರಾಮ ಪೂಜಾರಿ, ಹಿರಿಯ ಕಲಾವಿದರಾದ ಮಾರುತಿ ಶಿವಣಗಿ, ಮುಖಂಡರಾದ ಅಮೋಗಿ ಕಗ್ಗೋಡ, ಮಾಡ್ಡಪ್ಪ ಸಾತಿಹಾಳ ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಆಸಕ್ತಿದಾಯಕ ಜ್ಞಾನ ಸಂಗ್ರಹಣೆ ಅಗತ್ಯ

ವಿಜಯಪುರ: ನಗರದ ವಿ.ಭ.ದರಬಾರ ಶಾಲೆಯಲ್ಲಿ ಟ್ಯಾಲೆಂಟ್ ಟ್ರ್ಯಾಕಿಂಗ್ ಎಂಬ ವಿಶೇಷ ಸ್ಪರ್ಧಾತ್ಮಕ ಪರೀಕ್ಷೆ ನಡೆಯಿತು. ಹಲವಾರು ಶಾಲೆಯ ವಿದ್ಯಾರ್ಥಿಗಳು ಆಸಕ್ತಿಯಿಂದ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. 7ನೇ ತರಗತಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಈ ಪರೀಕ್ಷೆಯಲ್ಲಿ ವಿವಿಧ ಶಾಲೆಗಳ ಕನ್ನಡ ಹಾಗೂ ಆಂಗ್ಲ ಮಾಧ್ಯಮದ ಸುಮಾರು 95 ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದರು.ಪರೀಕ್ಷೆ 30 ಅಂಕಗಳ ಗಣಿತ, ವಿಜ್ಞಾನ, ಸಮಾಜ ವಿಷಯಾಧಾರಿತ ಬಹು ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿತ್ತು. ಈ ಸುತ್ತಿನಲ್ಲಿ ಉತ್ತಮ ಸಾಧನೆ ತೋರಿದ 20 ವಿದ್ಯಾರ್ಥಿಗಳಿಗೆ 2ನೇ ಸುತ್ತಿನಲ್ಲಿ ವಿಜ್ಞಾನ, ಗಣಿತದ ಉಪಕರಣಗಳನ್ನು ಗುರುತಿಸಿ ಹೆಸರಿಸುವ ಪರೀಕ್ಷೆ ನಡೆಸಲಾಯಿತು. ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾಥಿಗಳಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಿಸಲಾಯಿತು. ದರಬಾರ ಶಾಲೆಯ ವಿದ್ಯಾರ್ಥಿನಿಯರು ವಿಜ್ಞಾನಕ್ಕೆ ಸಂಬಂಧಿಸಿದಕೆಲವು ಸರಳ ಹಾಗೂ ಪರಿಕಲ್ಪನೆಯುಕ್ತ ಪ್ರಯೋಗಗಳನ್ನು ಪರೀಕ್ಷಾರ್ಥಿಗಳ ಮುಂದೆ ಪ್ರಸ್ತುತ ಪಡಿಸಿದರು. ಚಂದ್ರಯಾನ 3 ಮಾದರಿ ಉಡಾವಣೆಯ ಮೂಲಕ ಕಾರ್ಯಕ್ರಮ ವಿಶಿಷ್ಟಪೂರ್ಣವಾಗಿ ಉದ್ಘಾಟನೆಗೊಂಡಿತು. ಉಪಪ್ರಾಚಾರ್ಯ ವಿ.ಆರ್.ಕುಲಕರ್ಣಿ ಮಾತನಾಡಿ, ಜ್ಞಾನಮುಖಿ ಚಟುವಟಿಕೆಗಳಿಂದ ವಿದ್ಯಾರ್ಥಿಗಳು ಆಸಕ್ತಿದಾಯಕವಾಗಿ ಜ್ಞಾನ ಸಂಗ್ರಹಣೆ ಮಾಡಲು ಅನುಕೂಲವಾಗುತ್ತದೆ ಎಂದರು. ಶಿಕ್ಷಕ ಎಸ್.ಎ.ಆದ್ಯ ಮಾತನಾಡಿದರು. ಜಿ.ಆರ್.ಪಾಟೀಲ, ಎಚ್.ಬಿ.ಸಗರ, ಜಿ.ಆರ್.ಪಾಟೀಲ, ಎ.ಜಿ. ಥೊಬ್ಬಿ ಉಪಸ್ಥಿತರಿದ್ದರು.



ವಿಜಯಪುರ: ನಗರದ ವಿ.ಭ.ದರಬಾರ ಶಾಲೆಯಲ್ಲಿ ಟ್ಯಾಲೆಂಟ್ ಟ್ರ್ಯಾಕಿಂಗ್ ಎಂಬ ವಿಶೇಷ ಸ್ಪರ್ಧಾತ್ಮಕ ಪರೀಕ್ಷೆ ನಡೆಯಿತು. ಉಪಪ್ರಾಚಾರ್ಯ ವಿ.ಆರ್.ಕುಲಕರ್ಣಿ ಮಾತನಾಡಿ, ಜ್ಞಾನಮುಖಿ ಚಟುವಟಿಕೆಗಳಿಂದ ವಿದ್ಯಾರ್ಥಿಗಳು ಆಸಕ್ತಿದಾಯಕವಾಗಿ ಜ್ಞಾನ ಸಂಗ್ರಹಣೆ ಮಾಡಲು ಅನುಕೂಲವಾಗುತ್ತದೆ ಎಂದರು. ಶಿಕ್ಷಕ ಎಸ್.ಎ.ಆದ್ಯ ಮಾತನಾಡಿದರು. ಜಿ.ಆರ್.ಪಾಟೀಲ, ಎಚ್.ಬಿ.ಸಗರ, ಜಿ.ಆರ್.ಪಾಟೀಲ, ಎ.ಜಿ. ಥೊಬ್ಬಿ ಉಪಸ್ಥಿತರಿದ್ದರು.

ಒಳಮೀಸಲಾತಿ ಶೀಘ್ರ ಜಾರಿಗೆಗೆ ಆಗ್ರಹ

ವಿಜಯಪುರ: ಕರ್ನಾಟಕ ರಾಜ್ಯ ಆದಿಜಾಂಬವ ಸಂಘ ವತಿಯಿಂದ ರಾಜ್ಯ ಸರ್ಕಾರ ಒಳ ಮೀಸಲಾತಿಯನ್ನು ತಡಮಾಡದೆ ಜಾರಿ ಮಾಡಲು ಆಗ್ರಹಿಸಿ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.



ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯ ಆದಿ ಜಾಂಬವ ಸಂಘ ಜಿಲ್ಲಾ ಅಧ್ಯಕ್ಷ ಎಂ.ಆರ್.ದೊಡಮನಿ ಮಾತನಾಡಿ, ಕರ್ನಾಟಕ ಸರ್ಕಾರಕ್ಕೆ ಒಳಮೀಸಲಾತಿಯನ್ನು ನ್ಯಾಯಬದ್ಧವಾಗಿ ಜಾರಿ ಮಾಡುವ ಸುವರ್ಣಾವಕಾಶವಿತ್ತು. ಆದರೆ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ ಎಲ್ಲ 101 ಜಾತಿಗಳಿಗೆ ಸಾಮಾಜಿಕ ನ್ಯಾಯವನ್ನು ಹಂಚುವಲ್ಲಿ ವಿಫಲವಾಗಿದೆ. ಸಾಮಾಜಿಕ ನ್ಯಾಯದ ಎದುರು ಓಟ್ ಬ್ಯಾಂಕ್ ರಾಜಕಾರಣ ಮೇಲುಗೈ ಸಾಧಿಸಿದೆ. ಪರಿಣಾಮವಾಗಿ ಸುಪ್ರೀಂಕೋರ್ಟ್ ತೀರ್ಪು ಬಂದು 16 ತಿಂಗಳು ಕಳೆದರೂ ಒಳಮೀಸಲಾತಿಯ ಜಾರಿ ಸಮರ್ಪಕವಾಗಿ ಆಗದೆ ಎಲ್ಲ ಪರಿಶಿಷ್ಟ ಜಾತಿಗಳಲ್ಲಿ ಅಸಮಾಧಾನ ಮನೆ ಮಾಡಿದೆ ಎಂದರು. ನ್ಯಾ. ನಾಗಮೋಹನ್ ದಾಸ್ ಆಯೋಗವನ್ನು ರಚಿಸಿ, ದಲಿತರ ಮೀಸಲು ನಿಧಿಯಿಂದ 120 ಕೋಟಿ ಒದಗಿಸಿ ಪರಿಶಿಷ್ಟ ಜಾತಿಗಳ ಗಣತಿ ನಡೆಸಿ ವರದಿ ಸಿದ್ದಪಡಿಸುವಂತೆ ಮಾಡಿದ್ದು, ಕಾಂಗ್ರೆಸ್ ಸರ್ಕಾರ. ಆದರೆ ಅದೇ ಸರ್ಕಾರ ನ್ಯಾ ನಾಗಮೋಹನ್ ದಾಸ್ ಆಯೋಗದ 1:6:5:4:1 ಹಂಚಿಕೆಯ ಶಿಫಾರಸ್ಸನ್ನು ಮೂಲೆಗೆ ಹಾಕಿ ತಾನೆ 6:6:5 ರ ಅವೈಜ್ಞಾನಿಕ ರಾಜಕೀಯ ಸೂತ್ರ ರೂಪಿಸಿದೆ, ಇನ್ನೊಂದೆಡೆ ಮಾದಿಗರಲ್ಲದವರೂ ಪ್ರವರ್ಗ 1ರಲ್ಲಿಜಾತಿ ಪ್ರಮಾಣಪತ್ರ ಪಡೆಯಲು ಅವಕಾಶ ಕೊಟ್ಟಿರುವುದು, ಒಳ ಮೀಸಲಾತಿಯ ಮೂಲ ಉದ್ದೇಶವನ್ನೇ ಸೋಲಿಸಿದೆ. ಈಗಲೂ ಕರ್ನಾಟಕದ ಎಸ್ಸಿ ಪಟ್ಟಿಯಲ್ಲಿ 98 ಜಾತಿಇಗಳಿದೆಯೋ 101 ಜಾತಿಗಳಿದೆಯೋ ಸ್ಪಷ್ಟವಿಲ್ಲ ಎಂದರು.

ರಾಜಕೀಯ ಒತ್ತಡಗಳಿಗೆ ಮಣಿದು ಬಡ್ತಿ ಅವಕಾಶಗಳನ್ನು ಒಳಮೀಸಲಾತಿಯಿಂದ ಹೊರಗಿಡಲಾಗಿದೆ. ಸರ್ಕಾರದ ನಿಯಮಾನುಸಾರ ಖಾಲಿ ಇರುವ ಹುದ್ದೆಗಳಲ್ಲಿ ಶೇ. 50 ರಷ್ಟು ನೇರ ನೇಮಕಾತಿ ಮೂಲಕ ಉಳಿದ ಶೇ. 50 ರಷ್ಟು ಹುದ್ದೆಗಳು ಬಡ್ತಿ ಮೂಲಕ ಆಗುತ್ತದೆ. ಆದರೆ ಮಸೂದೆಯಲ್ಲಿ ಉದ್ದೇಶಪೂರ್ವಕವಾಗಿ ಬಡ್ತಿ ಅವಕಾಶಗಳನ್ನು ಸೇರ್ಪಡೆಗೊಳಿಸಿಲ್ಲ. ಸರ್ಕಾರದ ಈ ಧೋರಣೆ ಒಳಮೀಸಲಾತಿಯ ಆಶಯವನ್ನೇ ಸೋಲಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪರಶುರಾಮ ರೋಣಿಹಾಳ, ಎಲ್.ಎಂ. ಬೆಳ್ಳುಬ್ಬಿ, ಸಾಬು ಗುಣದಾಳ, ಹಣಮಂತ ಬಿರಾದಾರ, ಭೀಮರಾಯ ರತ್ನಾಕರ, ಲಚ್ಚಪ್ಪ ಮಾದರ, ಸದಾನಂದ ಗುನ್ನಾಪೂರ, ಶರಣು ದೊಡ್ಡಮನಿ, ಹನುಮಂತ ಜೋಗಿ, ಕಾಂತು ಗಚ್ಚಿನಮನಿ, ಸಂಗಮೇಶ ಹೊಸಮನಿ, ಮಲ್ಲು ಲಾಳಿ, ದುರ್ಗಪ್ಪ ಐಹೊಳಿ ಉಪಸ್ಥಿತರಿದ್ದರು.

ತಾಯಂದಿರಿಗೆ ಜೀಜಾಬಾಯಿ ಪ್ರೇರಣೆ

ಬಸವನಬಾಗೇವಾಡಿ: ಭಾರತ ಪ್ರಾಚೀನ ಕಾಲದಿಂದಲೂ ಇರುವಂತ ದೇಶ ಇಲ್ಲಿನ ಮಣ್ಣು ನನ್ನದು. ದೇಶ ನನ್ನದು ಅನ್ನುವ ಪೂಜ್ಯನೀಯ ಭಾವನೆಯಿಟ್ಟುಕೊಂಡಿರುವ ಹಿಂದೂಗಳ ಸ್ವಾಭಿಮಾನ ಕೆರಳಿಸುವಂತ ಕಾರ್ಯ ದುಷ್ಟಶಕ್ತಿಗಳು ಮಾಡುತ್ತೀವೆ, ಲಕ್ಷಾಂತರ ವರ್ಷಗಳಿಂದ ಗೋ ಪೂಜೆ ಮಾಡುತ್ತಾ ಬಂದಿದ್ದೇವೆ ಎಂದು ಹಿಂದೂ ಜಾಗರಣಾ ವೇದಿಕೆಯ ಕರ್ನಾಟಕ ಉತ್ತರ ಪ್ರಾಂತ ಸಹ ಸಂಯೋಜಕ ಶ್ರೀಕಾಂತ ಹೊಸಕೇರಾ ಹೇಳಿದರು.

ಸ್ಥಳೀಯ ಎಪಿಎಂಸಿ ಎದುರಗಡೆ ಇರುವ ವೀರಭದ್ರೇಶ್ವರ ಉದ್ಯಾನವನದಲ್ಲಿ ರವಿವಾರ ಸಂಜೆ ಹಿಂದೂ ಸಮ್ಮೇಳನ ಸಂಚಾಲನಾ ಸಮಿತಿ ಬಸವನಬಾಗೇವಾಡಿ ಮಂಡಲದ ವತಿಯಿಂದ ಆಯೋಜಿಸಿದ ಬೃಹತ್ ಹಿಂದೂ ಸಮ್ಮೇಳನದಲ್ಲಿ ಮುಖ್ಯವಕ್ತಾರರಾಗಿ ಮಾತನಾಡಿದ ಅವರು ಇಲ್ಲಿನ ಸಂಸ್ಕೃತಿಯ ಉಳುವಿಗಾಗಿ ಸಾಕಷ್ಟು ಜನರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಮಾತೃಧರ್ಮ ಉಳುವಿಗಾಗಿ ಜೀಜಾಬಾಯಿಯವರಂತಹ ಮಹಾತಾಯಂದಿರ ಪ್ರೇರಣೆಯಿಂದ ಈ ದೇಶದ ಸಂಸ್ಕೃತಿ ಉಳಿದಿದೆ ಎಂದರು.

ರಾಷ್ಟ್ರ ಮನಗೂಳಿ ಹಿರೇಮಠದ ಅಭಿನವಸಂಗನಬಸವ ಶಿವಾಚಾರ್ಯರು ಮಾತನಾಡಿ. ಹಿಂದೂಗಳು ಇರದಿದ್ದರೆ ಭಾರತ ಉಳಯೋದಿಲ್ಲ, ಲವ್ ಜಿಹಾದ್, ಗೋ ಹತ್ಯೆಯಂತಹ ಚಟುವಟಿಕೆ ನಿಲ್ಲಬೇಕು ಎಂದು ಹೇಳಿದರು.

ಮುತ್ತಗಿಯ ನರಹರಿ ಆಚಾರ್ಯರು, ನರಸಲಗಿ ರಾಮಕೃಷ್ಣಾಶ್ರಮದ ಶ್ರೀಕಾಂತ ಮಹಾರಾಜರು, ಸ್ಥಳೀಯ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿಯವರು ದಿವ್ಯಸಾನಿಧ್ಯವಹಿಸಿ ಮಾತನಾಡಿದರು, ಆರಟಾಳದ ಸಿದ್ಧರೂಢಮಠದ ಶಿವಪುತ್ರ ಶರಣರು ಹಿಂದೂ ಸಮ್ಮೇಳನದ ಸಂಚಾಲನಾ ಸಮಿತಿ ಅಧ್ಯಕ್ಷ ಚಂದ್ರಕಾಂತ ಪಟ್ಟಣಶೆಟ್ಟಿ, ವಿವೇಕಾನಂದ ಕಲ್ಯಾಣಶೆಟ್ಟಿ, ಎಸ್.ಎ.ದೇಗಿನಾಳ, ದಯಾನಂದ ಸಾರವಾಡ ಉಪಸ್ಥಿತರಿದ್ದರು. ನೀಲಮ್ಮ ವಾಡೇದ, ಸ್ವರೂಪರಾಣಿ ಬಿಂಜಲಬಾವಿ ಪ್ರಾರ್ಥಿಸಿದರು. ಕೃಷ್ಣಾ ಬಡಿಗೇರ ನಿರೂಪಿಸಿ, ಸ್ವಾಗತಿಸಿದರು. ಡಾ.ಬಸವರಾಜ ಚವ್ಹಾಣ ವಂದಿಸಿದರು. ಆಲ್ಫಾಬೇಟ್ಸ್ ಶಾಲಾಮಕ್ಕಳಿಂದ ರಾಮಾಯಣದ ಕಿರುಚಿತ್ರ ಪ್ರದರ್ಶಿಸಿದರು. ಲೇಖಕ ಎಸ್.ವಿ.ಪಟ್ಟಣಶೆಟ್ಟಿ ರಚಿಸಿದ ಮಹಾಭಾರತ ರಸಪ್ರಶ್ನೆಗಳ ಪುಸ್ತಕ ಬಿಡುಗಡೆಗೊಳಿಸಿದರು.



ಇಂದಿನಿಂದ ಆರೋಗ್ಯ ಶಿಬಿರ

ಬಸವನಬಾಗೇವಾಡಿ: ತಾಲೂಕಿನ ಹೂವಿನಹಿಪ್ಪರಗಿಯ ಆಶೀರ್ವಾದ ಪಬ್ಲಿಕ್ ಸ್ಕೂಲ್ ಪರಿವರ್ತನ ವಿದ್ಯಾಮಂದಿರ ಶಾಲಾ ಆವರಣದಲ್ಲಿ ಹಮ್ಮಿಕೊಂಡ ಶಾರದಾ ಪೂಜೆ, ಅಭಿವ್ಯಕ್ತಿ ಸಂಭ್ರಮ 2025-26 ಹಾಗೂ ವಾರ್ಷಿಕ ಕ್ರೀಡಾಕೂಟದ ಪ್ರಶಸ್ತಿ ವಿತರಣಾ ಹಾಗೂ ಉಚಿತ ಆರೋಗ್ಯ ಶಿಬಿರದ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನದ ಫೆ.24 ಫೆ.25ರಂದು ಎರಡು ದಿನ ಆಯೋಜಿಸಲಾಗಿದೆ ಎಂದು ಶಾಲೆಯ ಅಧ್ಯಕ್ಷ ಎಸ್.ವ್ಹಿ.ಸಜ್ಜನ ಹೇಳಿದರು. ದ್ರಾಕ್ಷಾಯಿಣಿ ಅಮ್ಮನವರು, ಆನಂದ ದೇವರು ಸಾನಿಧ್ಯವಹಿಸುವರು. ಸಂಘದ ಅಧ್ಯಕ್ಷ ಎಸ್.ವಿ.ಸಜ್ಜನ ಅಧ್ಯಕ್ಷತೆವಹಿಸುವರು. ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ, ಸೋಮನಗೌಡ ಪಾಟೀಲ ಮನಗೂಳಿ ಕಾರ್ಯಕ್ರಮ ಉದ್ಘಾಟಿಸುವರು. ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮನಗೌಡ ಹಟ್ಟಿ, ಬಸವನಬಾಗೇವಾಡಿ ಸಿಪಿಐ ಗುರುಶಾಂತ ದಾಶ್ಯಾಳ, ಡಾ.ರವೀಂದ್ರ ಮದ್ದರಕಿ, ಶಿಕ್ಷಣ ಸಂಯೋಜಕ ಎಸ್.ಎಸ್.ಅಂಬಲಿ, ಮಲ್ಲಣ್ಣ ಅಣ್ಣಪ್ಪನವರ, ಮಲ್ಲಣ್ಣ ಲಚ್ಯಾಣ, ಹಿರಿಯ ನ್ಯಾಯವಾದಿ ಜಿ.ಬಿ.ಬಾಗೇವಾಡಿ, ವಿಮಲಾಬಾಯಿ ಚವ್ಹಾಣ, ಶಂಕರಗೌಡ ಮ್ಯಾಗೇರಿ, ಮಾಜಿ ಸೈನಿಕ ಬಸವರಾಜ ತಿಳಗೂಳ, ಆನಂದ ಪತ್ತಾರ, ರಾಜಶೇಖರ ಸಜ್ಜನ, ಡಾ. ಅಮರೇಶ ಮಿಣಜಗಿ, ಪತ್ರಕರ್ತ ದಯಾನಂದ ಬಾಗೇವಾಡಿ, ಅರ್ಜುನ ಚವ್ಹಾಣ, ವಿಶೇಷ ಉಪನ್ಯಾಸಕರಾಗಿ ಬಸವರಾಜ ಹಂಚಲಿ ಉಪಸ್ಥಿತರಿರುವರು.

ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಕಲಿಸಿ

ಸಿಂದಗಿ: ಮಕ್ಕಳ ಪ್ರತಿಭೆ ಹೊರಹಾಕಲು ಈ ಶಿಕ್ಷಣ ಸಂಸ್ಥೆ ಮುಂದೆಯಿದೆ. ಪಾಲಕರು ಎಲ್ಲ ಮಕ್ಕಳ ಪ್ರತಿಭೆ ನೋಡಿ ಪುರಸ್ಕರಿಸುವದರ ಜೊತೆಗೆ ಉತ್ತಮ ಸಂಸ್ಕಾರ, ಸಂಸ್ಕೃತಿ ನೀಡುವುದರೊಂದಿಗೆ ಮಕ್ಕಳನ್ನು ಸುಂದರ ಸಮಾಜದಲ್ಲಿ ಬದುಕುವ ಕಲೆಯನ್ನು ಈ ಶಿಕ್ಷಣ ಸಂಸ್ಥೆ ಮಾಡುತ್ತಿದೆ ಆದಕ್ಕೆ ಪಾಲಕರ ಸಹಕಾರ ಅವಶ್ಯವಾಗಿದೆ ಎಂದು ಸಮಾಜ ಸೇವಕಿ ನಾಗರತ್ನ ಮನಗೂಳಿ ಹೇಳಿದರು.

ಪಟ್ಟಣದ ಗುರುಕೃಪಾ ಇಂಗ್ಲೀಷ ಮಾಧ್ಯಮ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಮಕ್ಕಳಲ್ಲಿ ಉತ್ತಮ ಸಂಸ್ಕಾರವನ್ನು ಬೆಳೆಸಿ ಪ್ರತಿಭೆಯನ್ನು ಪ್ರೋತ್ಸಾಹಿಸುವ ಮೂಲಕ ದೇಶ ಕಟ್ಟುವ ಕಾರ್ಯವಾಗಬೇಕು. ಈ ಶಾಲೆಯ ಉನ್ನತಿಗಾಗಿ ಮಕ್ಕಳ ಹಿತದೃಷ್ಟಿಯಿಂದ ಸ್ಮಾರ್ಟ್ ಕ್ಲಾಸ್‌ಗಾಗಿ ರೂ.5 ಲಕ್ಷ ಪ್ರೋತ್ಸಾಹಧನ ನೀಡುತ್ತೇನೆ ಎಂದರು.

ಬಾಗಲಕೋಟೆಯ ರಾಷ್ಟ್ರೋತ್ಥಾನ ಪರಿಷತ್ತಿನ ಸಂಪನ್ಮೂಲ ವ್ಯಕ್ತಿ ಶ್ರೀನಿವಾಸ ಪಾಟೀಲ ಮಾತನಾಡಿ, ಪಠ್ಯಗಳನ್ನು ಓದುವುದುದರ ಜೊತೆಗೆ ಮಹಾನ್ ಪುರುಷ್ರ ಜೀವನ ಚರಿತ್ರೆಗಳನ್ನು ಓದುವ ಹವ್ಯಾಸ ಮಕ್ಕಳು ಬೆಳೆಸಿಕೊಳ್ಳಬೇಕು. ಮಕ್ಕಳಲ್ಲಿ ಮಾನವೀಯ ಮೌಲ್ಯದ ಜೊತೆಗೆ ಸಂಸ್ಕಾರ ಮತ್ತು ಸಂಸ್ಕೃತಿ ಬೆಳೆಸುವ ಕರ್ತವ್ಯದಲ್ಲಿ ಪಾಲಕರ ಪಾತ್ರವು ಮಹತ್ವದ್ದಾಗಿದೆ ಎಂದರು.

ಸಾನಿಧ್ಯವನ್ನು ಊರನ ಹಿರಿಯಮಠದ ಶಿವಾನಂದ ಶಿವಾಚಾರ್ಯರು ವಹಿಸಿ ಆಶೀರ್ವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಎಚ್.ಟಿ.ಕುಲಕರ್ಣಿ, ಅಥರ್ಗಾ ಜ್ಞಾನ ಭಾರತಿ ಶಾಲೆಯ ಆಡಳಿತಾಧಿಕಾರಿ ಆರ್.ಬಿ.ಪುರೋಹಿತ, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾಧ್ಯಕ್ಷ ಮಹಾಂತೇಶ ನೂಲಾನವರ, ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದ ಅಧಿಕಾರಿ ಡಿ.ಡಿ.ಮುಲ್ಲಾ, ಬಸನಗೌಡ ಪಾಟೀಲ ಮಾತನಾಡಿದರು. ವಾರ್ಷಿಕ ವರದಿಯನ್ನು ಮುಖ್ಯ ಗುರುಮಾತೆ ಹೇಮಾ ಪೊದ್ದಾರ ಮಂಡಿಸಿದರು. ಶೃತಿ ಕುಲಕರ್ಣಿ ನಿರೂಪಿಸಿದರು. ಸೌಮ್ಯ ಪೋದ್ದಾರ ವಂದಿಸಿದರು. ಗುರು ಕೃಪಾ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಎಚ್.ಜಿ.ಪೊದ್ದಾರ, ಚನ್ನವೀರ ಆಕಸ್ತಿ, ಪ್ರಸನ್ನ ಕುಲಕರ್ಣಿ, ಹರೀಶ ಪೋದ್ದಾರೆ, ಶ್ರೀಶೈಲ ರೆಬಿನಾಳ, ನವೀನ ರೆಬಿನಾಳ, ಸುರೇಶ ಪಾಟೀಲ, ಸುರೇಶ ಚೌಧರಿ ಸೇರಿದಂತೆ ಶಾಲೆಲಾ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪಾಲಕರು ಇದ್ದರು.



ಯಶೋಧಾ ಆಸ್ಪತ್ರೆಯಲ್ಲಿ 28 ಜನರ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿ

ವಿಜಯಪುರ: ಉತ್ತರ ಕರ್ನಾಟಕ ಭಾಗದಲ್ಲಿ ಕಿಡ್ನಿ ಕಸಿಗೆ ಹೆಸರಾದ ಯಶೋಧಾ ಆಸ್ಪತ್ರೆ ಈವರೆಗೆ 28 ರೋಗಿಗಳಿಗೆ ಯಶಸ್ವಿಯಾಗಿ ಕಿಡ್ನಿ ಕಸಿ ಮಾಡಿರೋ ಶ್ರೇಯಸ್ಸು ಸಹಿತ ಯಶೋಧಾ ಆಸ್ಪತ್ರೆಯ ವೈದ್ಯ ತಂಡಕ್ಕೆ ಸಲ್ಲುತ್ತದೆ. ಈಚೇಗೆ ಅತ್ತೆಯೇ ಸೊಸೆಗೆ, ತಾಯಿ ಮಗನಿಗೆ ಕಿಡ್ನಿ ದಾನ ಮಾಡಿರುವ ಅಪರೂಪದ ಘಟನೆ ನಡೆದಿದ್ದು, ಯಶಸ್ವಿಯಾಗಿ ಕಿಡ್ನಿ ಕಸಿ ಮಾಡಲಾಗಿದೆ ಎಂದು ಯಶೋಧಾ ಆಸ್ಪತ್ರೆ ಸಂಸ್ಥಾಪಕ ಅಧ್ಯಕ್ಷ ಡಾ.ರವೀಂದ್ರ ಮದ್ದರಕಿ ಹೇಳಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆ ತ್ಯಾಗಮಯಿ, ಕಷ್ಟ ಬಂದಾಗ ತನ್ನ ಸರ್ವಸ್ವವನ್ನೂ ತ್ಯಾಗ ಮಾಡುತ್ತಾಳೆ. ಅತ್ತೆ ಸೊಸೆ ನಿತ್ಯ ಸಣ್ಣ ಪುಟ್ಟ ವಿಚಾರಕ್ಕೆ ಈಗ ಜಗಳಾಡೋದು ಸಾಮಾನ್ಯ, ಆದರೆ ಇಲ್ಲೊಬ್ಬಳು ಅತ್ತೆ ತನ್ನ ಸೊಸೆಗೆ ತನ್ನ ಕಿಡ್ನಿ ದಾನ ಮಾಡಿದ್ದಾಳೆ. ಮತ್ತೊಬ್ಬ ಮಹಿಳೆ ತನ್ನ ಮಗನಿಗೆ ಕಿಡ್ನಿ ದಾನ ಮಾಡುವ ಮೂಲಕ ತ್ಯಾಗಮಯಿ ಅಂತ ಮತ್ತೊಮ್ಮೆ ಸಾಬೀತು ಮಾಡಿದ್ದಾಳೆ ಎಂದರು.

ಶಾಂತಾಬಾಯಿ ಎಂಬ ಮಹಿಳೆ ತನ್ನ ಸೊಸೆ ಬಸಮ್ಮ ಎಂಬುವರಿಗೆ ಕಿಡ್ನಿ ದಾನ ಮಾಡಿ ಬದುಕುಳಿಸಿದ್ದಾಳೆ. ಬಸಮ್ಮ ಮೂಲತಃ ಯಾದಗಿರಿ ಜಿಲ್ಲೆಯವರು. ಹೆರಿಗೆ ಸಂದರ್ಭದಲ್ಲಿ ಅವರ ಸೊಸೆಗೆ ಕಿಡ್ನಿ ತೊಂದರೆ ಆಗಿದೆ ಎಂಬುದು ಗಮನಕ್ಕೆ ಬಂದಿದೆ. ಕಿಡ್ನಿ ಜೋಡಣೆ ಮಾಡಬೇಕು ಅಂದಾಗ ಎಲ್ಲಾ ಕಡೆಗೆ ಆಸ್ಪತ್ರೆಗೆ ತೋರಿಸಿದ್ದಾರೆ. ಕೊನೆಗೂ ಕಿಡ್ನಿ ದಾನ ಮಾಡುವವರನ್ನು ನೋಡುವಂತೆ ವೈದ್ಯರು ತಿಳಿಸಿದ್ದಾರೆ. ಆದರೆ ಸ್ವತಃ ಬಸಮ್ಮನ ತವರು ಮನೆಯವರು ಕಿಡ್ನಿ ದಾನ ಮಾಡಲು ಹಿಂದೇಟು ಹಾಕಿದ್ದಾರೆ. ಕಿಡ್ನಿ ದಾನ ಮಾಡಲು ಯಾರು ದಾನಿಗಳು ಸಿಗುತ್ತಿಲ್ಲ ಜೀವನ ಕೊನೆಯ ಕ್ಷಣ ಅನ್ನುವಷ್ಟರಲ್ಲಿ ಅತ್ತೆ ಶಾಂತಾಬಾಯಿ ತನ್ನ ಒಂದು ಕಿಡ್ನಿ ದಾನ ಮಾಡಲು ಮುಂದೆ ಬಂದಿದ್ದು, ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ಸೊಸೆಗೆ ಕಿಡ್ನಿ ಕಸಿ ಮಾಡಲಾಗಿದೆ ಎಂದರು. ಕಿಡ್ನಿ ದಾನ ಮಾಡಿರೋ ಅತ್ತೆಯಂದಿರು, ತಾಯಿಯನ್ನು ಸನ್ಮಾನಿಸಿ ವೈದ್ಯ ತಂಡ ಶುಭ ಹಾರೈಸಿದ್ದಾರೆ. ಆಸ್ಪತ್ರೆ ವೈದ್ಯರು, ಸಿಬ್ಬಂದಿಗಳು ಇದ್ದರು.

ವಿದ್ಯಾರ್ಥಿಗಳು ಗುರುಗಳನ್ನು ಗೌರವಿಸಿ

ಚಡಚಣ: ಪಟ್ಟಣದ ಸಂಗಮೇಶ್ವರ ಮಾಧ್ಯಮಿಕ ಶಾಲೆಯಲ್ಲಿ ಹತ್ತನೇ ತರಗತಿ ವಿದ್ಯಾರ್ಥಿಗಳ ಬಿಳ್ಕೊಡುಗೆ ಸಮಾರಂಭ ಹಾಗೂ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು.

ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ವಿಜಯಪುರ ಜ್ಞಾನ ಯೋಗಾಶ್ರಮದ ಗುರುಲಿಂಗ ಸ್ವಾಮಿಗಳು ಮಾತನಾಡಿ, ನಡೆದಾಡುವ ದೇವರು ಎಂದೇ ಪ್ರಸಿದ್ಧರಾದ ಸಿದ್ದೇಶ್ವರ ಸ್ವಾಮಿಗಳು ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುವುದು ಈ ಸಂಸ್ಥೆಗೆ ಸಂದ ಗೌರವ. ಅಂತಹ ಶಾಲೆಯಲ್ಲಿ ಕಲಿಯುತ್ತಿರುವುದು ವಿದ್ಯಾರ್ಥಿಗಳ ಪುಣ್ಯ ಮತ್ತು ಸೌಭಾಗ್ಯ ಎಂದು ಹೇಳಿದರು. ಮಕ್ಕಳು ತಮಗೆ ವಿದ್ಯೆ ನೀಡಿದ ಗುರುಗಳಿಗೆ ಸದಾ ಋಣಿಯಾಗಿರಬೇಕು. ಯಾವುದೇ ಪದವಿ ಪಡೆದರೂ ಎಷ್ಟೇ ಶ್ರೀಮಂತರಾದರೂ ಹೃದಯವಂತರಾಗಬೇಕು. ಉತ್ತಮ ಚಾರಿತ್ರ್ಯವುಳ್ಳವರಾಗಿದ್ದು, ನಮ್ಮ ಸಂಸ್ಕೃತಿ ಹಾಗೂ ರೀತಿ-ನೀತಿಗಳನ್ನು ಎಂದಿಗೂ ಮರೆಯಬಾರದು. ಗುರುಗಳನ್ನು ಸದಾ ಗೌರವಿಸಬೇಕು. ಶಾಲೆಗೆ ಕೀರ್ತಿ ತರುವುದು ವಿದ್ಯಾರ್ಥಿಗಳೇ ಆಗಿರುವುದರಿಂದ ಆ ನಿಟ್ಟಿನಲ್ಲಿ ಮುಂದುವರೆಯಬೇಕು ಎಂದು ಶುಭ ಹಾರೈಸಿದರು.

ಆಡಳಿತಾಧಿಕಾರಿ ಎಸ್.ಎಸ್.ಚೋರಗಿ ಮಾತನಾಡಿ, ತಾಯಿ-ತಂದೆಯ ನಂತರ ಗುರುಗಳೇ ದೇವರು. ಅವರ ಮಾರ್ಗದರ್ಶನದಲ್ಲಿ ಸುಸಂಸ್ಕೃತ ಜೀವನ ನಡೆಸಬೇಕು ಎಂದು ಸಲಹೆ ನೀಡಿದರು.



ಜ್ಞಾನ ವಿಜ್ಞಾನ ಸಮಿತಿ ಬೆಂಗಳೂರು ಜಿಲ್ಲಾ ಘಟಕ, ವಿಜಯಪುರ ವತಿಯಿಂದ ನೀಡುವ ಜ್ಯೋತಿಬಾ ಫುಲೆ ರಾಜ್ಯಮಟ್ಟದ ಆದರ್ಶ ಶಿಕ್ಷಕರ ಪ್ರಶಸ್ತಿ ಪಡೆದ ಶಿಕ್ಷಕ ಟಿ.ಆರ್. ಕೋಳಿ ಹಾಗೂ ಚಡಚಣ ತಾಲೂಕು ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿ ಪಡೆದ ಎಸ್.ಐ. ಗಚ್ಚಿನಕಟ್ಟಿ ಅವರನ್ನು ಸಂಗಮೇಶ್ವರ ಶಿಕ್ಷಣ ಸಂಸ್ಥೆ ಮತ್ತು ಶಾಲೆಯ ವತಿಯಿಂದ ಸನ್ಮಾನಿಸಲಾಯಿತು.

ಸಂಗಮೇಶ್ವರ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಎಸ್.ಆರ್.ಅವಜಿ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕರಾದ ಡಾ.ಡಿ.ಬಿ.ಕಟಗೇರಿ, ಎ.ಆರ್.ಕುಲಕರ್ಣಿ, ಗೌ.ಕಾರ್ಯದರ್ಶಿ ವಿ.ಎಸ್.ಗಿಡವೀರ ಹಾಗೂ ಮುಖ್ಯಗುರು ಎಚ್.ಆರ್. ಬಗಲಿ, ಶಿಕ್ಷಕರಾದ ಟಿ.ಆರ್.ಕೋಳಿ, ಸಿದ್ಧರಾಮ ಆರ್.ಹಿಟ್ನಳ್ಳಿ, ಎಸ್.ಜಿ.ಉಮರಾಣಿ ಹಾಗೂ ಶಿಕ್ಷಕಿಯರಾದ ತಡಕಲ, ತೋಟಗೇರಿ, ಕಲ್ಯಾಣಶೆಟ್ಟಿ ಶಾಲೆಯ ಎಲ್ಲಾ ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜೆಡಿಎಸ್ ಸಮಾವೇಶದಲ್ಲಿ ಪಾಲ್ಗೊಳ್ಳಿ: ಬಿರಾದಾರ

ಇಂಡಿ: ವಿಜಯಪುರದಲ್ಲಿ ಫೆ.27ರಂದು ನಡೆಯುವ ಕಿತ್ತೂರ ಕರ್ನಾಟಕ ಜೆಡಿಎಸ್ ಕಾರ್ಯಕರ್ತರ ಸಮಾವೇಶಕ್ಕೆ ಇಂಡಿ ತಾಲೂಕಿನಿಂದ ಹತ್ತು ಸಾವಿರ ಕಾರ್ಯಕರ್ತರು ಭಾಗಹಿಸಿ ಸಮಾವೇಶ ಯಶಸ್ವಿಗೊಳಿಬೇಕು ಎಂದು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ನಾನಾಗೌಡ ಬಿರಾದಾರ ಕರೆ ನೀಡಿದರು.

ನಗರದ ಶಾಂತೇಶ್ವರ ಮಂಗಲ ಕಾರ್ಯಾಲಯದಲ್ಲಿನಡೆದ ಜೆಡಿಎಸ್ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ತಾಲೂಕಿನಲ್ಲಿ 84 ಹಳ್ಳಿಗಳ 268 ಪ್ರತಿ ಒಂದು ಬೂಥನಿಂದ ಕನಿಷ್ಠ 30 ಜನ ಕಾರ್ಯಕರ್ತರು ಭಾಗವಹಿಸುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಪಾಲ್ಗೊಳ್ಳಬೇಕು ಎಂದರು.

ಜಿಪಂ ಮಾಜಿ ಸದಸ್ಯ ಪಂಚಪ್ಪ ಕಲಬುರ್ಗಿ ಮಾತನಾಡಿ, ಸಮಾರಂಭಕ್ಕೆ ಮಾಜಿ ಪ್ರಧಾನ ಮಂತ್ರಿ ದೇವೆಗೌಡರು ಮತ್ತು ಕೇಂದ್ರ ಮಂತ್ರಿ ಕುಮಾರಸ್ವಾಮಿಯವರು ಬರುತ್ತಿದ್ದಾರೆ. ಈ ಭಾಗದ ಕೃಷ್ಣಾ ಮೇಲದಂಡೆ ಯೋಜನೆ ಮತ್ತು ಇಂಡಿ ಮತ್ತು ಸಿಂದಗಿ ಭಾಗದ ಜನರಿಗೆ ಅನುಕೂಲವಾಗುವ ಗುತ್ತಿ ಬಸವಣ್ಣ ಯೋಜನೆಗೆ ಸಾಕಷ್ಟು ಹಣ ನೀಡಿದ್ದಾರೆ. ಹೀಗಾಗಿ ಅವರ ಕೈ ಬಲ ಪಡಿಸಲು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಸೇರಬೇಕು ಎಂದರು.



ಮಾಜಿ ಶಾಶಕ ರವಿಕಾಂತ ಪಾಟೀಲ, ಜೆಡಿಎಸ್ ತಾಲೂಕು ಅಧ್ಯಕ್ಷ ಬಿ.ಡಿ.ಪಾಟೀಲ, ಅಕ್ಷಯ ಪಟೇಲ, ಅಯೂಬ ನಾಟಿಕಾರ, ಮಹೇಶ ನಾಯಕ, ನೀಲಕಂಠ ಸಾವಳಗಿ, ಜಿ.ಪಂ ಮಾಜಿ ಅಧ್ಯಕ್ಷ ಶಿವಯೋಗಪ್ಪ ನೇದಲಗಿ, ಮರೆಪ್ಪ ಗಿರಣಿವಡ್ಡರ, ಎಸ್.ಜೆ.ವಾಲಿಕಾರ ಶ್ರೀಶೈಲಗೌಡ ಬಿರಾದಾರ, ಚಿದಾನಂದ ಬಿರಾದಾರ ಮಾತನಾಡಿದರು. ಗೊರನಾಳದ ಪೂಜ್ಯ ಹಣಮಂತ ಶ್ರೀಗಳು, ಶಿವು ದೇವರ, ಮಹಿಬೂಬ ಬೇವನೂರ, ಸಿದ್ದು ಡಂಗಾ, ಡಾ.ರಮೇಶ ರಾಠೋಡ, ಸಂತೋಷ ಬಿರಾದಾರ, ಫಜಲುಲ ಮುಲ್ಲಾ, ಇರಫಾನ ಅಗರಖೇಡ, ಭೀಮನಗೌಡ ಪಾಟೀಲ ಮತ್ತಿತರಿದ್ದರು.

ಆಕ್ಸಫರ್ಡ್ ಸಂಸ್ಥೆಯಿಂದ ಗುಣಮಟ್ಟದ ಶಿಕ್ಷಣ

ಮುದ್ದೇಬಿಹಾಳ: ಉತ್ತರ ಕರ್ನಾಟಕದ ಪ್ರತಿಷ್ಠಿತ ಸಂಸ್ಥೆಯಾದ ಆಕ್ಸಫರ್ಡ್ ಸಂಸ್ಥೆಯು ಎರಡು ನೂರು ವೈದ್ಯಕೀಯ, ನೂರಾರು ಎಂಜಿನಿಯರಿಂಗ್ ಹಾಗೂ ವೃತ್ತಿಪರ ತರಬೇತಿ ಸಂಸ್ಥೆಗಳಿಗೆ ಆಯ್ಕೆಯಾಗುವ ವಿದ್ಯಾರ್ಥಿಗಳನ್ನು ತಯಾರು ಮಾಡಿ, ನೇರ ಉದ್ಯೋಗ ಪಡೆದು ಜೀವನದಲ್ಲಿ ಯಶಸ್ವಿಯಾಗಲು ಸಹಾಯ ಮಾಡುತ್ತದೆ ಎಂದು ಆಕ್ಸಫರ್ಡ್ ಪಾಟೀಲ್ ಕಾಲೇಜಿನ ಆಡಳಿತ ಅಧಿಕಾರಿ ಅಮಿತಗೌಡ ಪಾಟೀಲ್ ಹೇಳಿದರು.

ಆಕ್ಸಫರ್ಡ್ ಪಾಟೀಲ್ ಶಾಲೆಯ ಹೈಸ್ಕೂಲ್ ವಿಭಾಗದ ಚಾಂಪಿಯನ್ ವಿದ್ಯಾರ್ಥಿಗಳ ಆಯ್ಕೆ ಸ್ಪರ್ಧೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಥೆ ಗುಣಮಟ್ಟದ ಶಿಕ್ಷಕರು ಹಾಗೂ ತರಬೇತಿ ವ್ಯವಸ್ಥೆ ಹೊಂದಿರುವುದರಿಂದ ಉತ್ತರ ಕರ್ನಾಟಕದಲ್ಲಿ ವೈದ್ಯರನ್ನು ತಯಾರಿಸುವ ಕಾರ್ಖಾನೆ ಎಂದು ಹೆಸರಾಗಿದೆ. ಕಳೆದ ವರ್ಷ ಒಂದು 180 ವಿದ್ಯಾರ್ಥಿಗಳು ವೈದ್ಯಕೀಯ ಪರೀಕ್ಷೆ ಪಾಸ್ ಆಗಿದ್ದಾರೆ. ಹೈಸ್ಕೂಲ್ ಹಂತದಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿ ನೀಡಿದಾಗ ವೈದ್ಯಕೀಯ ಎಂಜಿನಿಯರಿಂಗ್ ಕನಸು ನನಸಾಗುವುದು ಹಾಗೂ ಉದ್ಯೋಗ ದೊರಕಿಸಿಕೊಳ್ಳಲು ಪಾಲಕರ ಪರಿಶ್ರಮ ಸಾರ್ಥಕವಾಗುವುದು. ಸಂಸ್ಥೆಯ ಬಗ್ಗೆ ಸಾರ್ವಜನಿಕರ ನಿರೀಕ್ಷೆ ಹೆಚ್ಚಾಗಿದ್ದು ಶಹಪುರ, ಲಿಂಗಸುರ, ಹೊಸಪೇಟೆ ಪ್ರತಿಭಾನ್ವೇಷಣೆ ಪರೀಕ್ಷೆ ನಡೆಸಲಾಗಿದೆ ಎಂದು ಹೇಳಿದರು.

ಬಿ.ಎಚ್.ತಿಳಗೋಳ, ಮಹಾಂತೇಶಹೂಗಾರ, ನಾಗಲಿಂಗಯ್ಯ ಹಿರೇಮಠ ಮಾತನಾಡಿದರು, ಆಚಾರ್ಯ ಎನ್.ಎ.ಬಿರಾದಾರ, ದರ್ಶನಗೌಡ ಪಾಟೀಲ್, ಪಿ.ಎಸ್.ಹೂಗಾರ, ಆನಂದ ಸಿದ್ದನಗೌಡ, ಇಸ್ಮಾಯಿಲ್ ಮನಿಯಾರ್ ಇದ್ದರು. 55 ವಿದ್ಯಾರ್ಥಿಗಳಿಗೆ ಹತ್ತು ಲಕ್ಷ ರೂ. ಪ್ರತಿಭಾ ಪುರಸ್ಕಾರ, ಸನ್ಮಾನ ಮಾಡಲಾಯಿತು.



ಪೊಲೀಸರ ಕಾರ್ಯ ಶ್ಲಾಘನೀಯ: ಶಿರಶ್ಯಾಡ

ಝಳಕಿ: ಚಡಚಣ ತಾಲೂಕಿನ ಹಲಸಂಗಿ ಗ್ರಾಮದಲ್ಲಿ ನಡೆದ ಜ್ಯುವೆಲ್ಲರಿ ಶಾಪ್ ದರೋಡೆ ಪ್ರಕರಣ ಅತ್ಯಂತ ಕಡಿಮೆ ಸಮಯದಲ್ಲಿ ಅಪರಾಧಿಗಳನ್ನು ಬಂಧಿಸಿರುವ ಚಡಚಣ ತಾಲೂಕಿನ ಸಿಪಿಐ ಪರಶುರಾಮ ಮನಗೂಳಿ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ತಂಡದಲ್ಲಿದ್ದ ಚಡಚಣ ಪಿಎಸ್ಐ ಸೋಮೇಶ ಗೆಜ್ಜಿ, ಝಳಕಿ ಠಾಣೆ ಪಿಎಸ್ಐ ಮಂಜುನಾಥ ತಿರಕನ್ನವರ ಹಾಗೂ ಹೋರ್ತಿ ಪಿಎಸ್ಐ ರಾಕೇಶ ಬಗಲಿ ಅವರನ್ನು ಝಳಕಿ, ಸುತ್ತಮುತ್ತಲಿನ ಗ್ರಾಮಸ್ಥರು ಝಳಕಿ ಪೊಲೀಸ್ ಠಾಣೆಯ ಆವರಣದಲ್ಲಿ ಸನ್ಮಾನಿಸಿದರು.

ಈ ವೇಳೆ ಮಾತನಾಡಿದ ಯುವ ಉದ್ದಿಮೆದಾರ ವಿನೋದ ಶಿರಶ್ಯಾಡ ಅವರು, ಪೊಲೀಸರ ಕಾರ್ಯಕ್ಷಮತೆಗೆ ಅಭಿನಂದನೆಗಳು. ನಿಮ್ಮಂತಹ ದಕ್ಷ ಅಧಿಕಾರಿಗಳಿಂದ ದುಷ್ಟರು, ಕಳ್ಳ, ಖದೀಮರಿಗೆ ನಡುಕ ಹುಟ್ಟಿಸಿದೆ. ಸಾಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಪೋಲಿಸ್ ಇಲಾಖೆಯ ಪಾತ್ರ ಬಹಳ ಮಹತ್ವದ್ದಾಗಿದೆ ಎಂದು ಹೇಳಿದರು.

ಸಿಪಿಐ ಪರುಶುರಾಮ ಮನಗೂಳಿ ಮಾತನಾಡಿ, ಹಲಸಂಗಿ ಗ್ರಾಮದ ಪ್ರಕರಣ ಸಾರ್ವಜನಿಕರಿಗೆ ಭಯದ ವಾತಾವರಣ ನಿರ್ಮಾಣವಾಗಿತ್ತು. ಜಿಲ್ಲಾ ಪೊಲೀಸ್ ಮೇಲಾಧಿಕಾರಿಗಳ ನೇತೃತ್ವದಲ್ಲಿ ತಂಡ ರಚಿಸಿ ಅಪರಾಧಿಗಳನ್ನು ಬಂದಿಸುವಲ್ಲಿ ಯಶಶ್ವಿಯಾಗಿದ್ದೇವೆ ಸಾರ್ವಜನಿಕ ಹಿತ್ತಾಸಕ್ತಿಯಿಂದ ಪೋಲಿಸ್ ಇಲಾಖೆ ಕಾರ್ಯ ನಿರ್ವಹಿಸುತ್ತದೆ. ಪ್ರತಿಯೊಂದು ಗ್ರಾಮಗಳಿಗೆ ಸಿಸಿಟಿವಿ ಅಳವಡಿಕೊಳ್ಳಿ ಎಂದರು.



ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ ಸಾಹುಕಾರ ಕಾಪಸೆ, ಗ್ರಾಪಂ ಮಾಜಿ ಅಧ್ಯಕ್ಷ ಸಣ್ಣಪ್ಪ ತಳವಾರ, ಧನರಾಜ ಮುಜಗೊಂಡ, ಶಂಕರಗೌಡ ಬಿರಾದಾರ,ಅಶೋಕ ಕಾಪಸೆ, ರವಿ ತೇಲಿ, ಶ್ರೀಶೈಲಗೌಡ ಬಿರಾದಾರ, ಪ್ರಕಾಶಗೌಡ ಬಿರಾದಾರ, ರವಿ ಹೂಗಾರ, ಶೇಬ್ಬೀರ ಮುಲ್ಲಾ, ರತ್ನಾಕರ ಕ್ಷತ್ರಿ, ಶಿವಪುತ್ರ ತಳವಾರ,ಹಣಮಂತ ಹಾಡಸಂಗೆ, ಅಣ್ಣಾರಾಯ ಬಬಲಾದ, ಸಿದ್ದು ಕೊಟ್ಟಲಗಿ, ಮಾದೇವ ಹೂಗಾರ, ಸಿದ್ದು ಚಟರಕಿ ಉಪಸ್ಥಿತರಿದ್ದರು.

ಕಿರುಸುದ್ದಿ

ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ಸಂಗಮೇಶ ನೇಮಕ

ಗಂಗಾವತಿ: ಆರ್‌ಎಸ್‌ಎಸ್‌ನ ಸ್ವಯಂಸ್ವೇವಕ ಮತ್ತು ಪ್ರಚಾರಕರಾಗಿ ಸೇವೆ ಸಲ್ಲಿಸಿದ ಸಂಗಮೇಶ ಆಯೋಧ್ಯ ಅವರನ್ನು ಬಿಜೆಪಿಯ ಗಂಗಾವತಿ ನಗರ ಘಟಕದ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕಗೊಳಿಸಿ ಆದೇಶ ಮಾಡಲಾಗಿದೆ. ಪಕ್ಷ ಮತ್ತು ಸಂಘಟನೆಯ ನಿಷ್ಠಾವಂತ ಕಾರ್ಯಕರ್ತರಾಗಿ ಸುಮಾರು 22 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ಬಿಜೆಪಿ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದ್ದರು. ಅವರ ಸೇವೆ ಮತ್ತು ಸಂಘಟನಾ ಕಾರ್ಯ ಕ್ಷಮತೆಯಿಂದ ಜಿಲ್ಲಾ ಬಿಜೆಪಿ ಘಟಕವು ವಿಶೇಷವಾಗಿ ಗುರುತಿಸಿ ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ನೀಡಿದೆ.



ಸಂಗಮೇಶ ಆಯೋಧ್ಯ ಅವರು ಕಳೆದ 2004ರಂದ ಆರ್‌ಎಸ್‌ಎಸ್‌ನ ಸಾಮಾನ್ಯ ಸ್ವಯಂಸೇವಕರಾಗಿ ಬಳ್ಳಾರಿಯಲ್ಲಿ ಪ್ರಚಾರಕರಾಗಿ ಸೇವೆ ಸಲ್ಲಿಸಿದ್ದಾರೆ. ಸದ್ಯ 2018ರಿಂದ ಬಿಜೆಪಿಯಲ್ಲಿ ಗುರುತಿಸಿಕೊಂಡು ಅನನ್ಯ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಶಾಸಕ ಜನಾರ್ಧನರೆಡ್ಡಿ ಮತ್ತು ಬಿಜೆಪಿ ಜಿಲ್ಲಾಧ್ಯಕ್ಷರು ವಿಶೇಷವಾಗಿ ನಗರ ಘಟಕದ ಬಿಜೆಪಿ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕಗೊಳಿಸಿದ್ದಾರೆ.

ಬೆಂಬಲಿಗರು ಹರ್ಷ: ನೂರಾರು ಕಾರ್ಯಕರ್ತರು ಸಂಗಮೇಶ ಆಯೋಧ್ಯವರನ್ನು ನೇಮಕಗೊಳಿಸಿದ್ದಕ್ಕೆ ಹರ್ಷ ವ್ಯಕ್ತ ಪಡಿಸಿದ್ದು, ಪಕ್ಷ ಸಂಘಟನೆಗೆ ಶಕ್ತಿ ಬಂದಿದೆ ಎನ್ನುವ ಹರ್ಷ ವ್ಯಕ್ತ ಪಡಿಸಿದರು.

ಪದಾಧಿಕಾರಿಗಳ ನೇಮಕ

ಕಲಬುರಗಿ: ಭಾರತೀಯ ಜನತಾ ಪಾರ್ಟಿ ಕಲಬುರಗಿ ಗ್ರಾಮಾಂತರ ಜಿಲ್ಲಾಧ್ಯಕ್ಷರ ಆದೇಶದ ಮೇರೆಗೆ ಕಲಬುರಗಿ ಗ್ರಾಮಾಂತರ ಜಿಲ್ಲೆಯ ಸಂಘಟನಾತ್ಮಕ ಜಿಲ್ಲಾ ಮಹಿಳಾ ಮೋರ್ಚಾ ಪದಾಧಿಕಾರಿಗಳ ನೇಮಕ ಮಾಡಲಾಯಿತು. ಗೌರಿ ಆರ್. ಚಿಚಕೋಟಿ (ಜಿಲ್ಲಾಧ್ಯಕ್ಷೆ) ರೇಣುಕಾ ರಾಠೋಡ, ಸುವರ್ಣಾ ಪಾಟೀಲ, ಚನ್ನಮ್ಮಾ ಪಾಟೀಲ, ನೀಲಮ್ಮಾ ನ್ಯಾಯವಾದಿ, ಲಲೀತಾ ಸಜ್ಜನ (ಉಪಾಧ್ಯಕ್ಷರು), ನಿರ್ಮಲಾ ಬೆಸ್ತಾ, ನಂದಾ ಬಾಬಾ (ಪ್ರ.ಕಾರ್ಯದರ್ಶಿ), ಈರಮ್ಮ ಪಾಟೀಲ, ಮಹಾನಂದಾ ರೊಟ್ಟಿ, ನಾಗಮ್ಮಾ ನಾಗಣ್ಣಾ, ಲಕ್ಷ್ಮೀ ದೇಸಾಯಿ, ಶ್ರೀದೇವಿ ಗುಣಾರಿ (ಕಾರ್ಯದರ್ಶಿ) ಮಹಾದೇವಿ ನಾಗೇಶ (ಖಜಾಂಚಿ) ಆಯ್ಕೆ ಮಾಡಲಾಯಿತು. ಸದರಿ ಪದಾಧಿಕಾರಿಗಳು ಕೂಡಲೇ ತಮ್ಮ ಜವಾಬ್ದಾರಿ ವಹಿಸಿಕೊಂಡು ಪಕ್ಷಕ್ಕೆ ನಿಷ್ಠೆಯಿಂದ ಕಾರ್ಯನಿರ್ವಹಿಸಬೇಕೆಂದು ಸೂಚಿಸಲಾಯಿತು.



ಫೆ.25ಕ್ಕೆ ಪೂರ್ವಭಾವಿ ಸಭೆ

ಕುಷ್ಟಗಿ: ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಬೆಳಗ್ಗೆ 11ಕ್ಕೆ ಫೆ.25ರಂದು ಶ್ರೀರೇಣುಕಾಚಾರ್ಯ ಜಯಂತಿ ಆಚರಣೆಗೆ ಸಂಬಂಸಿದಂತೆ ತಹಶೀಲ್ದಾರ್ ಅಶೋಕ ಶಿಗ್ಗಾವಿ ನೇತೃತ್ವದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದ್ದು, ಮಾ.1ರಂದು ಜಯಂತಿ ಆಚರಿಸಲಾಗುತ್ತಿದ್ದು, ಸದರಿ ಸಭೆಗೆ ಜಂಗಮ ಸಮಾಜ ಬಾಂಧವರು ಹಾಗೂ ಗುರು ಹಿರಿಯರು ಆಗಮಿಸಿ ಸಭೆಯಲ್ಲಿ ತಮ್ಮ ಸಲಹೆ ಸೂಚನೆ ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ತಾಲೂಕು ಜಂಗಮ ಸಮಾಜದ ಅಧ್ಯಕ್ಷ ಶಿವಕುಮಾರ ಗಂಧದಮಠ ತಿಳಿಸಿದ್ದಾರೆ.

ದೊಡ್ಡಬಸವೇಶ್ವರ ಜಾತ್ರೆ

ಕುಷ್ಟಗಿ: ತಾಲೂಕಿನ ಎಂ.ಗುಡದೂರಿನ ಶ್ರೀದೊಡ್ಡಬಸವೇಶ್ವರ ಜಾತ್ರಾ ಮಹೋತ್ಸವ ಹಾಗೂ ಶ್ರೀಬಸವಾರ್ಯ ತಾತನವರ 36ನೇ ಪುಣ್ಯಸ್ಮರನೋತ್ಸವ ಹಾಗೂ ಮಹಾರಥೋತ್ಸವ ಜರುಗಲಿವೆ.

ಉಜ್ಜಿನೀಯ ಸದ್ಧರ್ಮಪೀಠದ ಜಗದ್ಗುರು ಸಿದ್ಧಲಿಂಗರಾಜ ದೇಶಿಕೇಂದ್ರ ಶಿವಾಚಾರ್ಯ ಭಗವಾತ್ಪಾದಂಗಳರರವ ದಿವ್ಯ ಸಾನಿಧ್ಯದಲ್ಲಿ, ಶ್ರೀನೀಲಕಂಠಾರ್ಯ ತಾತಾನವರು, ಮದ್ದಾನಿಮಠದ ಶ್ರೀಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು, ಬುಕ್ಕಸಾಗರದ ಕರಿಸಿದ್ದೇಶ್ವರ ವಿಶ್ವರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಚಳಗೇರಿಯ ಶ್ರೀವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಸೇರಿದಂತೆ ಇನ್ನಿತರ ಹರಗುರು ಚರಮೂರ್ತಿಗಳ ಸಾನಿಧ್ಯದಲ್ಲಿ ಇದೇ ಫೆ.24ರಂದು ಮಂಗಳವಾರ ದೊಡ್ಡಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಮಹಾ ರಥೋತ್ಸವ ಜರುಗಲಿದೆ, ಫೆ.25ರಂದು ಗ್ರಾಮದಲ್ಲಿ ಅಡ್ಡಪಲ್ಲಕ್ಕಿ ಉತ್ಸವ, ಫೆ.26ರಂದು ಕಡುಬಿನ ಕಾಳಗ ಕಾರ್ಯಕ್ರಮಗಳು ಜರುಗಲಿವೆ. ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ಜನಪ್ರತಿನೀಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀಮಠ ಪ್ರಕಟಣೆ ತಿಳಿಸಿದೆ.



ಕೊಪ್ಪಳ: ತಾಲೂಕಿನ ಹಳೆ ಗೊಂಡಬಾಳ ಗ್ರಾಮದಲ್ಲಿನ ಹಾಲು ಉತ್ಪಾದಕರ ಸಹಕಾರಿ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ಕಾರ್ಯಕ್ರಮವನ್ನು ಕೊಪ್ಪಳ ಶಾಸಕ ಹಾಗೂ ರಾಬಕೋವಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ರಾಘವೇಂದ್ರ ಹಿಟ್ನಾಳ ಅವರು ನೆರವೇರಿಸಿದರು.

ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

ಮಾನ್ವಿ: ಪಟ್ಟಣದ ನೇತಾಜಿ ಪಿ.ಯು ಕಾಲೇಜಿನ ಸಭಾಂಗಣದಲ್ಲಿ ನಡೆದ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ನೇತಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕೆ.ಈ.ನರಸಿಂಹ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ತಮ್ಮ ಪೋಷಕರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅನೇಕ ತ್ಯಾಗ, ಮತ್ತು ಶ್ರಮದ ಪ್ರತಿಫಲವಾಗಿ ನೀವು ಇಂದು ಉತ್ತಮ ಶಿಕ್ಷಣವನ್ನು ಪಡೆಯುವುದಕ್ಕೆ ಸಾಧ್ಯವಾಗಿದೆ ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಪೋಷಕರಿಗೆ ಹಾಗೂ ಗುರುಗಳಿಗೆ ಗೌರವವನ್ನು ನೀಡಿ ನಿರಂತರ ಕಠಿಣ ಪರಿಶ್ರಮವಹಿಸಿ ಅಭ್ಯಾಸ ಮಾಡಿದಾಗ ಮಾತ್ರ ವಾರ್ಷಿಕ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದು ಜೀವನದಲ್ಲಿ ಯಶಸ್ಸನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು

ಸಂಸ್ಥೆಯ ಕಾರ್ಯದರ್ಶಿ ಕೆ.ವಿಜಯಲಕ್ಷ್ಮೀ ಮಾತನಾಡಿದರು.ಬೀಳ್ಕೊಡುಗೆ ಸಮಾರಂಭದಲ್ಲಿ ದ್ವಿತಿಯ ಪಿಯು ವಿದ್ಯಾರ್ಥಿಗಳು ಕಾಲೇಜಿಗೆ ಅಗತ್ಯವಿರುವ ಡಿಜಿಟಲ್ ಪ್ರಾಜೆಕ್ಟರನ್ನು ಕಾಣಿಕೆಯಾಗಿನೀಡಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ನೇತಾಜಿ ಶಿಕ್ಷಣ ಸಂಸ್ಥೆಯ ಸಹ ಕಾರ್ಯದರ್ಶಿ ಕೆ.ರಾಜರವಿವರ್ಮಾ, ಡಾ.ಕೆ. ವಿನಯಾ ಹಾಗೂ ಕಾಲೇಜಿನ ಮೇಲ್ವಿಚಾರಕ ಆರೀಫ್, ಉಪನ್ಯಾಸಕರಾದ ಚಂದ್ರು ಜಾಧವ್, ರಮೇಶ್, ವೀರನಗೌಡ, ಸದ್ದಾಂ, ನಾಗರಾಜ್, ಕಾವ್ಯ, ತ್ರಿವೇಣಿ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.



ಮಾನ್ವಿ: ಪಟ್ಟಣದ ನೇತಾಜಿ ಪಿ.ಯು ಕಾಲೇಜಿನ ಸಭಾಂಗಣದಲ್ಲಿ ನಡೆದ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ನೇತಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕೆ.ಈ.ನರಸಿಂಹ ಉದ್ಘಾಟಿಸಿದರು.

ಕೆಇಆರ್‌ಸಿ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಣಾ ಸಭೆ

131 ಕೋಟಿ ನಷ್ಟ ಸರಿದೂಗಿಸಿ

ಕಲಬುರಗಿ: ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ (ಜೆಸ್ಕಾಂ) ಸಂಸ್ಥೆಯಲ್ಲಿ 2024-25ನೇ ಆರ್ಥಿಕ ವರ್ಷದಲ್ಲಿ ಸಂಸ್ಥೆಗೆ 131 ಕೋಟಿ ರೂಪಾಯಿಗಳ ನಷ್ಟ ಉಂಟಾಗಿದ್ದು ಕೂಡಲೇ ಅದನ್ನು ಸರಿದೂಗಿಸುವಂತೆ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಬಾಜಪೇಯಿ ಕೆಇಆರ್ಸಿಯ ಆರ್ಥಿಕ ವಾರ್ಷಿಕ ಕಾರ್ಯ ಪರಿಶೀಲನೆ ಅಧ್ಯಕ್ಷರ ರವಿಕುಮಾರ್ ಅವರಿಗೆ ಮನವಿ ಮಾಡಿದರು.

ನಗರದ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಸೋಮವಾರ ನಡೆದ ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿಯು (ಜೆಸ್ಕಾಂ) ಆರ್ಥಿಕ ವರ್ಷ 2024-25ನೇ ಸಾಲಿಗೆ ವಿದ್ಯುತ್ ದರ ಪರಿಷ್ಕರಣೆ ಹಿನ್ನೆಲೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಸಾರ್ವಜನಿಕರ ಅಭಿಪ್ರಾಯ ಸಂಗ್ರಹಣಾ ಸಭೆಯಲ್ಲಿ ಮಾತನಾಡಿದ ಅವರು, ಕೆಇಆರ್‌ಸಿ ಅನುಮೋದಿತ ವೆಚ್ಚ ಮತ್ತು ಆದಾಯದ ನಡುವೆ ವ್ಯತ್ಯಾಸ ಉಂಟಾಗಿ ಸಂಸ್ಥೆಯ ಆದಾಯ ಮತ್ತು ಖರ್ಚು ಎರಡು ಹೆಚ್ಚಾಗಿದೆ. ಹೀಗಾಗಿ 131 ಕೋಟಿ ರೂ. ಬಾಕಿ ಉಳಿದಿದ್ದು, ಅದನ್ನು ಸರಿದುಗಿಸುವ ಅಗತ್ಯವಿದೆ ಎಂದು ಹೇಳಿದರು.

ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಬಾಜಪೇಯಿ ಮನವಿಗೆ ಉತ್ತರಿಸಿದ ಕೆಇಆರ್‌ಸಿಯ ಅಧ್ಯಕ್ಷ ರವಿಕುಮಾರ್, ವಿಷಯವನ್ನು ಪರಿಗಣಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ಒ ಆ್ಯಂಡ್ ಎಂ ದರ ಜಾಸ್ತಿಯಾಗಿರುವ ಹಿನ್ನೆಲೆಯಲ್ಲಿ ಖರ್ಚು ಜಾಸ್ತಿಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಹಗ್ಗ ಕೊಡಿ ನೇಣು ಹಾಕೋತಿನಿ: ಸಭೆಯಲ್ಲಿ ಸಿದ್ದಣ್ಣ ಕಲ್ಲಶೆಟ್ಟಿ ಮಾತನಾಡಿ, ಟ್ರಾನ್ಸ್‌ಫಾರ್ಮರ್ (ಟಿ.ಸಿ) ಸುಟ್ಟರೆ ಬದಲಾವಣೆ ವಿಳಂಬವಾಗುತ್ತಿದೆ.1 ಲಕ್ಷ ರೂಪಾಯಿ ಬೇಡಿಕೆ ಇಡಲಾಗುತ್ತಿದೆ ಎಂದು ಆರೋಪಿಸಿ, ಹೀಗಾದರೆ ನನಗೆ ಇಲ್ಲೆ ಹಗ್ಗ ಕೊಡಿ ನಾನು ನೇಣು ಹಾಕಿಕೊಳ್ಳುತ್ತೇನೆ ಎಂದಾಗ ಉತ್ತರಿಸಿದ ಅಧಿಕಾರಿಗಳು, ಒಂದು ಟಿ.ಸಿ ಬದಲಾವಣೆಗಾಗಿ 25 ಸಾವಿರ ರೂ. ವೆಚ್ಚವಾಗುತ್ತದೆ.2 ದಿನಗಳಲ್ಲಿ ಬದಲಾವಣೆ ಮಾಡಬೇಕು ಎಂದು ತಿಳಿಸಿದರು.

ಇನ್ನೂ ಸಭೆಯಲ್ಲಿ ಕಂಪನಿಯ ಆದಾಯ-ವೆಚ್ಚ ವಿವರಗಳು, ವಿದ್ಯುತ್ ಖರೀದಿ ವೆಚ್ಚ,ವಿತರಣೆ ವ್ಯವಸ್ಥೆ ಸುಧಾರಣೆ, ಬಂಡವಾಳ ಹೂಡಿಕೆ ಯೋಜನೆಗಳು ಹಾಗೂ ನಷ್ಟ ಕಡಿತ ಕುರಿತು ಸಭೆಯಲ್ಲಿ ವಿಷಯಗಳನ್ನು ತಿಳಿಸಲಾಯಿತು.

ಕೆಇಆರ್‌ಸಿ (ಕಾನೂನು) ಸದಸ್ಯರಾದ ಎಚ್. ಕೆ.ಜಗದೀಶ್, ಕೆಇಆರ್‌ಸಿ ಸದಸ್ಯರಾದ ಜಾವೇದ್ ಅಖ್ತರ್ (ವಿಡಿಯೋ ಕಾಲ್ ಮೂಲಕ) ಜೆಸ್ಕಾಂ ಅಧ್ಯಕ್ಷರಾದ ಪ್ರವೀಣ್ ಪಾಟೀಲ ಹಾರವಾಳ, ನಿರ್ದೇಶಕರು (ತಾಂತ್ರಿಕ) ಚಂದ್ರಕಾಂತ್ ಪಾಟೀಲ ಹಾಗೂ ಮುಖ್ಯ ಹಣಕಾಸು ಅಧಿಕಾರಿ ಬಿ.ಎಚ್. ಶಿವಶಂಕರ್ ಉಪಸ್ಥಿತರಿದ್ದರು.



ಪ್ರತಿ 3 ತಿಂಗಳಿಗೊಮ್ಮೆ ಗ್ರಾಹಕ ಸಂವಾದ ಸಭೆ ನಡೆಸಲಾಗುವುದು.ವಿದ್ಯುತ್ ದೂರುಗಳಿಗೆ ಪ್ರತಿಕ್ರಿಯೆ ನೀಡದ ಅಧಿಕಾರಿಗಳ ವಿರುದ್ಧ ಕ್ರಮ ಖಚಿತ.ವಿದ್ಯುತ್ ಕಳ್ಳತನ ಪತ್ತೆ ಮಾಡಲು ಜಾಗೃತ ದಳ 24x7 ಕಾರ್ಯನಿರ್ವಹಿಸುತ್ತಿದ್ದು ಅಪರಾಧಿಗಳಿಗೆ ದಂಡ ವಿಧಿಸಲಾಗುತ್ತದೆ.ಅಧಿಕಾರಿಗಳು ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಲಾಗುವುದು.

■ **ಕೃಷ್ಣ ಬಾಜಪೇಯಿ, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ**

ಜನಸ್ನೇಹಿಯಾಗಲಿ ಜೆಸ್ಕಾಂ

ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಗ್ರಾಹಕ ಸಿದ್ರಾಮಯ್ಯ ಹಿರೇಮಠ್,ಜೆಸ್ಕಾಂ,ಜನಸ್ನೇಹಿಯಾಗಿ ಕಾರ್ಯ ನಿರ್ವಹಿಸುವ ಬದಲು ಜನರ ಜೀವ ಹಿಂಡುವ ಜೆಸ್ಕಾಂ ಆಗುತ್ತಿದೆ.ಇತ್ತೀಚೆಗೆ ನಗರದ ಮೋಹನ್ ಲಾಡ್ಜ್ ಬಳಿ ರಸ್ತೆಯ ಬದಿಯ ವೈರ್ ತಗುಲಿ ಮಹಿಳೆಯೋರ್ವರು ಕಾಲು ಕಳೆದುಕೊಂಡಿದ್ದಾರೆ. ಆದರೂ ಎಚ್ಚೆತ್ತುಕೊಂಡಿಲ್ಲ, ನಗರದ ಬಹುತೇಕ ಕಡೆಗಳಲ್ಲಿ ಅನಾವಶ್ಯಕ ವೈರ್ ರಸ್ತೆಯ ಬದಿಯಲ್ಲಿ ಬಿದ್ದಿದ್ದು,ಅವುಗಳನ್ನು ತೆಗೆದು ಬಿಸಾಡುವಲ್ಲಿ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ ಎಂದು ಸಭೆಯ ಗಮನಕ್ಕೆ ತಂದಾಗ, ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ ಮಾತನಾಡಿ,ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಭೆ ನಡೆಸಿ ತಾಕೀತು ಮಾಡಿದ್ದಲ್ಲದೇ, ನಿರ್ಲಕ್ಷ್ಯವಹಿಸಿದವರಿಗೆ ನೋಟಿಸ್ ಕೂಡ ಜಾರಿ ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಮಹಿಳಾ ಕಾರ್ಯಕರ್ತರ ಸಮಾವೇಶ

ಗಂಗಾವತಿ: ಕರ್ನಾಟಕ ದಲಿತ ಮಹಿಳಾ ಒಕ್ಕೂಟ ಹಾಗೂ ಪ್ರೊ.ಬಿ.ಕೃಷ್ಣಪ್ಪನವರ ನೇತೃತ್ವದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಹಯೋಗದಲ್ಲಿ ಮಾತೆ ರಮಾಬಾಯಿ ಅಂಬೇಡ್ಕರ್, ಸಾವಿತ್ರಿ ಬಾಯಿ ಫುಲೆಯವರ ಜನ್ಮ ದಿನಾಚರಣೆಯ ಅಂಗವಾಗಿ ಚಿಕ್ಕಬಳ್ಳಾಪುರದಲ್ಲಿ ಮಹಿಳಾ ಕಾರ್ಯಕರ್ತರ ರಾಜ್ಯ ಮಟ್ಟದ ಬೃಹತ್ ಸಮಾವೇಶವನ್ನು ನಡೆಸಲಾಗುವುದು ಎಂದು ಸಂಘಟನೆಯ ವಿಭಾಗ ಸಂಚಾಲಕ ಹಂಪೇಶ್ ಹರಿಗೋಲ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸಂಘಟನೆಯ ಕಾರ್ಯಕರ್ತರ ನೇತೃತ್ವದಲ್ಲಿ ಸೋಮವಾರ ಹಮ್ಮಿಕೊಂಡ ಆಮಂತ್ರಣ ಬಿಡುಗಡೆ ಹಾಗೂ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು.

ಸಂವಿಧಾನ ಶಿಲ್ಪಿಯಾಗಿರುವ ಡಾ.ಅಂಬೇಡ್ಕರ್ ಅವರ ಪತ್ನಿಯಾಗಿರುವ ಮಾತೆ ರಮಾಬಾಯಿಯವರು ಕಷ್ಟದ ಜೀವನದಲ್ಲಿ ಕೂಡ ಅಂಬೇಡ್ಕರ್ ಅವರ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆಯನ್ನು ಮಾಡದೆ ಪ್ರೋತ್ಸಾಹವನ್ನು ನೀಡಿದ ಮಹಾನ್ ತಾಯಿಯಾಗಿದ್ದಾರೆ. ಅವರ ಪ್ರೋತ್ಸಾಹದಿಂದಾಗಿ ಅಂಬೇಡ್ಕರ್ ಅವರು ಸಾಕಷ್ಟು ಪದವಿಗಳನ್ನು ಪಡೆದುಕೊಂಡು ಸಂವಿಧಾನವನ್ನು ಸಹ ರಚನೆ ಮಾಡಿದ್ದರು. ಇನ್ನೂ ಮಹಿಳೆಯರು ಶಿಕ್ಷಣದಿಂದ ದೂರ ಇರಬೇಕು ಎನ್ನುವ ಕಾಲದಲ್ಲಿ ತಾಯಿ ಸಾವಿತ್ರಿಬಾಯಿ ಫುಲೆಯವರನ್ನು ಶಿಕ್ಷಣವನ್ನು ಕಲಿತುಕೊಳ್ಳುವುದರ ಪ್ರತಿಯೊಬ್ಬ ಮಹಿಳೆಯು ಶಿಕ್ಷಣವನ್ನು ಪಡೆದುಕೊಳ್ಳಬೇಕು ಎಂದು ಸಂದೇಶವನ್ನು ಸಾರಿದ ಮಹಾನ್ ಮಹಿಳೆ ಸಾವಿತ್ರಿಬಾಯಿ ಫುಲೆಯಾಗಿದ್ದಾರೆ. ಅವರಿಬ್ಬರ ಜನ್ಮ ದಿನಾಚರಣೆಯ ಅಂಗವಾಗಿ ಸಂಘಟನೆಯ ನೇತೃತ್ವದಲ್ಲಿ ಯುವ ಪೀಳಿಗೆಗೆ ಅವರ ಆದರ್ಶಗಳನ್ನು, ಸಿದ್ಧಾಂತಗಳನ್ನು ತಿಳಿಸಿ, ಜಾಗೃತಿ ಮೂಡಿಸುವ ಸಲುವಾಗಿ ಮಹಿಳಾ ಕಾರ್ಯಕರ್ತರ ರಾಜ್ಯ ಮಟ್ಟದ ಬೃಹತ್ ಸಮಾವೇಶವನ್ನು ನಡೆಸಲಾಗುತ್ತಿದೆ. ಫೆ.27ರಂದು ಚಿಕ್ಕಬಳ್ಳಾಪುರದ ಕನ್ನಡ ಭವನದಲ್ಲಿ ರಾಜ್ಯ ಸಮಾವೇಶ ನಡೆಯಲಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಮಾವೇಶದಲ್ಲಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಹೇಳಿದರು. ನಂತರ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು.

ಸಂಘಟನೆಯ ಜಿಲ್ಲಾ ಖಜಾಂಚಿ ಯಮನೂರಪ್ಪ ನಾಯಕ ಹುಲಿಹೈದರ, ತಾಲೂಕು ಕಾರ್ಯದರ್ಶಿ ಯಮನೂರಪ್ಪ, ತಾಲೂಕು ಉಪಾಧ್ಯಕ್ಷ ಗೋವಿಂದಪ್ಪ ಸಂಗಾಪೂರ, ತಾಲೂಕು ಅಧ್ಯಕ್ಷ ದುರುಗಪ್ಪ ಹೊಸಳ್ಳಿ, ಮಹಿಳಾ ಸಂಘಟನೆ ಜಿಲ್ಲಾಧ್ಯಕ್ಷೆ ಪಾರ್ವತಮ್ಮ ಹರಿಗೋಲ, ಜಿಲ್ಲಾ ಕಾರ್ಯದರ್ಶಿ ಹನುಮಂತಪ್ಪ ಬಳ್ಳಾರಿ ಹಾಗೂ ಇತರರಿದ್ದರು.



ಜೀವನ ಭಗವಂತನಿಗೆ ಅರ್ಪಿಸಿ ಬದುಕಿ

ಯಾದಗಿರಿ: ಅವ್ವನ ಜೋಗುಳ, ಅಪ್ಪನ ಬೈಗುಳ, ಜೀವನದಲ್ಲಿ ಇವೆರಡು ಪ್ರಮುಖ ವಾಗುತ್ತವೆ. ಜೀವನ ಭಗವಂತನಿಗೆ ಅರ್ಪಿಸಿ ಬದುಕಬೇಕು ಎಂದು ಕೊಪ್ಪಳದ ಗವಿಸಿದ್ದೇಶ್ವರ ಮಹಾ ಸಂಸ್ಥಾನ ಮಠದ ಜಗದ್ಗುರು ಶ್ರೀಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ನುಡಿದರು.

ಭಾನುವಾರ ತಾಲೂಕಿನ ಅನುಗ್ರಹ ಕ್ಷೇತ್ರ ಅಬ್ಬೆತುಮಕೂರಿನ ಶ್ರೀವಿಶ್ವಾರಾಧ್ಯರ ಜಾತ್ರಾ ಮಹೋತ್ಸವದ ನಿಮಿತ್ತ ಬನ್ನಿ ಬಸವ

ಅನುಭವ ಮಂಟದ ಶರಣ ಸಕ್ರೆಪ್ಪಗೌಡ ವೇದಿಕೆಯಲ್ಲಿ ಏರ್ಪಡಿಸಿದ್ದ ಮಾನವಧರ್ಮ ಸಮಾವೇಶದಲ್ಲಿ ಪಾವನ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ, ಇದ್ದಂಗ ಇರಬೇಕು, ಇಲ್ಲದಾಂಗ ಇರಬೇಕು, ಮೇಲಿನವ ಕರೆದಾಗ ಎದ್ದು ಹೋಗಾಂಗ ಇರಬೇಕು. ಇದೇ ಮನುಷ್ಯ ಜೀವನದ ನಿಜಾರ್ಥವೆಂದು ಹೇಳಿದರು.

ಮಠದ ಪೀಠಾಧಿಪತಿ ಡಾ.ಗಂಗಾಧರ ಶ್ರೀಗಳು ಮಾತನಾಡಿ, ವಿಶ್ವಾರಾಧ್ಯರು ತ್ರಿಕಾಲ ಜ್ಞಾನಿಗಳು. ಒಮ್ಮೆ ನಾಯ್ಕಲ್‌ನಿಂದ ಸದ್ಭಕ್ತರಿಗೆ ತಮ್ಮನ್ನು ಎತ್ತಿನ ಬಂಡಿಯಲ್ಲಿ ಎಳೆದುಕೊಂಡು ಬರುವಂತೆ ಹೇಳಿ ಅಬ್ಬೆತುಮಕೂರಿನ ಮಠದ ಮುಂಭಾಗದಲ್ಲಿ ಬಂದಾಗ ಬಂಡಿಯನ್ನು ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆ ಎಳೆಸುತ್ತಾರೆ. ಆಗ ವಿಶ್ವಾರಾಧ್ಯರು ಅಬ್ಬಾ! ಏನು ಜನ ಎಂದು ಆಗಲೇ ಉದ್ಗರಿಸಿದರಂತೆ. ಅಂದು ಆ ಮಹಾತ್ಮ ಹೇಳಿದಂತೆ ಇಂದು ಲಕ್ಷಾವಧಿ ಭಕ್ತರು ಸೇರಿರುವುದೇ ಅದಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು. ಕಾನೂನು ಸಚಿವ ಎಚ್.ಕೆ.ಪಾಟೀಲ್, ಬೆಂಗಳೂರಿನ ವಿಭೂತಿಪುರ ಮಠದ ಡಾ.ಮಹಾಂತಲಿಂಗ ಶಿವಾಚಾರ್ಯರು ಮಾತನಾಡಿದರು. ಶಿವಶೇಖರ ಸ್ವಾಮೀಜಿ, ಡಾ.ಶಿವಾನಂದ ಸ್ವಾಮೀಜಿ ಸೊನ್ನ, ಮುನೀಂದ್ರ ಸ್ವಾಮಿಜಿ ಹಲಕರ್ಟಿ, ಶಾಂತಮಲ್ಲಿಕಾರ್ಜುನ ಸ್ವಾಮಿಜಿ ಹೆಡಗಿಮದ್ರಾ, ಸೂಗೂರೇಶ್ವರ ಸ್ವಾಮೀಜಿ ಶಹಾಪೂರ, ಗಬ್ಬೂರ ಬೂದಿಬಸವೇಶ್ವರ ಶ್ರೀಗಳು, ಯಲ್ಲೇರಿಯ ಕೋಟ್ಟೂರೇಶ್ವರ ಶ್ರೀಗಳು, ಮಳಖೇಡದ ಕಾರ್ತಿಕೇಶ್ವರ ಶಿವಾಚಾರ್ಯರು, ಶ್ರೀಶಿವಮೂರ್ತಿ ಸ್ವಾಮೀಜಿ ದೇವಾಪೂರ, ಹೊನ್ನಕೀರಣಗಿಯ ಶಿವಾಚಾರ್ಯರು, ಕುಕನೂರಿನ ಚನ್ನಮಲ್ಲ ಶಿವಾಚಾರ್ಯರು,

ಗುಡುಗುಂಟಿಯ ಅಭಿವನ ಗಜದಂಡ ಶಿವಾಚಾರ್ಯರು, ಗೋಲಪಲ್ಲಿಯ ಶ್ರೀವರದಾನೇಶ್ವರ ಸ್ವಾಮಿಗಳು ಇದ್ದರು.


ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ಶಾಸಕರಾದ ಚೆನ್ನಾರೆಡ್ಡಿ ಪಾಟೀಲ ತುನ್ನೂರು, ಶರಣಗೌಡ ಕಂದಕೂರ, ಬಸವರಾಜ ಮತ್ತಿಮೂಡ, ಕ.ಕ ಸಾರಿಗೆ ನಿಗಮ ಅಧ್ಯಕ್ಷ ಅರುಣಕುಮಾರ ಪಾಟೀಲ, ಮಾಜಿ ಸಚಿವ ಸಿದ್ದರಾಮ ಮೇತ್ರೆ, ಮುಖಂಡರಾದ ಮಹೇಶಗೌಡ ಮುದ್ನಾಳ, ರಾಚಣಗೌಡ ಮುದ್ನಾಳ, ಬಸ್ಸುಗೌಡ ಬಿಳ್ಹಾರ, ಕರವೇ ಅಧ್ಯಕ್ಷ ಟಿ.ಎನ್.ಭೀಮುನಾಯಕ, ಡಾ.ಸುಭಾಶ್ಚಂದ್ರ ಕೌಲಗಿ ಭಾಗವಹಿಸಿದ್ದರು.



ಪತ್ರಕರ್ತರು ಸಮಾಜಮುಖಿಯಾಗಿ ಕೆಲಸ ನಿರ್ವಹಿಸಲಿ

ಯಲಬುರ್ಗಾ: ಪತ್ರಕರ್ತರು ಸಮಾಜಮುಖಿಯಾಗಿ ಎಷ್ಟೇ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದರೂ ಅವರಿಗೆ ಸಿಗಬೇಕಾದ ಸೌಲಭ್ಯಗಳು ಸಮರ್ಪಕವಾಗಿ ದೊರೆಯುತ್ತಿಲ್ಲ ಎಂದು ಕರ್ನಾಟಕ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಶರಣಪ್ಪ ಗುಮಗೇರಿ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಕರ್ನಾಟಕ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಿ ಮಾತನಾಡಿದ ಅವರು ನಮ್ಮವರ ಸ್ವಾರ್ಥ,ಪ್ರತಿಷ್ಠೆಯಿಂದಾಗಿ ನಮ್ಮ ಪತ್ರಕರ್ತರಿಗೆ ನ್ಯಾಯಯುತವಾಗಿ ಸೌಲಭ್ಯಗಳು ಸಿಗದೆ ಅನ್ಯಾಯವಾಗುತ್ತಿದೆ ಎಂದರು. ಸಂಘ ಯಾವುದೇ ಇರಲಿ ನಿಷ್ಠೆ ಪ್ರಾಮಾಣಿಕತೆ ಹಾಗೂ ಬದ್ಧತೆಯಿಂದ ಕೆಲಸ ನಿರ್ವಹಿಸಿ ಇದರಿಂದ ಸಮಾಜಕ್ಕೆ ಒಳಿತಾಗುವ ಕಾರ್ಯ ಮಾಡಿದಾಗ ಸಮಾಜ ನಮ್ಮನ್ನು ಗುರುತಿಸುತ್ತದೆ.ತಾಲೂಕಿನಲ್ಲಿ ನಮ್ಮ ಸಂಘಟನೆ ನಿರಂತರವಾಗಿ ಚಾಲನೆಯಲ್ಲಿದೆ ಹಾಗೂ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ನೀವುಗಳು ಇತರ ಸಂಘಗಳಿಗೆ ಮಾದರಿಯಾಗುವ ರಿತಿಯಲ್ಲಿ ಕೆಲಸ ಮಡುವಂತೆ ಹೇಳಿದರು.

ನೂತನ ಪದಾಧಿಕಾರಿಗಳ ನೇಮಕ: ನೂತನ ತಾಲೂಕು ಅಧ್ಯಕ್ಷರಾಗಿ ಶಿವಮೂರ್ತಿ ಇಟಗಿ, ಪ್ರಧಾನ ಕಾರ್ಯದರ್ಶಿ ಶಿವುಕುಮಾರ ಮ್ಯಾಗೇರಿ, ಗೌರವಾಧ್ಯಕ್ಷ ಹಾಗೂ ಜಿಲ್ಲಾ ಕಾರ್ಯಕಾರಣಿ ಸದಸ್ಯರಾಗಿ ಸ,ಶರಣಪ್ಪ ಪಾಟೀಲ್, ಉಪಾಧ್ಯಕ್ಷ ದೇವರಾಜ ದೊಡ್ಡಮನಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಲಾಯಿತು. ನಂತರ ಸಂಘದ ಮಾಜಿ ಅಧ್ಯಕ್ಷ ದಿ,ಖಾಜಾವಲಿ ಜರಕುಂಟಿಯವರ ಮನೆಗೆ ತೆರಳಿ ಅವರ ಧರ್ಮಪತ್ನಿಯವರಿಗೆ ಆರ್ಥಿಕ ನೆರವನ್ನು ಜಿಲ್ಲಾಧ್ಯಕ್ಷ ಶರಣಪ್ಪ ಗುಮಗೇರಿ ನೀಡಿದರು. ರವಿಕುಮಾರ್ ಚಲವಾದಿ, ವೀರೇಶ ಸ್ಟಾಂಪಿನ, ಕಳಕೇಶ ಬೇವಿನಗಿಡದ, ಶರಣು ಆಡೀನ್, ಮೌನೇಶ ವಜ್ರಬಂಡಿ, ದುರಗೇಶ ಪೂಜಾರ ಅವರು ನೂತನ ತಾಲೂಕ ಕಾರ್ಯಕಾರ್ಯಿಣಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.



ಫಲಿತಾಂಶ ಹೆಚ್ಚಳಕ್ಕೆ ಗಮನ ಹರಿಸಿ: ಅನಂತಕುಮಾರ್

ಕುಕನೂರ: ಮುನಿರಾಬಾದ್ ಡಯಟ್ ನೋಡಲ್ ಅಧಿಕಾರಿ ಹಾಗೂ ಅಭಿವೃದ್ಧಿ ಉಪ ನಿರ್ದೇಶಕ ಅನಂತಕುಮಾರ್ ಎ.ಎಸ್. ಅವರು ತಾಲೂಕಿನ ಮಂಗಳೂರ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಗೆ ಭೇಟಿ ನೀಡಿ, ವಿದ್ಯಾರ್ಥಿಗಳು ಅಧಿಕ ಫಲಿತಾಂಶ ಪಡೆಯಬೇಕು, ಅದಕ್ಕೆ ಪೂರಕವಾಗಿ ಶಿಕ್ಷಕರು ಪಾಠ ಮಾಡಬೇಕು ಎಂದು ಸೂಚಿಸಿದರು.

ಸೋಮವಾರ ಶಾಲೆಗೆ ಭೇಟಿ ನೀಡಿ ಪ್ರಗತಿ ಪರಿಶೀಲನಾ ಸಭೆ ಉದ್ದೇಶಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳ ಹಾಜರಾತಿ, ಶಿಕ್ಷಣದ ಗುಣಮಟ್ಟ, ಕುಡಿಯುವ ನೀರು, ಶೌಚಾಲಯ, ಶಿಕ್ಷಕರ ಹಾಜರಾತಿ, ಶಾಲಾ ಆವರಣದ ಬಗ್ಗೆ ಪರಿಶೀಲನೆ ನಡೆಸಿದರು.

ಪರೀಕ್ಷಾ ದಿನಗಳು ಬೇಗ ಬರುತ್ತಿದ್ದು, ವಿದ್ಯಾರ್ಥಿಗಳು ನಿಗದಿತ ಫಲಿತಾಂಶ ಗುರಿ ತಲುಪುವ ಬಗ್ಗೆ ಶಿಕ್ಷಕರು ಮಾಡಿದ ಭೋದನೆ ಬಗ್ಗೆ ಮಾಹಿತಿ ಪಡೆದರು. ವಿದ್ಯಾರ್ಥಿಗಳ ಗೈರು ಹಾಜರಾತಿ ಬಗ್ಗೆ ಅಸಮಾದಾನ ವ್ಯಕ್ತಪಡಿಸಿದರು.

ಪಾಲಕರು ಸಹ ತಮ್ಮ ಮಕ್ಕಳು ಶಾಲೆಯಲ್ಲಿ ಮಾಡುವ ವರ್ತನೆಯನ್ನು ಗಮನಿಸಬೇಕು. ತಪ್ಪು ಮಾಡಿದರೆ, ಶಿಕ್ಷಕರಿಗೆ ತಿಳಿಸಬೇಕು. ವಿದ್ಯಾರ್ಥಿಗಳು ದುಶ್ಚಟದಿಂದ ದೂರ ಇರಬೇಕು. ಶಾಲಾ ಆವರಣದ ಸುತ್ತ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಸೂಚಿಸಿದರು. ಮಾದರಿ ಶಾಲೆ ನಿರ್ಮಾಣಕ್ಕೆ ಶಾಲಾ ಆಡಳಿತ ಮಂಡಳಿ ಹಾಗೂ ಎಸ್‌ಡಿಎಂಸಿ ಸದಸ್ಯರು ಶ್ರಮಿಸಬೇಕು ಎಂದು ತಿಳಿಸಿದರು.ಪ್ರೌಢ ಶಾಲೆಯ ಉಪಪ್ರಾಂಶುಪಾಲ ಹನಮಂತಪ್ಪ ಆವಾರದಮನಿ ಕೆಪಿಎಸ್‌ನ ಎಸ್‌ಡಿಎಂಸಿ ಅಧ್ಯಕ್ಷ ಅನಿಲ್‌ಕುಮಾರ್ ಎಂ.ಕಲ್ಲಾವಿ, ಶಿಕ್ಷಕರಾದ ಕೊಟ್ರೇಶ್ ಹೆಸರೂರ್, ಶಿಕ್ಷಕೀಯರಾದ ಲಕ್ಷ್ಮೀದೇವಿ, ಶಾಂತಾಮಣಿ, ದೈಹಿಕ ಶಿಕ್ಷಕಿ ಲಕ್ಷ್ಮೀದೇವಿ, ಅಥಿತಿ ಶಿಕ್ಷಕೀಯರಾದ ಶಾರದಾ, ಚೈತ್ರಾ, ಚಾಂದವಿ, ಸಿಬ್ಬಂದಿ ಮಹೇಶ್, ಬಸವರಾಜ, ಇತರರಿದ್ದರು.



ಕೊಪ್ಪಳ ಬಂದ್‌ಗೆ ಜೆಡಿಎಸ್ ಬೆಂಬಲ: ಸಿ.ವಿ.ಚಂದ್ರಶೇಖರ್

ಕೊಪ್ಪಳ: ಫೆ.24ರಂದು ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಹಾಗೂ ಕೊಪ್ಪಳ ಪರಿಸರ ಹಿತರಕ್ಷಣಾ ವೇದಿಕೆ ಜಂಟಿ ಕ್ರಿಯಾ ಸಮಿತಿ ಕರೆ ನೀಡಿರುವ ಕೊಪ್ಪಳ ಬಂದ್‌ಗೆ ಜೆಡಿಎಸ್ ಸಂಪೂರ್ಣ ಬೆಂಬಲವಿದೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ್ ಹೇಳಿದರು.

ನಗರದ ಮೀಡಿಯಾ ಕ್ಲಬ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಸೋಮವಾರ ಮಾತನಾಡಿದರು. ತಾಲೂಕಿನ ಜನರಿಗೆ ಕಾರ್ಖಾನೆಗಳು ಬಹಳ ಅನ್ಯಾಯ ಮಾಡಿವೆ. ಕೊಪ್ಪಳ ತಾಲೂಕಿನಲ್ಲಿ 17 ಮಧ್ಯಮ ಕಾರ್ಖಾನೆ, 3 ಬೃಹತ್ ಕಾರ್ಖಾನೆಗಳಿವೆ. ಸುಮಾರು 25 ಕ್ಕೂ ಹೆಚ್ಚು ಬಾಧಿತ ಪ್ರದೇಶಗಳು ಹಾಗೂ ಬಾದಿತ ಗ್ರಾಮಗಳಿವೆ. ಇಲ್ಲಿಯ ಯುವಕರಿಗೆ ಉದ್ಯೋಗ ನೀಡುವಲ್ಲಿ ಎಲ್ಲಾ ಕಾರ್ಖನೆಗಳು ವಿಫಲವಾಗಿವೆ. ಜನರ ಬದುಕು, ಆರೋಗ್ಯ ಹಾಳಾಗಿದೆ. ರೈತರ ಬೆಳೆ ಹಾನಿಯಾಗಿವೆ. ಇದು ದುರಂತದ ಸಂಗತಿ ಎಂದರು.

ಕಳೆದ ವರ್ಷ ನಡೆದ ಬಲ್ಡೋಟಾ ವಿಸ್ತರಣೆ ವಿರೋಧಿ ಹೋರಾಟದಲ್ಲಿ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿಗಳು ಭಾಗವಹಿಸಿದ್ದರು. ಶಾಸಕರಾದ ಬಸವರಾಜ ರಾಯರಡ್ಡಿ, ರಾಘವೇಂದ್ರ ಹಿಟ್ನಾಳ, ಸಂಸದ ರಾಜಶೇಖರ ಹಿಟ್ನಾಳ ಅವರಿಗೆ ಸೂಚನೆ ನೀಡಿದ್ದರು. ನಾವು ಎಲ್ಲಿಯೂ ಹೋಗಲ್ಲ. ಯಾರನ್ನೂ ಕಾರ್ಖಾನೆ ಬಂದ್ ಮಾಡಿಸಿ ಎಂದು ಕೇಳಲ್ಲ. ನೀವು ನಮ್ಮ ಜನರ ಪ್ರತಿನಿಧಿಗಳಾಗಿ ಕಾರ್ಖಾನೆ ರದ್ದು ಮಾಡಿದ ಆದೇಶ ಪ್ರತಿಯನ್ನು ತರಬೇಕು ಎಂದು ತಿಳಿಸಿದ್ದರು. ಆದರೆ ಇದುವರೆಗೂ ಅದು ಆಗಿಲ್ಲ ಎಂದು ಆರೋಪಿಸಿದರು.

ಕಾರ್ಖಾನೆ ವಿಸ್ತರಣೆ ವಿಚಾರವಾಗಿ ನಾವು ಜೆಡಿಎಸ್ ನಾಯಕರು ಹಾಗೂ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಬಳಿ ಚರ್ಚಿಸಿದ್ದೇವೆ. ಸಮಗ್ರ ಮಾಹಿತಿ ನೀಡಿ ಕಾರ್ಖಾನೆ ವಿಸ್ತರಣೆ ನಿಲ್ಲಿಸುವಂತೆ ಅವರಿಗೆ ಮನವಿ ಮಾಡಿದ್ದೇವೆ. ಈ ವಿಷಯವಾಗಿ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಕಾರ್ಖಾನೆ ವಿಸ್ತರಣೆ ನಿಲ್ಲಿಸಲು ಹೆಚ್ಚು ಅಧಿಕಾರ ರಾಜ್ಯ ಸರ್ಕಾರಕ್ಕಿದೆ. ಅವರು ಅದನ್ನು ಮಾಡಬೇಕು ಎಂದು ಹೇಳಿದ್ದಾರೆ. ಆದರೆ ಜಿಲ್ಲೆಯ ಜನಪ್ರತಿನಿಧಿಗಳಿಗೆ ಕಾರ್ಖಾನೆ ಬಂದ್ ಮಾಡಿಸುವ ಇಚ್ಛಾಶಕ್ತಿ ಇಲ್ಲ ಎಂದರು.

ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಮೂರ್ತೆಪ್ಪ ಹಿಟ್ನಾಳ, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ರಮೇಶ್ ಡಂಬ್ರಳ್ಳಿ, ನಗರ ಘಟಕದ ಅಧ್ಯಕ್ಷ ಸೋಮನಗೌಡ ವರಗನಾಳ, ಸುರೇಶ ದದೇಗಲ್ ಇತರರಿದ್ದರು.



ಸಿಎಂ ಸಿದ್ದರಾಮಯ್ಯ ಅವರ ಬಳಿ ಸರ್ವ ಪಕ್ಷ ನಿಯೋಗ ಹೋದಾಗ ಅವರು ನಮ್ಮನ್ನು ನೇರವಾಗಿ ಕೇಳಿದರು. ಕೊಪ್ಪಳ ಜಿಲ್ಲೆಗೆ ಕಾರ್ಖಾನೆಗಳು ಬಂದು 30 ವರ್ಷ ಆಗಿದೆ, ಇಷ್ಟು ದಿನ ಏನು ಮಾಡುತ್ತಿದ್ದಿರಿ ಎಂದು ಪ್ರಶ್ನಿಸಿದರು. ಈ ಮಾತಿನಿಂದ 30 ವರ್ಷದಿಂದ ಇಲ್ಲಿ ಅಧಿಕಾರದಲ್ಲಿದ್ದವರಿಗೆ ನಾಚಿಕೆಯಾಗಬೇಕು.

■ **ಸಿ.ವಿ.ಚಂದ್ರಶೇಖರ್, ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ**

ಭೂಮಿ ಮಂಜೂರಾತಿಗೆ ಆಗ್ರಹ

ಮಸ್ಕಿ: ಮಾಜಿ ಸೈನಿಕರಿಗೆ ಭೂಮಿ ಮಂಜೂರು ಮಾಡಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ದಾದಾಸಾಹೇಬ್ ಎನ್ ಮೂರ್ತಿ ಸ್ಥಾಪಿತ ಮಸ್ಕಿ ನಗರ ಘಟಕ ವತಿಯಿಂದ ಇಂದು ತಹಶೀಲ್ದಾರರ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಈ ವೇಳೆ ಕ.ದ.ಸ.ಸ.(ದಾದಾ ಸಾಹೇಬ್ ಎನ್ ಮೂರ್ತಿ) ಸ್ಥಾಪಿತ ಮಸ್ಕಿ ನಗರ ಘಟಕ ಅಧ್ಯಕ್ಷ ಮಲ್ಲಿಕ್ ಮುರಾರಿ ಮಾತನಾಡಿ ಸೈನಿಕರ ಗಡಿಯಲ್ಲಿ ನಿಂತು ದೇಶದ ರಕ್ಷಣೆ,ಜನರ ರಕ್ಷಣೆ,ತಾಯಿ ನಾಡಿನ ರಕ್ಷಣೆ ಮಾಡುವದಲ್ಲದೆ ಸಾಂದರ್ಭಿಕ ಹಾಗೂ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ಸೇವೆಯನ್ನು ಗೈಯುತ್ತ ಬಂದಿರುತ್ತಾರೆ. ಅವರು ನಿವೃತ್ತಿ ಹೊಂದಿ ತಮಗೆ ಸಿಗಬೇಕಾದ ಸರಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳಲು ದಿನ ನಿತ್ಯ ಸರ್ಕಾರಿ ಕಛೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಅವರಿಗೆ ಭೂಮಿ ಮಂಜೂರು ಮಾಡಬೇಕೆಂದರು. ಕ.ದ.ಸಂ.ಸಮಿತಿ ನಗರ ಘಟಕ,ರಾಜು, ಮರಿಸ್ವಾಮಿ ಹಸ್ಮಕಲ್, ಅಜೆಯ, ಪ್ರದೀಪ, ಪ್ರಮೋದ, ಸುರೇಶ ಗುಡದೂರು ಸೇರಿದಂತೆ ಸಂಘಟನೆ ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು.



ಸಾವಯುವ ಉತ್ಪನ್ನಗಳ ಮಾರಾಟ ಕೇಂದ್ರ ಉದ್ಘಾಟನೆ



ಗಂಗಾವತಿ: ನಗರದ ಬನ್ನಿಗಿಡದ ಕ್ಯಾಂಪ್‌ನಲ್ಲಿರುವ ಸಿಂಗನಾಳ ಕಾಂಪ್ಲೆಕ್ಸ್‌ನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ ಅಯ್ಯನಗೌಡ ಹೇರೂರು ಅವರ ಸಿದ್ಧಗಿರಿ ನ್ಯಾಚುರಲ್ಸ್ ಸಾವಯುವ ಉತ್ಪನ್ನಗಳ ಮಾರಾಟ ಕೇಂದ್ರದ ಉದ್ಘಾಟನಾ ಸಮಾರಂಭ ಜರುಗಿತು. ಉದ್ಘಾಟಕರಾಗಿ ಸಾವಯುವ ಕೃಷಿಯಲ್ಲಿ ಕ್ರಾಂತಿಯನ್ನು ಸೃಷ್ಟಿಸಿದ ಕಾಡ ಸಿದ್ದೇಶ್ವರ ಮಹಾಸ್ವಾಮೀಜಿ ಅವರು ಆಗಮಿಸಿ ಹಿತ ವಚನಗಳ ಮೂಲಕ ಚಾಲನೆ ನೀಡಿದರು. ಹೆಬಾಳದ ನಾಗಭೂಷಣ್ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಮಾಜಿ ಶಾಸಕ ಪರಣ್ಣ ಮುನವಳ್ಳಿ , ಕೆ.ಚನ್ನಬಸಯ್ಯ ಸ್ವಾಮಿ, ಮಾಜಿ ಜಿಲ್ಲಾಧ್ಯಕ್ಷ ಸಿಂಗನಾಳ ವಿರೂಪಾಕ್ಷಪ್ಪ, ಸಂತೋಷ್ ಕೆಲೋಜಿ, ನೀಲಕಂಠಪ್ಪ ನಾಗಶೆಟ್ಟಿ, ಡಾ.ಅಮರ್ ಪಾಟೀಲರು, ಸೋಮನಾಥ ಪಟ್ಟಣ ಶೆಟ್ಟಿ ವಕೀಲರು, ಸುರೇಶ್ ಸಿಂಗನಾಳ, ವೀರೇಶ್ ಹಂಚಿನಾಳ, ಎರಿಸ್ವಾಮಿಗೌಡ, ಜಗದೀಶ್, ಕುಮಾರ್ ಹೂಗಾರ್, ಸಂಗಯ್ಯಸ್ವಾಮಿ ಸಂಶೀಮಠ, ಚಿದಾನಂದ ನಾಯಕ್ ಉಪಸ್ಥಿತರಿದ್ದರು.

ಕಿರುಸುದ್ದಿ

ರೇವಣಸಿದ್ದೇಶ್ವರ, ಗಾದಿಲಿಂಗೇಶ್ವರ ರಥೋತ್ಸವ



ಗಾದಿಗನೂರು: ಗ್ರಾಮದಲ್ಲಿ ಭಾನುವಾರ ಸಂಜೆ ನಡೆದ ಶ್ರೀರೇವಣಸಿದ್ದೇಶ್ವರ ಹಾಗೂ ಶ್ರೀಗಾದಿಲಿಂಗೇಶ್ವರ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ರಥೋತ್ಸವ ಕಾರ್ಯಕ್ರಮ ಮುನ್ನ ಗಾದಿಲಿಂಗೇಶ್ವರ ದೇವಸ್ಥಾನದಲ್ಲಿ 11 ದಿನಗಳ ಕಾಲ ಗಾದಿಲಿಂಗಪ್ಪ ತಾತನವರ ಪುರಾಣವನ್ನು ಪ್ರತಿದಿನ ಸಂಜೆ ದೇವಸ್ಥಾನದಲ್ಲಿ ನಡೆಯಿತು. ಪುರಾಣಕ್ಕೆ ಬರುವ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆಯನ್ನು ಊರಿನ ಭಕ್ತಾದಿಗಳು ಸೇರಿಕೊಂಡು ನೆರವೇರಿಸಿದರು. ಶಿವಾರಾತ್ರಿ ಅಮಾವಾಸ್ಯೆ ಆದ ಐದನೇ ದಿನ ಪಂಚಮಿ ಎಂದು ಪ್ರತಿ ವರ್ಷದಂತೆ ರಥೋತ್ಸವ ಕಾರ್ಯಕ್ರಮ ನಡೆಯಿತು.

ರಥೋತ್ಸವದಲ್ಲಿ ಕೊಟಿಗಿನಹಾಳ ಭುವನಹಳ್ಳಿ ಹಾಗೂ ಸುತ್ತಮುತ್ತಲಿನ ಸಾವಿರ ಭಕ್ತಾದಿಗಳು ಭಾಗವಹಿಸಿದರು. ರಥೋತ್ಸವ ಕಾರ್ಯಕ್ರಮದಲ್ಲಿ ಯಾವುದೇ ಅಹಿತಕರ ಘಟನೆಯನ್ನು ನಡೆಯದಂತೆ ಹೊಸಪೇಟೆ ಗ್ರಾಮೀಣ ಪೊಲೀಸ್ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಗುರುರಾಜ್ ಕಟ್ಟಿಮನಿ ಹಾಗೂ ನಾಗರತ್ನ ಮೇಡಂ ಪಿ ಎಸ್ಐ(ಎಲ್ಎಲ್ಓ) ಮತ್ತು ಪೊಲೀಸ್ ಸಿಬ್ಬಂದಿ ಉಪಸ್ಥಿತಿ ಇದ್ದರು.

ಮದ್ಯ ಮಾರಾಟ ನಿಷೇಧ

ಬಳ್ಳಾರಿ: ನಗರದ ಅಧಿದೇವತೆ ಶ್ರೀಕನಕ ದುರ್ಗಮ್ಮ ದೇವಸ್ಥಾನದ ಸಿಡಿಬಂಡಿ ರಥೋತ್ಸವ ಹಿನ್ನಲೆಯಲ್ಲಿ ನಗರದಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆಯದಂತೆ ಹಾಗೂ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 21ರನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ, ಫೆ.24 ರಂದು ಮ.2ರಿಂದ ರಾತ್ರಿ 10ರವರೆಗೆ ನಗರದ ಶ್ರೀಕನಕ ದುರ್ಗಮ್ಮ ದೇವಸ್ಥಾನದ ಸುತ್ತಮುತ್ತಲಿನ 1 ಕಿಮೀ. ವ್ಯಾಪ್ತಿಯಲ್ಲಿ ಮದ್ಯ ಮಾರಾಟ, ಸಾಗಣಿಕೆ ಮಾಡದಂತೆ ಮತ್ತು ಮದ್ಯದಂಗಡಿ, ಬಾರ್, ರೆಸ್ಟೋರೆಂಟ್ ಗಳನ್ನು ತೆರೆಯದಂತೆ ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾ ದಂಡಾಧಿಕಾರಿ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ ಆದೇಶಿಸಿದ್ದಾರೆ. ಈ ಆದೇಶವು ಡಿಸ್ಟಲರೀಸ್ ರಾಜ್ಯದ ವಿವಿಧ ಕೆ.ಎಸ್.ಬಿ.ಸಿ.ಎಲ್ ಡಿಪೋಗಳಿಗೆ ದಾಸ್ತಾನು ವಿಲೇವಾರಿ ಮಾಡಲು ಅನ್ವಯಿಸುವುದಿಲ್ಲ ಎಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಮೂರು ಶಾಲಾ ಎಸ್‌ಡಿಎಂಸಿಗಳಿಗೆ ಅತ್ಯುತ್ತಮ ಪುರಸ್ಕಾರ

ಹಗರಿಬೊಮ್ಮನಹಳ್ಳಿ: ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ 2025-26ನೇ ಸಾಲಿನ ಉತ್ತಮವಾಗಿ ಕಾರ್ಯ ನಿರ್ವಹಿಸಿದ ತಾಲೂಕಿನ ಮೂರು ಶಾಲೆಗಳಿಗೆ ಅತ್ಯುತ್ತಮ ಪ್ರಶಸ್ತಿ ಲಭಿಸಿದೆ ಎಂದು ಕ್ಷೇತ್ರಶಿಕ್ಷಣಾಧಿಕಾರಿ ಎಂ.ಎಸ್.ಪ್ರಭಾಕರ್ ತಿಳಿಸಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ರಾಜ್ಯ ಯೋಜನಾ ನಿರ್ದೇಶಕರ ಮತ್ತು ಸಮಗ್ರ ಶಿಕ್ಷಣ ಕರ್ನಾಟಕದ ಆದೇಶದಂತೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಅಂಕಸಮುದ್ರ ಗ್ರಾಮದ ಸರ್ಕಾರಿ ಪ್ರೌಢ ಶಾಲೆ ಎಸ್ ಡಿ ಎಂ ಸಿ ಮೊದಲ ಸ್ಥಾನ ಪಡೆದು ಒಂದು ಲಕ್ಷ. ರೂ.ನಗದು ಬಹುಮಾನ ಪಡೆದರೆ ಮಗಿ ಮಾವಿನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಸ್ ಡಿ ಎಂ ಸಿ ದ್ವಿತೀಯ ಸ್ಥಾನ ಪಡೆದು 75 ಸಾವಿರ ರೂ ಬಹುಮಾನ ಗಿಟಿಸಿದೆ ಜೊತೆಗೆ ಹಳೇ ನೆಲ್ಲುಕುದುರಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಎಸ್ ಡಿ ಎಂ ಸಿ ಮೂರನೇ ಸ್ಥಾನ ಪಡೆದು 50 ಸಾವಿರ ಬಹುಮಾನ ಪಡೆದಿವೆ ಪುರಸ್ಕಾರ ಪಡೆದ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ಅಭಿನಂದಿಸುತ್ತೇನೆ.

ಶಿಕ್ಷಣ ಇಲಾಖೆಯ ಸಂಯೋಜಕರಾದ ಶಿವಲಿಂಗ ಸ್ವಾಮಿ, ಗುರು ಬಸವರಾಜ, ಶಿಕ್ಷಣ ಇಲಾಖೆ ಪರಮೇಶ್ವರಯ್ಯ, ಸೊಪ್ಪಿಮಠ ಇತರರು ಇದ್ದರು.



ಬಳ್ಳಾರಿ: ನಗರದ ಸತ್ಯನಾರಾಯಣ ಪೇಟೆ ರಾಘವೇಂದ್ರ ಸ್ವಾಮಿ ಮಠದಲ್ಲಿ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವದ ಸಪ್ತಾಹ ನಿಮಿತ್ತ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡ ತುಂಗಾ ಸಾಂಸ್ಕೃತಿಕ ವೈಭವ -2026 ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಲಾವಿದ ನಾಗಭೂಷಣ್, ಭಾಮಿನಿ ಆಚಾರ್ಯ, ಸಿರುಗುಪ್ಪ ಕೃಷ್ಣಾಚಾರ್ ಇದ್ದರು.

ನಮ್ಮ ಶಾಸ್ತ್ರಿಯ ಕಲೆಗಳು ವಿಶ್ವಕ್ಕೆ ಮಾದರಿ

ಬಳ್ಳಾರಿ: ನಮ್ಮ ದೇಶದ ಶಾಸ್ತ್ರೀಯ ಕಲೆಗಳು ಇಡೀ ವಿಶ್ವಕ್ಕೆ ಮಾದರಿಯಾಗಿವೆ ಎಂದು ಶ್ರೀರಾಘವೇಂದ್ರ ಸ್ವಾಮಿ ಶ್ರೀಮಠದ ಆಡಳಿತಾಧಿಕಾರಿ, ಪಂ.ಪ್ರಸನ್ನಾಚಾರ್ ಹೇಳಿದರು.

ನಗರದ ಸತ್ಯನಾರಾಯಣ ಪೇಟೆ ರಾಘವೇಂದ್ರ ಸ್ವಾಮಿ ಮಠದಲ್ಲಿ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವದ ಸಪ್ತಾಹ ನಿಮಿತ್ತ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡ ತುಂಗಾ ಸಾಂಸ್ಕೃತಿಕ ವೈಭವ -2026 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಭಾರತದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಆಚರಣೆಯಲ್ಲಿ ಐಕ್ಯತೆ , ಭಾವೈಕ್ಯತೆ ಇಂದ ಕೂಡಿದೆ. ಹೀಗಾಗಿ ಭಾರತೀಯ ಕಲೆಗಳನ್ನು ವಿಶ್ವವೇ ಪ್ರೀತಿಸುತ್ತಿದೆ. ಧಾರ್ಮಿಕ ಕಾರ್ಯಕ್ರಮಗಳ ಜೊತೆಯಲ್ಲಿ ಸಾಂಸ್ಕೃತಿಕ ಕಲೆಗಳ ಪ್ರದರ್ಶನವನ್ನು ಪ್ರೋತ್ಸಾಹಿಸಬೇಕು. ಆಗಲೇ ನಮ್ಮ ಶಾಸ್ತ್ರಿಯ ಪರಂಪರೆ ಉಳಿಸಿ, ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ಮಾಡಲು ಸಾಧ್ಯ ಎಂದರು. ಶ್ರೀಜ ತಂಡದಿಂದ ಸಮೂಹ ನೃತ್ಯ, ರಾಧಾಕೃಷ್ಣ ತಂಡದ ಶಾಸ್ತ್ರಿಯ ನೃತ್ಯ ಪ್ರದರ್ಶನ ಪ್ರೇಕ್ಷಕರನ್ನು ರಂಜಿಸಿದವು. ಹಿರಿಯ ಕಲಾವಿದೆ ಪರಿಮಳ, ವೇದಪಂಡಿತ ಪ್ರಸನ್ನಾಚಾರ್, ಉದ್ಯಮಿ ಶ್ರೀಧರ್ ಚಿಟ್ಟಿಬೋಟ್ಲ, ನೃತ್ಯ ಗುರುಗಳು ಶ್ರೀಜರನ್ನು ಸನ್ಮಾನಿಸಲಾಯಿತು. ಕಲಾವಿದರಿಗೆ ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ನಿಗಮ, ನಿರುಪಮಾ, ಆಶ್ರಿತ, ಅಮೃತಾ, ಸಿಂಧು, ಶೈನು, ಬಾಂದವಿ, ರಶ್ಮಿ, ಅಮೂಲ್ಯ, ಶಾನ್ವಿ ದೀಪ್ತಿ, ಪ್ರೀತಿಕ, ಮಠದ ಸಿಬ್ಬಂದಿ ಇದ್ದರು.



ಕೊಪ್ಪಳ: ಗೊಂಡಬಾಳ ಜಿಪಂ ವ್ಯಾಪ್ತಿಯ ಚುಕ್ಕನಕಲ್, ಮುದ್ದಾಬಳ್ಳಿ, ಹೊಸ ಗೊಂಡಬಾಳ, ಹಳೇ ಗೊಂಡಬಾಳ, ಹ್ಯಾಟಿ,ಮೆಳ್ಳಿಕೇರಿ, ಮುಂಡರಗಿ, ಹೊಸಳ್ಳಿ, ಬಹದ್ದೂರ್ ಬಂಡಿ ಹಾಗೂ ಹೂವಿನಾಳ ಗ್ರಾಮಗಳಲ್ಲಿ 8.56 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ರಾಘವೇಂದ್ರ ಹಿಟ್ನಾಳ್ ಭೂಮಿಪೂಜಿ ನೆರವೇರಿಸಿದರು.

ಪಾಲಿಕೆ ಸಾಮಾನ್ಯ ಸಭೆ, ಬಜೆಟ್ ಮಂಡನೆ | ಶಾಸಕ ಭರತ್ ರೆಡ್ಡಿ ಸೂಚನೆ

ಭೂಗಳ್ಳರ ವಿರುದ್ಧ ಕ್ರಮ ಕೈಗೊಳ್ಳಿ

ಬಳ್ಳಾರಿ: ಸರ್ಕಾರಿ ಸ್ಥಳ, ಜಮೀನುಗಳನ್ನು ಕಬಳಿಕೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲೂ, ಶೀಘ್ರ ತನಿಖಾ ಸಮಿತಿ ರಚನೆ, ನಾವು ಗುರುತಿಸಿದ ಸರ್ಕಾರಿ ಸ್ಥಳವನ್ನು ನುಂಗಿದ ಭೂಪರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನಗರ ಶಾಸಕ ನಾರಾ ಭರತ್ ರೆಡ್ಡಿ ಸೂಚಿಸಿದರು.



ಸೋಮವಾರ ನಗರದ ಜಿಪಂ ಸಭಾಂಗಣದಲ್ಲಿ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ ಅವರ ಅಧ್ಯಕ್ಷತೆಯಲ್ಲಿ ಸಾಮಾನ್ಯಸಭೆಯಲ್ಲಿ ಮಾತನಾಡಿದರು.

ಜಮೀನು ಕಬಳಿಕೆ, ತನಿಖಾ ಸಮಿತಿ ರಚನೆ: ಸಭೆಯಲ್ಲಿ ನಗರದ ಈದ್ಗಾ ಮೈದಾನಕ್ಕೆ ಸಂಬಂಧಿಸಿದ 11.5 ಎಕರೆ ಜಮೀನು ಪರಭಾರೆ ಗದ್ದಲ ಮಾತಿನ ಚಕಮಕಿ ಜೋರಾಗಿ ನಡೆಯಿತು. ಇದಿಷ್ಟೇ ಅಲ್ಲ, ಇಂತಹ ಪ್ರಕರಣಗಳು ನಮ್ಮ ಪಾಲಿಕೆ ಅಧಿಕಾರಿಗಳ ಕುಮ್ಮಕ್ಕಿನಿಂದಲೇ ಸಾಕಷ್ಟು ನಡೆದಿವೆ ಎಂದು ಎಂದು ಸದಸ್ಯರು ಆರೋಪಿಸುತ್ತಿದ್ದಂತೆ, ಮಧ್ಯಪ್ರವೇಶಿಸಿದ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರು ಮಾತನಾಡಿ, ಇದನ್ನು ಸೇರಿಸಿ ಈ ಹಿಂದೆ ನಡೆದ ಎಲ್ಲ ಅಕ್ರಮಗಳ ಕುರಿತು ತನಿಖೆ ನಡೆಸಲು ಪ್ರತ್ಯೇಕ ತನಿಖಾ ತಂಡ ರಚಿಸೋಣ, ಯಾರೇ ಇರಲಿ ಅಂತವರ ವಿರುದ್ಧ ಕಠಿಣ ಕ್ರಮವಾಗಲೀ ಎಂದರು. ಇದರಲ್ಲಿ ನಮ್ಮ ಪಾಲಿಕೆ ಅಧಿಕಾರಿಗಳ ಪಾಲು ಹೆಚ್ಚಿದೆ ಎಂದು ಸದಸ್ಯರು ಹೇಳಿದಾಗ, ತಪ್ಪು ಯಾರೇ ಮಾಡಿರಲಿ ಅಂತವರ ವಿರುದ್ಧ ಕ್ರಮವಾಗಲಿ ಎಂದರು.

ಸರ್ಕಾರಿ ಸ್ಥಳವನ್ನೇ ನುಂಗಿದ ಭೂಪರು: ನಾವು ನಗರದ 8 ನೇ ವಾರ್ಡ್ ಹಂದ್ರಾಳ ಪ್ರದೇಶದ ಸರ್ಕಾರಿ ಜಮೀನಿನಲ್ಲಿ ನಾವು ಶಾಲೆ ನಿರ್ಮಾಣ ಮಾಡಬೇಕು ಎಂದು ಸ್ಥಳ ಪರಿಶೀಲನೆ ಮಾಡಿದ್ದೆ, ಅದಕ್ಕೆ ನಮ್ಮ ಅಧಿಕಾರಿಗಳು ಬಿ ಖಾತೆ ಮಾಡಿಕೊಟ್ಟಿರುವುದು ಆಘಾತವನ್ನುಂಟು ಮಾಡಿದೆ ಎಂದು ನಗರ ಶಾಸಕ ನಾರಾ ಭರತ್ ರೆಡ್ಡಿ ಅಧಿಕಾರಿಗಳ ವಿರುದ್ಧ ಕೆಂಡ ಮಂಡಲರಾದರು. ಸರ್ಕಾರಿ ಜಮೀನಿಗೆ ಬಿ ಖಾತಾ ಮಾಡಿಕೊಡಲು ಹೇಗೆ ಸಾಧ್ಯ, ಇದನ್ನು ನೋಂದಣಿ ಮಾಡಿದ್ದು ಯಾರು, ಹೇಗೆ ಎನ್ನುವುದು ತಿಳಿಯದಾಗಿದೆ. ಈ ಕುರಿತು ತನಿಖೆಯಾಗಬೇಕು, ತಪ್ಪಿತಸ್ಥರು ಯಾರೇ ಇರಲಿ ಕ್ರಮವಾಗಬೇಕು, ಅವರನ್ನು ಜೈಲಿಗೆ ಅಟ್ಟಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾಸೀರ್ ಹುಸೇನ್ ಕೆಂಡಾಮಂಡಲ: ನಮ್ಮ ಪಾಲಿಕೆ ಅಧಿಕಾರಿಗಳು ಇನ್ನೊಬ್ಬರಿಗೆ ಹೇಗೆ ಲಾಗಿನ್ ಮಾಡಲು ನೀಡ್ತಾರೆ, ಇನ್ನೊಬ್ಬರಿಗೆ ಪಾಸ್ ವರ್ಡ್ ಹೇಗೆ ಕೊಡ್ತಾರೆ, ನಾಚಿಕೆ ಆಗೋಲ್ವಾ ಅದು ನಿಮಗೆ ನೀಡಿದ ಜವಾಬ್ದಾರಿ, ಅದು ದುರ್ಬಳಕೆ ಆಗಬಾರದು, ಎಂದು ರಾಜ್ಯಸಭಾ ಸದಸ್ಯ ಡಾ.ಸೈಯದ್ ನಾಸಿರ್ ಹುಸೇನ್ ಅವರು ಕೆಂಡಾಮಂಡಲರಾದರು. ಈ ವೇಳೆ ಮಧ್ಯಪ್ರವೇಶಿಸಿ ಸಮಜಾಯಿಷಿ ನೀಡಲು ಬಂದ ಪಾಲಿಕೆ ಆಯುಕ್ತ ಮಂಜುನಾಥ್ ಅವರಿಗೆ, ನಿಮಗೆ ಕೊಟ್ಟಿರುವ ಲಾಗಿನ್ ಅನ್ನು ನಿಮ್ಮ ಪತ್ನಿಗೆ ಕೊಡ್ತೀರಾ, ಲಾಗಿನ್ ಮಾಡಲು ಅವಕಾಶ ನೀಡ್ತೀರಾ ಎಂದು ಕೆಂಡಾ ಮಂಡಲರಾದರು. ಇಲ್ಲಿ ಅಧಿಕಾರಿಗಳದ್ದೇ ಕಾರಭಾರು, ಅವರು ಮಾಡಿದ್ದ ಆಟ, ಎಂದು ಮಾಜಿ ಮೇಯರ್ ಇಬ್ರಾಹಿಂ ಬಾಬು ಧ್ವನಿಗೂಡಿಸಿದರು.

> **ಮಹಾನಗರ ಪಾಲಿಕೆಯಲ್ಲಿ ಲೆಕ್ಕ ಪತ್ರ ಸರಿಯಿಲ್ಲ, ಎಲ್ಲವೂ ಅಧಿಕಾರಿಗಳೇ ತಮಗೆ ಬೇಕಾದ ಹಾಗೆ ಲೆಕ್ಕವನ್ನು ಹಿಂಡಿಸಿಕೊಳ್ತಾರೆ, ಪ್ರಶ್ನಿಸಿದರೆ ಅಧಿಕಾರಿಗಳಿಂದ ಬೇಜವಾಬ್ದಾರಿ ಮಾತು, ಯಾವುದೇ ಅಧಿಕಾರಿಗಳು ತಪ್ಪು ಮಾಡಿದ್ರು ಕೂಡಲೇ ಕ್ರಮ ವಹಿಸಬೇಕು.**
> ■ ಎಂ.ಪ್ರಭಂಜನ್ ಕುಮಾರ್, ಪಾಲಿಕೆ ಸದಸ್ಯರು

ಉಪ ಮೇಯರ್ ಡಿ. ಸುಕುಂ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಕೆ.ಹನುಮಂತಪ್ಪ, ಕುಬೇರ, ವಿವೇಕ್, ಕವಿತಾ ಹೊನ್ನಪ್ಪ ಇತರರಿದ್ದರು.

ಫೆ.28ಕ್ಕೆ ಹಿಂದೂ ಸಮ್ಮೇಳನ, ಶೋಭಾಯಾತ್ರೆ

ಹೂವಿನಹಡಗಲಿ: ಹಿಂದೂ ಧರ್ಮದ ಜಾಗೃತಿ ಮೂಡಿಸುವ ಉದ್ದೇಶದಿಂದ ಫೆ.28ರಂದು ತಾಲೂಕು ಕ್ರೀಡಾಂಗಣದಲ್ಲಿ ಹಿಂದೂ ಸಮ್ಮೇಳನ ಹಾಗೂ ಶೋಭಾಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಹಿಂದೂ ಸಮ್ಮೇಳನದ ತಾಲೂಕು ಅಧ್ಯಕ್ಷ ಪರಮೇಶ್ವರಪ್ಪ ವಕೀಲರು ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಾತನಾಡಿದ ಅವರು, ಹಿಂದೂ ಸಮಾಜವು ಕೇವಲ ಧರ್ಮವಲ್ಲದೆ ಸಮಾಜದ ಏಕತೆ, ಸಂಸ್ಕೃತಿ ಉಳಿವು ಮತ್ತು ಎಲ್ಲರಲ್ಲೂ ವಿಶಾಲ ಮನೋಭಾವ ಮೂಡಿಸುವ ಧರ್ಮವಾಗಿದೆ ಎಂದರು.

ಹಿಂದೂ ಸಮ್ಮೇಳನದ ಉಪಾಧ್ಯಕ್ಷ ಎಚ್.ಪೂಜಪ್ಪ ಮಾತನಾಡಿ, ದೇಶ, ನಾಡು, ಹಿಂದೂಗಳ ಉಳಿವಿಗಾಗಿ ಸಂಘ ಗಳಲ್ಲಿ ತ್ಯಾಗ, ಬಲಿದಾನ ಹೋರಾಟಗಳು ನಡೆದಿವೆ. ಜನರಿಗೆ ಪರಿವರ್ತನೆ ಮಾಡಿ ದೇಶ ಮೊದಲು ಎಂಬ ಅರಿವು ಜಾಗೃತಿ ಮೂಡಿಸುವಲ್ಲಿ ನಮ್ಮ ಪಾತ್ರ ಅತ್ಯಗತ್ಯವಾಗಿದೆ. ಈ ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ಮಹಿಳೆಯರು ಕುಂಭಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ. ಸ್ಥಳೀಯ ಕಲಾವಿದರಿಂದ ದೇಶಭಕ್ತಿ ಇರುವಂತಹ ವಿವಿಧ ರೀತಿಯ ಸಾಂಸ್ಕೃತಿಕ ಮನೋರಂಜನೆ ಕಾರ್ಯಕ್ರಮಗಳು ಜರುಗುತ್ತವೆ ಎಂದರು.

100 ವರ್ಷಗಳ ಸೇವೆ ಮತ್ತು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿರುವ, ರಾಷ್ಟ್ರೀಯ ಸ್ವಯಂಸೇವಕ ಸಂಘವು ಸ್ಥಾಪನೆಯಾದಾಗಿನಿಂದ 100 ವರ್ಷಗಳ ಈ ಹೆಮ್ಮೆಯ ಪಯಣದಲ್ಲಿ, ಸಂಘವು ಭಾರತೀಯ ಮೌಲ್ಯಗಳ ಆಧಾರದ ಮೇಲೆ ಬಲಿಷ್ಠ ಭಾರತದ ನಿರ್ಮಾಣಕ್ಕಾಗಿ ನಿರಂತರವಾಗಿ ದುಡಿದಿದೆ ಎಂದರು.

ಹಿಂದೂ ಸಮ್ಮೇಳನದ ಗೌರವಾಧ್ಯಕ್ಷ ಬೀರಬ್ಬಿ ಬಸವರಾಜ, ಕಾರ್ಯಾಧ್ಯಕ್ಷ ಕೋಡಿಹಳ್ಳಿ ಮುದುಕಪ್ಪ ಹಿಂದೂ ಸಮ್ಮೇಳನ ರಾಷ್ಟ್ರ ಜಾಗೃತಿಯ ಕುರಿತು ಮಾತನಾಡಿದರು.

ಈ ವೇಳೆ ಹಿಂದೂ ಸಮ್ಮೇಳನದ ಸಂಚಾಲಕರು ಹಾಗೂ ಸಂಚಲನ ಸಮಿತಿ ಅಧ್ಯಕ್ಷ ಪೂಜಾರ ಮಲ್ಲಿಕಾರ್ಜುನ, ಕಾರ್ಯದರ್ಶಿ ಡಾ.ಲಕ್ಷ್ಮಣ್ ನಾಯ್ಕ್, ಸಹ ಕಾರ್ಯದರ್ಶಿ ಈಟಿ ಲಿಂಗರಾಜ, ಖಜಾಂಚಿ ಮಂಜುನಾಥ ಜೈನ, ಸಮಿತಿಯ ಮುಖಂಡರಾದ ಹಣ್ಣಿ ಶಶಿಧರ, ತಳಕಲ್ ಕರಿಬಸಪ್ಪ, ವಿಲ್ಸನ್ ಸ್ವಾಮಿ, ಆರ್.ಟಿ.ನಾಗರಾಜ, ಜೆ.ಶಿವರಾಜ, ಲಂಕೇಶ್, ಪರಶುರಾಮ್ ಕಲಾಲ್, ಅಕ್ಕಸಾಲಿ ಹನುಮೇಶ್, ಈಶ್ವರಗೌಡ, ಪತ್ರಿಕಾ ಮಾಧ್ಯಮದವರು, ಹಿಂದೂ ಕಾರ್ಯಕರ್ತರು ಹಾಗೂ ಇತರರಿದ್ದರು. ಹಿಂದೂ ಸಮ್ಮೇಳನದ ಸಹ ಸಂಚಾಲಕ ಪುನೀತ್ ದೊಡ್ಡನೆ ನಿರ್ವಹಿಸಿದರು.



ಮಾನವೀಯ ಮೌಲ್ಯಗಳ ಗಣಿ ವಚನ ಸಾಹಿತ್ಯ

ಕೊಟ್ಟೂರು: ಸರ್ವಕಾಲಕ್ಕೂ ಸಲ್ಲುವ ವಚನ ಸಾಹಿತ್ಯ ಮಾನವೀಯ ಮೌಲ್ಯಗಳ ಗಣಿಯಾಗಿದೆ ಎಂದು ಶಿಕ್ಷಕ ಮತ್ತಿಹಳ್ಳಿ ನಾಗರಾಜ ಹೇಳಿದರು.

ಕೊಟ್ಟೂರು ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ನಡೆದ ಲಿಂಗೈಕ್ಯ ನಿಲುವಂಜಿ ಮಠದ ಬಸಮ್ಮ ಎನ್.ಎಂ.ಚನ್ನಬಸಯ್ಯ ಹಾಗೂ ಲಿಂಗೈಕ್ಯ ಸೊನ್ನದ ಮುರುಡಿ ಮಠದ ಬಸಮ್ಮ ಎನ್.ಎಂ.ಕೊಟ್ರಯ್ಯ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ವಚನಗಳಲ್ಲಿ ಮಾನವೀಯ ಮೌಲ್ಯಗಳು' ಕುರಿತು ಉಪನ್ಯಾಸ ನೀಡಿದರು. 12ನೇ ಶತಮಾನದ 'ಅನುಭವಮಂಟಪ'ದಲ್ಲಿ ಶರಣ-ಶರಣೆಯರ ಚಿಂತನ- ಮಂಥನಗಳಿಂದ ಹೊರಹೊಮ್ಮಿದ ಅನುಭಾವ ಸಾಹಿತ್ಯ, ಸರ್ವಕಾಲ, ಸರ್ವದೇಶ, ಸರ್ವ ಜನಾಂಗ, ಇಡೀ ಮನುಕುಲಕ್ಕೆ ದಾರಿ ದೀಪವಾಗಿರುವ, ಮಾನವೀಯ ಮೌಲ್ಯಗಳ ಆಗರವಾಗಿರುವ ವಚನ ಸಾಹಿತ್ಯ, ನುಡಿದಂತೆ ನಡೆದ ಶರಣ-ಶರಣೆಯರ ಆದರ್ಶ ಜೀವನ ಇಂದಿನ ಸಮಾಜ, ಸಮುದಾಯಕ್ಕೆ ಅಗತ್ಯವಾದ ಪ್ರಮುಖ ಅಂಶವಾಗಿದೆ ಎಂದು ಹೇಳಿದರು.

ಕೊಟ್ಟೂರು ಥಿಯಸಾಫಿಕಲ್ ಲಾಡ್ಜನ ಕಾರ್ಯದರ್ಶಿ ಜೆ.ಎಂ.ಧನಂಜಯ ಶರಣರ ಚಿಂತನೆಗಳ ಸಾರವನ್ನು ನಾವು ಮೈಗೂಡಿಸಿಕೊಂಡರೆ ನೆಮ್ಮದಿಯುತ ಬದುಕು ನಮ್ಮದಾಗುತ್ತದೆ ಎಂದರು.

ಡಾ.ಎಚ್.ಎಂ.ಹರೀಶ್ ಅವರು ದತ್ತಿ ಪರಿಚಯ ಮಾಡಿ ನಮ್ಮ ಹಿರಿಯರು ಕಲಿಸಿದ ಸಂಸ್ಕಾರದಿಂದ ನಾವು ಉತ್ತಮ, ಆದರ್ಶ ಬದುಕು ರೂಪಿಸಿಕೊಳ್ಳಲು ಸಹಾಯಕವಾಗಿದೆ ಎಂದರು. ಶರಣ ಸಾಹಿತ್ಯ ಪರಿಷತ್ ನಡೆದು ಬಂದ ದಾರಿಯನ್ನು ಪ್ರಾಸ್ತಾವಿಕವಾಗಿ ಜಿ.ಸಿದ್ದಣ್ಣ ಶಿಕ್ಷಕರು ಮಾತನಾಡಿದರು. ಪರಿಷತ್ತಿನ ಉಪಾಧ್ಯಕ್ಷರಾದ ಎಸ್.ಎಂ.ನಳಿನ ಅವರು ದತ್ತಿ ಉಪನ್ಯಾಸ ಕಾರ್ಯಕ್ರಮಗಳ ಮಹತ್ವವನ್ನು ತಿಳಿಸಿದರು.

ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಹೊಂಬಾಳೆ ಮಂಜುನಾಥ ನಿರೂಪಿಸಿದರು.

ಶರಣ ಸಾಹಿತ್ಯ ಪರಿಷತ್ ತಾಲೂಕ ಅಧ್ಯಕ್ಷರಾದ ದೇವರಮನಿ ಕರಿಯಪ್ಪ, ತಾಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಎಂ.ಸುಜಾತಾ, ದತ್ತಿ ದಾಸೋಹಿಗಳಾದ ಎಚ್.ಎಂ.ಹಾಲಯ್ಯ, ಪತ್ರಕರ್ತರಾದ ಎಸ್.ಎಂ.ಗುರುಪ್ರಸಾದ, ಶಿಕ್ಷಕರಾದ ಎಂ.ಶಿವಕುಮಾರ ಮಾತನಾಡಿದರು.


ಶರಣ ಸಾಹಿತ್ಯ ಪರಿಷತ್ ವತಿಯಿಂದ ದತ್ತಿ ದಾಸೋಹಿಗಳನ್ನು ಸನ್ಮಾನಿಸಲಾಯಿತು.

ಶಿಕ್ಷಕರಾದ ಬಿ.ಎಂ.ಗಿರೀಶ, ಕದಳಿ ಮಹಿಳಾ ವೇದಿಕೆ ಕಾರ್ಯದರ್ಶಿಗಳಾದ ದೇವರಮನಿ ಮಂಗಳ, ಜ್ಯೋತಿ ಪ್ರಕಾಶ, ವನಜಾಕ್ಷಿ, ಕಡ್ಡಿ ಕೊಟ್ರೇಶ, ಜಿ ಮಲ್ಲಿಕಾರ್ಜುನ, ಎಚ್. ಪಂಪಾಪತಿ, ಜಿ.ಷಡಕ್ಷರಿಗೌಡ, ಡಿ.ಪಿನಾಕಪಾಣಿ, ಪತ್ರಿಕಾ ವಿತರಕ ಡಿ.ಮಲ್ಲಿಕಾರ್ಜುನ, ಡಿ.ಹನುಮಂತಪ್ಪ, ಕರೇಗೌಡ್ರು ಇತರರಿದ್ದರು.



ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ: ಪ್ರತಿಭಟನೆ

ಕುರುಗೋಡು: ಅಪ್ರಾಪ್ತ ವಿದ್ಯಾರ್ಥಿನಿ ಮೇಲೆ ಅತಿಥಿ ಶಿಕ್ಷಕನ ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯ ಎಸಗಿರುವ ಘಟನೆ ಕಂಪ್ಲಿ ತಾಲೂಕಿನ ಗ್ರಾಮವೊಂದರಲ್ಲಿ ನಡೆದಿರುವುದು ತಡವಾಗಿ ಬೆಳಕಿಗೆ ಬಂದಿದೆ.



ಇಲ್ಲಿನ ಘಟನೆ ಮಾನವಕುಲ ತಲೆ ತಗ್ಗಿಸುವ ದುರ್ಘಟನೆ ಇದಾಗಿದ್ದು, ಕಂಪ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 11 ವರ್ಷದ ಅಪ್ರಾಪ್ತ ವಿದ್ಯಾರ್ಥಿನಿಯ ಮೇಲೆ ಅತಿಥಿ ಶಿಕ್ಷಕ ಜಡೆಪ್ಪ ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯ ಎಸಗಿದ್ದಾನೆ ಎನ್ನಲಾಗುತ್ತಿದೆ.

ಈ ಘಟನಾ ವಿಷಯ ತಿಳಿದ ಪೋಷಕರು ವಿದ್ಯಾರ್ಥಿನಿ ಮುಖೇನ ಪೊಲೀಸ್ ಠಾಣೆಗೆ ಶಿಕ್ಷಕನನ್ನು ಹಿಡಿದುಕೊಂಡು ಬಂದು ಒಪ್ಪಿಸಿ, ಪೋಕ್ಸೋ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಗ್ರಾಮದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿದ್ದು, ಪೊಲೀಸ್ ಇಲಾಖೆ ಅಧಿಕಾರಿಗಳು ಗ್ರಾಮದಲ್ಲಿ ಠಿಕಾಣಿ ಹೂಡಿದ್ದಾರೆ. ಇನ್ನೂ ತನಿಖಾ ಕಾರ್ಯದ ಮೂಲಕ ಇನ್ನಷ್ಟು ಮಾಹಿತಿ ಹೊರ ಬರಬೇಕಾಗಿದೆ.

ಶಾಲೆ ಮುಂದೆ ಪ್ರತಿಭಟನೆ : ಈ ಘಟನೆ ಖಂಡಿಸಿ, ಪೋಷಕರು ಹಾಗೂ ವಾಲ್ಮೀಕಿ ನಾಯಕ ಸಮಾಜದವರು ಇಲ್ಲಿಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಂಭಾಗದಲ್ಲಿ ಸೋಮವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿ, ಅತಿಥಿ ಶಿಕ್ಷಕನಿಗೆ ಕಠಿಣ ಶಿಕ್ಷೆಯಾಗಬೇಕು. ಇದಕ್ಕೆ ಮುಖ್ಯಗುರುವಿನ ಬೇಜವಾಬ್ದಾರಿ ಕಾರಣವಾಗಿದೆ ಎನ್ನಲಾಗುತ್ತಿದೆ. ಇವರನ್ನು ಸೇವೆಯಿಂದ ವಜಾಗೊಳಿಸಿ, ಕಾನೂನಾತ್ಮಕವಾಗಿ ಶಿಕ್ಷೆಯಾಗಬೇಕೆಂಬ ಒತ್ತಾಯ ಕೇಳಿ ಬಂದವು.

ನಂತರ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ತಾಲೂಕು ಅಧ್ಯಕ್ಷ ನರ್ಗಂಟಿ ವಿರೇಶ ಮಾತನಾಡಿದರು.

ಮಾನವೀಯತೆ ಮೆರೆದ ಶಾಸಕ ಕೆ.ನೇಮಿರಾಜ್ ನಾಯ್ಕ್

ಹಗರಿಬೊಮ್ಮನಹಳ್ಳಿ: ಅಜ್ಜಿಯೊಬ್ಬರು ಮಧ್ಯರಾತ್ರಿ ದಿಕ್ಕು ಕಾಣದೆ ಎತ್ತ ಹೋಗಬೇಕೆಂದು ತಿಳಿಯದೆ ಅಜ್ಜಿಯ ಸ್ಥಿತಿ ಕಂಡ ಶಾಸಕ ಕೆ.ನೇಮಿರಾಜ್ ನಾಯ್ಕ್ ಅವರು ಅಜ್ಜಿಗೆ ಶಾಲು ಹೊದಿಸಿ ಹಣ್ಣುಗಳನ್ನು ತಿನಿಸಿ ಮಾನವೀಯತೆ ಮೆರೆದಿದ್ದಾರೆ.



ಭಾನುವಾರ ತಡರಾತ್ರಿ 12:30ರ ಸಮಯದಲ್ಲಿ ನಾಗಲಾಪುರದ ಸ್ವಾಮೀಜಿಗಳ ಕಾರ್ಯಕ್ರಮವನ್ನು ಮುಗಿಸಿಕೊಂಡು ಹಗರಿಬೊಮ್ಮನಹಳ್ಳಿ ಕಡೆಗೆ ಬರುತ್ತಿದ್ದ ಶಾಸಕರು ಇನ್ನೇನು ಊರು 3 ಕಿಮೀ. ಇರುವಾಗಲೇ ರಾಜ್ಯ ಹೈವೆ ರಸ್ತೆಯ ಮಧ್ಯದಲ್ಲಿ ವಯಸ್ಸಾದ ಅಜ್ಜಿ ದಿಕ್ಕು ದೆಸೆ ಇಲ್ಲದೆ, ಕಗ್ಗತ್ತಲ ರಾತ್ರಿಯಲ್ಲಿ ಒಬ್ಬರೇ ಹೋಗುತ್ತಿದ್ದುದ್ದನ್ನು ಕಂಡು ಕಾರು ನಿಲ್ಲಿಸಿ ಶಾಲು ಹೊದಿಸಿ ಹಣ್ಣು ತಿನಿಸಿದರು.

ಹಗರಿಬೊಮ್ಮನಹಳ್ಳಿ ಸಬ್ ಇನ್ಸ್ ಪೆಕ್ಟರ್ ರವರಿಗೆ ಫೋನ್ ಕರೆ ಮಾಡಿ, ಸ್ಥಳಕ್ಕೆ ಕರೆಸಿ, ಈ ಅಜ್ಜಿಯನ್ನು ಅವರ ಮನೆಗೆ ಕರೆದುಕೊಂಡು ಹೋಗುವಂತೆ ಮನೆಯವರಿಗೆ ಈ ರೀತಿ ತಪ್ಪು ಆಗದಂತೆ ನೋಡಿಕೊಳ್ಳಿ ಎಂದು ಹೇಳಿ ಬಿಟ್ಟು ಬನ್ನಿ ಎಂದು ಪೊಲೀಸ್ ವಾಹನದಲ್ಲಿ ಅಜ್ಜಿಯನ್ನು ಕಳುಹಿಸಿದರು.

ಮನೆ ಬಿಟ್ಟು ಕತ್ತಲ ರಾತ್ರಿಯಲ್ಲಿ ಹೊರಟಿದ್ದ ಅಜ್ಜಿಯನ್ನು ಎಷ್ಟೋ ವಾಹನ ಸವಾರರು ನೋಡಿದರೂ ನೋಡದಂತೆ ಹೊರಟು ಹೋಗುತ್ತಿದ್ದರು ಸರಿಯಾಗಿ ನೆಡೆಯಲಿಕ್ಕೂ ಬಾರದೇ ಒಬ್ಬರೇ ಇದ್ದ ಅಜ್ಜಿಗೆ ಅಪಘಾತ ಉಂಟಾಗುವ ಸಾಧ್ಯತೆಯೂ ಹೆಚ್ಚಾಗಿತ್ತು. ಶಾಸಕರ ಮಾನವೀಯ ಕಾಳಜಿಗೆ ಜನ ಮೆಚ್ಚುಗೆ ವ್ಯಕ್ತವಾಗಿದೆ.

ಕನ್ನಡ ವಿವಿ ಉಳಿವಿಗೆ ಪ್ರಾಧ್ಯಾಪಕರ ನೇಮಕವಾಗಲಿ

ವಿಜಯನಗರ: ಕನ್ನಡ ನಾಡು, ನುಡಿ, ಇತಿಹಾಸ ಹಾಗೂ ಸಂಸ್ಕೃತಿಯ ಅಧ್ಯಯನ, ಸಂಶೋಧನೆಯಲ್ಲಿ ತೊಡಗಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ಗುಣಮಟ್ಟ ಉಳಿಯಬೇಕಾದರೆ, ಕಾಯಂ ಪ್ರಾಧ್ಯಾಪಕರನ್ನು ಸರ್ಕಾರ ತಕ್ಷಣ ನೇಮಕ ಮಾಡಬೇಕು ಎಂದು ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ಸರ್ಕಾರಕ್ಕೆ ಒತ್ತಾಯಿಸಿದರು.



> **ಈ ಭಾರಿ ನಿರ್ಲಕ್ಷಿತ ಬುಡಕಟ್ಟುಗಳ ಬಗ್ಗೆ, ಮಹಿಳೆಯರ ಕಥನ ಸಾಹಿತ್ಯ, ದಲಿತ ಮಹಿಳೆ, ಲಂಬಾಣಿ, ಹಿಂದುಳಿದ ವರ್ಗ, ರೈತ ಮತ್ತು ಕೃಷಿ, ಇ-ಆಡಳಿತ, ಗ್ರಾಮೀಣಾಭಿವೃದ್ಧಿ, ಜನಪದ ಸಾಹಿತ್ಯ, ಹಿರಿಯ ನಾಗರೀಕರ ವಿಷಯಗಳ ಕುರಿತು ಸಂಶೋಧನೆಗಳು ನಡೆದಿವೆ. ಮುಕ್ರಿ ಬುಡಕಟ್ಟು ಸಮುದಾಯದ ಮೌಖಿಕ ಸಾಹಿತ್ಯದ ಕುರಿತು ಮುಕ್ರಿ ಸಮುದಾಯದ ವಿದ್ಯಾರ್ಥಿಯಾದ ಸಿ.ಪಿ. ಶಿವಚಂದ್ರ ಅವರು ಸಂಶೋಧನೆ ಮಾಡಿದ್ದಾರೆ. ಇವರು ಮುಕ್ರಿ ಸಮುದಾಯದ ಮೊದಲ ಸಂಶೋಧಕ ಎಂಬುದು ವಿಶೇಷ.**
> ■ ಪ್ರೊ.ಡಿ.ವಿ.ಪರಮಶಿವಮೂರ್ತಿ, ಕುಲಪತಿ

ಕನ್ನಡ ವಿವಿ 34ನೇ ಘಟಿಕೋತ್ಸವದ ನಿಮಿತ್ತ ಹೊಸಪೇಟೆ ಸಮೀಪದ ಕನ್ನಡ ವಿಶ್ವವಿದ್ಯಾಲಯದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ವಿವಿಯ ಒಟ್ಟು 71 ಪ್ರಾಧ್ಯಾಪಕರ ಪೈಕಿ ಸದ್ಯ 37 ಮಂದಿ ಮಾತ್ರ ಇದ್ದಾರೆ. ಪ್ರಾಧ್ಯಾಪಕರ ನಿವೃತ್ತಿಯ ಬಳಿಕ ಅವರಿಂದ ತೆರವಾದ ಸ್ಥಾನಗಳಿಗೆ ನೇಮಕಾತಿಯೇ ಆಗಿಲ್ಲ. ಒಬ್ಬ ಪ್ರಾಧ್ಯಾಪಕ ನಿವೃತ್ತಿಯಾದರೆ ಎಂಟು ಸಂಶೋಧನಾರ್ಥಿಗಳ ಸಂಖ್ಯೆ ಕಡಿಮೆಯಾಯಿತು ಎಂದೇ ಅರ್ಥ. ಹೀಗಾಗಿ ಕನ್ನಡದ ಅಸ್ಮಿತೆಯ ಸಂಕೇತವಾದ ಈ ವಿಶ್ವವಿದ್ಯಾಲಯ ಉಳಿಯಬೇಕಿದ್ದರೆ ಪ್ರಾಧ್ಯಾಪಕರ ನೇಮಕ ಆಗಬೇಕು ಎಂದರು.

ಅಧ್ಯಾಪಕರ ಕೊರತೆ, ಆರ್ಥಿಕ ಸಮಸ್ಯೆ ಇದ್ದರೂ ವಿಶ್ವವಿದ್ಯಾಲಯ ಸ್ಥಾಪನೆಯ ಮೂಲ ಉದ್ದೇಶವನ್ನು ತ್ಯಜಿಸುವಂತಿಲ್ಲ. ರಾಜ್ಯದ ಇತರ 32 ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿ ನಿಲ್ಲುವ ಕನ್ನಡ ವಿವಿ ತನ್ನ ಅಸ್ತಿತ್ವ ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ನಡೆಸಿದೆ. ಕಳೆದ ಎರಡ ವರ್ಷದಿಂದ ಇಲ್ಲಗಳ ಮಧ್ಯೆಯೇ ಎಲ್ಲ ಪ್ರಧ್ಯಾಪಕರ ಸಹಕಾರದಿಂದ ಕನ್ನಡ ವಿವಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬರಲಾಗುತ್ತಿದೆ. ಕನ್ನಡ ವಿವಿ ಎದುರಿಸುತ್ತಿರುವ ಆರ್ಥಿಕ ಸಮಸ್ಯೆ ಕುರಿತು ಸ್ವತಃ ರಾಜ್ಯಪಾಲರೂ ಸರ್ಕಾರದ ಗಮನ ಸೆಳೆದಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಅಗತ್ಯ ಅನುದಾನ ದೊರೆಯುವ ನಿರೀಕ್ಷೆಯಿದೆ ಎಂದು ಪ್ರತಿಕ್ರಿಯಿಸಿದರು.

ಕುಲಸಚಿವ ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಅಧ್ಯಯನಾಂಗದ ನಿರ್ದೇಶಕ ಪ್ರೊ.ಅಮರೇಶ್ ಯತಗಲ್, ಹಣಕಾಸು ಅಧಿಕಾರಿ ಡಾ.ಎ.ಶ್ರೀಧರ್, ಅಧ್ಯಯನಾಂಗ ನಿರ್ದೇಶಕ ಡಾ.ಅಮರೇಶ ಯತಗಲ್, ಡೀನ್ ಭಾಷಾನಿಕಾಯ ಡೀನ್ ಹಿ.ಪ್ರಾಧ್ಯಾಯಕ ಡಾ.ಮಾಧವ್ ಪೆರಾಜೆ, ಡಾ.ಶಿವಾನಂದ ಎಸ್.ವಿರಕ್ತಮಠ, ಡಾ.ಶೈಲಜಾ ಎಂ.ಹಿರೇಮಠ ಮತ್ತಿತರರು ಉಪಸ್ಥಿತರಿದ್ದರು.

ಸಕಾರಾತ್ಮಕ ಚಿಂತನೆಗಳಿಗೆ ಸುದರ್ಶನ ಕ್ರಿಯೆ ಅಗತ್ಯ

ಹುಣಸಗಿ: ನಿತ್ಯ ಜೀವನದ ಜಂಜಾಟದಲ್ಲಿ ಸುದರ್ಶನ ಕ್ರಿಯೆಯು ಸಕಾರಾತ್ಮಕ ಚಿಂತನಗೆಳಿಗೆ ದಾರಿದೀಪವಾಗಿದೆ ಎಂದು ಆರ್ಟ ಆಫ್ ಲೀವಿಂಗ್ ನ ಶಿಕ್ಷಕ ಆನಂದ ಬಾರಿಗಿಡದ ಹೇಳಿದರು.

ಪಟ್ಟಣದಲ್ಲಿ ಜರುಗುತ್ತಿರುವ ಆರ್ಟ ಆಫ್ ಲೀವಿಂಗ್‌ನ ಆನಂದ ಅನುಭೂತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ ಅವರು ಧ್ಯಾನದಿಂದ ಮನುಷ್ಯ ಆರೋಗ್ಯ ಸುಧಾರಣೆಯ ಜೊತೆಗೆ ಏಕಾಗ್ರತೆ ಸಿಗುತ್ತದೆ ಎಂದು ಹೇಳಿದರು. ಆರೋಗ್ಯ ಇಲಾಖೆಯ ಸಿಬ್ಬಂದಿ ಗುರುನಾಥ ಹುಲಕಲ್ ಮಾತನಾಡಿ, ಸುದರ್ಶನ ಕ್ರಿಯೆಯು ಇಡೀ ದಿನ ವ್ಯಕ್ತಿಯನ್ನು ಕ್ರಿಯಾಶೀಲನನ್ನಾಗಿ ಇಡುತ್ತದೆ. ದಿನಂಪ್ರತಿ ಸುದರ್ಶನ ಕ್ರಿಯೆ ಮಾಡುವುದರಿಂದ ದೇಹದಲ್ಲಿನ ಮಾಲಿನ್ಯ ಹೊರಹೋಗಿ ಶ್ವಾಸಕೋಶವನ್ನು ಸ್ವಚ್ಛಗೊಳಿಸಿ ಹೊಸ ಚೈತನ್ಯವನ್ನು ತರುತ್ತದೆ ಎಂದು ತಿಳಿಸಿದರು. ಆರ್ಟ್ ಆಫ್ ಲಿವಿಂಗ್‌ನ ಶಿಕ್ಷಕಿ ಸಿದ್ದಮ್ಮ ಮಾತನಾಡಿದರು. ನಂದುಲಾಲ್ ರವಾಣಿ, ನೀಲಕಂಠ ವೈಲಿ, ಮಲ್ಲಿಕಾರ್ಜುನ ದೇಸಾಯಿ, ಮಹೇಶ್ ಸ್ಥಾವರಮಠ, ಮುತ್ತು ಜಂಬಲದಿನ್ನಿ, ಜ್ಯೋತಿ ಜಂಬಲದಿನ್ನಿ, ಲಲಿತಾ ವೈಲಿ, ವಿಜಯಲಕ್ಷ್ಮಿ ದೇಶಮುಖ, ಅಕ್ಕಮಹಾದೇವಿ ದೇಶಮುಖ, ಸವಿತಾ ಬೆಳ್ಳಿ, ಸರೋಜಿನಿ ಅಮರಣ್ಣನವರ, ನಂದಿನಿ ಅಂಗಡಿ, ನಿಖಿತಾ ಅಂಗಡಿ ಉಪಸ್ಥಿತರಿದ್ದರು.



ಹಕ್ಕುಪತ್ರ ನೀಡಲು ಕರವೇಯಿಂದ ಮನವಿ



ಸಿಂಧನೂರು: ತಾಲೂಕಿನ ತುಂಗಾಭದ್ರ ಎಡೆದಂಡೆ ಮುಖ್ಯ ಕಾಲುವೆಯ ವಿತರಣಾ ಕಾಲುವೆ-36 ಗೋರೆಬಾಳ ಕ್ಯಾಂಪಿನ ನಿವಾಸಿಗಳಿಗೆ ವಾಸ ಮಾಡಲು ಹಕ್ಕುಪತ್ರ ಇಲ್ಲವೇ ಅನುಮತಿ ಪತ್ರ ನೀಡಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ ಬಣ) ತಾಲೂಕ ಘಟಕ ಸಿಂಧನೂರು ವತಿಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು ತುಂಗಾ ಭದ್ರ ಎಡದಂಡೆ ಕಾಲುವೆ ಉಪ ವಿಭಾಗ ಸಿಂಧನೂರು ಅವರಿಗೆ ಮನವಿ ಸಲ್ಲಿಸಲಾಯಿತು.

ಸುಮಾರು 40-50 ವರ್ಷದಿಂದ ಗೋರೆಬಾಳ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಗೋರೆಬಾಳ ಕ್ಯಾಂಪಿನ ವಿತರಣ ಕಾಲುವೆ 36 ಪಕ್ಕದಲ್ಲಿ ಹಲವಾರು ನಿವಾಸಿಗಳು ವಾಸವಾಗಿದ್ದು ಇವರ ಸಮಸ್ಯೆಗಳಿಗೆ ತಕ್ಷಣವೇ ಪರಿಹಾರವನ್ನು ಸೂಚಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಕರ್ನಾಟಕ ರಕ್ಷಣಾ ವೇದಿಕೆ(ಶಿವರಾಮೇಗೌಡ ಬಣ) ತಾಲೂಕ ಘಟಕದ ಅಧ್ಯಕ್ಷರು, ಪದಾಧಿಕಾರಿಗಳ ಹಾಗೂ ನಿವಾಸಿಗಳು ಇದ್ದರು.